ಸಂಪುಟ ೫
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ
೧೯೭೩

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೫ ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೫, ಸಂಚಿಕೆ : ೪

ಮೇ ೧೯೭೩

ಅಕ್ಷಯತೃತೀಯಾ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೩


ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ - ೨೦

ಪರಿವಿಡಿ

ಅಖಿಲ ಕರ್ನಾಟಕದ

ಪ್ರಥಮ ಜಾನಪದ ಸಮ್ಮೇಲನಾಧ್ಯಕ್ಷರು



ಪದ್ಮಭೂಷಣ ಡಾ. ಶಿವರಾಮ ಕಾರಂತ

ಸುಳಿ

ನಾ ಸಣ್ಣಂವನಿದ್ದಾಗ್ನಿಂದಲೂ ಅವ್ವಅಪ್ಪ
ನಂಗೆ 'ಹೊಳಿಯಾಗೆ ಈಸಬ್ಯಾಡೋ ಸುಳಿ ಅದ,
ಭಯಂಕರ ಸುಳಿ' ಅಂತ ಸರ್ತಿಗೊಮ್ಮೆ
ಈಸತೀನಿ ಅಂದಂಗೆಲ್ಲಾ ಅಂದದ್ದೇ ಅಂದದ್ದು.
ಆದರೇನು ?
ಅಪ್ಪ ಅವ್ವ ಅಜ್ಜ ಎಲ್ಲಾ ಸತ್ತದ್ದೂ ಈ ಸುಳಿಯಾಗೇ!
ಹೊಳಿಯಾಗೆ ಈಸಬೇಕು, ದೋಣಿಯಾಗೆ
ಹಾಯ್ದು ಪಾರಾಗಬೇಕು, ಇಲ್ಲದಿದ್ರೆ
ಜೀವನಾನೇ ನಡಿಯೋ ಹಾಂಗಿಲ್ಲ.
ಹೊಳಿ ದಂಡ್ಯಾಗೇ ನಿಂತಾಗೆಲ್ಲ ನನಗೆ,
ನೀರು ಹೀಂಗೆ ಬಂದು ಹಾಂಗ ಹೊರಳಿ,
ಗರಗರಾನೆ ತಿರುಗಿ ಒಳಕ್ಕೆ ಜರೀತದೆ,
ಅದು ಕಾಣ್ತಾನೇ ಅದೆ, ಅಬ್ಬಾ !
ಏನ್ ನೀರಿನ ಕಲಕಾಟ, ತಿರುಗಣಿಯ
ತಿರುಗಾಟ !
'ಸುಳಿಯಾಗೆ ಮುಳುಗಿದ್ರೆ, ಮೂರುಸಾರಿ
ಮ್ಯಾಲೆ ಕಾಣಿಸಕಂತಾರೆ, ಆವಾಗ ಯಾರಾದ್ರೂ
ಎಳದ್ರೆ ಮ್ಯಾಲೆ ಬರಬಹುದು' ಅಂತ
ಶಿವರುದ್ರ ಹೇಳಿದ್ದ.
ಹೊಳಿಯಾಗಂತೂ ಬಿದ್ದೇ ಬೀಳ್ತೀನಿ,
ಮ್ಯಾಲೆ ಬರಲಿ, ತೇಲಲಿ ಇಲ್ಲ ಮುಳಗಲಿ
ಸುಳಿಯೊಡನೆ ತೆಕ್ಕಿ ಮುಕ್ಕಾಡಿದ್ದೇ ಸಾಕು.

★ 'ರವಿ'

ಮನೆತನದ ಅಡ್ಡ ಹೆಸರುಗಳು

ಸ್ಥಳನಾಮಗಳ ಹಾಗೂ ವ್ಯಕ್ತಿನಾಮಗಳ ಅಭ್ಯಾಸ ಇತ್ತಿತ್ತಲಾಗಿ ಬಹು ಜನ ಭಾಷಾಶಾಸ್ತ್ರಜ್ಞರ ಗಮನವನ್ನು ಸೆಳೆಯುತ್ತಿದೆ. ಈ ಲೇಖನದಲ್ಲಿ ಕನ್ನಡಿಗರ ಅಡ್ಡ ಹೆಸರುಗಳ Personal Family Names) ರಚನಾತ್ಮಕ ವಿವರಣೆ ನೀಡುವ ಪ್ರಯತ್ನಮಾಡಲಾಗಿದೆ. ಇಲ್ಲಿ ಉತ್ತರ ಕರ್ನಾಟಕದ ಧಾರವಾಡ ಬೆಳಗಾವಿ ಹಾಗೂ ವಿಜಾಪೂರ ಜಿಲ್ಲೆಗಳ ಮಾದರಿ ಹೆಸರುಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ.

ಶಬ್ದದ ಘಟಕಗಳ ರೂಢವಾದ ಕ್ರಮ

ಮೇಲೆ ಸೂಚಿಸಿದ ಮೂರೂ ಜಿಲ್ಲೆಗಳಲ್ಲಿ ಹೆಸರು ಬರೆಯುವ ಮಾದರಿ ಹೀಗಿರುತ್ತದೆ.

ಉದಾ :– ಚನ್ನಪ್ಪ ಸಂಗಪ್ಪ ಪಾಟೀಲ.
ಗೋವಿಂದ ರಾಮಚಂದ್ರ ಕಮಲಾಪೂರ

ಪೂರ್ಣ ಹೆಸರಿನ ಮೊದಲ ಭಾಗ ವ್ಯಕ್ತಿಯ ಹೆಸರನ್ನೂ, ಎರಡನೆಯ ಭಾಗ ಆ ವ್ಯಕ್ತಿಯ ತಂದೆಯ ಹೆಸರನ್ನೂ, ಕೊನೆಯ ಭಾಗ ಮನೆತನದ ಹೆಸರನ್ನೂ ಸೂಚಿಸುತ್ತವೆ.

ಗೌರವಸೂಚಿಸುವ ಶ್ರೀ, ತೀರ್ಥರೂಪ, ವೇದಮೂರ್ತಿ, ಪೂಜ್ಯ, ಮಾನ್ಯ, ಮುಂತಾದ ಶೀರ್ಷಿಕೆಗಳು ವ್ಯಕ್ತಿಯ ಹೆಸರುಗಳ ಹಿಂದೆ ಸಾಮಾನ್ಯವಾಗಿ ಬರುತ್ತವೆ. ಹೆಣ್ಣು ಮಕ್ಕಳ ಹೆಸರಿನ ಹಿಂದೆ ಕುಮಾರಿ (ಮದುವೆಯಾಗ ದಿದ್ದರೆ), ಶ್ರೀಮತಿ (ಮದುವೆಯಾಗಿದ್ದರೆ) ಇವುಗಳನ್ನು ಬರೆಯುವುದು ರೂಢಿ. ಗಂಡಸರ ಹೆಸರುಗಳಿಗೆ ಅಪ್ಪ, ಅಣ್ಣ, ಅಯ್ಯ, ಆಚಾರ್ಯ, ಇಂತಹ ಪ್ರತ್ಯಯ ಗಳೂ ಹೆಣ್ಣುಮಕ್ಕಳ ಹೆಸರುಗಳಿಗೆ ಅವ್ವ, ಅಮ್ಮ, ಅಕ್ಕ, ದೇವಿ, ತಾಯಿ ಇಂತಹ ಪ್ರತ್ಯಯಗಳೂ ಹತ್ತಿರುತ್ತವೆ. ಆದರೆ ನಾಗರಿಕತೆಯ ಸಂಪರ್ಕ ಹೊಂದಿದ ಕುಟುಂಬದವರ ಹೆಸರುಗಳಲ್ಲಿ ಇತ್ತಿತ್ತಲಾಗಿ ಇಂತಹ ಪ್ರತ್ಯಯಗಳು ಮಾಯವಾಗುತ್ತಿವೆ.

ಉದಾ: ಮಧು, ಮಹೇಶ್, ಚಂದ್ರಕಾಂತ, ರಮೇಶ, ದೀಪಕ, ಅಶೋಕ, ಶೋಭಾ, ಕಮಲಾ, ಜಯಶ್ರೀ, ಜಯಪ್ರಭಾ, ಸರೋಜಿನಿ, ಶಶಿ, ಕವಿತಾ, ಸುಲಭಾ ಇತ್ಯಾದಿ.

ಉತ್ತರಕರ್ನಾಟಕದಲ್ಲಿ ಅಡ್ಡ ಹೆಸರು ಯಾವಾಗಲೂ ತನ್ನ ಹಾಗೂ ತನ್ನ

ತಂದೆಯ ಹೆಸರಿನ ಕೊನೆಯ ಭಾಗದಲ್ಲಿ ಬಂದರೆ ದಕ್ಷಿಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಮೊದಲು ಸ್ವಗ್ರಾಮ ತರುವಾಯ ತಂದೆಯ ಹೆಸರು ಕೊನೆಗೆ ತನ್ನ ಹೆಸರು ಬರುತ್ತದೆ.

ಉದಾ:— ಕುಪ್ಪಳ್ಳಿ ವೆಂಕಟಪ್ಪಗೌಡ ಪುಟ್ಟಪ್ಪ.

ಈ ರೀತಿಯ ಹೆಸರುಗಳನ್ನು ಸಂಕ್ಷಿಪ್ತವಾಗಿ ಬರೆಯುವುದೇ ಹೆಚ್ಚು. ಹಾಗೆ ಬರೆಯುವಾಗ ಪ್ರಾರಂಭದ ಹೆಸರುಗಳಿಗೆ ಇಂಗ್ಲೀಷ ಇಲ್ಲವೆ ಕನ್ನಡ ಅಕ್ಷರಗಳನ್ನು ಉಪಯೋಗಿಸುತ್ತಾರೆ.

ಉದಾ :— ಕೆ. ಎಸ್. ನರಸಿಂಹಸ್ವಾಮಿ, ಹ. ಮ. ನಾಗರಾಜರಾವ್ ಇತ್ಯಾದಿ. ಅನೇಕ ವೇಳೆ ತಂದೆಯ ಹೆಸರನ್ನೇ ಬಿಟ್ಟು ಬರೆಯುವ ವಾಡಿಕೆಯೂ ಇದೆ.

ಉದಾ :— ಜಿ. ನಾರಾಯಣ. ಎಸ್. ನಿಜಲಿಂಗಪ್ಪ, ಇತ್ಯಾದಿ.

ಇಲ್ಲಿ ಸ್ಥಳನಾಮವೇ ಅಡ್ಡ ಹೆಸರಿನಂತೆ ವಂಶ ಪರಂಪರಾಗತವಾಗಿ ಮುಂದುವರಿಯುತ್ತದೆ. ಈ ರೀತಿ ಒಂದು ಊರಿನ ವ್ಯಕ್ತಿಗಳೆಲ್ಲ ಒಂದೇ ಅಡ್ಡ ಹೆಸರನ್ನು ಪಡೆದಂತಾಗಿ ಆ ಸ್ಥಳದ ಬಗೆಗೆ ಅವರಿಗೆ ಹೆಮ್ಮೆಯನ್ನುಂಟು ಮಾಡುತ್ತದೆ. ಇತರ ಯಾವ ವೈಶಿಷ್ಟ್ಯವೂ ಇಂತಹ ಅಡ್ಡ ಹೆಸರುಗಳಲ್ಲಿ ಅಷ್ಟಾಗಿ ತೋರುವದಿಲ್ಲ.

ಇವುಗಳಿಗಿಂತ ಉತ್ತರ ಕರ್ನಾಟಕದ ಅಡ್ಡ ಹೆಸರುಗಳು ತೀರ ಭಿನ್ನವಾಗಿದ್ದುದು ಕಂಡುಬರುತ್ತದೆ. ಈಗಾಗಲೇ ನಾವು ನೋಡಿದಂತೆ ಅಡ್ಡ ಹೆಸರುಗಳು ಕೊನೆಯ ಭಾಗದಲ್ಲಿ ಬರುವುವಲ್ಲದೆ ಕೇವಲ ಊರ ಹೆಸರುಗಳನ್ನಷ್ಟೇ ಸೂಚಿಸುವದಿಲ್ಲ. ವ್ಯಕ್ತಿಗಳ ಹೆಸರುಗಳಿಗಿಂತ ಅಡ್ಡ ಹೆಸರುಗಳೇ ಉತ್ತರ ಕರ್ನಾಟಕದಲ್ಲಿ ಹೆಚ್ಚು ಮಹತ್ವದವುಗಳಾಗಿ ಪ್ರಯೋಗಿಸಲ್ಪಡುತ್ತವೆ.

ಮದುವೆಯಾದ ಮೇಲೆ (ತೆಲುಗು, ತಮಿಳು ಜನರಂತೆ) ಹೆಣ್ಣು ತನ್ನ ತಂದೆಯ ಹೆಸರಿನ ಬದಲಾಗಿ ಗಂಡನ ಹೆಸರನ್ನು ಹಾಗೂ ಅವನ ಅಡ್ಡ ಹೆಸರನ್ನು ತನ್ನ ಹೆಸರಿನ ಮುಂದೆ ಬರೆಯುತ್ತಾಳೆ. ಕೆಲವು ಸಲ ಗಂಡನ ಮನೆಯವರು ತಮಗೆ ಸರಿಕಾಣುವ ಹೆಸರನ್ನೂ ಕೂಡ ಅವಳಿಗೆ ಇಡುತ್ತಾರೆ. ಹೀಗಾಗಿ ಅವಳು ತನ್ನ ತಂದೆಯ ವಂಶದ ಹೆಸರನ್ನೇ ಸಂಪೂರ್ಣವಾಗಿ ಕಳೆದುಕೊಳ್ಳುತ್ತಾಳೆ. ಒಬ್ಬ ಸ್ತ್ರೀ ಅಥವಾ ಪುರುಷನ ಅಡ್ಡ ಹೆಸರು ವಂಶಪಾರಂಪರ್ಯವಾಗಿ ಮುಂದುವರಿಯುವ ರೀತಿಯನ್ನು ಈ ಕೆಳಗೆ ಕಾಣಿಸಿದ ರೇಖಾ ಚಿತ್ರದಿಂದ ಮನಗಾಣಬಹುದು.

X ಇವರೊಡನೆ ಮದುವೆ.

೧) ಬಸಯ್ಯ ಶಿವಯ್ಯ ಪಾಟೀಲ.
↓ ↓ ↓
ಮಗ ತಂದೆ ಅಡ್ಡಹೆಸರು

೨) ಸಂಗಯ್ಯ ಬಸಯ್ಯ ಪಾಟೀಲ X ನೀಲಪ್ಪ ಗುರಯ್ಯ ಹಿರೇಮಠ

↓ ↓

೩) ಚನ್ನಯ್ಯ ಸಂಗಯ್ಯ ಪಾಟೀಲ — ಅಕ್ಕಮಹಾದೇವಿ ಸಂಗಯ್ಯ ಪಾಟೀಲ
↓ ↓
ಮಗ — ಮದುವೆಯಾದ ಮೇಲೆ
↓ ↓

೪) ಸಿದ್ದಯ್ಯ ಚನ್ನಯ್ಯ ಪಾಟೀಲ — ಕಾಶಪ್ಪ ಗುರುಲಿಂಗಯ್ಯ ಸಾಲಿಮಠ (ಪತಿ)

ಹೆಣ್ಣಿನ ಹೆಸರು ಹೇಗೆ ಬಹಳಷ್ಟು ಬದಲಾವಣೆಯಾಗುತ್ತ ಹೋಗುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಈಗೀಗ ವಿದ್ಯಾವಂತ, ಹೆಚ್ಚು ಸುಧಾರಿಸಿದ ಅಥವಾ ಉದ್ಯೋಗಸ್ಥ ಮಹಿಳೆಯರಲ್ಲಿ ತಮ್ಮ ತಂದೆಯ ಅಥವಾ ಗಂಡನ ಹೆಸರನ್ನು ಬಿಟ್ಟು ತನ್ನ ಹಾಗೂ ಅಡ್ಡ ಹೆಸರು ಬಳಸುವ ಪ್ರವೃತ್ತಿ ಬೆಳೆಯುತ್ತಿದೆ.

ಉದಾ :— ಅನುಪಮಾ ನಿರಂಜನ, ವೀಣಾ ಯಲಬುರ್ಗಿ, ಸರಸ್ವತಿದೇವಿ ಗೌಡರ, ಶಾಂತಾದೇವಿ ಮಾಳವಾಡ, ಸರೋಜಿನಿ ಮಹಿಷಿ, ಇತ್ಯಾದಿ.

ಅಡ್ಡ ಹೆಸರು ವ್ಯಕ್ತಿನಾಮಗಳಿಗೆ ವಿಶೇಷಣ ರೂಪದಲ್ಲಿ ಸಾಮಾನ್ಯವಾಗಿ ಬರುತ್ತದೆ. ಕನ್ನಡ ಭಾಷೆಯ ರಚನೆಯ ವೈಶಿಷ್ಟ್ಯದಂತೆ ಇಲ್ಲಿಯೂ ನಾಮಪದಗಳೇ ಪರಸ್ಪರ ವಿಶೇಷಣಗಳಾಗುವದೂ ಉಂಟು. ವ್ಯಕ್ತಿಯ ಪೂರ್ಣ ಹೆಸರುಗಳು ನಿರ್ದಿಷ್ಟ ಪ್ರತ್ಯಯಗಳನ್ನುಳಿದು ಸಾಮಾನ್ಯವಾಗಿ ಸ್ವತಂತ್ರವಾಗಿಯೇ ನಿಲ್ಲುವುದರಿಂದ ಆಕೃತಿಮಾ ಅಥವಾ ವಾಕ್ಯರಚನಾ ಪ್ರಭಾವಕ್ಕೆ ಒಳಗಾಗುವುದಿಲ್ಲ. ಅಡ್ಡ ಹೆಸರುಗಳಿಗೆ ಲಿಂಗ ಭೇದ ಸೂಚಕ ಪ್ರತ್ಯಯಗಳು ಸೇರುವುದಿಲ್ಲ. ಕಾರಣ ಹೆಸರುಗಳಿಂದಲೇ ವ್ಯಕ್ತಿಗಳ ಲಿಂಗ ನಿರ್ಣಯ ಮಾಡಬೇಕಾಗುತ್ತದೆ. ಆದರೆ ಅಡ್ಡ ಹೆಸರುಗಳಿಗೆ ಇತರ ಕೆಲವು ವಿಶೇಷಣಗಳು ಸೇರಿ ಅವು ವಿಸ್ತೃತವಾಗುವಂತೆ ಮಾಡಿರುವುದು ಸ್ಪಷ್ಟವಾಗಿದೆ.

ಉದಾ :— ಹಿರೇ+ಮಠ, ಚಿಕ್ಕ+ಮಠ, ಮೂಲಿ+ಮಠ,
ಮಾಳಗಿ+ಮನಿ, ಹಿರೇ+ಮನಿ, ಹಳೇ+ಮನಿ,

ಕಡೇ+ಮನಿ, ಕಟ್ಟೀ+ಮನಿ, ಮರಿ+ಗೌಡರ,
ಹಿರೆ+ಗೌಡರ, ಸಣ್ಣ+ಗೌಡರ, ಚಿಕ್ಕನ+ಗೌಡರ,

ಸಾಮಾನ್ಯವಾಗಿ ಎಲ್ಲ ಅಡ್ಡ ಹೆಸರುಗಳೂ ಸ್ವರಾಂತಗಳೇ. ವ್ಯಂಜನಾಂತ ಹೆಸರುಗಳು ಪ್ರಾಯಶಃ ಬೇರೆ ಸಂಸ್ಕೃತಿಯಿಂದ ಪಡೆದವುಗಳಾಗಿರಬಹುದು.

ಉತ್ಪತ್ತಿ :

ಮನೆತನದ ಹೆಸರುಗಳನ್ನು ಈ ಕೆಳಗಿನಂತೆ ಸ್ಥೂಲವಾಗಿ ವಿಂಗಡಿಸಬಹುದು.

೧) ಶುದ್ಧ ಕನ್ನಡ ಆಕೃತಿಮಾಗಳಿಂದ ಕೂಡಿದುವು:
ಜವಳಿ, ಹೊಸಮನಿ, ಪಾಟೀಲ, ಗೌಡತಿ, ಕಣವಿ, ಇತ್ಯಾದಿ.

೨) ಕನ್ನಡ ಹಾಗೂ ಸಂಸ್ಕೃತ ಆಕೃತಿಮಾಗಳಿಂದ ಕೂಡಿದುವು:
ಹಿರೇಮಠ, ರಾಜಗೋಪಾಲಾಚಾರ್ಯ, ಕೋರಿಶೆಟ್ಟಿ, ಇತ್ಯಾದಿ.

೩) ಶುದ್ಧ ಸಂಸ್ಕೃತ ಆಕೃತಿಮಾಗಳಿಂದ ಕೂಡಿದುವು :
ಕೃಷ್ಣಮೂರ್ತಿ. ಪಂಚಾಕ್ಷರಿಮಠ, ಶಾಸ್ತ್ರಿ, ದಿವಾಕರ ಇತ್ಯಾದಿ.

೪) ಇತರ ಆಕೃತಿಮಾಗಳಿಂದ ಕೂಡಿದುವು:
ಅಯ್ಯಂಗಾರ್, ಪಾಠಕ್, ಮೊಕಾಶಿ. ಮೆಹರವಾಡೆ, ಪೀರ್, ಮುಲ್ಲಾ, ಮಾನೆ, ಇತ್ಯಾದಿ.

ಅರ್ಥ ವಿಭಾಗಗಳು :

೧) ಅಡ್ಡ ಹೆಸರುಗಳು ವ್ಯಕ್ತಿಗಳು ನೆಲೆಸಿದ್ದ ಅಥವಾ ನೆಲೆಸಿರುವ ಊರುಗಳನ್ನು ಸೂಚಿಸುತ್ತವೆ.

ಉದಾ : ಹುಬ್ಬಳ್ಳಿ, ವಿಜಾಪೂರ, ನರಗುಂದ, ಗದಗ, ಹಾವೇರಿ. ಇತ್ಯಾದಿ,

೨) ಮನೆ, ಮನೆಯ ಭಾಗಗಳು, ಒಲೆ, ದಿನ್ನೆ, ಬಾವಿ, ತೋಟ, ಕೋಟೆ, ಪೇಟೆ ಕೆರೆ, ಒಡ್ಡು, ಗುಡಿ, ಮಠ, ಮುಂತಾದವುಗಳನ್ನು ಸೂಚಿಸುವ ಅಡ್ಡ ಹೆಸರುಗಳು ವಿಪುಲವಾಗಿ ಸಿಗುತ್ತವೆ. ಇವೆಲ್ಲ ಊರಿನಲ್ಲಿ ಒಳಗೊಂಡಿರುತ್ತವೆ.

ಉದಾ :— ಕಟ್ಟಿ, ಗೋಡಿ, ಮಾಳಗಿ, ತೆಗ್ಗಿನಮನಿ, ಕೆರಿಮನಿ, ಬಾವಿ, ತೋಟದ, ಕೋಟಿ, ಗುಡಿ, ಒಡ್ಡಿನ. ಪ್ಯಾಟಿ, ಗಡದ, ಇತ್ಯಾದಿ

೩) ಕೆಲವು ಅಡ್ಡ ಹೆಸರುಗಳು, ಗಿಡ, ಬೆಳೆ, ಕಾಳು, ಕಿರಾಣಿ ವಸ್ತುಗಳನ್ನು ಸೂಚಿಸುತ್ತವೆ.

ಉದಾ:— ಜೋಳದ, ಕುಸುಬಿ, ಅಕ್ಕಿ, ಅಡ್ಕೆ, ಜೀರಗೆ, ಗೋದಿ, ಕಡ್ಲಿ, ಗಂಧದ, ಜಾಲಿ, ಹುಣಿಸಿಮರದ, ಬಾರಿಗಿಡದ, ಇತ್ಯಾದಿ.

೪) ಕೆಲವು ಹೆಸರುಗಳು ಪ್ರಾಣಿ, ಪಕ್ಷಿ ಹಾಗೂ ಪ್ರಾಣಿಗಳ ಅಂಗಾಂಗಳನ್ನು ಹೆಸರಿಸುತ್ತವೆ.

ಉದಾ:— ಕುದುರಿ, ಎಮ್ಮಿ, ಕರಡಿ, ಆಡಿನ, ಕೋಣದ, ಕುರಿ, ಕೋಳಿ, ಗರುಡ, ಕುದುರಿಮೋತಿ, ಗುಬ್ಬಿ, ಕಾಗಿ, ಮೂಗಿ, ಇತ್ಯಾದಿ

೫) ಕೆಲವು ಖಾದ್ಯ ಪದಾರ್ಥಗಳನ್ನು ಕಾಯಿ ಪಲ್ಲೆಗಳನ್ನು ಸೂಚಿಸುತ್ತವೆ.

ಉದಾ:— ತುಪ್ಪದ, ಬೆಣ್ಣೆ, ರೊಟ್ಟಿ, ಪಲ್ಲೆದ, ಕಬ್ಬಿನ, ಅಂಬಲಿ, ಉಪ್ಪಿನ, ತೆಂಗಿನಕಾಯಿ, ಅವರಿ, ಉಳ್ಳಾಗಡ್ಡಿ, ಮೆಣಸಿನಕಾಯಿ, ಇತ್ಯಾದಿ.

೬) ಬಹಳಷ್ಟು ಅಡ್ಡ ಹೆಸರುಗಳು ಮನೆತನದ ಉದ್ಯೋಗವನ್ನು ಸೂಚಿಸುತ್ತವೆ. (ಈಗಲೂ ಅದೇ ಉದ್ಯೋಗ ಮಾಡುತ್ತಿರಬಹುದು. ಅಥವಾ ಮಾಡದೇ ಇರಬಹುದು).

ಉದಾ:— ಪಾಟೀಲ, ಗೌಡರ, ಪಟೇಲ, ನಾಯಕ, ಮಡಿವಾಳರ, ಹಡಪದ, ಕಮ್ಮಾರ, ಕುಲಕರ್ಣಿ, ದೇಶಪಾಂಡೆ, ದೇಸಾಯಿ, ಸುಬೇದಾರ, ಬಡಿಗೇರ, ಚೌದಾರ, ಪೂಜಾರಿ, ಅಂಬಿಗೇರ, ಗಾಣಿಗೇರ, ದಂಡಿನ, ಹೆಗಡೆ, ಬೋಗಾರ, ಉಪ್ಪಾರ, ಹೂಗಾರ, ಪಟ್ಟೇದ, ಇತ್ಯಾದಿ.

೭) ಕೆಲವು ಅಡ್ಡಹೆಸರುಗಳು ಸ್ವಭಾವ, ಆಕಾರ, ರೂಪಗಳನ್ನು ಸೂಚಿಸುತ್ತವೆ.

ಉದಾ:— ಕೆಂಪಣ್ಣವರ, ಗಡತರನವರ, ಕುಳ್ಳ, ಸತ್ಯವಂತ, ಸಾತ್ವಿಕ, ಲಟ್ಟ.

೮) ಕೆಲವು ಹೆಸರುಗಳು ಮನೆಯ ಹಿರಿಯ ವ್ಯಕ್ತಿಯ ಹೆಸರನ್ನು ಸೂಚಿಸುತ್ತವೆ.

ಉದಾ:— ಅಜ್ಜಪ್ಪನವರ, ಮುಪ್ಪಯ್ಯನವರ, ಶಿವಯ್ಯನವರ, ಇತ್ಯಾದಿ.

೯) ಕೆಲವು ಹೆಸರುಗಳು ಮನೆಯ ಜಾತಿ ಸೂಚಕವಾಗಿಯೂ ಇವೆ.

ಉದಾ:— ಮಾದರ, ಹೊಲೇರ, ಒಕ್ಕಲಿಗ, ಲಂಬಾಣಿ, ಲಿಂಗಾಯತ, ಕ್ಷತ್ರಿಯ, ಇತ್ಯಾದಿ.

೧೦) ನಿತ್ಯೋಪಯೋಗಿ ವಸ್ತುಗಳನ್ನು ಕೆಲವು ಸೂಚಿಸುತ್ತವೆ.

ಉದಾ :— ಸೀರೆ, ಕುಪ್ಪಸದ, ವಸ್ತ್ರದ, ಹಂಜಿ, ದೋತರ, ಗಂಟಿ, ಕೊಳ್ಳಿ, ಗಿರಣಿ, ಮೋಟೆ, ಕಂಬಿ, ಲಗಳಿ, ಇತ್ಯಾದಿ.

೧೧) ಒಂದು ವಂಶದಲ್ಲಿ ಒಬ್ಬ ವ್ಯಕ್ತಿ ಮಹತ್ವಪೂರ್ಣವಾದ ಧಾರ್ಮಿಕ ಕಾರ್ಯವೊಂದನ್ನು ನೆರವೇರಿಸಿ ಆ ಕಾರ್ಯವನ್ನೇ ಮುಂದುವರೆಸಿಕೊಂಡು ಬಂದುದನ್ನೂ ಸೂಚಿಸುತ್ತವೆ.–ಕೆಲವು ಮನೆತನದ ಹೆಸರುಗಳು. (ಈಗ ಅದೇ ಉದ್ಯೋಗ ನೆರವೇರಿಸದೆ ಇರಲೂಬಹುದು).

ಉದಾ :— ಶಿವಾರ್ಚ, ಶಾಸ್ತ್ರಿ, ಆಚಾರ್ಯ, ಗಣಾಚಾರಿ, ಉಪಾಧ್ಯಾಯ, ಭಟ್, ದೀಕ್ಷಿತ, ಇತ್ಯಾದಿ.

೧೨) ಕೆಲವು ವಿಶಿಷ್ಟ ಅಡ್ಡ ಹೆಸರುಗಳೂ ಕಂಡುಬರುತ್ತವೆ.

ಉದಾ :— ಮೂರುಶಿಳ್ಳಿನ, ಪಾಂಡುರಂಗಿ, ಹಕ್ಕಾಪಕ್ಕಿ, ಪಸಾರದ ಇತ್ಯಾದಿ.

ಎಲ್ಲ ಅಡ್ಡ ಹೆಸರುಗಳನ್ನೂ ಧಾತು (root)ಗಳಲ್ಲಿ ವರ್ಗೀಕರಿಸಬಹುದು. ಈ ಧಾತುಗಳು ಪ್ರಾತಿಪದಿಕ (Stem) ಆಗಿ ಪರಿವರ್ತಿತವಾಗುವಾಗ ಪ್ರತ್ಯಯಗಳನ್ನು ಪಡೆಯುತ್ತವೆ.

ಉದಾ :— (೧) (ಅ) ಪಾಟೀಲ + ನ್ + ಉ = ಪಾಟೀಲನು } ಏಕವಚನ
(ಬ) ಪಾಟೀಲ + ನ್ + ಅನ್ನು = ಪಾಟೀಲನನ್ನು }

ಇಲ್ಲಿ ನ್ = (Stem formative) ಆಗಿದ್ದಂತೆ ಏಕವಚನ ಸೂಚಕ ಪ್ರತ್ಯಯವೂ ಆಗಿದೆ.

(೨) (ಅ) ಪಾಟೀಲ + ರ್ + ಉ = ಪಾಟೀಲರು } ಬಹುವಚನ
(ಬ) ಪಾಟೀಲ + ರ್ + ಅನ್ನು = ಪಾಟೀಲರನ್ನು }

ಇಲ್ಲಿ ರ್ = (Stem formative) ಹಾಗೂ ಬಹುವಚನ ಸೂಚಕ ಪ್ರತ್ಯಯ.

(೩) (ಅ) ಸಾಲಿ + ಯ್ + ಉ = ಸಾಲಿಯು } ಏಕವಚನ
ಸಾಲಿ + ಯ್ + ಅನ್ನು = ಸಾಲಿಯನ್ನು }

ಇಲ್ಲಿ ಯ್ = (Stem formative) ಹಾಗೂ ಏಕವಚನ ಸೂಚಕ ಪ್ರತ್ಯಯ

ಬ) ಸಾಲಿ + ಯ್ + = ಅವ = ರ್ + ಉ = ಸಾಲಿಯುವರು
ಸಾಲಿ + ಯ್ + = ಅವ = ರ್ + ಅನ್ನು = ಸಾಲಿಯುವರನ್ನು

ಇಲ್ಲಿ ಅವರ್ = ಬಹುವಚನ ಪ್ರತ್ಯಯ

ಕ್ರಿಯಾಪದದ ಲಿಂಗದ ಆಧಾರದ ಮೇಲಿಂದ ಅಡ್ಡ ಹೆಸರಿನ ಲಿಂಗವು

ಗುರುತಿಸಲ್ಪಡುವುದನ್ನೂ ಗಮನಿಸಬಹುದಾಗಿದೆ—ಆದರೆ ಬಹುವಚನ ಕ್ರಿಯಾ ಪದದಿಂದ ಇದನ್ನು ನಿರ್ಧರಿಸುವದು ಅಸಾಧ್ಯ.

ಉದಾ :— (೧)	(ಅ) ಪಾಟೀಲ ಬಂದನು ಜೋಶಿ ಬಂದನು	ಪುಲ್ಲಿಂಗ ಏಕವಚನ
	(ಬ) ಪಾಟೀಲ ಬಂದಳು ಜೋಶಿ ಬಂದಳು	ಸ್ತ್ರೀಲಿಂಗ ಏಕವಚನ
(೨)	(ಅ) ಪಾಟೀಲರು ಬಂದರು ಜೋಶಿ ಬಂದರು	ಪುಲ್ಲಿಂಗ ಬಹುವಚನ
	(ಬ) ಪಾಟೀಲರು ಬಂದರು ಜೋಶಿ ಬಂದರು	ಸ್ತ್ರೀಲಿಂಗ ಬಹುವಚನ

ಅಡ್ಡ ಹೆಸರುಗಳು ಅನೇಕ ದಶಕಗಳವರೆಗೂ ಬದಲಾಗುವದೇ ಇಲ್ಲ. ಆದರೆ ವ್ಯಕ್ತಿಗಳು ತಮ್ಮ ಅಡ್ಡ ಹೆಸರುಗಳನ್ನು ಸೂಕ್ತ ವಿಧಾನಗಳಿಂದ ಬದಲಿಸಿಕೊಂಡಿರುವುದೂ ಉಂಟು. ಹೀಗೆ ಬದಲಿಸಿಕೊಂಡರೂ ಬಹುಕಾಲದವರೆಗೆ ಹಳೆಯ ಹಾಗೂ ಹೊಸ ಹೆಸರುಗಳೆರಡೂ ಬಳಕೆಯಲ್ಲಿರುವದು ಕಂಡು ಬಂದಿದೆ.

ಅಡ್ಡ ಹೆಸರುಗಳಲ್ಲಿ ಕನ್ನಡದ ಸಂಸ್ಕೃತಿ ಅಡಗಿದೆ. ಚಾತುರ್ ವರ್ಣಗಳ ಸೂಚನೆ, ಮನೆತನಗಳು ಕೈಕೊಂಡಿದ್ದ ಉದ್ಯೋಗ, ಆ ಆ ವ್ಯಕ್ತಿ ಅಥವಾ ಮನೆತನದ ವೈಶಿಷ್ಟ್ಯಗಳು ಇವುಗಳಲ್ಲಿ ಗರ್ಭೀಕೃತಗೊಂಡಿವೆ. ಒಂದು ಕುಟುಂಬದ ಜನರನ್ನು ಒಂದು ಮನೆತನದವರೆಂದು ಗುರುತಿಸಿ ತನ್ಮೂಲಕ ಅವರ ಜಾತಿಯನ್ನೋ, ಉದ್ಯೋಗವನ್ನೋ, ಅವರು ಇರುವ ಸ್ಥಳವನ್ನೋ, ಸಂಸ್ಕೃತಿಯನ್ನೋ ಎತ್ತಿ ತೋರುತ್ತಿರುವ ಮನೆತನದ ಹೆಸರುಗಳ ಬಗೆಗೆ ವ್ಯವಸ್ಥಿತ ಅಭ್ಯಾಸ ನಡೆಯಬೇಕಾಗಿದೆ

★ ಎಸ್. ಬಿ. ಸವದತ್ತಿಮಠ

ಒಂದ್ಯೋಗಿ ಬಂದಾತು

"ಶಿವ ಶಿವ ಅಂದಲ್ಲೇನೈತಿ
ಶಿವಧ್ಯಾನ ಮಾಡಿದಲ್ಲೇನೈತಿ"

ಭಜನೆ ಸರಾಗವಾಗಿ ಸಾಗಿತ್ತು. ದಮಡಿಯನಾದ ಕಿವಿಗೆ ಹಿತವಾಗಿತ್ತು. ದೇವಾಲಯದ ತುಂಬೆಲ್ಲ ಜಳ್ಳಮ್ಮದ ತಾಳಕ್ಕೆ ತಲೆದೂಗುವ ಜನ ತುಂಬಿತ್ತು. ಡಿಪ್ಪದಡಿಪಾಂಗ.... ಡಿಪ್ಪಡ ಡಿಪಾಂಗ ಎಂಬ ಡೊಳ್ಳಿನ ಸಪ್ಪಳ ತೂಕಡಿಸುವ ವರನ್ನು ಎಬ್ಬಿಸುತ್ತಿತ್ತು. ಇದರೊಂದಿಗೆ ಚಿಲುಮೆಯ ಸಮಾರಾಧನೆ ಸಂಭ್ರಮ ದಿಂದ ಮುಂದುವರಿಯುತ್ತಿತ್ತು. ಅಂಗೈಯಲ್ಲಿ ಏನೋ ಮಿದ್ದು ಅದರಲ್ಲಿ ತುಂಬಿ.... ಝುರಕಿ ಎಳೆಯುತ್ತಿದ್ದರು. ತುಪ್ಪದ ದೀಪದ ಶಾಂತವಾದ ಬೆಳಕು ಎಲ್ಲೆಡೆಗೆ ಹಬ್ಬಿತ್ತು. ಎಲ್ಲರಿಗೂ ಕೃಪಾಶೀರ್ವಾದ ದಯಪಾಲಿಸುವನೇನೊ ಎನ್ನುವಂತಿದ್ದ ಶಿವ ತಲೆಯ ಮೇಲೆ ಗಂಗೆಯನ್ನಿಟ್ಟುಕೊಂಡು, ಪಾರ್ವತಿಯ ಸೊಂಟದಲ್ಲಿ ಕೈಹಾಕಿ ನಿಂತಿದ್ದ. ದುಷ್ಟರನ್ನು ನುಂಗಿ ಬಿಡುವಂತೆ ಹಣೆಗಣ್ಣು ಪ್ರಜ್ವಲಿಸುತ್ತಿತ್ತು. ಹಾವು ಭುಸ್... ಎಂದಿತ್ತು, ಅದರೊಂದಿಗೆ ಪರಸುವಿನ ಮನದಲ್ಲಿಯದೂ ಕೂಡ.

ಪಾಳಿಯಲ್ಲಿ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿದ್ದ ನಾನು ಚನ್ನಪ್ಪನನ್ನು ಕೇಳಿದೆ. "ಮುತ್ತಾ, ಅಂವ ಯಾರಪಾ? ಆ ಕ್ವಾರ ಮೀಸಿ ಯಂವಾ.... ಆ ಬಿಳೀ ಪಟಕಾ ಪಳೀ ನೆಪದ ಆಗಾಂಗ ಸುತ್ತ್ಯಾನ ನೋಡು.... ಶಮನಾನೂ ಜೋರs ಬಿಟ್ಟಾನ... ಗ್ಯಾರಂಟೀಕಲರs ಅದ ನೋಡು ಕಣ್ಣು ಅಷ್ಟ್ಯಾಕ ಕೆಂಪಗಾಗ್ಯಾವ ಅವನ್ನು ಅಂ......"

ಚನ್ನಪ್ಪ ಝುರಕೀ ಎಳದs ಹೇಳಿದ... "ನೋಡ್ರಿ, ಕುಲಕರ್ಣ್ಯಾರ ಅಂವ ಪರಸ್ಯಾರಿ. ಎಂಥಾ ತಂಪ್ರೊತ್ತಿನ್ಯಾಗ ಎಂಥಾವನ ಹೆಸರ ತಗೀತೀರಿ ಎಪ್ಪಾ. ಆ ಊರಿ ಮಾರಿ ಮಗಾ ಇಟ್ಟs ನೀರಾಗ ಮುಣಗಾಂವ ಅಲ್ರೀ ಅಂವಾ! ಎಟ್ಟ ಕರೀ ಆದಾನ ಅಟ್ಟ ಕೋಡಿ ಆದಾನ್ರಿ. ಹರಿಬೀಜಮಗಾ ಎಂಥಾ ಹೊತ್ತಿನ್ಯಾಗ ಹುಟ್ಟ್ಯಾನೋ ಏನೋರಿ! ಪೋಲಿಗೆಲಸ ಎಲ್ಲಾ ಛಂತ್ಯಾಕ ಮಾಡಿ ಜಳ್ಳಮ ಕಟೊತ್ತಾನ ಇಲ್ಲಿ ಬಂದು, ಅವನಕಥಿ ಭಾಳ ಐತಿರಿ.......

"ಎಲಾ ಇವನs... ಹಿಂಗೇನು? ಅಂಥಾದೇನ ಮಾಡ್ಯಾನಪಾ ಅಂವ ಯಾರಿಗೆ?" ಕುಲಕರ್ಣಿಯಲ್ಲದ ನನ್ನನ್ನು ಕುಲಕರ್ಣಿಯನ್ನಾಗಿ ಮಾಡಿದ ಚನ್ನಪ್ಪನನ್ನು ಕೇಳಿದೆ.

"ನಮ್ಮ ಕುರುಬರ ರಾಮಣ್ಣನ ಮಗಾರಿ ಅಂವಾ... ಬೀಡಿ, ಸಿಗರೇಟ, ಗಾಂಜಿ, ಸಿಂದಿ, ಸೆರೆ, ಬಿರಾಂದಿ ಎಲ್ಲಾ ಮಾಡಾಕ ಹತ್ತಿ ರಂಡಬಾಜಿ ಸುರು

ಮಾಡಿದನ್ರಿ. ಹುಡಗ ಹರೇಕ ಬತ್ತು ಅಂತ.... ಹೊಟ್ಯಾನ ನೀರ ಕಾಣಸ ಬೇಕ್ರಿ.... ಮುಟಗ್ಯಾಗ ಸೊಂಟ ಸಿಗಬೇಕ್ರಿ.... ಕೈ ತೊಳದ ಮುಟ್ಟಬೇಕ್ರಿ.... ಕಟೆದ ಗೌರಿ ಅಂತಾ ಹುಡಗಿರಿ ಅದು.... ನಸೀಬಗೇಡಿ ಸೂಳಿ ಮಗಾರಿ ಇಂವ.... ಕೆಂಪರಂಜಕದಂತಾ 'ಗೌರವ್ವ'ನ್ನ ತಂದು ಮದಿವಿ ಮಾಡಿದನ್ರಿ...."

"ಇವನ ಚರಿತ್ರ ಎಲ್ಲಾ ಗೊತ್ತಿದ್ದೂ.... ಕಟಕನ ಕೈಯಾಗ ಕುರೀ ಕೊಟ್ಟ್ಹಾಂಗ ಗಜಗೌರಿಯಂಥಾ ಹೆಣ್ಣ ಹ್ಯಾಂಗ ಕೊಟ್ಟರಪಾ..." ನನ್ನ ಪ್ರಶ್ನೆ.

"ಕಳ್ಳಾಬೆಳ್ಳಿ ಅಂತ ಆಕ್ಕ ಇದ್ದಾಕಿ ಒಂದ ಹೊಲಾ ಹಚ್ಚಿ ಹೆಣ್ಣ ಕೊಟ್ಟಳ್ರಿ.... ಗೌರವ್ವ ಇವನ ಕೆಟ್ಟ ಚಾಳಿ ಬಿಡಸಲಾಕ ತನ್ನ ಜನಮ ನೀಗಿದಳ್ರಿ. 'ಹೊರಗಿನಿಂದ ಬರಾನಾ ಜಳಕಾ ಮಾಡಿ ನನ್ನ ಹಂತ್ಯಾಕ ಬಾ ಅನಾಕಿರಿ ಆಕಿ...' ಕುಡದ ಬಂದ ದಿನಾ ಹೊರಗಟ್ಟೀವ್ಯಾಗs ಕೆಡವಾಕಿರಿ ಇವನ್ನ.... ಗಾಂಜಿ ಸೇದಿ ಇಂವಾ ಹ್ವಾದ್ರ ಇವನ ಕಡೆ ಮುಕಳೀಮಾಡಿ ಮಕ್ಕೊಳ್ಳಾಕಿರಿ ಆಕಿ. ಮದ ಮದಲ 'ಚಟಾ ಎಲ್ಲಾ ಬಿಡು' ಅತ್ತ ಕಾಲ ಹಿಡಕೊಂಡಳ್ರಿ.... ಕಡೀಕೊಮ್ಮ ಬಡದs ಬಿಟ್ಟಳ್ರಿ.... ಮಲೀಗೆ ಗುದ್ದಿ ಕೊಂದನ್ರಿ ಆಕಿನ್ನ.... ಮ್ಯಾಲಿಂದ ಕಲ್ಲ ಎದೀಮ್ಯಾಲ ಬಿದ್ದೇತಿ ಅಂತ ಪಂಚನಾಮಾ ಮಾಡಿಸಿ, ಫೌಜದಾರನ ಕಿಸೇದಾಗ ಸಾವಿರ ರೂಪಾಯಿ ಹಾಕಿ ಪಾರಾದ್ರಿ ಮಿಡ್ತೀದು ಒಂದ ಪ್ಯಾರಿ ಮಾರಿ.... ನೋಡ್ರಿ...ಎಪ್ಪಾ...ಅದೇನೋ ಅಂತಾರಲ್ರೀ ಹಾಟಫೇಲ ಅತ್ತ.... ಹಂಗಾಗಿ ರಾಮಣ್ಣನೂ ಸತ್ತ ಹ್ವಾದನ್ರಿ... ಅವ್ವನ್ನ ಒದ್ದ ಮೂಲಿಗಿ ಕುಂಡರಸಿ ಬಿಟ್ರ. ಮುಂಗ್ಯಾಗ ದಾರು ಕುಡಿಸಿದಾಂಗ ಆತ್ರಿ ಅಂವಗ... ಹತ್ತ ಸುಳ್ಳ ಹೇಳಿ ಒಂದ ಕಲ್ಯಾಣ ಕಟ್ಟಬೇಕತ್ರಿ....ಹಂಗ... ಹುನಗುಂದದ ಕಡೀದ ಹೆಣ್ಣ ತಂದ ಮದಿವೀ ಮಾಡಿದರ್ರಿ ಮಳ್ಳಸೂಳಿ ಮಗ.... ನಾಕ ದಿನಾ ಪಾಡ ಐತಿ ಅನ್ನೂದರಾಗ ಸುರೂ ಆತ ನೋಡ್ರಿ ದಾಂದ್ಲೆ. ಆಕಿ ಒಂದ ಜರಾ ಕಟ್ಟೀ ಮ್ಯಾಲ ಕುತ್ತು ಮುಂದಿನ್ನ ನೋಡಿ ನಗತಿದ್ದಳ್ರಿ.... ಅದಕ 'ಇಕೀ ಹಾದರಗಿತ್ತಿ ಅದಾಳು' ಅತ್ತ ಹೇಳಿ ಸೋಡಚೀಟಿ ಕೊಟ್ಟನ್ರಿ.... ಆದರ ಆಕೀನ ಬಿಡವಳ್ಳರಿ ಇವನ್ನ. ಆಕಿ ನೋಡ್ರಿ ಮಗಳು ಗಂಡಗಚ್ಚಿ ಹಾಕಿ ನಿಂತು... 'ಬಾಳೇ ಮಾಡಿದರ ಇಲ್ಲೇ... ಹೋಗಾಕ ಬಂದಿಲ್ಲ ನಾ' ಅಂತ ಹೇಳಿ ಇನಾ ಇಲ್ಲೇ ಅದಾಳ್ರಿ ಅತ್ತಿ ಸೇವಾ ಮಾಡಕೋತ... ಆವಾಗ ನಾಯಿ ಮುಕಳ್ಯಾಗ ಬಾಲಾ ಇಟಗೊಂಡ ಹೋದಾಂಗ ಸುಮ್ಮ ಕುತ್ತ ನೋಡ್ರಿ.... ಹಲಕಟ್ ಪರಸ್ಯಾ.

"ಆಕಿನ್ನೂ ಖಲಾಸ ಮಾಡಾಂವಾ ಇಂವ... ಯಾಕ ಬಿಟ್ಟ?" ನನ್ನ ಪೆದ್ದ ಕೇಳಿಕೆ.

"ಆಕಿ ಹಣೀಲಿಲ್ರಿ ಇವಂಗ....ಆಕಿ ಸನೇಕ ಹೋಗೂದs ಬಿಟ್ಟಾನಾತ್ರಿ"

ಇದಲ್ಲದs ಬೈರೂಪಗಾರನ ಹೇಣತಿ ಒಬ್ಬಾಕಿ ಇಂವಗ ಗಂಟ ಬಿದ್ದಾಳ್ರಿ, ... ಕಪ್ಪ ತಿನೂ ಚಟದಾಕ್ರಿ.... ಬಾಯಿ ರುಚಿಗೆ ಬಿದ್ದಾನ್ರಿ ಮಗಾ.... ಕರ್ರಗs

ಇದ್ದರೂ ಸೈತ ಏಸ್ತಾ ಮುದುಕ ಆದರೂ ತಿರಗಿ ನೋಡದ ಹೋಗಂಗs ಇಲ್ರಿ.... ಕುಡಿಯೂದೂ.... ಸೇದೂದು ಎಲ್ಲಾ ಕಲತಾನ್ರಿ... ಪೋಕರಿ.... ಇವನ ಮುಸ್ತ್ಯಾಗನ ಮಿಸಿ ಒಗದಾನ್ರಿ.... ಇವನ ಎದ್ದ ಲಗಾಟಕ್ಕ ಬಂಗಾರದಂತಾ ತಮ್ಮ ಸೊರಗಿ ಸಣ್ಣ ಆಗ್ಯಾನ್ರಿ. ಜ್ಯಾರ್‍ತ್ಯಾಗೂ ಸು ಅಂತ ಜಗಳಾ ತಗದು ಅವನ್ನ ಕಡೂತನ ಅತ್ತ ಕುತ್ತಾನ್ರಿ ಕುರಸಾಲ್ಯಾ... ಹಂತಾ ಖಂಜೀರನs ಆದಾನ್ರಿ... ಹೇಳಿ ದಂಗ...ಮಾಡತಾನ್ರಿ ಅಂವಾ.... ಜಾಯಿಂಗ ಬಂದಪ್ಪs ಕರೇವರಿ" ಅನ್ನುವಷ್ಟರಲ್ಲಿ.

ನೀಲಕಂಠರ ನಿಗಮಗೋಚರ
ಬಾಲಚಂದ್ರಾಭರಣಗೇ ॥

ಎಂದು ಮಂಗಳಾರತಿ ಪದ ಸುರುವಾದ್ದರಿಂದ ಘಂಟೆಯ ಸದ್ದು ಜೋರಾಗಿ, ಎದ್ದು ನಿಂತು ಶಿವನಿಗೆ ನಮಸ್ಕರಿಸಿ ಚನ್ನಪ್ಪನನ್ನು ಬೀಳ್ಕೊಂಡು ಮನೆ ಸೇರಿದೆ.

* * * * *

"ಏ ಖಬರಗೇಡಿ ಪಾವ ಬೆಲ್ಲಾ ಕೊಡು.... ನಿನಗೂ ಬಲಿ ಮಾತಿನ ಸಿಪಿ ನೋಡ.... ಏಟೊತ್ತ ನಿಂದರಬೇಕ ಗಿರಾಕಿಗೋಳು.... ನೀ ಆರ ಖಿಸ ಮಾಡಿ ನಿನಗೂ ಒತ್ತಾಕ ಹತ್ಯಾವು ರೊಕ್ಕ...." ನಗಾರಿ ಬಾರಿಸಿದಂತೆ ನುಡಿದಳು ಭಾದ್ದೂರ ಭೀಮವ್ವಾಯಿ.

ಅಂಗಡಿಯಲ್ಲಿ ಜುನಮುರಿ ಡಬ್ಬಿಯ ಮಗ್ಗಲಿಗೆ, ಜಮಖಾನಿಯ ಮೇಲೆ ತಕ್ಕಿಗೆ ಆತುಕೊಂಡು ಅಡಕಿಯ ಹೋಳು ಜಾಯಮಾಡಿಸುತ್ತಲಿದ್ದ ನನ್ನೊಂದಿಗೆ ಹರಟೆಯಲ್ಲಿ ಮಗ್ನನಾಗಿದ್ದ ಶಿವಾನಂದ ಪಾವು ಬೆಲ್ಲ ತೂಗಿ ಆವಳ ಕೈಯಲ್ಲಿಟ್ಟು ಕಳಿಸಿದ. ಅಷ್ಟರಲ್ಲಿ ಕಟ್ಟುಮಸ್ತಾದ ಆಳೊಬ್ಬ ಮುಂಡೀಚಾಟಿ ಧರಿಸಿ ಧೋತರ ಉಟ್ಟು, ಹಿಂಬದಿಯಿಂದ ಎಡಗೈಯಿಂದ ಬಲಗೈಯ ಮೊಳಕೈ ಹಿಡಿದು, ದೋತರ ಚುಂಗನ್ನು ಬಲಗೈ ತುದಿ ಬೆರಳಿನಿಂದ ಹಿಡಿದುಕೊಂಡು ಖಿನ್ನವದನನಾಗಿ ಹೋದ....

"ಆಲ್ರೋ ಶಿವಾನಂದಾ ಅಂವ ಯಾರು? ಪೈಲವಾನ.... ಈಗ ಹೋದಲಾ ಸಣ್ಣ ಮುಖ ಮಾಡಿಕೊಂಡು! ಅಂಥಾ ಚಿಂತಿ – ಖಿನ ಇದ್ದೀತಪಾ ಅಂವಗ...." ನನ್ನ ಸಂಶೋಧನೆ ಮುಂದುವರಿಯಿತು.

ಶಿವಾನಂದ ಅವನ ಸಂಗತಿಯನ್ನು ಕ್ರಿಕೆಟ್ ಕಾಮೆಂಟ್ರಿಯಂತೆ ಪ್ರಾರಂಭಿಸಿದ.

"ನೋಡ್ರೀ ಸರ್, ರೊಕ್ಕ ಕೈಯಾಗ ಆಡಾಕ ಹತ್ತಿದ ಮ್ಯಾಗ ಮಂದಿ ಗುರುತ ಹತ್ತಂಗಿಲ್ರೀ.... ಅವನ ಜೋಡಿ ಚಿಗಿದಾಂತ ಅದಿ ಹಣಿ ಒಡಕೊಂಡು ಮನೀಗೆ ಹೋಗಿದ್ದೆಲೊ ಮಾರಾಯಾ.... ನೆನಪಿಲ್ಲೇನ? ಹನುಮಣ್ಣ ಅಂವ... ಪದವನ್ಸ್ಯಾ ಅಂತ ನಾವೆಲ್ಲಾ ಕರೀತಿದ್ವಿ. ನೀ ಈ ಊರ ಬಿಟ್ಟ ಮ್ಯಾಲೆ ಆ ನೆ!

ಇಯುತ್ತೆ ಇದ್ದಾಗ ಅವರಪ್ಪ ಎದೀ ಒಡಕೊಂಡು ಸತ್ತ.... ಇವರಣ್ಣನ ಕಾರಭಾರ ನೋಡಿ.... ಸರ್ವಗುಣ ಸಂಪನ್ನ ಇದ್ದಾನ ಅಂವ ಆದರೂ ಸಹಿತ ಬ್ರ ಅಂದಾನೇನು ಮಗಾ ಇಂವ.... ಭಾಳ ಸಮಾಧಾನ. ಅಂವ ಕುಡದು ಬಂದರ ಆದ ಹೇಣ್ತಿ ನೋಡ್ಲಿಲ್ಲ. ಆದರ ತಮ್ಮ ಇಂವಾ ಅಂವನ್ನ ತೊಳದ. ಹೇಣ್ತಿನ್ನ ಕೊಂದರ ತನ್ನ ಪಾಲಿನ ಹೊಲಾ ಮಾರಿ ಅಂವನ್ನ ಉಳಿಸಿದ. ಅಣ್ಣನ ಮದಿವಿ ಮಾಡಿದ.... ಅಂವ ಬ್ಯಾರೆ ಒಬ್ಬಾಕಿನ್ನ ತಂದು ಇಟಗೊಂಡರ ಏನೂ ಅಲ್ಲಿಲ್ಲ. ಇಂಥವನ್ನ ಅಂವಾ ಸೇರಂಗಿಲ್ಲ.... 'ಬ್ಯಾರೆ ಆಗೂನು' ಅಂತ ಹಟಾ ಹಿಡದಾನ 'ಬ್ಯಾರೆ ಆಗೂದು ಬ್ಯಾಡ' ಅಂತ ಇಂವ ಅಂದ್ರ 'ಕೆಡದ ಒಗೀತಿನಿ ನಿನ್ನ' ಅಂತ ಹೇಳ್ಯಾನಂತ.... 'ಅಣ್ಣನ ಕೈಯಾಗ ಸಿಕ್ಕ ಸತ್ತರ ಛಲೋ ಆತು' ಅಂತಾನ ಇಂವ ಮಳ್ಳ.... ಗರೀಬ ಅದ ಪಾಪ.... ಗುಂಡ ಎತಗೋತ ಅಡ್ಡಾಡಿ ಪೈಲವಾನ ಆಗ್ಯಾನ.... ಅಡಿಕಿ ಪೋಳ ಸಹಿತ ಹಾಕೊಳ್ಳಂಗಿಲ್ಲಾ.... ಚಿಂತಿ ಇರದ ಏನ ಮಾಡೀತ ಹೇಳ.... ಮನ್ನೆ ಮನ್ನೆ ಲಗ್ನ ಆತು.... ಹುಡಿಗಿ ಛಲೋ ಇದ್ದಾಳ ಆಕಿನೂ.... ನಿಂಬೆವ್ವ ಅಂತ.... ಫೇಟ್ ನಿಂಬೀಕಾಯಿ ಬಣ್ಣದಾಕಿ ನೋಡಪಾ.... ಪರಸ್ಯಾ ಭಾಳ ದುಷ್ಟ ಇದ್ದಾನ.... ಆಕೀ ಮ್ಯಾಲೂ ಕಣ್ಣಿಟ್ಟಾನ ಮಗಾ.... ಏನ ಮಾಡತೀ...." ಎಂದು ತನ್ನದೇ ಆದ ಶೈಲಿಯಲ್ಲಿ ಶಿವಾನಂದ ಭಾಷಣ ಬಿಗಿದಾಗ ಎದೆ ಝುಲ್ ಅಂದಿತು. ಚನ್ನಪ್ಪ ಹೇಳಿದ ಪರಸುವಿನ ಕಥೆ ಮತ್ತೆ ಕಣ್ಮುಂದೆ ಹಾಯ್ದು ಹೋಯಿತು.

"ಪದಮಣ್ಣಾ...." ಎಂದು ನಾನು ನಿಟ್ಟುಸಿರು ಬಿಡುವಷ್ಟರಲ್ಲಿ....

"ಅಣ್ಣಾ.... ಊಟಕ್ಕ ಬಾ ಅಂತ...." ಪುಟ್ಟಿ ಕರೆಯುಬಂದಾಗ.... ಏಳದೆ ವಿಧಿ ಇರಲಿಲ್ಲ.

* * * * *

ಹುಣಸೀಗಿಡದ ನೆರಳು ತಂಪಾಗಿದ್ದಿತು. ಹೋಗುವದಿದ್ದರೂ ಕೂಡ ವಿಶ್ರಮಿಸಬೇಕೆಂಬ ಹಂಬಲ ಬಹಳವಾಗಿದ್ದಿತು. ಅಲ್ಲಿಯೇ ನಮ್ಮ ಗೋಲ್ಡನ್ ಗ್ಯಾಂಗು ನೆರೆಯಿತು. ಉಡಾಳ ರಾವ್ಯಾ ಇನ್ನೂ ಬಂದಿರಲಿಲ್ಲ.... ಕಲ್ಯಾಣಿಯು ಗೈರ ಹಾಜರಿ ನಮ್ಮನ್ನೆಲ್ಲ ಮಂಕು ಬಡಿಸಿತ್ತು. ಹಿರಿಯನಾದ ಫಯಸ್ಯಾ ಕೇಳಿಯೇ ಬಿಟ್ಟ. 'ಕಲ್ಯಾಣಿ ಇನಾ ಯಾಕೋ ಬಂದಿಲ್ಲ?' ಎಂದು. "ಬಿತ್ರೂ ದಿವಸ.... ಅದಕ್ಕ ಬಂದಿಲ್ಲ ಕಾಣಸ್ತದ...." ಉತ್ತರದ ಬಾಣವನ್ನು ಬಾದರಾ ಬಿಟ್ಟ. "ಪದಮಣ್ಣನ ಗಾಡೀನ ಇನಾ ಬರಲಿಲ್ಲಲಾ" ಮತ್ತೆ ಫಯಸ್ಯಾನ ವಿಚಾರಣೆ. ಇಷ್ಟಾ-ಗೂವರೊಳಗ ಉಡಾಳ ರಾವ್ಯಾ ಅರ್ಥಾತ್ ಅಡ್ಡಾದೂ ರೀತಿಯೋ ಬಂದು ಎಲ್ಲರನ್ನೂ ದಿಗ್ಭ್ರಾಂತವಾಗುವಂತೆ ಮಾಡಿತು.

"ಇನ್ನೇನ ಬರತಾನ ಮಗಾ.... ಹೋಂಟಾನ ಅಂವ ಕಾರಬ್ಯಾಳಿ ರೊಟ್ಟಿ

ಹಣಿಯಾಕ.... ಕಪ್ಪಿಣದ ಬಳಿ ಜೀಡಲಿಕ್ಕೆ ಹತ್ಯಾವಂತ ಕೈ.... ಗೌಡರ ಮುಸ್ಯಾಗ ಕೂತಾನ.”

ಇಷ್ಟೊತ್ತು ಮೂಕ ಪ್ರೇಕ್ಷಕನಾಗಿದ್ದ ನಾನೂ ಚರ್ಚೆಯಲ್ಲಿ ಭಾಗವಹಿಸುತ್ತ.... “ಅಂದರ ಯಾರ್ನರ ಹೊಡದಗಿಡದಾನೇನು ಮತ್ತ....”

“ಹೊಡ್ಯೂದ್ಯಾಕೋ? ನಿಕಾಲೀನ ಮಾಡ್ಯಾನ ಪರಸಪ್ಪನ್ನ” ರಾವ್ಯಾನ ಉತ್ತರ.

“ನೀ ಖಿನ ಮಂಗಾ ಈಗಽ ಎಲ್ಲಾ ಆದರ ತಳಾ ಬುಡಾ ಎಲ್ಲಾ ಪತ್ತೆ ಮಾಡಿಕೊಂಡು ಬಂದಿರಬೇಕೂ....” ಸಿದಗೊಂಡ ಕೆಣಕಿದ.

“ಇಗಾ....ಕೇಳಿಲ್ಲೆ....” ರಾವ್ಯಾ ಸುರುವು ಮಾಡಿದ.

“ಈಗ ೪–೫ ದಿವಸದ ಹಿಂದ ಪರಸು ಕುಡದ ಬಂದ ಧಾಂದ್ಲೆ ಮಾಡ್ಯಾನ ಮುಸ್ಯಾಗ.... ಕುಡೂದು ಅಂದರ ಪಟ್ಟ–ಗಿಟ್ಟ ಅಲ್ಲ.... ಹರಿವೀನ ಎಬ್ಬಿಸ್ಯಾನ ಮಂಗಾ..., ಬಂದು.... ‘ಪಾಲಾಗೂನು ಖಿಸಂತೀ’ ಅಂತ ಪದಪ್ಯಾನ್ನ ಕೇಳ್ಯಾನ... ಹುಚ್ಚ ಪದಪ್ಯಾ ಬ್ಯಾಡ ಅಂದಽದ.... ‘ನಿನ್ನ ಕಡೂತನ ಮಗನಽ’ ಅಂತ ಪರಸು ಅಂದಾಗ.... ಈ ಲೋಕದಾಗ ಇರಾಕ ಯಾಂವ ಬಂದಾನ.... ಒಂದಿಲ್ಲಾ ಒಂದಿನ ಹೋಗೂದ ಜಂತಿಲ್ಲದ ಮನೀಗೆ.... ಅಣ್ಣನ್ನ ಕೈಯಾಗ ಹ್ಯಾದರಽ ಪಾಡ ಅಲ್ಲಽ.... ಇಗಾ ಹೊಡಿ’ ಅಂತ ಅವನ ಮುಂದ ಕೂತಾನ ಪದಪ್ಯಾ.... ಏಕದಂ ಪರಸ್ಯಾ ದೊಡ್ಡದನಿ ತಗದು ಅಳಲಿಕ್ಕೆ ಸುರೂ ಮಾಡಿದಂತಾತು. ‘ನಾ ಎಂಥಾ ನೀಚೋ? ಎಪ್ಪಾ.... ಮನಿಮುರಕ ಹರಾಮ ಸೂಳೀಮಗಾ ನಾ.... ಕೂಸ ಕುತಿಗೀ ಕೊಯ್ಯುತ್ತ ಕೊಡತ್ತೆ ತೊ ಎಪ್ಪಾ.... ನನ ತಮ್ಮಾ.... ನಿನ ಕಾಲ ಹಿಡಕೊಂಡರೂ ತಪ್ಪಿಲ್ಲ’ ಅಂತ ಬೋರ್ಯಾಡ್ಯಾನ ಮಗಾ.... ಅವ್ವಗ ಭಾಳ ಆನಂದಾಗೇದ.... ಆಕೀ ಮಗಾ ಹಾದಿಗೆ ಬಂದಾ ಅಂತ.... ಪದಪ್ಯಾನೂ ನಿಶ್ಚಿಂತಿಯಿಂದ ನಿದ್ದೀ ಮಾಡ್ಯಾನ. ಅಲ್ಲಿಂದ ನಿನ್ನೆ ಸಂಜೀ ಮುಂದ ‘ನಾಳೆ ಗೋದಿ ಬಿತ್ತಿ ಬರೂಣ ತಮ್ಮಾ’ ಅಂತ ಹೇಳೂನಾ ‘ನಾ ಗೌಡರ ಲಗ್ನಕ್ಕ ಹೋಗೂವ್ರೆತಿ ನಾಡದ ಹೋಗೂಣು’ ಅಂತ ಪದಪ್ಯಾ ಹೇಳಿದರ ‘ದೊಡ್ಡ ನಸಿಕಿನ್ಯಾಗ ಹೋಗಿ ಬಾರಾಮುಟಾ ಬಿತ್ತಿ ಬರೂಣು ನೀ ಹೋಗಾಕತ್ತಿ’ ಅಂತ ಹೇಳೂನಾ ಇಂವ ‘ಹೂಂ’ ಅಂದಾನ.... ಅಲ್ಲಿಂದ.... ಖಿನಾಗೂದು ಇಂವ ಸುಪ್ರಭಾತ ಸಮಯದಾಗ ಘಟಾಸೇದ ನೋಡು ಮುಂಡಾ.... ನಿಗರಿ ಹೋಗ್ಯಾನ ಮಂಗಾ ಪರಸ್ಯಾ.... ಅಪ್ಪ ರೆಯರ ತೋಳ ತೆಕ್ಯಾಗ.... ಚಾಸ್ನ ಹೊಡೀಲಿಕ್ಕೆ ಹತ್ತಿರಬೇಕ ಈಗ....”

“ಏ ರಾವ್ಯಾ ಲಗೂನೇ ಹೇಳೋ....” ನನ್ನ ಅವಸರ.

“ಅಲ್ಲಿಂದ ಬಣಜಿಗ್ಯಾನ ಮಿಂಡ ಜಿಗೂನಾ.... ಎದ್ದು ಬೀಜದ ಚೀಲಾ ಸಜ್ಜ ಮಾಡಿಕೊಂಡು.... ಎರಡರೊಟ್ಟಿ.... ಅಗಸಿಹಿಂದಿ.... ಗಂಡ ಬಳ್ಯಾಗಿದ್ದ....,

ಮುಸರ ಹಾಕೊಂಡು ನ್ಯಾರಿ ಗಜ್ಜ ಗಣಸ್ಯಾರ.... ಬುಕ್ಕದ ಕೋಲ.... ಮುಂಡಿ.... ಕೂರಿಗಿ.... ಹಣಿಗ್ಗ ಅಪಸ್ನೆಲ್ಲಾ ಪದಪ್ಯಾ ತೋಗೋಳಾಗ ಪರಸಪ್ಪ ಕಂಬಳಿ ಹೆಗಲ ಮ್ಯಾಲ ಹಾಕೊಂಡು ಕೈಯಾಗ ಜಪಗೊಳ್ಳಿ ತೊಗೊಂಡಾನ... ಜೆಕ್ಯಾ.... ಫಕೀರ್ಯಾನ್ನ ಬಿಡೂ ಮುಂದ ಪದಪ್ಯಾ ಕೊಡ್ಲಿ ನೋಡಿದರೂ.... ಹುಚ್ಚ್ಯಾ ಇದು ಹುಚ್ಚ.... ಕೊನೀ ಕಡೀಲಿಕ್ಕೆ ಅಂತ ತಿಳಕೊಂಡsದ ತನ್ನ ಕಡೀಲಿಕ್ಕೆ ಅಂತ ಹೊಳದೀ ಇಲ್ಲ ಆ ಮಳ್ಳ ಕುಂಬಗ.... ಜೆಕ್ಯಾ.... ಫಕೀರ್ಯಾನ ಹಿಂದ ಹಲ್ಯಾ.... ಹಲ್ಯಾ.... ಅನಕೋತ.... ಮುಂದ ನಡದsದ.... ಚಿಲಮೀ ಜಕಮುಕಿ ಕಟಗೋತ ಪರಸ್ಯಾ ಹಿಂದs ಉಳದು ಪದಪ್ಯಾನ್ನ ಕಡೀಬೇಕು ಅಂತ ಪರಸ್ಯಾ ಅನೂದರಾಗ ಪರಸ್ಯಾನ್ನs ದೇವರ ಕಟದಾನಾತು.... ಹಂಗೇ ಹೊಲಕ್ಕ ಹೋಗ್ಯಾರ.... ಹಾದ್ಯಾಗ ಎಲ್ಲಿ ಸಾಧಿಸಿಲ್ಲ ಅಂದಂಗ.... ೯ ಮೈಲಿನ ಮ್ಯಾಲಿನ ಹೊಲಕ್ಕ ಹೋಗೂದರಾಗ ಪರಸ್ಯಾಗ.... ಸಾವು ಮೂಡೂ ಹಂಗ..... ಸೂರ್ಯಾ ಹೊಂಟಾನಾತು.... ಅಲ್ಲಿ ಹೋಗಿ ಫಕೀರ್ಯಾನ.... ಹೆಗಲ ಮ್ಯಾಲ ನೊಗಾ ಇಟ್ಟು ಪದಪ್ಯಾ ಸೆಟದ ನಿಂತs ಜತಗೀ ಕಟ್ಯಾನ ಖಿಸಪಾ.... ಅಲ್ಲಿಂದ ಜೆಕ್ಯಾನ್ನ ಹೆಗಲ ಮ್ಯಾಲ ನೊಗಾ ಇಟ್ಟು ಜತಗೀ ಕಟ್ಟಬೇಕು ಅಂತ ಬಾಗ್ಯಾನ.... ಇನಾ ಅಂವ ಪೂರಾ ಬಾಗಿದ್ನೋ ಇಲ್ಲೋ ಅನೂದರಾಗs ನೊಗದ ಮ್ಯಾಲ ಫಟ್ ಅಂದsದ ಕೊಡ್ಲಿ.... ಫಟ್ ಅಂದಾಗs ಮ್ಯಾಲನೋಡ್ಯಾನ ಮಗಾ ಪದಪ್ಯಾ.... ಕೊಡ್ಲಿ ಕಾಣೂನಾನs ಎಲ್ಲಾ ಅರ್ಥ ಆಗೇದ ಅಂವಗ.... ಪರಸ್ಯಾನ ಗುರಿ ತಪ್ಪೇದ.... ಪದಪ್ಯಾ ಮುಂದ ಓಡಿ ಹೋಗ್ಯಾನ. .. ನೊಗದಾನ ಕೊಡ್ಲಿ ಕಿತಗೊಂಡು ಪರಸ್ಯಾ ಬೆನ್ನ ಹತ್ಯಾನ.... ಹತ್ತಿ ಕೊಡ್ಲಿ ಬೀಸಿ ಒಗದಾನ.... ಆವಾಗೂ ಗುರಿ ತಪ್ಪೇದ.... ಇನ್ನ ನನ್ನ ಬಿಡಂಗಿಲ್ಲಂದ ಅಂದು ಪದಪ್ಯಾ ಲಟ್ಟ ಗುಂಡಗಲ್ಲ ತೊಗೊಂಡು ತಿರಗಿ ನಿಂತು ಬೀಸಿ ಒಗದಾ.... ಆ ಕಲ್ಲ ಪರಸ್ಯಾನ ಮೆಲಕಿಗೆ ಬಡದು ಗಿಮಿದಿರಗಿ ಬಿದ್ದಾನ ತಲೀ ತಿರಗಿ. ಪದಪ್ಯಾ ಓಡಿ ಬಂದು ಕೊಡ್ಲಿ ತೊಗೊಂಡು ಪರಸ್ಯಾನ ಕುತ್ತಿಗೀ ಮ್ಯಾಲs ಹೊಡದಾಗ ರಕ್ತ ಚಿಲ್ಲನs ಸಿಡದsದ. ರಕ್ತಾ ನೋಡಿ ರಂಗಿಗೇರಿ ತುಂಡ ತುಂಡ ಮಾಡ್ಯಾನ ಪರಸ್ಯಾನ್ನ ಪದಪ್ಯಾ.... ಇಷ್ಟೆಲ್ಲಾ ನಡದದ್ದು ಮುಕಲೇನs... ಪಿಟ್ ಅಂತ ಇಬ್ರು ಮಾತಾಡಿಲ್ಲ ಮಕ್ಕಳು.... ಪ್ರೇಕ್ಷಕರು ಅಂದ್ರ ಮುಗಿಲಾಗಿನ ಸೂರ್ಯಾ.... ಹೊಲದಾಗಿನ ಬನ್ನಿ ಗಿಡಾ.... ಆ ಗಿಡದ ಮ್ಯಾಲ ಕೂತ ಕಾಗಿ.... ಅಲ್ಲೇ ಸನೇದಾಗಿನ ಒರತಿ.... ಕಣ್ಣತ್ತಿ ಮನುಷ್ಯ ಅನೂ ಪ್ರಾಣಿ ಒಂದ!ನೋಡಿಲ್ಲ.... ಪರಸ್ಯಾನs ಪರಸ್ಯಾ.... ಪದಪ್ಯಾನs ಪದಪ್ಯಾ.... ಆ ತುಂಡಗೋಳ್ನೆಲ್ಲಾ ಉಡ್ಯಾಗ ಕಟಗೊಂಡು ಹೋಗಿ ಒರತ್ಯಾಗ ಮುಚ್ಚಿ.... ಮ್ಯಾಲ ಉಸಕ ಎಳದಾನ.... ಜಗ್ಗ.... ಅದs ಕೊಡ್ಲಿಲೇ ಮುಳ್ಳ ಹೆಂಟಾ ಕಟಕೊಂಡು ಬಂದು ಮ್ಯಾಲ ಒಗದು.... ಬಂದ ಫಡಿಯಿಂದ ಆಲಂಕಾರ ಮಾಡಿ ಅದರ ಮ್ಯಾಲ ಕೂತೂನಾ ದುಃಖ ಬಿಕ್ಕರಿ

ಬಂದು.... ಸಾಕಾಗೂ ತನಕಾ ಅತ್ತ್ಯಾನ. ಎಲ್ಲಾ ಮುಗಿಸಿ, ಬಿತ್ತ್ರಾರದೆ ಮನೀಗೆ ಬಂದು, ಆ ರಕ್ತದ ಅರಿವಿ ಎಲ್ಲಾ ಬಚ್ಚಲದಾಗ ಕಳದು.... ನಿರುಂಬಳ ಆತು ಅಂತ.... ಬಿಸಿನೀರಲೆ ಜಳಕ ಮಾಡ್ತ್ಯಾನ.... ಪಾಟಿ ಘಡೆಪ್ಪ ಮುತ್ಯಾನ ಮುಂದ ಹೇಳ್ಯಾನ ಸಮಾಧಾನ ಆಗದಕ.... ಅಂವಾ ಹಾಲೀಕಾರಪಾ ಎಷ್ಟ್ಯಾದರೂ.... ಗೌಡರಿಗೆ ಹೇಳ್ಯಾನ.... ಗೌಡ್ರು ಹಿಡದ ಕೊಡಿಸ್ಯಾರ ಆತು...."

ರಣಕತ್ಲದ ಕಥೆಯನ್ನು ರಾವ್ಯಾ ಮುಗಿಸಿದ....

ಕಲ್ಯಾಣಿಯ ಗಾಡಿಯಲ್ಲಿ ಕುಳಿತು ಪಾರೋತಿಯ ಮದುವೆಗೆ ನಮ್ಮ ಸವಾರಿ ಹೊರಟಿತು.

* * * * *

ಮೇ ತಿಂಗಳ ಬಿಡುವಿಗೆ ನಾನು ಊರಿಗೆ ಬಂದಾಗ ಚಹಾ ಕುಡಿಯುತ್ತ ಕುಳಿತಿರುವಾಗಲೇ ಅವ್ವ ಹೇಳಿದಳು.... "ಸಾಕ್ಷಿ ಇಲ್ಲs ಇಲ್ಲ.... ಮತ್ತ ಒಬ್ಬನs ಇಷ್ಟ ಕೆಲಸ ಮಾಡ್ಲಿಕ್ಕೆ ಸಾಧ್ಯ ಇಲ್ಲಾ... ಸಂಶಯ ಆದ ಅಂತ.... ಕೋರ್ಟಿನವರು ಪದವ್ಯಾನ್ನ ಬಿಟ್ಟರಪಾ... ಪಾಪ ನಿಂಬೆವ್ವನ ನಸೀಬ ಫಲೋ ಆದ..." ಎಂದು. ನನ್ನ ಹೃದಯದಿಂದ ಉದ್ಗಾರ ತಾನಾಗಿಯೇ ಹೊರಟಿತು..... "ಒಂದ್ಹೋಗಿ ಒಂದಾತು."

★ ರವೀಂದ್ರ ಪ್ರ. ಕರ್ಜಗಿ

“ಭಗವತಿಯೇಱು” ಎಂದರೇನು ?

(ನಿವೇದನೆ)

“ಭಗವತಿಯೇಱು ಪೇೞ್ದ ತೆಱದಿ
ಕಥಂಸಾಯ್ತ್ವನರೇಱು,
ನೀನಿದಂ ಬಗೆದಿವರಿನ್ನು ಸಾಂತಿಱುವರೆಂದು
ವಿಮೋಹಿಸಿ ವೀರಪಟ್ಟಮಂ ಬಗೆಯದೆ ಕಟ್ಟಿಸಿ.
ಗುರುಗಳಂ ಕುಲವೃದ್ಧರನಾಜಿಗುಯ್ದು
ಕೆಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ
ಬಂದಪುದೇಂ ಸುಯೋಧನಾ ॥” (10–16)

ಪಂಪಮಹಾಕವಿ ವಿರಚಿತ ಸಮಸ್ತ ಭಾರತ–ವಿಕ್ರಮಾರ್ಜುನ ವಿಜಯದಲ್ಲಿ, ಭೀಷ್ಮರ ಸೇನಾಧಿಪತಿ ಪಟ್ಟಾಭಿಷೇಕದ ಬಗೆಗೆ "ಪ್ರೊಟ್ಟಳಿಸುವ (ಬೀಗುವ, ಗರ್ವಪಡುವ)" ಸುಯೋಧನನ ನುಡಿಯನ್ನು 'ಅವಕರ್ಣಿಸಿ (ಕೇಳಿ, ಅಲ್ಲ–ಅಪಕರ್ಣಿಸಿ. ಅವಕರ್ಣಿಸಿ, ಕೇಳಗಿವಿಕೇಳಿ)' ಕರ್ಣನು ಹೇಳುವ ಪದ್ಯಗಳಲ್ಲಿ ಇದೊಂದು ತುಸು ಗಡಚಾಗಿದೆ. ಇದರೊಂದು ವಾಕ್ಯದ ಬಗೆಗೆ (ಪ್ರಥಮ ಪಾದದ ಬಗೆಗೆ) ವಿದ್ವಾಂಸರಲ್ಲಿ ಮತಭೇದವಿದೆ. ಇದನ್ನು ಕುರಿತು ವಿದ್ವಾಂಸರ ಆಶಯಾಂತರಗಳೇನೆಂದು ತುಸು ಸಂಗ್ರಹಿಸಿ, ನಮ್ಮ ನಿವೇದನೆಯೇನೆಂದು ವಿಶದಿಸುವುದೇ ಈ ಬರೆಹದ ಗುರಿಯಾಗಿದೆ.

೧) ಈ ಪದ್ಯದ ಮೊದಲು ಸಾಲಿನಲ್ಲಿ ಹೇಳಿರುವುದೇನೆಂದು ಸುಲಭವಾಗಿ ಅರ್ಥವಿಸಲಾಗದು! ಇದನ್ನು ವಿವರಿಸುತ್ತ, ಶಾಸನಗಳಲ್ಲಿರುವ "ಏಱು" ಎಂಬುದು ಇಲ್ಲಿರುವುದರಿಂದ, ಇದರ ಅರ್ಥರೂಪಗಳೇನೆಂದು ಹಿರಿಯ ವಿದ್ವಾಂಸರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದಿದ್ದಾರೆ.

"ಏಱು" ಎಂಬುದಕ್ಕೆ ಕೇಶಿರಾಜನು "ಆರೋಹಣೇ. ಸಮಗ್ರತ್ವೇಕ್ಷತೇಽಪಿ" ಎಂದು ಮೂರು ಅರ್ಥ ಹೇಳಿದ್ದಾನೆ. ಈ ಮೂರು ಅರ್ಥಗಳಲ್ಲಿ ಯಾವುದೊಂದೂ ಇಲ್ಲಿ ಉಚಿತವೆಂದು ತೋರುವುದಿಲ್ಲ. "ಏಱು" ಎಂದರೆ ಏಳಿಗೆಯೆಂದು ಸಾಮಾನ್ಯಾರ್ಥದಲ್ಲಿ ಕೆಲವರು ಹೇಳುವರು ಅದೂ ಇಲ್ಲಿ ಸಮರ್ಪಕವಾಗಿಲ್ಲ. ಭೀಷ್ಮನ ಏಳಿಗೆಯೆಂದು ಅರ್ಥಮಾಡಿಕೊಂಡರೂ, ಜಗನ್ಮಾತೆಯಾದ ದುರ್ಗಿಯ ಏಳಿಗೆಯೆಂದು ಸರಿಯಾಗಲಾರದು; ಸದಾ ಏಳಿಗೆಯಲ್ಲಿರುವ ಆಕೆಗೆ ಬೇರನ್ನು ಕಲ್ಪಿಸಬೇಕಾಗುತ್ತದೆ

ತುಮಕೂರ ಜಿಲ್ಲೆಯ (೮೬, ೯೫, ೯೬ನೆಯ) ಶಾಸನಗಳಲ್ಲಿ "ಏಱು" ಎಂದು ಬಂದಿದೆ, "ಕಾಳಗ" ವೆಂಬರ್ಥ ಅಲ್ಲಿದೆ. ಇತರ ದ್ರಾವಿಡ ಭಾಷೆಗಳಲ್ಲಿ "ಏಱು" ಶಬ್ದಕ್ಕೆ ಈ ಅರ್ಥವಿರುವಂತೆ ದೊರಕಿರುವ ಆಧಾರಗಳಿಂದ ಹೇಳು

ಪಂತಿಲ್ಲ. ಪಂಪನೇ ಇತರತ್ರ (ಪಂ.ಭಾ. 12-39 ಆ.ಪ್ರ. 14-90) "ಏಱು" ಎಂಬುದನ್ನು ನಾಮರೂಪ ಕ್ರಿಯಾ ರೂಪಗಳಲ್ಲಿ, "ಕಾಳಗ"ವೆಂಬರ್ಥದಲ್ಲಿ ಹೇಳಿದ್ದಾನೆ.

ಈಗ "ಭಗವತಿಯೋಱುವೆಟ್ಟು" ವೆಂಬ ವಾಕ್ಯದ ಅರ್ಥವನ್ನು "ದುರ್ಗಿಯು ಮಾಡಿದ ಯುದ್ಧವನ್ನು ಹೇಳುವ ಹಾಗೆ ಇವರ ಯುದ್ಧವು ಕಥೆಯಾಯಿತು" ಎಂದು ತಿಳಿಯಬಹುದು.

ರನ್ನನು ಬರೆದಿರಬಹುದಾದ ಇಸ್ವಿ 1007 ರ ಲಕ್ಕುಂಡಿಯ ಶಾಸನದಲ್ಲಿ "ವಿಕ್ರಮಂ ಭಗವತಿಯೋಱು" ಎಂದರೆ, ಎಂದೋ ಆಗಿಹೋದ ಪುರಾತನ ಕಾಲದ ಕಾಳಗ, ಈಗ ಇರುವದಿಲ್ಲ ಎಂಬರ್ಥವನ್ನು ಹೊಂದುತ್ತದೆ. ಕುಮಾರ ವ್ಯಾಸ ಕೃತಿಯಲ್ಲಿ "ಕಳ್ಳೇಱು"ವೆಂದರೆ ಕಳ್ಳಯುದ್ಧ—ಮೋಸದ ಯುದ್ಧವೆಂದು ಅರ್ಥವಿಸಲಾಗುತ್ತದೆ. "ಏಱು" ಧಾತುವಿಗೆ "ಯುದ್ಧ ಮಾಡು, ಯುದ್ಧವೆಂಬ ಅರ್ಥಗಳು ಸಂಗತವಾಗಿರುವದರಿಂದ, ಈ ಅರ್ಥ ಕೇಶಿರಾಜನ ಪಟ್ಟಿಗೆ ಸೇರ ಬೇಕಾಗಿದೆ" (ಟೀಕೆಗಳು — ಲೇಖನಗಳು ಪುಟ 944-7).

ಶ್ರೀ ಡಿ. ಎಲ್. ಎನ್. ಅವರು ಇತ್ತೀಚೆಗೆ ಬರೆದ "ಪಂಪಭಾರತ ದೀಪಿಕೆ" ಯಲ್ಲಿಯೂ "ಭಗವತಿಯ—ದುರ್ಗಾದೇವಿಯ. ಏಱುವೆಟ್ಟು-ಯುದ್ಧಗಳನ್ನು ಹೇಳುವ, ತೆಱದಿಂ-ರೀತಿಯಿಂದ, ಇವರ—ಈ ಭೀಷ್ಮರ, ಏಱು—ಯುದ್ಧಗಳು, ಕಥೆಯಾಯ್ತು—ಎಂದೋ ನಡೆದ ವೃತ್ತಾಂತಗಳಾಗಿವೆ", ಎಂದಿದೆ (ಪು. 345-6)

೨) ಇಲ್ಲಿ ಉದಾಹರಿಸಿದ ಲಕ್ಕುಂಡಿಯ ಶಾಸನದ ಪದ್ಯದ ಕೆಲವು ಶಬ್ದ ಗಳನ್ನು ಸರಿಯಾಗಿಸಿ, ಅರ್ಥವಿಸಿದ ಡಾ|| ಎಂ. ಚಿದಾನಂದಮೂರ್ತಿಯವರು ಈ ಬಗೆಗೆ ಹೀಗೆ ಬರೆದಿದ್ದಾರೆ.

"ಪಗರಣಮೊಣ್ಮು, ಮೊಚ್ಚು ಪನಿ, ಘೃಷ್ಟಿಯೆ ಬೂದಿಯ ಬೊಟ್ಟು, ಗಂಡ ಮಾತುಗಿ ಬಗಿ, ಕೀರ್ತಿ ಕುಪ್ಪ ಕುಜೆ, ಮುತ್ತರ ಮೂದಲೆ ಪೆಂಪು. ವಿಕ್ರಮಂ ಭಗವತಿಯೆಱು, ಶೌಚಗುಣ ಮತ್ತಿಯೆ ಪಣ್ಣನಿ ಪೇಳ ಪುಂಡರಂತೆಗಳ್ದುದಾರ ಚಾರುಚರಿತ(ರ) ಪ್ರಥಿಯಿಂ ಪಡೆಮಳ್ಕೃ ತೈಲನಾ||" (ಲಕ್ಕುಂಡಿಯ 1007 ರ ಶಾಸನದ ಪದ್ಯವಿದು)

"ಇಲ್ಲಿ ಬರುವ 'ಭಗವತಿಯೋಱು' ಎಂಬುದಕ್ಕೆ ಸಮರ್ಪಕವಾಗಿ ಅರ್ಥೈಸಲು ಇನ್ನೂ ಸಾಧ್ಯವಾಗಿಲ್ಲ. ದಿ. ಡಾ. ಡಿ. ಎಲ್. ನರಸಿಂಹಾಚಾರ್ಯರು ಅದರ ಬಗ್ಗೆ ಲೇಖನವನ್ನು ಬರೆದು "ಚಾಮುಂಡಿ ಮಾಡಿದ ಯುದ್ಧಗಳೆಲ್ಲವೂ ಪುರಾಣ ಕಥೆಗಳಾಗಿ ಪರಿಣಮಿಸಿವೆ; ಹಾಗೆಯೇ ಭೀಷ್ಮರು ಮಾಡಿದ ಯುದ್ಧ ಗಳೂ ಪ್ರಾಚೀನಕಾಲಕ್ಕೆ ಸೇರಿದವು; ಈಗ ಅವರಿಂದ ಯುದ್ಧವನ್ನು ಮಾಡ ಲಾಗುವದಿಲ್ಲ" ವೆಂಬುದು ಕರ್ಣನ ಅಭಿಪ್ರಾಯವೆಂದು ವ್ಯಾಖ್ಯಾನಿಸಿದ್ದಾರೆ. "ಏಱು"ಎನ್ನುವ ಮಾತಿಗೆ ಅವರು "ಯುದ್ಧ" ವೆನ್ನುವ ಅರ್ಥವನ್ನಿಟ್ಟುಕೊಂಡ

ರುವದು ಸರಿಯಾಗಿರುವಂತೆ ತೋರುತ್ತದೆ. "ಇನ್ನುಂ [= ಈಗಲೂ]" ಎನ್ನುವ ಮಾತು ಅವರ ವ್ಯಾಖ್ಯಾನವನ್ನು ಸಮರ್ಥಿಸುವಂತೆಯೂ ತೋರುತ್ತದೆ.

ಆದರೆ, ಅವರ ವ್ಯಾಖ್ಯಾನ ಲಕ್ಕುಂಡಿ ಶಾಸನದಲ್ಲಿ ಬರುವ ಉಕ್ತಿಗೆ ಹೊಂದಿಕೆಯಾಗುವದಿಲ್ಲ. ಏಕೆಂದರೆ, ಅವರ ವ್ಯಾಖ್ಯಾನವನ್ನು ಒಪ್ಪಿಕೊಂಡರೆ ಆ ಶಾಸನದಲ್ಲಿ ವಿಡಂಬನೆಗೆ ಒಳಗಾಗಿರುವವರು ಒಂದು ಕಾಲದಲ್ಲಿ ಯುದ್ಧವನ್ನು ಮಾಡಿ ಶೂರರೆನಿಸಿಕೊಂಡು, ಈಗ ಕೈಲಾಗದ ಮುದುಕರಾಗಿದ್ದಾರೆ ಎಂದು ಕಲ್ಪಿಸಿಕೊಳ್ಳಬೇಕಾಗುತ್ತದೆ. ಆದರೆ ಅಲ್ಲಿ ವಿಡಂಬನೆ ಮಾಡುತ್ತಿರುವುದು ವಾಸ್ತವವಾಗಿ ಹೇಡಿಗಳನ್ನು, ದುರ್ಬಲರನ್ನು, ಜೊಗಳೆಯುವರವನ್ನು, ವೇಷ ಧಾರಿಗಳನ್ನು, ಆದ್ದರಿಂದ ಡಾ|| ಡಿ. ಎಲ್. ನರಸಿಂಹಾಚಾರ್ಯರ ವ್ಯಾಖ್ಯಾನ ಎಷ್ಟೇ ಆಕರ್ಷಕವಾಗಿದ್ದರೂ ಸಮರ್ಪಕವೆನಿಸುವದಿಲ್ಲ. ಒಂದು ಉಕ್ತಿಗೆ ನಾವು ಹೇಳಿರುವ ಅರ್ಥ ಎಲ್ಲ ಸಂದರ್ಭಗಳಿಗೂ ಅನ್ವಯವಾಗುವಂತಿರಬೇಕು ತಾನೇ?

ಪಂಪಭಾರತದ ಇಡಿಪದ್ಯದಲ್ಲಿ 'ಭಗವತಿಯೋಜು' ರೂಪಕದ ವಿಸ್ತರಣೆ ಯಿರುವಂತೆ ಕಾಣುತ್ತದೆ. ವೀರನಲ್ಲದವನಿಗೆ ವೀರಪಟ್ಟವನ್ನು ಕಟ್ಟುವದು, ಆತ ಮುದುಕನಾಗಿರುವುದು, ಆತನನ್ನು ನೋಡಿ ಜನರು ನಗುವುದು, ಇಷ್ಟೂ ಭೀಷ್ಮನಿಗೂ ಭಗವತಿಯ ವೇಷವನ್ನು ಧರಿಸಿದವನಿಗೂ ಸಮಾನವಾಗಿ ಅನ್ವಯ ವಾಗುವಂತೆ ಕಾಣುತ್ತದೆ. "ಭಗವತಿಯೋಜು" ಎಂಬುದು ಪಂಪನೇ ಸೃಷ್ಟಿಸಿದ ಉಕ್ತಿಯಾಗಿರುವದಕ್ಕಿಂತ ಆ ಕಾಲದ ಗಾದೆಯ ಮಾತಾಗಿರುವಂತೆ ಕಾಣುತ್ತದೆ.

ಕರ್ನಾಟಕದಲ್ಲಿ "ಭಗವತಿ"ಯ ಗುಡಿಗಳಿದ್ದವು. (ಎ. ಕ. 7 ಎಸ್. ಕೆ. 267), ಕೇರಳದ "ಪರ್ಯೆಯ (= ಹರಿಜನರು) ಎಂಬ ಜನರಿಗೆ ಭಗವತಿ ಅಧಿದೈವ ವಾಗಿದ್ದು, ಅವಳಿಗಾಗಿ ಜಾತ್ರೆಯನ್ನು ಮಾಡುತ್ತಾರೆ. ಆ ಬಗ್ಗೆ ಫಸ್ಟ್ಯನ್ ಬರೆದಿದ್ದಾರೆ–ಅಲ್ಲಿಯ ರಾಕ್ಷಸ ಕುಣಿತವನ್ನು 'ಯೇಲ' ಎಂಬುದನ್ನು ಗಮನಿಸ ಬಹುದು. ತಮಿಳು ಮಲಯಾಳಗಳಲ್ಲಿ 'ಯುದ್ಧಮಾಡು' ಎಂಬರ್ಥದಲ್ಲಿ 'ಏಲ್ ಏಜ್" ಎನ್ನುತ್ತಾರೆ. ಚಾಮುಂಡಿಗೂ ರಾಕ್ಷಸರಿಗೂ ನಡೆದ ಯುದ್ಧಾಭಿ- ನಯವೇ "ಯೇಲ" ಆಗಿರಬಹುದೇ? ಕೊಡಗಿನಲ್ಲಿ ದುರ್ಗೆಯ ಮೆರವಣಿಗೆಯ ಜೊತೆ "ತಾಂತ್ರಿಕ ನೃತ್ಯಗಳು" ಇವೆ.

ಆದ್ದರಿಂದ "ಭಗವತಿಯೋಜು" ಎಂದರೆ ಭಗವತಿ ಉತ್ಸವದ ಸಮಯ ದಲ್ಲಿ ನಡೆಯುವ "ಅನುಕರಣೆಯ ವಿನೋದದ ಯುದ್ಧ"ವೆಂದು ಅರ್ಥಮಾಡ ಬೇಕೆಂದು ತೋರುತ್ತದೆ. "ಇನ್ನುಂ" ಎಂಬುದಕ್ಕೆ ಹೀಗೆ ಅರ್ಥ ಹೇಳಬಹುದು. "ಇವರ(ಭೀಷ್ಮರ) ಯುದ್ಧ ಭಗವತಿಯ ಯುದ್ಧದಂತೆ ಯುದ್ಧಾಭಾಸವೇ ಸರಿ ಯೆಂಬುದು ಕತೆಯಾಗಿಬಿಟ್ಟಿದೆ. ಹಿಂದಿನ ಅವರ ಯುದ್ಧಗಳೆಲ್ಲವೂ ಹಾಗೆಯೇ. ಇದನ್ನು ನೀನು ತಿಳಿದೂ, ಅವರು ಯುದ್ಧಮಾಡುವರೆಂದು ಇನ್ನೂ ಭ್ರಾಂತಿ ಪಟ್ಟು ವೀರಪಟ್ಟವನ್ನು ಕಟ್ಟಿದೆ"ಯೆಂದು ಕರ್ಣನು ದುರ್ಯೋಧನನಿಗೆ ಹೇಳು

ತ್ತಿದ್ದಾನೆ" (ಕರ್ನಾಟಕ ಭಾರತಿ! ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಸ್ವಾತಂತ್ರ್ಯೋತ್ಸವ ಸಂಚಿಕೆ 1972 ೫-೧ ಸಂಚಿಕೆ, ಪುಟ 156-9)

ಇಲ್ಲಿ, ಓ. ಡಾ. ಡಿ. ಎಲ್. ಎನ್. ಅವರು ಬರೆದುದು ಲಕ್ಕುಂಡಿಯ ಶಾಸನಕ್ಕೆ ಸರಿಯಲ್ಲವೆಂದರೂ: "ಏಱು" ಯುದ್ಧ ಮಾಡು ಎಂದೂ, ಯುದ್ಧಾ ಭಿನಯವೇ "ಯೇಱು" ಆಗಿರಬಹುದೆಂದೂ, ಆದರಿಂದಾಗಿ "ಏಱು" ಎಂದರೆ "ಅನುಕರಣೆಯ ವಿನೋದದ ಯುದ್ಧ"ವೆನ್ನುವುದೂ ಸಮಂಜಸವಾಗಿಲ್ಲ. ಏಕೆಂದರೆ, ಚಾಮುಂಡಿಯು ರಾಕ್ಷಸರಲ್ಲಿ ಮಾಡಿದ ಯುದ್ಧವು ಆಕೆಗೆ ವಿನೋದವಾದರೂ, ಅನುಕರಣೆಯಲ್ಲ! "ಯುದ್ಧಾಭಾಸ"ವಲ್ಲ! ಅವರ ಯುದ್ಧದ ಅನುಕರಣೆಯು ನಮಗೆ ವಿನೋದವಾಗಿರಬಹುದು! ಆ ಮೇರೆಗೆ ಭೀಷ್ಮರ ಹಿಂದಿನ ಯುದ್ಧಗಳೆಲ್ಲ ಭೀಷ್ಮರಿಗೆ ವಿನೋದವಾದರೂ ಅನುಕರಣವಲ್ಲ: (ನಾವು ಅದರ ಅನುಕರಣೆ ಮಾಡಿದರೆ, ವಿನೋದಗೊಂಡರೆ, ಅದು ಪ್ರಕೃತೋಪಯುಕ್ತವಾಗಿ ಕಾಣುವದಿಲ್ಲ.) ಆ ಕಾರಣ ಡಾ. ಡಿ. ಎಲ್. ಎನ್ ಆಗಲೀ; ಡಾ. ಜಿವಾನಂದ ಮೂರ್ತಿಯವರಾಗಲೀ ಹೇಳಿದ "ಏಱು"ಎಂಬುದರ ಅರ್ಥಗಳು ಎಲ್ಲೂ–ಇವೆರಡು ಕಡೆಗೂ–ಸರಿಯಾಗಲಾರವು! ಲಕ್ಕುಂಡಿಯ ಶಾಸನದ ಏಳುವುದರಿಗೆ, ಅವರ "ವಿಕ್ರಮಂ ಭಗವತಿಯೇಱು" ಎಂಬಲ್ಲಿಗೆ. ಅವರು ಸ್ವತಃ ಹೇಳಿಗಳಾದರೂ ಯುದ್ಧವನ್ನು ಅರಿಯದವರೆಂದರೆ ಅರ್ಥವೇನು ?

ಪಂಪನು ತತ್ಪೂರ್ವದ ಕೇರಳದ "ಭಗವತಿಯೇಱು" ನೋಡಿದ್ದು, ಅದನ್ನು ಇಲ್ಲಿ ಬಳಸಿರಬೇಕೆನ್ನಲಡ್ಡಿಯಿಲ್ಲ (ಇಂತಹ ಹಲವಾರು ನ್ಯಾಯಗಳು–ಗಾದೆಗಳು ಅತನ ಕೃತಿಯಲ್ಲಿ ಹೇರಳವಾಗಿವೆ! "ಬಡಿಗಂಡನಿಲ್ಲ ಪಾಲನೆ ಕಂಡಂ", "ಸೆಟ್ಟಿಯ ಬಳ್ಳಂ ಕಿರಿದು" ಇ.) ಅರ್ಥಾತ್, "ಭಗವತಿಯೇಱು ಪೇೞ್ಪ" ವೆಂಬುದಕ್ಕೆ ಬೇರೆ ತರದ ಆಶಯವೇ ಕಾಣಬೇಕು! (ಈ ಬಗೆಗೆ ನಮ್ಮ ನಿವೇದನೆಯನ್ನು ಇಲ್ಲಿ ಬರೆಯಲಾಗಿದೆ).

೩) 1953 ರಲ್ಲಿ ಶ್ರೀ ಕೆ. ವಿ. ಕೃಷ್ಣಭಟ್ಟರು ವ್ಯಾಖ್ಯಾನಿಸಿದ "ಪಂಪ ಮಹಾಕವಿಯ ಕರ್ಣರಸಾಯನ"ವೆಂಬುದರಲ್ಲೀ ಹಾಗಿದೆ. (ಪುಟ 70) ៖ "ಇವರ ಏಱು=ಈ ಭೀಷ್ಮರು ಏರಪಟ್ಟವನ್ನೇರಿದುದು, ಭಗವತಿಯೇಱು ಪೇೞ್ವತೆಱದಿಂ ಕಥೆಯಾಯ್ತು=ಭಗವತಿಯು ಉತ್ತಮ ಭವಿಷ್ಯವನ್ನು ಹೇಳುವ ಕಥೆಯ ಹಾಗಾಯ್ತು. ಹಾಸ್ಯಾಸ್ಪದವಾಯ್ತೆಂಬ ಭಾವವು ಭಗವತಿಯೇಱುಪೇೞ್ವ ತೆಱದಿಂ ಕಥೆಯಾವುದು? (ದೇವಿಯ ಆವೇಶವಾದವನ ಭವಿಷ್ಯೋಕ್ತಿಯಲ್ಲಿ ನಂಬಿಕೆಯಿಟ್ಟು ಮೋಸ ಹೋದವನ ಹಾಗೆ)"

ಇಲ್ಲಿ, "ಏಱು=ಏಱುವುದು" ಎಂದೊಪ್ಪು ಸರಿಯಾಗಿ ಕಾಣುತ್ತದೆ. ಅಂತೆ ಭಗವತಿವೇಶಗೊಂಡವನ ಭವಿಷ್ಯೋಕ್ತಿಯಲ್ಲಿ ನಂಬಿಕೆಯಿಟ್ಟು ಮೋಸಹೋದಂತೆಂಬುದೂ ಒಪ್ಪಿಗೆ ಹೆನ್ನೆಂದು ಕಾಣುತ್ತದೆ. ಆದರೆ, ಭಗವತಿಯೇಱು

ಹೇಳುವವನ ಮಾತಿನಲ್ಲಿ ನಂಬಿಕೆಯಿಟ್ಟು ಯಾರೂ ಮೋಸಹೋಗುವದಿಲ್ಲ ! ಹಾಗೆ ಮೋಸಹೋಗುವದಿದ್ದರೆ, ಅದನ್ನು ಕೇಳಲು ಯಾರು ತಯಾರಿಯಿದ್ದಾರು? ದೇವಿಯಲ್ಲಿ ನಂಬಿಕೆಯಿರಿಸಿದರೆ, ಮತ್ತೆ ಮೋಸಗೊಂಬುದು ದೇವಿಗೆ ಅಪಚಾರವಲ್ಲವೇ? ಆ ಕಾರಣ, ಶ್ರೀ ಡಿ. ಎಲ್. ಎನ್. ಅವರೆಂದಂತೆ, ಇದೂ ಸರಿಯಾಗಲಾರದು !

೪) ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಈ ಘಟ್ಟವನ್ನು ಕುರಿತು ಬರೆದರೂ, ಈ ವಾಕ್ಯಾರ್ಥದ ಬಗೆಗೆ ಅದೇನೂ ಸೂಚಿಸಿಲ್ಲ (ಸೀಳು ನೋಟ, 1965 ಪುಟ 1-15)

೫) ಪಂಪಭಾರತ, ಆದಿಪುರಾಣಗಳ ಒಳತಿರುಳನ್ನು ಸಾಧ್ಯವಾದಷ್ಟು ವಿಶ್ಲೇಷಿಸಿ ವಿವರಿಸಿದ, ದಿ. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು 1938ರಲ್ಲಿ ಬರೆದು ಪ್ರಕಟಿಸಿದ "ನಾಡೋಜ ಪಂಪ"ವೆಂಬ ಉದ್ಗ್ರಂಥದಲ್ಲಿ ಈ ಶಬ್ದಾರ್ಥದ ಬಗೆಗೆ ತುಸು ಸೂಚಿಸಿದ್ದಾರೆ (ಪುಟ 475) ಆದರೆ, ಶ್ರೀ ಡಿ. ಎಲ್. ಎನ್. ಆಗಲೀ; ಡಾ. ಚಿದಾನಂದಮೂರ್ತಿಯವರಾಗಲೀ ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಈ ಮಾತನ್ನು–ಆ ಗ್ರಂಥವನ್ನು-ಎತ್ತಿ, ವಿಶೇಷಿಸಿಲ್ಲ! ಆ ಕಾರಣ, ಆ "ನಾಡೋಜಪಂಪ" ದಲ್ಲಿರುವುದನ್ನು ಮೊದಲಾಗಿ ಬರೆಯಬೇಕಾಗಿದೆ, ಮತ್ತೆ ಆ ಬಗೆಗೆ ನಮ್ಮಾಶ್ರಯವೂ ಬರೆಯಲಿದೆ :

"ಕರ್ಣನ ಕೈಮೀರಿದ ಮಾತು ಆ "ಭಗವತಿಯೇಱುಹೇಳುವವನ ವೇಷವನ್ನು ಭೀಷ್ಮನಲ್ಲಿ ಆರೋಪಿಸುತ್ತದೆ". (ಅದೇ ಪುಟದ ಕೆಳಗಿನ ಟಿಪ್ಪಣಿಯಲ್ಲಿದೆ): "ಭಗವತಿ=ಶಕ್ತಿದೇವತೆ, ಶಾಕ್ತೇಯ ಮತದವರು ಭಗವತಿಯ ಪೂಜೆಯನ್ನೆಸಗುವ ವಿಶಿಷ್ಟವಾದೊಂದು ಪಂಥವು ಈಗಲೂ ಅಲ್ಲಲ್ಲಿ ತೋರುತ್ತದೆ. ಆ ಸಂದರ್ಭದಲ್ಲಿ ಕೆಲವುಂದಿ ವಿಶಿಷ್ಟವ್ಯಕ್ತಿಗಳೆಂಬವರಿಗೆ ಭಗವತಿಯ ಆವೇಶವಾಗುವುದೂ, ಹಾಗೆ "ತೂಕ ಗೊಂಡವರು" ಭಕ್ತರನ್ನು ಕುರಿತು ತಮ್ಮ ಕಾರಣಿಕತೆಯನ್ನು ಬೋಧಿಸುವುದೂ ಈಗಲೂ ಇದೆ. ಅದು ಬೇರೆ ಮತಾಚಾರಗಳಲ್ಲೊಂದು. ಇದನ್ನೇ ಇಲ್ಲಿ 'ಭಗವತಿಯೇಱು" ಎಂಬ ಮಾತಿನಿಂದ ಸೂಚಿಸಿದ್ದಾನೆ. ಇತ್ತ ತುಳುವರೂ ಕನ್ನಡಿಗರೂ ಆ ಮಾತನ್ನು "ಮದಿಪುನೆ-ಮದಿಪ್ಪುದು' ಎನ್ನುತ್ತಾರೆ ".

ಶ್ರೀ ಮುಳಿಯರವರ ಮಾತಿನಲ್ಲಿ, ಹೇಳಬೇಕಾದ ವಿಚಾರವನ್ನು ಹೇಳಿದಂತಿಲ್ಲ. ಹಾಗಾಗಿ, ಈ ಬಗೆಗೆ ವಿವರಣೆ ಆವಶ್ಯವಾಗಿದೆ.

'ಭಗವತಿ' ಯೆಂಬ ನುಡಿಯಿಂದ ಅದೊಂದು ಸ್ತ್ರೀದೇವತಾ ವಾಚಕವೆಂದು ಸ್ಪಷ್ಟ! ಭಗವತಿಯು ಗುಡಿಯಲ್ಲಿ ಬಿಂಬವಿರಲಿ; ಮೂರ್ತಿಯಿರಲಿ: ಬಿಂಬ ಮೂರ್ತಿಗಳಿಲ್ಲದಿರಲಿ: ಕೇವಲ 'ಮಂಚ (ಹಲಗೆ)' ಇರಲಿ: ಅಲ್ಲಿಯ ಇತರ

ಉಪಕರಣಗಳನ್ನು [ಆಯುಧಗಳು–ಕಡ್ತಲೆ, ತಿರ್ವಾಳು, ಕ್ರೈದು, ಬಿರು (=ಬಿಲ್ಲು ತುಳು), ಡಾಲು (=ಪಲುಪ–ಮಲೆಯಾಳ), ಇ.] ಘಂಟಾಮಣಿ, ನೀರಿನ ಪಾತ್ರೆ, ಇತ್ಯಾದಿಗಳನ್ನು ಕೂಡ ಭಗವತಿಯ ಪ್ರತೀಕಗಳೆಂದು ಭಾವಿಸುತ್ತಾರೆ. ಇವುಗಳಿಂದ ಕ್ರಮವತ್ತಾದ ಪೂಜಾದಿಗಳು ಅಲ್ಲಿ ನೆರವೇರುತ್ತವೆ. ಇಷ್ಟರಿಂದಲೆ ಭಗವತಿಯ ಪೂಜೆ-ಸೇವೆ ಪೂರ್ತೈಕೆಯಾಗುವದಿಲ್ಲ. ದಿನಾಲೂ ಕಟ್ಟಳೆಯಂತೆ ನೀರು, ಧೂಪ, ದೀಪ, ನೈವೇದ್ಯಗಳು ತುಸು ನಡೆಯುತ್ತವೆ. ಕೆಲವು ಪರ್ವ ದಿನಗಳಲ್ಲಿ ಹಾಗೂ ವಾರ್ಷಿಕವಾಗಿ ನಡೆವ ಕಟ್ಟಳೆಗಳಿಗೆ ಭಗ–ವತಿಯ "ಪಾತ್ರಿ" ಅವಶ್ಯವಾಗಿದ್ದಾನೆ. ಆತ ಮುಡಿಬಟ್ಟೆಯುಟ್ಟು ಗುಡಿಯ ಒಳಗಿನ ಆಯುಧ, ಘಂಟಾಮಣಿ (ಅಥವಾ ಡಾಲು, ಇ.)ಗಳನ್ನು ಬಲ ಹಾಗೂ ಎಡಗೈಗಳಲ್ಲಿ ಧರಿಸುವನು (ಭಗವತಿಯ ಖಡ್ಗಕ್ಕೂ, ಇತರ ದೈವಗಳ ಖಡ್ಗಕ್ಕೂ ಆಕಾರದಲ್ಲಿ ಅಂತರವಿದೆ: ಚಿತ್ರ ನೋಡಿರಿ). ಅಲ್ಲಿ ನೆರೆದ ಊರವರ ಬೇಡಿಕೆಯಿಂದ, ವಾದ್ಯದಬ್ಬರದೊಂದಿಗೆ ಆತನಲ್ಲಿ ಭಗವತಿಯ ಏಱು (ಆವೇಶ) ಆಗುತ್ತದೆ. ಆತ ಆ ದೈವದ–ದೇವಿಯ ಪ್ರಭಾವಾದಿಗಳನ್ನು ತಿಳಿದವನಿರಬೇಕು; ಅದರಲ್ಲಿ ನಂಬಿಕೆಯುಳ್ಳವನಾಗಿರಬೇಕು; ಆ "ಪಾಡ್ದನ (ಪ್ರಾರ್ಥನ) ಪದ್ಯಗಳಲ್ಲಿ ಹೇಳಿದಂತೆ ದೇವಿಯ-ದೈವದ ಉಡುಪುಗಳನ್ನು ಆಗ ಧರಿಸಬೇಕು; ಅವನು ಆಗ ಅವನ್ನು ಹೇಳುತ್ತಿರಬೇಕು!

"ಪಾತ್ರಿ"ಗೆ ಆವೇಶವಾದರೆ, ಮೊದಲು ನಿದಾನವಾಗಿ, ಮತ್ತೆ ವೇಗವಾಗಿ (ಜೋರಾಗಿ) ಮೈಯಲ್ಲಿ ಕುಲುಕುತ್ತದೆ. ಆತ ಆ ಗುಡಿಯ ಸುತ್ತಲು ಮೂರು ಬಾರಿ ಪ್ರದಕ್ಷಿಣೆ ಮಾಡುವನು. ಅನಂತರ ಗುಡಿಯ ಮುಂಗಡೆ ಅವನ "ದರ್ಶನ (=ದರ್ಸನ)" ವಾಗುತ್ತದೆ; ದೇವಿಯ-ದೈವದ-ಪ್ರತೀಕವನ್ನು ಈಕ್ಷಿಸುತ್ತಾನೆ; ತನ್ನಲ್ಲಿ ಆದೈವೀ ಶಕ್ತಿಯ ಆವೇಶ (ಆರೋಪಾವಸ್ಥೆ, ಆರೋಹಾವಸ್ಥೆ, ಅವಾಹನೆ) ಪೂರ್ಣಗೊಳಿಸುವನು.

ಆ ಮೇಲೆ, ಊರವರಲ್ಲಿ ಪ್ರಮುಖ ವ್ಯಕ್ತಿಗಳು ಕುಳಿತಲ್ಲಿಗೆ ಕಟ್ಟೆ ಅಥವಾ ದಿಡ್ಡಿನ ಬಳಿಗೆ–ಧಾವಿಸಿ ಬಂದು, ಪುನರಪಿ ಮೈಯೇರಿದ ದೈವೀ ಶಕ್ತಿಯಿಂದ ಮೈ ಕುಲುಕುತ್ತಾ, ದಿವಟಿಗೆಯ ಕಾವನ್ನು ತನ್ನೆದೆಗೆ ತಗಲಿಸುತ್ತಾನೆ (ದೀವಟಿಗೆ=ಬೆಂಕಿಯುರಿವ ಕೈದೀವಿಗೆಯ ಕೋಲು). ದೀವಟಿಗೆಯ ಬೆಂಕಿಯ ಜ್ವಾಲೆಯಿಂದ ತನ್ನೆದೆಯನ್ನು ಸುಡುವಂತೆ ಕಾಣಿಸುತ್ತಾನೆ (ಭಗವತೀದೇವಿಯ ಪಾತ್ರಿ ಖಡ್ಗಾಘಾತಕ್ಕೆ ತನ್ನನ್ನು ಗುರಿಮಾಡುತ್ತಾನೆ). ಆಗ ಪ್ರಮುಖರು "ಸಾಂತ್ವನ"ದ ಮಾತು ಹೇಳುತ್ತಾರೆ. ಆತ ಆವೇಶವನ್ನು ತುಸು ತಗ್ಗಿಸಿಕೊಳ್ಳುತ್ತಾ; "ತನ್ನನ್ನು ಬರಮಾಡಿಸಿದುದೇಕೆಂ"ದು ಕೇಳುತ್ತಾನೆ.

ವಾರ್ಷಿಕೋತ್ಸವದ ಸಲುವಾಗಿ "ದರ್ಶನ"ವಾದರೂ, ಬೇರೆ ಕೆಲವರು ಭಕ್ತರು ಅಲ್ಲಿ ತಮ್ಮ ತಮ್ಮ ಸಂಕಷ್ಟಗಳನ್ನು "ಅರಿಕೆ" ಮಾಡುತ್ತಾರೆ; ಅದಕ್ಕೆ

ಪರಿಹಾರೋಪಾಯಗಳನ್ನು ಬೇಡುತ್ತಾರೆ; ಅದಕ್ಕೆ "ಹರಕೆ" (ಹಣ ಅಥವಾ ವಸ್ತು) ಸಲ್ಲಿಸುತ್ತೇವೆನ್ನುತ್ತಾರೆ. ಮತ್ತೆ ಪಾತ್ರಿಯು ಊರವರ ಬೇಡಿಕೆಯಿಂದ ಪುನಃ ಆವೇಶಗೊಳ್ಳುತ್ತಾನೆ. ಭಕ್ತರ ಕಷ್ಟದ ಹಿನ್ನೆಲೆ, ಪರಿಹಾರೋಪಾಯ, ಹರಕೆಗಳನ್ನು ನಿರೂಪಿಸುತ್ತಾನೆ. ಈ ಸಂದರ್ಭದಲ್ಲಿ ಪಾತ್ರಿಯೊಡನೆ ಸಂವಾದಿಸುವದಕ್ಕೆ (ಶ್ರೀ ಮುಳಿಯ ತಿಮ್ಮಪ್ಪಯ್ಯನವರಂತೆ) 'ಮೆದಿಪುನೆ-ಮೆದಿಪ್ಪುದು' ಎನ್ನುವರು. ದೈವೀ ಶಕ್ತಿಗೆ 'ಮಾಯೆ'ಯೆಂದು ಪಾರಿಭಾಷಿಕ ಪದವಿದೆ.

ಪಂಪನು "ವಿಕ್ರಮಾರ್ಜುನ ವಿಜಯ"ದಲ್ಲಿ "ಭಗವತಿಯೇಱುವೇಟ್ಟು" ವೆಂಬುದರಲ್ಲಿ ಇದನ್ನೇ ಹೇಳಿರುತ್ತಾನೆ! ಆವೇಶಗೊಂಡ ಪಾತ್ರಿಯೇ ಇಲ್ಲಿ ಅಪೇಕ್ಷಿತನು. ಆತ ಮುದುಕನಾಗಿರಲಿ, ಯುವಕನಾಗಿರಲಿ; ಆವನಲ್ಲಿ ಒದಗುವ "ಆವೇಶದಲ್ಲಿ ಭಕ್ತರು ನಂಬಿಕೆಯಿರಿಸಿಯೇ ಇದ್ದಾರೆ. 'ಭಗವತಿಯೇಱು'ಗೊಂಡಾಗ ಪಾತ್ರಿ ಏನೆಲ್ಲ ಮಾಡುವನೊ, ಹೇಳುವನೊ ಅವೆಲ್ಲವನ್ನು ಆತ 'ಭಗವತಿಯೇಱು' ಇಳಿದಾಗ (ಆವೇಶವಿಲ್ಲದಾಗ–ಭೂತ ಕಟ್ಟಿದುದನ್ನು ಬಿಟ್ಟುಬಿಟ್ಟಾಗ) ಮಾಡಲೂ ಸಲ್ಲನು! ಹೇಳಲೂ ಸಲ್ಲನು ಪಾತ್ರಿಗೆ ಆವೇಶ(ಏಱು) ಇಲ್ಲದಾಗ, ಆತ ನಮ್ಮಂತೆ ಸಾದಾಮನುಷ್ಯನೇ ಸೈ! ಆಗ ಆತನ ಹೇಳಿಕೆಯೂ ಇಲ್ಲ ಕೇಳಿಕೆಯೂ ಇಲ್ಲ!

ಈ ದೈವೀ ಶಕ್ತಿಗಳ 'ಪಾತ್ರಿ'ಯಂತೆ, 'ಅಣಿಗಟ್ಟಿ'ಗೊಂಡ ಭೂತಾವೇಶದ ವಿಶಿಷ್ಟ ವ್ಯಕ್ತಿಗಳೂ ಭಕ್ತರಿಗೆ 'ಅಭಯ'ವೀಯುವುದೂ ಇದೆ! (ಅಣಿಗಟ್ಟಿದ ಭೂತಗಳ ಚಿತ್ರದಲ್ಲಿ ತೆಂಗಿನ ಸೋಗೆಯ ಪ್ರಭಾವಳಿ ಹಾಗೂ ನಡುಸುತ್ತುಗಳು ವೈಚಿತ್ರ್ಯವಾಗಿವೆ, ವೈವಿಧ್ಯವಾಗಿವೆ).

ಇದೀಗ ಪಂಪನ ವಾಕ್ಯವನ್ನು ಈ ಹಿನ್ನೆಲೆಯಲ್ಲಿ ವಿವರಿಸಬಹುದಾಗಿದೆ: 'ಭಗವತಿಯೇಱುವೇಟ್ಟು' ತೆರದಂತೆ, ಭೀಷ್ಮನಲ್ಲಿ 'ಏಱು(ಏರಿಕೆ ಆವೇಶ) ಇದೀಗ ಕೇವಲ ಹಿಂದಿನ ಕತೆಯಾಗಿದೆ. ಆತನಲ್ಲೀಗ ಅದೇನೂ 'ಏಱು' ಉಳಿದಿಲ್ಲ! (ಇಳಿಕೆಗೊಂಡಿದೆ). ಇದನ್ನು ನೀನು ತಿಳಿದೂ, ಇವರಿನ್ನೂ ಹಗೆಗಳನ್ನು ಇದಿರಿಸಿ ಹೋರಾಡುವರೆಂದು ಭ್ರಾಂತನಾಗಿ, ಯೋಚಿಸದೆ, ವೀರಪಟ್ಟವನ್ನು ಕಟ್ಟಿದೆ. ಇವರನ್ನು ಯುದ್ಧಕ್ಕೆ ಒಯ್ದು, ಹಗೆಗಳ ಸಮೂಹದಲ್ಲಿ ಸುಮ್ಮನೆ ನಗಿಸಿಕೊಂಡರೇನು ಬರುವದು, ಸುಯೋಧನ?-ಎಂದು ಕರ್ಣನಾಡಿದನು. ಒಂದೊಮ್ಮೆ ಭೀಷ್ಮನು ಪಾತ್ರಿಯಂತೆ ಏಱು (ಆವೇಶ)ವಿದ್ದಾಗ ಹೇಳಿದುದು-ಮಾಡಿದುದು–ಏನಿದೆಯೋ, ಅದೆಲ್ಲವೂ 'ಏಱು' ಇಳಿಕೆಗೊಂಡಾಗ ಪಾತ್ರಿಯಲ್ಲಿ ಕಾಣದಿರುವಂತೆ, ಈಗ ಭೀಷ್ಮನಲ್ಲೂ ಅದೇನೂ ಕಾಣಲಾರದೆಂದು ಸೂಚಿತವಾಗುತ್ತದೆ.

ಲಕ್ಕುಂಡಿಯ ಶಿಲಾಶಾಸನದ ವಾಕ್ಯದಲ್ಲೂ ಇದೇ ಅರ್ಥ ಸಮನ್ವಯಿಸುತ್ತದೆ: ಏಳುಪ್ರಂದರ ಕೇವಲ ದೇವಿಗಳಾಗಿದೆ. ಕೇವಲ 'ಏಱು'ಗೊಂಡಾಗ

ಏನೆಲ್ಲಾ ಗೈದರೋ, ಅದೆಲ್ಲ ತೈಲನ ಮುಂದೆ ಅವರ 'ಏಱು' ಇಳಿಕೊಂಡಾಗ- 'ಭಗವತಿಯೇಱು' ಮಾತಿದೆಯೆಂದು (ಅವರು ಈಗ ಇವನ ಮುಂದೆ ನಿಸ್ತೇಜ-ಸ್ಕರೆಂದು).

'ಏಱು' ಎಂಬುದು ಪಂಪನಿಗಿಂತ ಹಿಂದಣ ತುಮಕೂರಿನ ಶಿಲಾಶಾಸನ ಗಳಲ್ಲಿ ಯುದ್ಧ, ವೆಂದು ಅರ್ಥಗೊಳ್ಳಬಹುದು, ಪಂಪನ ಈ ಮಾತಿನಲ್ಲಾಗಲೀ, ಲಕ್ಕುಂಡಿಯ ಶಾಸನೋಕ್ತ ವಾಕ್ಯದಲ್ಲಾಗಲೀ, 'ಏಱು'ವೆಂದರೆ 'ಯುದ್ಧ' ವೆಂದಾಗಲೀ (ಶ್ರೀ ಡಿ. ಎಲ್. ಎನ್. ಎಂದಂತೆ), ಅನುಕರಣೆಯ ವಿನೋದದ-ಯುದ್ಧ (ಯುದ್ಧಾಭಾಸ)ವೆಂದಾಗಲೀ (ಡಾ. ಚಿದಾನಂದಮೂರ್ತಿಯವರೆಂ–ದಂತೆ) ಹೇಳಲಾಗದು! ಇಲ್ಲಿ 'ಏಱು'ವೆಂದರೆ (ತುಂಬಿದ–ಏರಿಕೆಗೊಂಡ)ಯುದ್ಧ ಯುದ್ಧಾಭಾಸವಾಗಲಾರದು ಏಱು ಜವ್ವನವೆಂಬ ನುಡಿಗಟ್ಟು, ಇದೆ ! ಯೌವನ ಕಾಲದಲ್ಲಿ ದೇಹಾಂಗಗಳ ಪುಷ್ಟಿಯಿದ್ದರೂ, 'ಏಱು' (ಆವೇಶ) ಎಲ್ಲರಿಗೂ ಇರು ವುದಿಲ್ಲ! ಹಾಗೆ 'ಏಱು'ವೊಮ್ಮೆ ಇದ್ದರೆ, ಅದೆಲ್ಲ ಕಾಲದಲ್ಲಿ ಇರುವುದಿಲ್ಲ! ಕರ್ಣ-ನು ಭೀಷ್ಮನನ್ನು ಕುರಿತು ಹೇಳುವ ಈ ಪದ್ಯಕ್ಕಿಂತ ಮುಂದಿನ ಪದ್ಯದಲ್ಲಿ, 'ಏಱು'ವಿಗೆ ವಿರೋಧವಾದ 'ಮುದುಪ' ನೆಂದೂ ಬಂದಿದೆ ಅಂತೆ, ಕರ್ಣನ ಮಾತಿಗೆ ಉತ್ತರಿಸುವ ದ್ರೋಣನ ಮಾತಿನಲ್ಲಿ 'ಮುಪ್ಪು' ಮಾತ್ರವಲ್ಲ, 'ಇಳಿಕೆ' ಯೆಂದೂ ಇದೆ! 'ಸಿಂಗದ ಮುಪ್ಪುಂ ನೆಗಳ್ದ ಗಾಂಗೆಯರ ಮುಪ್ಪುಮಿಳಿಕೆವಡೆ-ಗುಮೆ?' ಸಿಂಗದ ಮುಪ್ಪು. ಭೀಷ್ಮನ ಮುಪ್ಪು 'ಏಱು' ಗೊಂಡಂತೆ (ಆವೇಶದಂತೆ) ಇದೆಯಲ್ಲದೆ-'ಇಳಿಕೆ'ವಡೆಯುವುದೇ? ಅಂದರೆ, ಪಂಪಭಾರತದ ಈ ಪದ್ಯದಲ್ಲಿ 'ಏಱು'ವೆಂದರೆ 'ಯುದ್ಧ'ವೆಂದಾಗಲೀ, ಯುದ್ಧಾಭಾಸವೆಂದಾಗಲೀ ಸಾಲವು! ಸಲ್ಲವು! (ಪಂಪ ಕುಮಾರವ್ಯಾಸರು ಬೇರೆ ಸಂದರ್ಭದಲ್ಲಿ ಭಗವತಿಯೆಂದು ಹೇಳಿಲ್ಲ! ಹಾಗಾಗಿ, ಅಲ್ಲಿ 'ಏಱು'ವೆಂದರೆ ಯುದ್ಧವೆಂದು ಸಾಕಾದೀತು).

"ಒಂದು ಉಕ್ತಿಗೆ ನಾವು ಹೇಳಿದ ಅರ್ಥ ಎಲ್ಲ ಸಂದರ್ಭಗಳಿಗೂ ಅನ್ವ ಯವಾಗುವಂತಿರಬೇಕು" ಎಂಬ ಡಾ. ಚಿದಾನಂದಮೂರ್ತಿಯವರ ಮಾತು ಅದೆಂದಿಗೂ ತಗದು! ಏಕೆಂದರೆ, ಕೆಲವು ನುಡಿಗೆ, ಮಾತಿಗೆ ಸಾಮಾನ್ಯಾರ್ಥ ವಿದ್ದಂತೆ. ವಿಶೇಷಾರ್ಥ ಬೇರೆಯಿದೆ; ಪ್ರಕರಣವಶಾತ್— ಯೌಗಿಕರೀತ್ಯಾ, ರೂಢಿಯಿಂದ, ಪ್ರಾಚೀನ ಪರಿಪಾಟಿಯಿಂದ ಬೇರೆ ಬಗೆತವೂ ಬರುವುದಿದೆ! ನಿಘಂಟು, ಹಾಗೂ ಗ್ರಂಥಗಳಲ್ಲಿರುವ ಶಬ್ದದ ರೂಪ ಅರ್ಥಗಳಲ್ಲಿ ಆಯಾ ಸಂದರ್ಭೋಚಿತವಾಗಿ ಆರಿಸಬೇಕಾಗುತ್ತದೆ. ಊಟದ ಹೊತ್ತಿನ "ಸೈಂಧವ (ಉಪ್ಪು)"ವೇ ಬೇರೆ; ಯುದ್ಧ ಕಾಲದ 'ಸೈಂಧವ (ಕುದುರೆ)'ವೇ ಬೇರೆಯಾದೆ! "ಕಪೋತ"ವೆಂದರೆ ಪಾರಿವಾಳವೆಂದು ಸಾಮಾನ್ಯಾರ್ಥವಿದೆ; 'ಕುರು ಕುಲ ರಾಜಭವನ ರಾಜಕಪೋತಂ' ಎಂಬ ರನ್ನನ ಮಾತಿನಲ್ಲಿಯ "ಕಪೋತ"ವು ಬೇರೆ! (ಸಾಹಿತ್ಯದ ಹಿನ್ನೆಲೆಯೆಂಬ ನನ್ನ ಸಂಕಲನದ "ಕಪೋತ ವ್ಯಾಖ್ಯಾನ"ನೋಡಿರಿ).

ಪಂಪನು ಕೇರಳದಲ್ಲಿ ಹಾಗೂ ಇತರತ್ರ ಇರುವ 'ಭಗವತಿಯೇಱು' ವನ್ನು ಕಂಡುದರಿಂದ, ಆ ಆವೇಶದ ಬಗೆಯನ್ನು ಈ ಕರ್ಣನ ಮಾತಿನಲ್ಲಿ ಪ್ರಯೋಗಿಸಿದ್ದಾನೆ. ಇಲ್ಲಿ ವಿಡಂಬನೆಯಾಗಿ ಭೀಷ್ಮನಿಗೆ ಹೀಗೆಂದಿರಲಾರನೆಂದು ತಿಳಿಯಬೇಕು! "ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ... ಅತ್ಯು-ನ್ನತಿಯೊಳಮರಸಿಂಧೂದ್ಭವಂ – ಪಿರಿಗಿಲ್, ಇವರ್ಗಳಿನೀ ಭಾರತಂ ಲೋಕ-ಪೂಜ್ಯಂ" ಎಂದು, ಪಂಪನು ಭೀಷ್ಮನಲ್ಲಿ ಬಲು ಉನ್ನತಿಯನ್ನು ಕಂಡವನಿದ್ದಾನೆ! ಕರ್ಣನು ಸ್ವಯಂ ಉತ್ಸಾಹಿತನಾಗಿ ಹೇಳುವ ದೂರು ಮಾತಿನಲ್ಲಿ, ಭೀಷ್ಮನ 'ಏಱು' ಎಂದರೆ 'ಭಗವತಿಯೇಱು' ವೆಂದನು ಎಂದು ಹೇಳಬಹುದಾಗಿದೆ!

★ ವೆಂಕಟರಾಯಾಚಾರ್ಯ

ವಿ. ಸೂ.: "ಪಂಪ ಅಂದಿನ ಹಳಗಾಲದಲ್ಲಿ ಪ್ರಚಾರದಲ್ಲಿರಬಹುದಾದ ಭಗವತೀಕ್ಷೇತ್ರಾದಿಗಳನ್ನು ಕಂಡಿರಬಹುದು. ಕೇರಳದ ಪ್ರಚಾರವೂ ಆತನಿಗೆ ಅಷ್ಟಿಷ್ಟು ಗೊತ್ತಿರಬೇಕು. 'ಕೇರಳ ವಿಟೀಕಟೀ ಸೂತ್ರಾರುಣವನಿ' ಯಲ್ಲವೇ ಅತ?" ಎಂದು ಅಮೃತ, ಸೋಮೇಶ್ವರ, ಕೋಟಿಕಾರ್ ಅವರು ತಿಳಿಸುತ್ತಾರೆ. ಈ ಬರಹಕ್ಕಾಗಿ ಕೆಲವು ಸೂಚನೆ ನೀಡಿದವರು, ಮಂಗಳೂರಿನ ಶ್ರೀ ತೆಕ್ಕುಂಜಗೋಪಾಲಕೃಷ್ಣ ಭಟ್ಟರು ಇವರಿಗೆ ನಾನು ಕೃತಜ್ಞ!

ಅವಳು - ಇವಳು

ಬೆರಳು ಕಚ್ಚಬೇಡಿ
ಕಣ್ಣು ಮುಚ್ಚಬೇಡಿ
ಬಾಯಿ ಬಿಚ್ಚಬೇಡಿ
ಸುಳ್ಳಲ್ಲ—ಎಲ್ಲರೊಳಗಿರುವನು
ಈ ಕಳ್ಳ.
ಇವಗೊಮ್ಮೆ ಭೇಟಿಯಾದಳು
ಅವಳು.
ಬಯಕೆ ಕೈಗೂಡಿದಾಗಿನ ಹೊಳಪು
ಅವಳ ಕಣ್ಣೊಳು.
ಒತ್ತಿ ತುಂಬಿದ ಅರಳೆದಿಂಬಿನೊಳು
ಚೈತನ್ಯ ಮೆಯ್ಯೊಳು
ಕುಟ್ಟಿ ಕುಟ್ಟಿ ಮುಟ್ಟಿದರೆ ಮೈ
ಕಟ್ಟನೇ ಚೆಲ್ಲುವಳು.
ಎರಡು ಸಂಪಕಿಯ ತೊಳೆಗಳೊಳಗೆ
ತರುಣಿಯೊಬ್ಬಳು ಬರೆದ ಸುಂದರ
ಪಂಕ್ತಿಗಳು—ಅವಳ ಹಲ್ಲುಗಳು.
ಗಲ್ಲಗಳು—ಪಾಲೀಶು ಮಾಡಿದ
ಕಲ್ಲುಗಳು.
ಹಲಗೆಗಳ ಹಾಕಿ ತೀಡಿ ತೀಡಿ ಫಿನಿಸಿಂಗ್
ಮಾಡಿದ ಮೂಗು.
ಸುಣ್ಣ ಬಳೆದ ಮನೆಗೆ
ಹಣೆಯ ಮೇಲೆ ಕಿರುಬೆರಳಿನಿಂದ
ತಿದ್ದಿದ, ಶ್ರೀಕಾರದ ಬೊಟ್ಟು.
ಮಳೆ ನಿಂತಾಗ—ತಮಾಲವೃಕ್ಷದ
ಮೌನವಾವರಿಸಿದ, ಅದೇ ಸಾಗುಮಾಡಿದ
ಹೊಲದ ರಾಶಿ ರಾಶಿ ಕೇಶ.

'ಮಲಗೂಬ' ಹಣ್ಣಿನ ತೊಗಟೆ ಮೇಲೆ
ಹಲ್ಲುಗಳ ಮೂಡಿಸಿ
ಗೊಟ್ಟದ ಮೇಲೆ ಹಣ್ಣಿನ ತೊಟ್ಟು
ರಸ ಉಳಿಯದಂತೆ ಹಿಂಡಿ, ಹೀರಿ
ಚೀಪಿ ಚೀಪಿ–ಒಗೆಯಬೇಕೆಂಬಾಸೆ–
ನೋಡ ನೋಡುತ್ತ
ಕಣ್ಣು ಸಣ್ಣಾದವು
ಬೆರಳು ಚಿಟಕಿ ಬಾರಿಸಿತು.
ಮನವೆದ್ದು ಕಿಟಕಿ ಹಾಕಿತು
ತಕ್ಷಣವೇ ಬಂತು 'ಕಲ್ಪನಾ' ಪತ್ರಿಕೆಯಲಿ
"ಇಂಥವಳೆ ಬೇಕು"–ಎನುವ ಜಾಹಿರಾತು.
ಟಾರ್ ರೋಡಿನ ಮೇಲೆ
ಬಂಡೆಗಾಲಿ ಉರುಳುವಂತೆ-ಕಾಲ
ಗಡೆಗಡನೆ ಉರುಳಿತು.
ಮತ್ತೊಮ್ಮೆ–ಈ ಕಳ್ಳನಿಗೆ
ಅವಳದೇ ದರುಶನ
ಅವನ ಮುಖದ ಮೇಲಿನ ಸರಳರೇಖೆ
ಬಿದಿಗೆ ಚಂದಿರನ ಲಗಾಟೆ
ಹಿಂದಿನಿಂದ ಯಾರದೊ ಸದ್ದು
ತಿರುಗಿ ನೋಡಿದರೆ–ಇವಳು
ಕೊರಳು ಮೆಲ್ಲಗೆ ಬಲಕೆ ಸರಿಸಿ
ಎಡಕೆ ಝಾಡಿಸಿದಾಗ
ಹೆಗಲ ಮೇಲಿನ ಹೆರಳು
ಎದೆಯನೇರಿ ಕುಳಿತಿತು.
ಎರಡೂ ಕೈಬೆರಳು
ಗಳಾಡುತ್ತಿದ್ದವು ಅದರ
ತುದಿಭಾಗದೊಳು.

ಇವಳು
ನೋಡಿದ ನೋಟಕ್ಕೆ
ನಿಂತ ಮಾಟಕ್ಕೆ
ಕಾಣಿಸುವ ಸೊಂಟಕ್ಕೆ
ಬೆರಳಚೀಪೊ ಊಟವನುಂಡು
ನಿದ್ದೆಯಿಂದೆದ್ದು ಮೈಮುರಿದು
ತುಂಬಿದ ಬಾಳೆಗೊನೆಯಂತೆ
'ಇವಳ' ಕೊರಳಿಗೇ ಜೋತು
ಬೀಳಬೇಕೆನಿಸಿತು.
ಮುಂಚಿನ ಜಾಹಿರಾತಿಗೆ
ತಿದ್ದುಪಡಿ ಹಾಕಬೇಕೆನಿಸಿತು.
ಯಾಕಂತೀರಾ ?
ನೋಡಿ
ಎಷ್ಟಾದರೂ 'ಅವಳು' ಕ್ಯಾಲೆಂಡರು
'ಇವಳು' ನಮ್ಮ ಮನೆಯುವರು.

★ ಜಿ. ಕೃಷ್ಣರಾವ

ಬೆಡಗಿನ ವಚನಗಳಿಗೆ ಒಗಟುಗಳು ಮೂಲವೇ?

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಶ್ರೀಯುತ ಸುಧಾಕರ ಅವರು 'ಜನಪದ ಬೆಡಗಿನ ವಚನಗಳು' ಎಂಬ ಪುಸ್ತಕವನ್ನು ಹೊರತಂದು ಅದರಲ್ಲಿ ಒಗಟುಗಳ ಬಗೆಗೆ ಶಾಸ್ತ್ರೀಯವಾದ ಅಧ್ಯಯನ ನಡೆಸಿದ್ದಾರೆ. "ಕನ್ನಡ ಒಗಟುಗಳ ದೊಡ್ಡ ಸಂಕಲನವೊಂದು ಅತ್ಯಂತ ಶಾಸ್ತ್ರೀಯವಾದ ರೀತಿಯಲ್ಲಿ ಸಂಪಾದಿತ ಪ್ರಕಟವಾಗುತ್ತಿರುವುದು ಇದೇ ಮೊದಲು"[೧] ಎಂಬ ಪ್ರಶಂಸೆಯನ್ನೂ ಗಳಿಸಿದ್ದಾರೆ. ಲೇಖಕರು ಪ್ರಸ್ತಾವನೆಯಲ್ಲಿ "ಕನಕದಾಸರು ತಮ್ಮ ಒಗಟಿನ ರೂಪದ ಕೀರ್ತನೆಗಳ ಅಂತ್ಯದಲ್ಲಿ ನುಡಿಕೆ ಮುಂಡಿಗೆ, ಹಳೆಗನ್ನಡ, ಎಂಬ ಪರ್ಯಾಯಪದಗಳನ್ನು ಹೆಸರಿಸಿದಂತೆಯೇ 'ಬೆಡಗು' ಪದವನ್ನೂ ಹೆಸರಿಸಿದ್ದಾರೆ. ಇಂದಿಗೂ ಮಲೆನಾಡಿನತ್ತ 'ಒಗಟಿಗೆ' 'ಬೆಡಗು' ಎಂಬ ಶಬ್ದವೇ ಚಾಲ್ತಿಯಲ್ಲಿದೆ ಎಂದು ಕೇಳಿದ್ದೇನೆ. ಆದ್ದರಿಂದ ಬೆಡಗಿನ ವಚನಗಳೆಂದರೆ ಒಗಟಿನ ರೂಪದ ವಚನಗಳು ಅಥವಾ ಒಗಟುಗಳೆಂದಿಟ್ಟುಕೊಳ್ಳಬಹುದು."[೨] ಎಂದು ಹೇಳಿ ಒಗಟುಗಳನ್ನು ಬೆಡಗಿನ ವಚನಗಳು ಎಂದು ಹೇಳುವ ಸಾಹಸ ಮಾಡಿದ್ದಾರೆ. ಕನಕದಾಸರು 'ಬೆಡಗು' ಶಬ್ದವನ್ನು ಎಲ್ಲಿ? ಹೇಗೆ? ಯಾವ ಅರ್ಥದಲ್ಲಿ ಬಳಸಿದ್ದಾರೆ? ಎಂಬುದನ್ನು ಉದಾಹರಣೆಸಹಿತ ವಿವರಿಸಬೇಕಾಗಿತ್ತು. ಆ ಕೆಲಸ ಆಗದೆ ಅವರ ಹೇಳಿಕೆ ಅನುಮಾನಾಸ್ಪದವಾಗಿದೆ. ಒಗಟಿನ ಅರ್ಥವನ್ನು ನಾವು ಗಮನಿಸಿದರೆ "ಒಗಟು ಬುದ್ಧಿಪ್ರಧಾನವಾದುವು. ಇದರಲ್ಲಿ ಒಡ್ಡಿದ್ದು ಒಂದಿದ್ದರೆ ಒಡೆಸುವುದು ಮತ್ತೊಂದು ಇರುತ್ತದೆ. ಗುಪ್ತವಾಗಿರುವ ಮೊದಲನೆಯದನ್ನು ಎರಡನೆಯದು ವ್ಯಕ್ತಗೊಳಿಸಬೇಕಾಗುತ್ತದೆ. ಹೀಗಾಗಿ ಒಗಟಿನ ಪ್ರಧಾನ ಲಕ್ಷಣವೆಂದರೆ ಅರ್ಥಗೋಪನ. ವಾಸ್ತವ ಅರ್ಥವನ್ನು ಮುಚ್ಚಿಡುವ ವ್ಯಾಖ್ಯೆಯೇ ಒಗಟು."[೩] ಎಂದು 'ರಾಗೌ' ವಿವರಿಸುತ್ತಾರೆ. "ಇಬ್ಬರ ಮಧ್ಯೆ ವಾದವೊಂದು ಎದ್ದಾಗ ಅವರಲ್ಲಿ ಒಬ್ಬನು ತನ್ನ ತಲೆಯ ಮೇಲಿನ ಉಡುಪನ್ನು ತೆಗೆದು ಎಸೆದರೆ ಅದು ಸವಾಲಿನ ಸೂಚಕವಾಗಿದ್ದಿತು"[೪] ಎಂದು 'ಮುಂಡಿಗೆ' ಶಬ್ದಕ್ಕೆ ಡಾ. ಎಂ. ಚಿದಾನಂದಮೂರ್ತಿಯವರು 'ಸವಾಲು' ಎಂಬ ಅರ್ಥ ಹೇಳಿದ್ದಾರೆ. ಬಹುಶಃ ಇದೇ

೧. ಡಾ॥ ಹಾ. ಮಾ. ನಾಯಕ 'ಜನಪದ ಬೆಡಗಿನ ವಚನಗಳು'; ಮುನ್ನುಡಿ: ಪುಟ: (viii) ಕನ್ನಡ ಅಧ್ಯಯನ ಸಂಸ್ಥೆ–ಮೈಸೂರು 1970.

೨. ಸುಧಾಕರ; 'ಜನಪದ ಬೆಡಗಿನ ವಚನಗಳು': ಪ್ರಸ್ತಾವನೆ; ಪುಟ: xiii ಕನ್ನಡ ಅಧ್ಯಯನ ಸಂಸ್ಥೆ ಮೈಸೂರು 1970.

೩. ರಾಗೌ; 'ನಮ್ಮ ಒಗಟುಗಳು'; ಪ್ರಸ್ತಾವನೆ; ಪುಟ: ix. ಉಷಾಸಾಹಿತ್ಯ ಮಾಲೆ ಮೈಸೂರು 1970.

೪. ಡಾ॥ ಎಂ. ಚಿದಾನಂದಮೂರ್ತಿ; 'ಸಂಶೋಧನ ತರಂಗ'; ಪುಟ: 104. ಸರಸಸಾಹಿತ್ಯ ಪ್ರಕಾಶನ ಮೈಸೂರು 1966.

ಅರ್ಥವನ್ನು ಒಗಟಿಗೂ ಇಟ್ಟುಕೊಳ್ಳಬಹುದು. 'ವಾದ – ವಿವಾದ,' 'ಸವಾಲು' ಎಂಬ ಅರ್ಥದಲ್ಲಿ, ಒಗಟು ಶಬ್ದ ಬಳಕೆಯಾಗುತ್ತದೆ. ಆದರೆ 'ಬೆಡಗು' ಒಗಟಿನ ರೂಪದ ಸವಾಲಿಗೆ ಹೇಗೆ ಪರ್ಯಾಯವಾಗಿ ಬಳಕೆಯಾಗಿದೆ ? ಎಂಬಂಶ ವಿವಾದಾಸ್ಪದವಾದುದು. ಮಲೆನಾಡಿನತ್ತ 'ಬೆಡಗು' ಎಂದು ಒಗಟುಗಳಿಗೆ ಬಳಸಿದಾಗ ಅದರ ಅರ್ಥವ್ಯಾಪ್ತಿ ಏನು ? ಎಂಬುದನ್ನು ವಿಶದಪಡಿಸಬೇಕಾಗಿತ್ತು. 'ಬೆಡಗು' ಶಬ್ದಕ್ಕೆ ಸವಾಲು ಎಂಬ ಅರ್ಥ ಎಲ್ಲಿಯೂ ಬಳಕೆಯಾಗಿಲ್ಲ. ವಚನಕಾರರಲ್ಲಿ ಕೆಲವರ ಕೆಲವೊಂದು ವಚನಗಳನ್ನು ಬೆಡಗಿನ ವಚನಗಳೆಂದು ಯಾರು ? ಯಾವಾಗ ? ಯಾವ ಉದ್ದೇಶದಿಂದ ಹೆಸರಿಸಿದರು ? ಎಂಬ ಅಂಶವನ್ನು ವಿಚಾರ ಮಾಡದೆಯೆ ಹೀಗೆ 'ಬೆಡಗಿ'ನ ವಚನಗಳೆಂದರೆ ಒಗಟಿನ ರೂಪದ ವಚನಗಳು ಅಥವಾ ಒಗಟುಗಳು ಎಂದಿಟ್ಟುಕೊಳ್ಳಬಹುದು." ಎಂದು ಹೇಳುವುದು ತುಂಬಾ ಅಪಾಯಕಾರಿ ನಿಲುವು ಎನಿಸುತ್ತದೆ.

ಡಾ॥ ಎಲ್. ಬಸವರಾಜುರವರು ಹೇಳಿರುವ ಬೆಡಗಿನ ವಚನದ ವಿವರಣೆಯನ್ನೇ[೫] ಒಗಟುಗಳಿಗೂ ಅನ್ವಯಿಸುತ್ತಾ "ಒಗಟುಗಳ ಲಕ್ಷಣವೂ ಕೂಡ ಇದೇ ಆಗಿದೆ. ಪ್ರಧಾನವಾಗಿ ರೂಪಕ ಮೂಲ; ಗಂತವ್ಯಾರ್ಥ ರಹಸ್ಯವಾಗಿರುತ್ತದೆ. ವಾಚ್ಯವಾಗಿರುವ ಉಪಮಾನದ ಆಧಾರದ ಮೇಲೆ ಸೂಚ್ಯವಾಗಿರುವ ಉಪಮೇಯದ ಅರ್ಥವನ್ನು ಗ್ರಹಿಸಬೇಕಾಗುತ್ತದೆ ಅಭಿವ್ಯಕ್ತಿಯಲ್ಲಿ ಕುತೂಹಲವು ಅರ್ಥದಲ್ಲಿ ಚಮತ್ಕಾರವೂ ಇರುತ್ತದೆ. ಹೀಗೆ ಜನ ಸಮಷ್ಟಿಸೃಷ್ಟಿಯು ಒಗಟುಗಳಿಗೂ ವಚನಕಾರರ ಬೆಡಗಿನ ವಚನಗಳಿಗೂ ಲಕ್ಷಣದಲ್ಲಿ ಸಾದೃಶ್ಯವಿರುವುದನ್ನು ಕಾಣಬಹುದು."[೬] ಎಂದು ಹೇಳಿದ್ದಾರೆ.

ಇಲ್ಲಿ ಗಮನಿಸಬೇಕಾದ ಅಂಶಗಳಿವೆ. ಬೆಡಗಿನ ವಚನಗಳಿಗೂ ಒಗಟುಗಳಿಗೂ ಬುದ್ಧಿಪ್ರಚೋದಕ ಎಂಬಲ್ಲಿ, ಚಮತ್ಕಾರಯುತ ಎಂಬಲ್ಲಿ ಸಾದೃಶ್ಯವಿದೆ. ಆದರೆ ಬೆಡಗಿನ ವಚನಗಳು, ತತ್ವ, ಅಧ್ಯಾತ್ಮ, ಯೋಗ, ಆತ್ಮ – ಪರಮಾತ್ಮಗಳ ವಿಚಾರವನ್ನು ಕುರಿತು ಸಾಂಕೇತಿಕವಾಗಿ ಪ್ರತಿಪಾದಿಸುತ್ತವೆ. ಒಗಟುಗಳು ಸಾಮಾಜಿಕ, ಲೌಕಿಕ, ವಿಚಾರಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಸಾಂಕೇತಿಕವಾದ ತಂತ್ರದಿಂದಾಗಿ ಒಂದು ಮಾತಿನಿಂದ ಇನ್ನೊಂದು ವಸ್ತುವನ್ನು ನಿರ್ದೇಶಿಸುವುದು ಈ ಎರಡರಲ್ಲಿ ನಿಜವಾದರೂ ಉದ್ದೇಶ ಬೇರೆ ಬೇರೆ. ಒಗಟಿನಲ್ಲಿ ಉಪಮಾನದ ಆಧಾರದ ಮೇಲೆ ಉಪಮೇಯದ ಅರ್ಥವನ್ನು ಗ್ರಹಿಸಬಹುದು. ಅಂದರೆ ಉಪಮೇಯದ ಅರ್ಥವನ್ನು ಗ್ರಹಿಸಲು ಒಂದು ಸಾಧನ ಇದೆ ಎಂದಾಯಿತು. ಆದರೆ ಬೆಡಗಿನ ವಚನಗಳಿಗೆ ತತ್ವ ವಿಚಾರವೇ

---

೫. ಡಾ॥ ಎಲ್. ಬಸವರಾಜು; 'ಅಲ್ಲಮನ ವಚನ ಚಂದ್ರಿಕೆ', ಪೀಠಿಕೆ; ಪುಟ: 16. ನಳಿನೀ ಶಂಕರ ಪ್ರಕಾಶನ ಮೈಸೂರು 1960. (ಈ ಹೇಳಿಕೆಯನ್ನು ಪುಟ ಎಂಟರಲ್ಲಿ ಕೊಟ್ಟಿದೆ.)

೬. ಜನಪದ ಬೆಡಗಿನ ವಚನಗಳು; ಪ್ರಸ್ತಾವನೆ; ಪುಟ: xvii.

ಆಧಾರ. ತತ್ವಗಳ ಆಳವಾದ ಅಭ್ಯಾಸವಿದ್ದರೆ ಮಾತ್ರ ಅರ್ಥಮಾಡುವುದು ಸಾಧ್ಯ. ಒಗಟುಗಳಿಗೂ ಬೆಡಗಿನ ವಚನಗಳಿಗೂ ಇರುವ ವ್ಯತ್ಯಾಸವನ್ನು ಈ ರೀತಿ ಗ್ರಹಿಸಬಹುದು.

ಒಗಟುಗಳಲ್ಲಿ ಕೆಲವಕ್ಕೆ ನೇರವಾಗಿ ಉತ್ತರ – ಅರ್ಥ – ಸ್ಪಷ್ಟವಾಗುತ್ತದೆ. ಶಬ್ದದ ಅರ್ಥವಾದರೆ ಅದು ಅಲ್ಲಿಗೆ ಸೀಮಿತ. ಅರ್ಥ ಕೆಲವು ವೇಳೆ ಸಾಂಕೇತಿಕವೂ ಅಲ್ಲ. ಆದರೆ ಬೆಡಗಿನ ವಚನಗಳಲ್ಲಿ ಸಾಂಕೇತಿಕ ಅರ್ಥ ಎಲ್ಲಾ ಸಮಯಗಳಲ್ಲಿಯೂ (ಎಲ್ಲಾ ಬೆಡಗಿನ ವಚನಗಳಲ್ಲಿಯೂ) ಇದ್ದೇ ಇರುತ್ತದೆ. ವಿಚಾರ ಮಾಡಿದಂತೆಲ್ಲಾ ಆ ಅರ್ಥ ವಿಸ್ತೃತವಾಗುತ್ತಾ ಹೋಗುತ್ತದೆ.

ಒಗಟುಗಳಲ್ಲಿ ಕೆಲವು ಕಡೆ ಉತ್ತರ ತಿಳಿದೊಡನೆ, ಇದು ಸರ್ವೇ ಸಾಧಾರಣವಾದ ವಿಷಯ, ನಮಗೆ ಹೊಳೆಯಲೇ ಇಲ್ಲ, ಎಂದು ಆಶ್ಚರ್ಯವಾಗುತ್ತದೆ. ಕೆಲವು ವೇಳೆ ಒಗಟಿನ ಶಬ್ದಕ್ಕೆ ಎರಡೆರಡು ಅರ್ಥಮಾಡಲು ಸಾಧ್ಯವಿದೆ. ಆದರೆ ಬೆಡಗಿನ ವಚನಗಳಲ್ಲಿ ಅರ್ಥತಿಳಿದು ಆಶ್ಚರ್ಯ ಆಗುತ್ತದೆ. ಆದರೆ ಅದು ಸರ್ವೇಸಾಧಾರಣ ವಿಷಯವಾಗಿಲ್ಲದೆ ಅದ್ಭುತವಾದ ವಿಷಯ ಎಂದು ತಿಳಿದೇ ಆಶ್ಚರ್ಯವಾಗುತ್ತದೆ. ಬೆಡಗಿನ ಶಬ್ದಕ್ಕೆ ಒಂದೇ ಸಾಂಕೇತಿಕವಾದ ಅರ್ಥವಿರುತ್ತದೆ. ಉದಾಹರಣೆಗೆ “ಬೆಳ್ಳಿ ಚೆತ್ತ ಹಿಡೀಲಾರೆ”[೭] ಎಂಬ ಒಗಟಿಗೆ ‘ಹಾವು’[೮] ಎಂದು ಉತ್ತರ ಹೇಳಿದ್ದಾರೆ. ‘ಬೆಳ್ಳಿಚೆತ್ತಕ್ಕೆ’ ‘ಹಾವು’ ಎಂಬುದು ಹೇಗೆ ಸಮಂಜಸವೆನಿಸುವುದೋ ಅದಕ್ಕಿಂತಲೂ ‘ಮಿಂಚು’ ಹೆಚ್ಚು ಸಮಂಜಸವೆನಿಸುತ್ತದೆ. ಒಂದು ಒಗಟಿನ ಶಬ್ದಕ್ಕೆ ಎರಡು, ಎರಡಕ್ಕಿಂತ ಹೆಚ್ಚು ಅರ್ಥಗಳಿರುವುದಕ್ಕೆ ‘ರಾಗೌ’ ಅವರ ‘ನಮ್ಮ ಒಗಟುಗಳು’ ಪುಸ್ತಕದಲ್ಲಿ ಹೆಚ್ಚಿನ ಉದಾಹರಣೆಗಳಿವೆ.[೯] ಆದರೆ ಬೆಡಗಿನ ಭಾಷೆಯಲ್ಲಿ ಬೆಡಗಿನ ಶಬ್ದ ಒಂದೇ ಸಾಂಕೇತಿಕ ಅರ್ಥವನ್ನು ಹೊಂದಿರುತ್ತದೆ. ಉದಾಹರಣೆಗೆ ‘ಉದಕ’ ‘ಮನಸ್ಸಿಗೆ’ ಸಾಂಕೇತಿಕ, ‘ಗಗನ’ ಆತ್ಮಕ್ಕೆ ; ‘ತರಗೆಲೆ ಸಂಸಾರಕ್ಕೆ; ಜಂಬೂದ್ವೀಪ – ದೇಹಕ್ಕೆ ಸಂಕೇತಗಳಾಗಿವೆ.

ಒಗಟುಗಳಿಗೆ ಅನುಭವದ ಆಧಾರದ ಮೇಲೆ ಆಲೋಚಿಸಿ ಉತ್ತರ ಹೇಳಬಹುದು. ಬೆಡಗಿನ ವಚನಗಳಿಗೆ ಅರ್ಥಮಾಡುವಾಗ ಅಪಾರವಾದ ಸೈದ್ಧಾಂತಿಕ ಅನುಭವ ಇರಬೇಕು. ಪಾಂಡಿತ್ಯ, ಯೋಗಬಲ, ಅನುಭವದ ರಸಾವೇಶವಿದ್ದರೆ ಮಾತ್ರ ಅರ್ಥ ಹೇಳಲು ಸಾಧ್ಯ.

ಒಗಟುಗಳಲ್ಲಿ ಬುದ್ಧಿಚಮತ್ಕಾರ ವಿಶೇಷವಾಗಿದೆ. ಬೆಡಗಿನ ವಚನಗಳಲ್ಲಿ ಕವಿತಾ ಶಕ್ತಿ. ಅನುಭಾವದ ಹಿರಿಮೆ. ರಸಾವೇಶವಿರುತ್ತದೆ.

---

೭. ಜನಪದ ಬೆಡಗಿನ ವಚನಗಳು; ಪುಟ: 43; ಒಗಟಿನ ಸಂಖ್ಯೆ: 387.

೮. ಅದೇ ಉತ್ತರಗಳು; ಪುಟ: 67.

೯. 'ನಮ್ಮ ಒಗಟುಗಳು' ಪುಟ: 13. ಒ. ಸಂ. 73, ಪುಟ: 16; ಒ. ಸಂ. 102 ಇತ್ಯಾದಿ.

ಒಗಟುಗಳು ಚಕಿತಗೊಳಿಸಲು ಬಂದವು; ಬೆಡಗಿನ ವಚನಗಳು ಆಧ್ಯಾತ್ಮ, ಯೋಗವಿಚಾರಗಳ ನಿರೂಪಣೆಗೆ ಬಂದವು.

ಶ್ರೀ ಸುಧಾಕರ ಅವರು "ಬೆಡಗಿನ ವಚನಗಳು ಒಗಟುಗಳ ಪ್ರಕಾರಕ್ಕೆ ಋಣಿಯಾಗಿದ್ದಿರಬೇಕು ಅಥವಾ ಒಗಟುಗಳು ವಚನ ಸಾಹಿತ್ಯಕ್ಕೆ ಅದರಲ್ಲೂ ಬೆಡಗಿನ ವಚನಗಳಿಗೆ ಮೂಲಸೆಲೆಯಾಗಿರಬೇಕು ಎನಿಸುತ್ತದೆ." ಎಂದು ಹೇಳಿ "ಒಗಟುಗಳು ವಚನಗಳಂತೆ ರೂಪಸಾದೃಶ್ಯವನ್ನು ಹೊಂದಿರುವುದಕ್ಕೆ ಉದಾಹರಣೆಯನ್ನು ಕೊಟ್ಟಿದ್ದಾರೆ. ಈ ಹೇಳಿಕೆ ಸಂದೇಹಾಸ್ಪದ. ಒಗಟುಗಳು ವಚನಗಳಿಗೆ – ಅದರಲ್ಲೂ ಬೆಡಗಿನ ವಚನಗಳಿಗೆ ಮೂಲಸೆಲೆ ಹೇಗಾದಾವು? ಬೆಡಗಿನ ವಚನಗಳಲ್ಲಿನ ಶೈಲಿ, ರೀತಿಗಳ ಮೂಲ ಯಾವುದು ಎಂಬ ಅಂಶ ತೀವ್ರವಾದ ಸಂಶೋಧನೆಗೆ ಒಳಪಡಬೇಕು. ಶಶಿಭೂಷಣ ದಾಸ್ ಗುಪ್ತ ಅವರ ಅಭಿಪ್ರಾಯದಂತೆ[೧೦] ಬೆಡಗಿನ ರೀತಿಯು ಸಾಹಿತ್ಯ, ವೇದಗಳಲ್ಲಿ ಅದರಲ್ಲೂ ಅಥರ್ವವೇದದಲ್ಲಿ, ತಾಂತ್ರಿಕ ಸಾಹಿತ್ಯದಲ್ಲಿ ಕಂಡುಬರುತ್ತದೆ" ಎಂದು ತಿಳಿಯುತ್ತದೆ. ಡಾ|| ಎಂ. ಚಿದಾನಂದಮೂರ್ತಿಯವರು "Perhaps Bedgina Vachanas are the descendents of the cruigmatic Language of the Tantric texts"[೧೧] ಎಂಬ ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಬೆಡಗಿನ ಶೈಲಿಯು ಮೂಲವೇದ, ತಂತ್ರ ಸಾಹಿತ್ಯದಷ್ಟು ಹಳೆಯದಾಗುತ್ತದೆ. ಒಗಟಿಗೂ ವೇದಕಾಲದ ಪ್ರಾಚೀನತೆ ಇರಬಹುದು. ಇದೆ. ಆದರೆ ಒಗಟುಗಳು ಬೆಡಗಿನ ವಚನಗಳಿಗೆ ಮೂಲಸೆಲೆಯಾಗಿರುವುದು ಸಾಧ್ಯವಿಲ್ಲ.

ವಚನಕಾರರೆನಿಸಿದ ಬಸವಾದಿಪ್ರಮಥರು ಜೀವನದ ದರ್ಶನವನ್ನು ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಉಪನಿಷತ್ತು ಎಂದೂ ಕರೆಯಲಾಗಿದೆ. ಒಗಟುಗಳು ವಚನಗಳಿಗೆ ಮೂಲಸೆಲೆ ಹೇಗಾದವು ಎಂಬಂಶ ವಿವಾದಾಸ್ಪದವಾಗಿ, ಸತ್ಯಕ್ಕೆ ದೂರವಾಗಿದೆ.

ಮೊನ್ನೆ ಲೇಖಕರು "ವಚನಕಾರರಿಗಿಂತ ಹಿಂದೆ ಒಗಟುಗಳು ಪ್ರಚುರವಾಗಿದ್ದಿರಬೇಕು"[೧೨] ಎಂದಿದ್ದಾರೆ. ಇದಕ್ಕೆ ಪೋಷಕವಾಗಿ ಯಾವ ಉದಾಹರಣೆಯನ್ನೂ ಲೇಖಕರು ಇತ್ತಿಲ್ಲ. ಒಂದುವೇಳೆ ಒಗಟು ಇದ್ದುದಾದರೂ. ವಚನಗಳು – ಬೆಡಗಿನ ವಚನಗಳು – ಅವುಗಳಿಂದಲೇ ಹುಟ್ಟಿಬಂದುವು ಎನ್ನಲು ಆಧಾರವೇನು? ಒಗಟುಗಳ ಮೂಲವನ್ನು ವೇದಗಳ ಕಾಲಕ್ಕೆ ಇಡುವಾಗ ವಚನಗಳಿಗಿಂತ ಹಿಂದೆ ಒಗಟುಗಳು ಇರಲೇಬೇಕು. ಒಗಟಿನರೀತಿ, ಬೆಡಗಿನರೀತಿ ಇವೆರಡೂ ವೇದಗಳಲ್ಲಿವೆ. ಆದರೆ ಈ

---

೧೦. S. B. Dasgupta: 'Obscure Religious Cults'; Culcutta 1962. Page 416–417.

೧೧. Dr. M. Chidananda Murthy. 'Bangalore University Research Journal' 1969–71; Page: 61. (Obscure Religious cults in Medieval Karnataka).

೧೨. ಜನಪದ ಬೆಡಗಿನ ವಚನಗಳು; ಪುಟ: xxiii.

ಎರಡೂ ಯಾವುದು ಯಾವುದಕ್ಕೂ ಋಣಿಯಲ್ಲ, ಒಂದೇ ಮರದ ಎರಡು ಟಿಸಿಲುಗಳು ಇವು.

ಇಷ್ಟೆಲ್ಲ ಹೇಳಿದ ಮಾನ್ಯ ಲೇಖಕರು 'ಬೆಡಗು' ಶಬ್ದದ ಅರ್ಥ ವಿವೇಚನೆಯನ್ನೇ ಮಾಡದಿರುವುದು ಆಶ್ಚರ್ಯದ ಸಂಗತಿ. ಹೀಗಿರುವಲ್ಲಿ ಶ್ರೀಯುತರ ಹೇಳಿಕೆ ಏಕಪಕ್ಷೀಯ (Partial) ಆಗುತ್ತದೆ.

ಬೆಡಗು ಶಬ್ದಕ್ಕೆ ಡಾ|| ಕಿಟೆಲ್‌ರವರು; Novelty, beauty, elegance, grace, fineness, ಎಂದು ಅರ್ಥ ಹೇಳಿ ಮುಂದುವರೆದು, Marvel, wonder; ಎಂದೂ ಅರ್ಥಹೇಳಿದ್ದಾರೆ. ತೆಲುಗಿನಲ್ಲಿ ಈ ರೀತಿಯ ಶೈಲಿಗೆ ಪ್ರೇಕ, ಪ್ರೇಗು, ಎಂದೂ; ತಮಿಳಿನಲ್ಲಿ 'ವೈಪ್ಪು' (greatness) ವೇಡಿಕ್ಕೈ (a show, pomp), ಎಂದೂ ಹೇಳುತ್ತಾರೆ. ನಾನಾರ್ಥಕಾಂಡಂ ಕೃತಿಯಲ್ಲಿ "ಒಂದು ಶಬ್ದಕ್ಕೆ ಪಲವರ್ಥಮಂ ಪಲವರ್ಥಕೊಂದು ಶಬ್ದಂನುಡಿವ ಬೆಡಗುಮಂ ನಾನಾರ್ಥಮೆಂದುಪೇೞ್ವೆಂ"[೧೩] ಎಂಬುದಾಗಿ ಹೇಳಿದೆ. ಬೆಡಗುಶಬ್ದ ಆಶ್ಚರ್ಯ, ರಮ್ಯ, ಅದ್ಭುತ, ರಹಸ್ಯ ಎಂಬ ಅರ್ಥಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗಿದೆ. ಆದಯ್ಯನ ವಚನಗಳಲ್ಲಿ "ನುಡಿಗೆಡೆಯಿಂದ ನಿಂದನಿರವಯಘನತೇಜ ಇದ್ದೂ ಇಲ್ಲದಿಪ್ಪ ಬೆಡಗಿನ ಭೇದವ ನಿಮ್ಮಲ್ಲಿಯೇ ಕಂಡೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ."[೧೪] ಎಂದು ಹೇಳುವಾಗ ರಹಸ್ಯ, ಅದ್ಭುತ, ಎಂಬ ಅರ್ಥಗಳಲ್ಲಿ ಪ್ರಯೋಗವಾಗಿರುವುದನ್ನು ಗಮನಿಸಬಹುದು. ಮೊದಲನೆ ವಚನಕಾರನಿದ್ದಿರಬಹುದು ಎಂಬ ಊಹೆಗೆ ಈಡಾಗಿರುವ ದೇವರದಾಸಿಮಯ್ಯ "ಜಲವ ಬಣ್ಣವ ಮಾಡಿ.ಸ್ವಯವ ನಿಲವಮಾಡಿ. ಸುಳಿವಾತನ ಬೆಡಗ ಬಲ್ಲವರಾರೈ ರಾಮನಾಥ"[೧೫] ಎಂದು ಹೇಳಿ 'ಬೆಡಗು' ಶಬ್ದವನ್ನು ರಹಸ್ಯ, ಅದ್ಭುತ, ಎಂಬ ಅರ್ಥಗಳಲ್ಲಿ ಬಳಸಿದ್ದಾನೆ. ಹೀಗೆಯೇ, ಪ್ರಭುಲಿಂಗಲೀಲೆ.[೧೬] ಕುಮಾರವ್ಯಾಸಭಾರತ,[೧೭] ಶಾಂತಿ

---

೧೩. ನಾನಾರ್ಥಕಾಂಡಂ. ಪದ: ೧.-463.

೧೪ ಉತ್ತಂಗಿ ಚನ್ನಪ್ಪ (ಸಂ); 'ಆದಯ್ಯನ ವಚನಗಳು'; ವಚನ: 91; ಮುರುಘಾಮಠ; ಧಾರವಾಡ; 1957.

೧೫. ದೇವರದಾಸಿಮಾರ್ಯ ಪ್ರಶಸ್ತಿ; ವಚನ ಸಂಖ್ಯೆ: 132; ಪುಟ: 129.

೧೬ (೧) ಬೆಡಗನಾಡದಿರಯ್ಯ ಕೇಳೆ। ನ್ನೊಡನೆ ಹುಟ್ಟಿದ ನೀಸುದಿನವೊಂ। ದೊಡಲು ವಿಡಿದಜಗಣ್ಣನಿರ್ದನು ಗುಪ್ತಭಕ್ತಿಯಲಿ.

(೨) ನಡೆಯಿರ್ಕೆ ಶಿವಲಿಂಗಭಕ್ತಿಯು। ಬೆಡಗನೇಕಾಂತದಲಿ ನಿಮಗೊಡ। ಬಡಿಸಿ ಹೇಳುವೆನೆನುತ ಬಂದನುಬಳಿಕ ಪ್ರಭುರಾಯ.

(ಪ್ರಭುಲಿಂಗ ಲೀಲೆ; ಸಂ. ಶಿ. ಶಿ. ಬಸವನಾಳ)

೧೭. "ನುಡಿದ ಮಾತ್ರದಲಿರದು ಧರ್ಮದ ಬೆಡಗು ತಾನದು ಜೇಕ" (ಕುಮಾರ ವ್ಯಾಸ ಭಾರತ; ಸಂ: 9. ಪದ್ಯ 17. (ಸರ್ಕಾರಿ ಮುದ್ರಣ).

ಪುರಾಣ,[೧೮] ದೀಕ್ಷಾಬೋಧೆ.[೧೯]ಗಳಲ್ಲಿಯೂ ಬಳಕೆಯಾಗಿದೆ. ಬೆಡಗಿನ ವಚನಗಳನ್ನು ಅರ್ಥಮಾಡುವ ಮೊದಲು ವಚನ ಎಂದರೇನು? ಎಂಬ ಅಂಶವನ್ನು ವಿಚಾರ ಮಾಡೋಣ.

ವಚನ ಎಂದರೆ. ಡಾ. ಶಿ. ಚಿ. ನಂದಿಮಠ ಅವರು "They are in prose, but their word-magic and cadence lift them to the level of poetry"[೨೦] ಎಂದು ಹೇಳಿದ್ದಾರೆ.

ಸಾಖರೆಯವರು "The Vachanas are like upanisads in their poetic favour and profoundity of meaning; fresh from the oven of spiritual hearts."[೨೧] ಎಂದು ಹೇಳಿದ್ದಾರೆ. ಪ್ರೊ. ಶಿ.ಶಿ. ಬಸವನಾಳರು. "ಕಂದವೃತ್ತಾದಿ ಪದ್ಯಗಳಂತೆ ವಚನಗಳು ಛಂದೋಬದ್ಧವಲ್ಲವಾದರೂ ಗದ್ಯದಂತೆ ಸ್ವಚ್ಛಂದವಾದುವೂ ಅಲ್ಲ. ಇವುಗಳ ರಚನೆಯಲ್ಲಿ ತೋರುವ ಒಂದು ವಿಧ ಲಯಬದ್ಧತೆ (Rhythm) ಇವುಗಳನ್ನು ಹಾಡುಗಳಂತೆ ಅನ್ನಲು ಅನುಕೂಲ ಕಲ್ಪಿಸಿದೆ."[೨೨] ಎಂದು ಹೇಳಿ ಮುಂದುವರಿದು "ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯಪದ್ಯನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ. ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಲಯವಿದೆ."[೨೩] ಎಂದು ಹೇಳಿದ್ದಾರೆ. ಆಚಾರ್ಯ ಡಿ. ಎಲ್. ಎನ್. ರವರು 'ಇವು ಶಿವಶರಣರ ಹೃದಯವಿದ್ರಾವಕ ಗೀತೆಗಳು'[೨೪] ಎಂದು ಕರೆದಿದ್ದಾರೆ. ಮುಂದುವರೆದು "ತಮಿಳು ಸಾಹಿತ್ಯದಲ್ಲಿ ಹಾಡುಗಳೂ ಸ್ತೋತ್ರಗಳೂ ಪ್ರಚಾರದಲ್ಲಿದ್ದು ಅವುಗಳನ್ನು ವಚನಕಾರರು ಅನುಕರಿಸಿರಬಹುದು. ಗದ್ಯದಲ್ಲಿಯೇ ತಾಳಮಾನಗಳನ್ನಿಟ್ಟು

---

೧೮. "ಅತಿರಯ ವರ್ಣಕ್ರಮ ನೋಂ। ಮತೆಱಂ ಪದರಚನೆಯೊಂದು ತೆಱನರ್ಥಮದೊಂ ದು ತೆಱಂ ಬೆಡಗುಂ ಬೇಱೊಂದುತೆಱಂ ನುಡಿಗೆನೆ ಮನಕ್ಕೆವರೆ ಹಳಿನುಡಿದಂ". (ಶಾಂತಿ ಪುರಾಣ; ಸಂ. ಎಂ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್. ಪೀಪಲ್ಸ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮದರಾಸು; 1929.)

೧೯. ಕೊಡುವೆ ಸುಜ್ಞಾನಮಂ ತೊಡೆವೆ ತ್ರೈಮಲಮುಮಂ, ನುಡಿವೆನೇಕಾರ್ಥನದ ಬೆಡಗಿನ ಉಪಾಯಮಂ" (ದೀಕ್ಷಾಬೋಧೆ 96–8.)

೨೦. Dr. S. C. Nandi Math: 'A Hand Book of Veerasaivism'; Page: 20.

೨೧. Sakhare; History and Philosophy of Lingayet Religion.—Being an introduction to Lingadharana Chandrika of Nandikesha. Page: 676.

೨೨. ಪ್ರೊ. ಶಿ. ಶಿ. ಬಸವನಾಳರು; 'ಬಸವಣ್ಣನವರ ಷಟ್‌ಸ್ಥಲದ ವಚನಗಳು'; ಪೀಠಿಕೆ xxi.

೨೩. ಅದೇ; ಪೀಠಿಕೆ; xxvii.

೨೪. ಪ್ರೊ. ಡಿ.ಎಲ್.ಎನ್. 'ಕೆಲವು ವಚನಕಾರರು' ಪ್ರಬುದ್ಧ ಕರ್ಣಾಟಕ 19–1. ಪು: 6.

ಅವನ್ನೇ ಗೀತವೆಂದು ಕರೆದಿರುವಂತೆ ತೋರುತ್ತದೆ.[೨೫] ಎಂದಿದ್ದಾರೆ. ಶ್ರೀನಿವಾಸ್ ಎಚ್. ದೇವೀರಪ್ಪನವರು "ಅನುಭಾವದಿಂದ ಸ್ಫುರಿಸಿ ಯಾರು ಮಾತನಾಡುತ್ತಾರೋ ಅವರ ಮಾತುಗಳು ವಚನ ಎನಿಸಿಕೊಳ್ಳುತ್ತವೆ. (ವಚನ 7 Inspired Talk)."[೨೬] ಎಂದು ತಿಳಿಸುತ್ತಾರೆ.

ಹೀಗೆ ವಚನಗಳ ಅರ್ಥ ಅವುಗಳ ಮೂಲದ ಬಗೆಗೆ ವಿವರಣೆಗಳನ್ನು ವಿದ್ವಾಂಸರು ನೀಡಿರುವಾಗ ವಚನಗಳಿಗೆ ಒಗಟುಗಳು ಮೂಲಸೆಲೆಯಾಗಿವೆ ಎಂಬ ಮಾತು ಎಷ್ಟು ಸತ್ಯವಾಗುಳಿಯುತ್ತದೆಯೋ ತಿಳಿಯದು.

ಬೆಡಗಿನ ವಚನ ಎಂದರೇನು? ಎಂಬುದಕ್ಕೆ ಡಾ|| ಎಲ್. ಬಸವರಾಜುರವರು "ಬೆಡಗಿನ ವಚನಗಳಲ್ಲಿ ಹಲವಾರು ಪ್ರಭೇದಗಳಿವೆ. ವಿರೋಧಾಭಾಸವೇ ಅವೆಲ್ಲಕ್ಕೂ ಜೀವಾಳ. ಪ್ರಕೃತಿಗೆ, ಸಮಾಜಕ್ಕೆ, ಸಂಪ್ರದಾಯಕ್ಕೆ ವಿರುದ್ಧವೆಂಬಂತಹ ಗೌಣವಾದ ಅರ್ಥಬರುವ ಮಾತುಗಳನ್ನಾಡಿ, ಅದಕ್ಕೆ ಬಳಸಿರುವ ಪದಗಳಿಗೆ ಬೇರೆ ಒಂದು ಮುಖ್ಯವಾದ ಅಂತರರ್ಥವು ಬರುವಂತಾಗಿಸುವುದೇ ಇವುಗಳ ಮುಖ್ಯತಂತ್ರ. ಇಂತಹ ಪದಗಳಿಗಾಗಿರುವ ಅಂತರರ್ಥವು, ಅಥವಾ ಆ ಸಾಂಕೇತಿಕ ಪದಗಳಿಗಿರುವ ಪ್ರತ್ಯೇಕವಾದ ನಿಯತಾರ್ಥವು ಆಕಸ್ಮಿಕವಾದುದಲ್ಲ; ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಯಿಸುವ ಸ್ವಚ್ಛಂದ ರೀತಿಯದಲ್ಲ. ಈ ಬೆಡಗಿನ ಸಂಪ್ರದಾಯವು ಅನೂಚಾನವಾದುದು. ಮತ್ತು ಯುಕ್ತಿಯುಕ್ತವೂ ರೂಪಕ ಮೂಲ ಅದುದು.[೨೭] ಎಂದು ಹೇಳಿದ್ದಾರೆ. ಇಲ್ಲಿ ಬೆಡಗಿನ ವಚನಗಳ ಅರ್ಥ ಆಕಸ್ಮಿಕವಾದುದಲ್ಲ ಎಂಬುದನ್ನು ಗಮನಿಸಬೇಕು. ಡಾ|| ಎಚ್. ತಿಪ್ಪೇರುದ್ರಸ್ವಾಮಿಯವರು "ಬೆಡಗಿನ ವಚನಗಳಲ್ಲಿ ಬರುವುದು ಶ್ಲೇಷೆಯ ಚಮತ್ಕಾರವಲ್ಲ. ಶ್ಲೇಷೆಯೆಂದರೆ ಒಂದು ಪದಕ್ಕೆ ಎರಡು ಅಥವಾ ಹೆಚ್ಚು ಅರ್ಥವನ್ನಿಟ್ಟು ಮಾಡುವ ಚಮತ್ಕಾರ. ಆದರೆ ಬೆಡಗಿನ ವಚನಗಳಲ್ಲಿ ಪದದ ತೋರಿಕೆಯ ಅರ್ಥವೇ ಒಂದಾದರೆ ಅವು ವಚನದಲ್ಲಿ ಪ್ರತಿನಿಧಿಸುವ ಅರ್ಥವೇ ಇನ್ನೊಂದು; ಉಂಟು ಮಾಡುವ ಅನುಭವವೇ ಬೇರೊಂದು."[೨೮] ಎಂದು ಹೇಳಿದ್ದಾರೆ. ಇಲ್ಲಿ ಪದದ ತೋರಿಕೆಯ ಅರ್ಥವೇ ಒಂದು ಅದು ಪ್ರತಿನಿಧಿಸುವ ಅರ್ಥವೇ ಇನ್ನೊಂದು ಎನ್ನುವಲ್ಲಿ ಒಗಟಿಗೂ, ಬೆಡಗಿನ ವಚನಕ್ಕೂ ಸಂಬಂಧವಿದೆಯಾದರೂ. ಅವು ಉಂಟು ಮಾಡುವ ಅನುಭವವೇ ಬೇರೊಂದು ಎಂಬಲ್ಲಿ ಅಪಾರವಾದ ವ್ಯತ್ಯಾಸವಿದೆ. ಬೆಡಗಿನ ವಚನಗಳ

೨೫. ಅದೇ. 5–62.

೨೬. ಶ್ರೀನಿವಾಸ್ ಎಚ್. ದೇವೀರಪ್ಪನವರೊಡನೆ ವಿಚಾರ ಮಾಡಿದಾಗ ತಿಳಿದು ಬಂದ ಅಂಶ.

೨೭. ಡಾ|| ಎಲ್. ಬಸವರಾಜು 'ಅಲ್ಲಮನ ವಚನ ಚಂದ್ರಿಕೆ'; ಪೀಠಿಕೆ; ಪುಟ: 16.

೨೮. ಡಾ|| ಎಚ್. ತಿಪ್ಪೇರುದ್ರಸ್ವಾಮಿ; 'ಶರಣರ ಅನುಭಾವ ಸಾಹಿತ್ಯ'; ಪುಟ: 259. ಡಿ. ವಿ. ಕೆ. ಮೂರ್ತಿ; ಮೈಸೂರು; 1963.

ಸಾಂಕೇತಿಕ ಅರ್ಥ ತಿಳಿದಾಗ ಆಗುವ ಅನುಭವಕ್ಕೂ ಬಿಗಟುಗಳ ಅರ್ಥ ತಿಳಿದಾಗ ಆಗುವ ಅನುಭವಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಡಾ|| ಎಂ. ಚಿದಾನಂದಮೂರ್ತಿಯವರು "The Style of a section of the Vachanas of the Virashaiva mystic saints called the Bedgina Vachanas asemble the style of Tāntric texts. Tāntric texts were written in a style called. "Soundhā-Bhāsā." (Sam + = dhā) or the intentional language " i. e. the language literally and apparently meaning one thing but aiming at a deeper meaning hidden behind. It is this enigmatic nature of the language that characterizes the bedagina vachanas; especially of Allama who himself knew many of the secret practices very well."[೧೯] ಎಂದು ಬೆಡಗಿನ ವಚನಗಳನ್ನು ವಿಶ್ಲೇಷಿಸಿದ್ದಾರೆ. ಚನ್ನಪ್ಪ ಉತ್ತಂಗಿಯವರು "ಅನುಭಾವ ಜನ್ಯ ಶಬ್ದಗಳು. ವಾಕ್ಯಗಳು ಶರಣರ ಹೃದಯದಿಂದ ಹೊರಬೀಳುವಾಗ ಅನೇಕ ಸಲ ಬೆಡಗಿನ ರೂಪವನ್ನು ತಾಳುತ್ತವೆ. ಹೃದಯಕ್ಕೆ ದೈವೀ ಶಕ್ತಿಯ ಶಾಖಿ ತಟ್ಟಿದಾಗ ಶರಣರಿಗೆ ಅಮಿತಾನಂದವಾಗುತ್ತದೆ. ಅದು ಅವರ್ಣನೀಯ. ಅನಿಸಿದ್ದನ್ನು ಅನಿಸಿದಂತೆ ಹೇಳಬೇಕೆಂದರೆ ಶಬ್ದ ಸಾಲದು; ಭಾಷೆ ತತ್ತರಿಸುತ್ತದೆ. ಆಗ ಸೂಚ್ಯಾರ್ಥದಿಂದ ಕೂಡಿದ ಬೆಡಗಿನ ವಚನಗಳು ಹುಟ್ಟಿಕೊಳ್ಳುತ್ತವೆ."[೨೦] ಎಂದು ಬೆಡಗಿನ ವಚನಗಳಿಗೆ ವಿವರಣೆ ನೀಡಿದ್ದಾರೆ. ಬೆಡಗಿನ ವಚನಗಳು ನಿಗೂಢಾರ್ಥವುಳ್ಳವು ಎಂಬಂತ ಮೇಲಿನ ಹೇಳಿಕೆಗಳಿಂದ ತಿಳಿಯುತ್ತದೆ. ಇದಕ್ಕೆ ಋಗ್ವೇದ. ಅಥರ್ವವೇದವಲ್ಲಿ[೨೧] ಉದಾಹರಣೆಗಳಿವೆ. ಇದನ್ನು ಹಿಂದಿಯಲ್ಲಿ ರಹಸ್ಯವಾದ ಎಂದು ಕರೆಯುತ್ತಾರೆ. ಕಬೀರ. ಸೂರದಾಸ ಮೊದಲಾದ ಕವಿಗಳು ಹಿಂದಿಯಲ್ಲಿ ಹೆಚ್ಚು ಪ್ರಚಾರಕ್ಕೆ ತಂದರು. ಬಂಗಾಳಿಯಲ್ಲಿ ಘೋರಕನಾಥ. ಮೀನಾನಾಥ. ಚಂದ್ರನಾಥ ಮೊದಲಾದವರು ಈಶ್ವರಿಯ ಆದ್ಯ ಪ್ರವರ್ತಕರೆನಿಸಿದ್ದಾರೆ.

ಇಲ್ಲಿ ಇನ್ನೊಂದು ಪ್ರಶ್ನೆ ಏಳುವುದು ಸಹಜ. ಈ ರೀತಿಯ ಗೂಢ ಭಾಷೆಯನ್ನು ಏಕೆ ಬಳಸಿದರು? ಇದರ ಅವಶ್ಯಕತೆ ಇತ್ತೆ! ಎಂಬುದು ಆ ಪ್ರಶ್ನೆ. ಇದಕ್ಕೆ ಡಾ|| ಬಸವರಾಜುರವರು "ಈ ಸಂಪ್ರದಾಯದ ಉದ್ದೇಶವು ಸಹಜ ಪ್ರವೃತ್ತಿಗೆ ಅನುಗುಣವಾದುದು. ಕುತೂಹಲವನ್ನು ಕೆರಳಿಸಲು, ಅದ್ಭುತವನ್ನೋ, ಅತಿಶಯವನ್ನೋ, ವಿರೋಧಾಭಾಸವನ್ನೋ, ಅರ್ಥಾಂತರತೆಯನ್ನೋ ಅನುಸರಿಸುವುದು ಮಾನವ ಸಂಸ್ಕೃತಿ. ಚರಿತ್ರೆಯಲ್ಲಿ ಬಹಳ ಪುರಾತನವಾದ ತಂತ್ರ. ಕುತೂಹಲದಿಂದ ಜನತೆಯ ಮನಸ್ಸನ್ನು

೧೯. Dr. M. Chidananda Murthy, Bangalore University Research Journal 1969–71; Page: 61.

೨೦. ಕಲ್ಯಾಣಕಿರಣ; ಸಂಪುಟ: 2; ಸಂಚಿಕೆ: 4; ಏಪ್ರಿಲ್ ೧೯೭೧.

೨೧. Rg–Veda; 1–164; 1–152; 3, 8, 90, 14.
Atharva–Veda; 7–1; 11.8.10. ('Obscure Religious cults'.)

ಕರ್ಷಿಸಿ, ಏಕಾಗ್ರವಾಗಿಸಿ, ಆಗ ಅದರ ಮೂಲಕ ತತ್ತ್ವವೊಂದರ ಆವಿಷ್ಕಾರವಾಗುವಂತೆ ಮಾಡಿದರೆ ಆವ ಅನುಭವವು ಸಾಕ್ಷಾತ್ಕಾರದಷ್ಟು ದಿವ್ಯ ಸ್ಥಿತಿಗೇರಿ, ಆ ವ್ಯಕ್ತಿಯನ್ನು ದಿವ್ಯತೆಗೇರಿಸುವುದು" ಮತ್ತು ಯೋಗ ಸಂಬಂಧವಾದ ವಿಷಯಗಳನ್ನು ಬೆಡಗಿನಲ್ಲಿ ಹೇಳುವುದರ ಉದ್ದೇಶವು ಆ ವಿಷಯಗಳನ್ನು ಗೋಪ್ಯವಾಗಿಡಬೇಕೆಂಬುದೇ ಆಗಿರ ಬಹುದು. ಹೀಗೆ ವಿಷಯಗಳನ್ನು ಗೋಪ್ಯವಾಗಿಡಬೇಕೆಂಬುದರಲ್ಲಿ 'ಅಧಿಕಾರಿ'ಯಾದ ವನಿಗೆ ಮಾತ್ರ ಇದು ತಿಳಿಯಬೇಕು. ಸಂತೆಯಲ್ಲಿ ತತ್ತ್ವೋಪದೇಶವಾದಂತಾಗಬಾರದು. ಯೋಗವೆನ್ನುವುದು ಸರಿಯಾದ ಗುರುವಿನಿಂದ ಸಾಧಕನ ವೈಯಕ್ತಿಕ ಯೋಗ್ಯತೆಯನ್ನು ಸಾರ ಬೋಧಿಸಲ್ಪಡದೇ ಹೋದರೆ ಸಾಧಿಸುವ ಸಾಧಕನಿಗೆ ಅನರ್ಥಗಳಾದಾವು ಎಂಬ ಎಚ್ಚರಿಕೆಯ ಸದುದ್ದೇಶವಿತ್ತೆ ಹೊರತು, ಹೊಟ್ಟೆಯ ಕಿಚ್ಚಿನ ಕ್ಷುದ್ರ ಭಾವನೆಯಿರಲಿಲ್ಲ ವೆಂಬುದನ್ನು ಗಮನಿಸಬೇಕು."[೩೨] ಎಂದು ವಿವರಣೆ ಇತ್ತಿದ್ದಾರೆ.

ಬೆಡಗಿನ ವಚನದ ಅರ್ಥವ್ಯಾಪ್ತಿ ಮತ್ತು ಉದ್ದೇಶಗಳು ಹೀಗಿರುವಾಗ; ಅವರ ರೂಪುರೇಷೆ ವಿಶಿಷ್ಟವಾದುದಾಗಿರುವಾಗ ಕೇವಲ ಸಾದೃಶ್ಯವಿದೆ. ಬುದ್ಧಿ ಚಮತ್ಕಾರವಿದೆ ಎಂದು ಒಗಟುಗಳೇ ಬೆಡಗಿನ ವಚನಗಳಿಗೆ ಮೂಲಸೆಲೆಯಾಗಿರಬೇಕು ಎಂದು ಹೇಳ ಲಾಗುವುದಿಲ್ಲ. ಒಗಟು ವಚನವಲ್ಲ. ವಚನ ಬೆಡಗಿನ ವಚನವಲ್ಲ. ಬೆಡಗಿನ ವಚನಗಳಲ್ಲಿ ಅರ್ಥ ನಿರ್ದಿಷ್ಟ ಹಾಗೂ ಅನನ್ಯವಾದುದು. ಇದಕ್ಕೆ 'ರಾಗೌ' ಅವರ ಹೇಳಿಕೆಯನ್ನೂ ಉದಾಹರಿಸಬಹುದು. "ಬೆಡಗಿನ ವಚನಗಳು ಬಹುತೇಕವಾಗಿ ಜಾನಪದವಲ್ಲ; ಜನಪದ ಒಗಟುಗಳನ್ನು ನೋಡಿ ಪರಿಭಾವಿಸಿ ಪ್ರಭಾವಿತರಾಗಿ ನೇರವಾಗಿ ಅಲ್ಲಿಂದಲೇ ಸ್ವೀಕರಿ ಸಿದ್ದಾರೆ ಎನ್ನಲೂ ಸಾಧ್ಯವಿಲ್ಲ. ಹಾಗೆಯೇ ಇವರ ಒಗಟುಗಳು ಜನಪ್ರಿಯವಾಗಿ ಬಾಯಿಂದ ಬಾಯಿಗೆ ತೇಲಿಬಂದುವು ಎನ್ನಲಾಗುವುದಿಲ್ಲ. ಇದಕ್ಕೆ ಇವು ಸಮಷ್ಟಿ ಸೃಷ್ಟಿಯಾಗಿರದೆ ವ್ಯಷ್ಟಿ ಸೃಷ್ಟಿಯಾಗಿರುವುದೇ ಕಾರಣ. ಇದಲ್ಲದೆ ಇವು ಆಧ್ಯಾತ್ಮಿಕ ಚಿಂತನೆಯ ಗಹನ ತತ್ತ್ವಗಳಆಧಾರದ ಮೇಲೆ ರೂಪಿತವಾದವು."[೩೩]

ಹೀಗೆ ಒಗಟಿನ ರಚನೆ, ಅರ್ಥ, ಉದ್ದೇಶವೇ ಬೇರೆ, ಬೆಡಗಿನ ವಚನಗಳ ರಚನೆ. ಅರ್ಥ, ಉದ್ದೇಶವೇ ಬೇರೆ ಇರುವಾಗ ಒಗಟುಗಳು ಬೆಡಗಿನ ವಚನಗಳಿಗೆ ಮೂಲ ಎಂದು ಹೇಳಲಾಗುವುದಿಲ್ಲ.

★ ಆರ್. ರಾಜಪ್ಪ

೩೨. 'ಅಲ್ಲಮನ ವಚನ ಚಂದ್ರಿಕೆ'; ಪೀಠಿಕೆ; ಪುಟ: 17.

೩೩. 'ನಮ್ಮ ಒಗಟುಗಳು'; ಪ್ರಸ್ತಾವನೆ; ಪುಟ: 45

ವಿಜಯನಗರ ಕಾಲದ
ಕಪ್ಪಗಲ್ಲು ಗ್ರಾಮದ ದೇವಾಲಯ

ಕ್ರಿ. ಶ. ೧೩೩೬ರಲ್ಲಿ ಸಂಗಮ ಮನೆತನದವರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದುದು ದಕ್ಷಿಣ ಭಾರತದ ವಾಸ್ತು ಮತ್ತು ಶಿಲ್ಪಕಲೆಯಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿಯಾಯಿತು. ವಿಜಯನಗರದ ಕಾಲದಲ್ಲಿ ವಿಶಿಷ್ಟ ರೀತಿಯ ವಾಸ್ತುಶಿಲ್ಪದ ಮಾದರಿ ಬಳಕೆಯಲ್ಲಿ ಬಂದಿತು. ಆಳರಸರು ಕೇವಲ ರಾಜಕೀಯ ಚಟುವಟಿಕೆಗಳಲ್ಲಿ ಮಾತ್ರ ತೊಡಗದೆ, ಸಾಂಸ್ಕೃತಿಕ ಬೆಳವಣಿಗೆಗೆ ಪರಿಶ್ರಮಿಸಿದರು. ಸಾಂಸ್ಕೃತಿಕ ಬೆಳವಣಿಗೆಯಲ್ಲಿ ವಿಜಯನಗರದ ಕೊಡುಗೆ ಮಹತ್ವದ್ದಾಗಿದೆ.

ವಿಜಯನಗರದ ಕಲೆ ಮೂರು ಮುಖ್ಯ ಪ್ರಭೇದಗಳಲ್ಲಿ ಅರಳಿ ನಿಂತಿತು— ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಚಿತ್ರಕಲೆ. ವಾಸ್ತುಕಲೆಯಲ್ಲಿ ವಿಜಯನಗರದ ಅರಸರು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಬಳಕೆಗೆ ತಂದರು. ಆದರೂ ಅವರು ಹಳೆಯ ಪದ್ಧತಿಗಳನ್ನು ಸಂಪೂರ್ಣ ಕೈಬಿಡಲಿಲ್ಲ. ಅವರ ವಾಸ್ತುಕಲೆ, ಅನೇಕ ವಿಧಗಳಲ್ಲಿ ಹೊಯ್ಸಳ ಮತ್ತು ಪಾಂಡ್ಯರ ಕಲೆಯಿಂದ ಸ್ಫೂರ್ತಿ ಪಡೆಯಿತು. ಹೊಯ್ಸಳರ ಕಲೆ ನಯ ಮತ್ತು ಸೂಕ್ಷ್ಮವಾದ ಕೆತ್ತನೆಗಳನ್ನು ಮತ್ತು ಸಾಲಂಕೃತ ಶಿಲ್ಪಗಳನ್ನು ಒಳಗೊಂಡಿದ್ದರೆ ವಿಜಯನಗರ ಶೈಲಿಯು ಬೃಹದಾಕಾರವಾದ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ವಿಜಯನಗರ ರೂವಾರಿಗಳು ಮತ್ತು ಸೂತ್ರಧಾರಿಗಳು ಬಿಳಿಕಲ್ಲನ್ನು (ಬೆಣಚುಕಲ್ಲು) ಉಪಯೋಗಿಸಿದರು. ವಿಜಯನಗರದಲ್ಲಿ ಸಾಕಷ್ಟು ಬೆಣಚುಕಲ್ಲು ದೊರೆಯುತ್ತಿದ್ದುದು ಇದಕ್ಕೆ ಕಾರಣವೆನ್ನಬಹುದು. ವಿಜಯನಗರದ ಕಲೆ ಒಂದು ವಿಶಿಷ್ಟ ಮಾದರಿಯದಾಗಲು ಈ ಬೆಣಚುಕಲ್ಲು ಒಂದು ಕಾರಣವೆನ್ನಬಹುದು. ಏಕೆಂದರೆ ಕುಸುರಾದ, ನಯವಾದ ಕೆತ್ತನೆಗೆ ಈ ಕಲ್ಲಿನಲ್ಲಿ ಆಸ್ಪದವಿಲ್ಲ. ಆದರೆ ಬೃಹದಾಕಾರವಾದ ಶಿಲ್ಪಕಲೆಗೆ ಉಪಯುಕ್ತವಾದ ಕಲ್ಲು. ಉದಾಹರಣೆಗೆ ಹಂಪೆಯ ಸಾಸಿವೆಕಾಳು, ಕಡಲೆಕಾಳು ಗಣೇಶನ ಮೂರ್ತಿಗಳು, ಉಗ್ರನರಸಿಂಹ ಮುಂತಾದುವು ಇದಕ್ಕೆ ಸಾಕ್ಷಿ.

ತುಳುವರ ಕಾಲ ವಿಜಯನಗರದ ವಾಸ್ತುಶಿಲ್ಪಕಲೆಯ ಅತ್ಯುಚ್ಚಕಾಲ. ಸಂಗಮರ ಕಾಲ ಶೈವ ಮತ್ತು ಜೈನ ಮಂದಿರಗಳ ನಿರ್ಮಾಣಕ್ಕೆ ಹೆಸರಾಗಿದ್ದರೆ, ತುಳುವರ ಕಾಲ ವೈಷ್ಣವ ಸಂಪ್ರದಾಯದ ದೇವಾಲಯಗಳ ರಚನೆಗೆ ಮತ್ತು ಜೀರ್ಣೋದ್ಧಾರಕ್ಕೆ ಪ್ರಸಿದ್ಧವಾಗಿದೆ. ಅಲ್ಲದೆ ಅನೇಕ ದೇವಾಲಯಗಳು ವಿಸ್ತರಿಸಲ್ಪಟ್ಟವು. ಈ ಕಾಲದ ಕೆಲವು ಪ್ರಸಿದ್ಧ ಕಟ್ಟಡಗಳೆಂದರೆ ಹಂಪೆಯಲ್ಲಿಯ ಬಾಲಕೃಷ್ಣ, ವಿಠ್ಠಲ, ಗಣೇಶ ಮಂಟಪ, ಅಚ್ಯುತರಾಯನ ದೇವಾಲಯಗಳು. ರಾಜ್ಯದ ಇತರ ಭಾಗಗಳಲ್ಲಿ ಅನೇಕ ಚಿಕ್ಕಪುಟ್ಟ ಶೈವ ಮತ್ತು ವೈಷ್ಣವ ದೇವಾಲಯಗಳು ಕಟ್ಟಲ್ಪಟ್ಟವು.

ಇಂತಹ ದೇವಾಲಯಗಳು ರಾಜ್ಯದಲ್ಲಿಷ್ಟು ಧಾರ್ಮಿಕ ಸಮನ್ವಯಕ್ಕೆ ಉದಾಹರಣೆಯಾಗಿದೆ.

ಕಪ್ಪಗಲ್ ಪ್ರಸ್ತುತ ಒಂದು ಚಿಕ್ಕಹಳ್ಳಿ. ಬಳ್ಳಾರಿಗೆ ಸುಮಾರು ಆರುಮೈಲು ಮತ್ತು ಸಿರಿವಾರಕ್ಕೆ ಅರ್ಧಮೈಲು ದೂರದಲ್ಲಿದೆ. ಸಿರಿವಾರದಲ್ಲಿ ಕೆಲವು ಶಾಸನಗಳಿದ್ದು, ಅವುಗಳಲ್ಲಿಯ ಕಲ್ಯಾಣಿ ಚಾಳುಕ್ಯರ ಕಾಲದ ಶಾಸನವೊಂದರಲ್ಲಿ ಕಪ್ಪಗಲ್‌ನ್ನು ಕಪ್ಪೆಕಲ್ಲು ಎಂದು ಉಲ್ಲೇಖಿಸಲಾಗಿದೆ. ಅಲ್ಲದೆ ಕಪ್ಪೆಕಲ್ಲು ಬಲ್ಲಕುಂದೆ ಮುನ್ನೂರು ವಿಭಾಗದಲ್ಲಿತ್ತೆಂದು ತಿಳಿದುಬರುತ್ತದೆ. ಕ್ರಿ. ಶ. ೧೦೪೪ ರ ಆಹವಮಲ್ಲನ (ಮೊದಲನೇ ಸೋಮೇಶ್ವರ) ಶಾಸನವೊಂದರಲ್ಲಿ[1]. ಕಪ್ಪೆಕಲ್ಲಿನ ಊರೊಡೆಯನಾದ ಪುಲಿಯಣ್ಣನು ಪೆಲ್ಲಪರಸರೊಂದಿಗೆ. ಜ್ಯೇಷ್ಠರಾಶಿಭಟಾರರಿಗೆ ಕಪ್ಪೆಕಲ್ಲನ್ನು. ತ್ರೈಲೋಕ್ಯಮಲ್ಲನನ್ನಿ ನೊಳಂಬಾಧಿರಾಜನು ಪಟ್ಟದೇರಿದಾಗ, ದಾನವಾಗಿ ಕೊಟ್ಟನೆಂದು ತಿಳಿದು ಬರುತ್ತದೆ. ಹನ್ನೊಂದನೇ ಶತಮಾನದ ವೇಳೆಗೆ ಕಪ್ಪೆಕಲ್ಲು ಪ್ರಸಿದ್ಧವಾದ ಹಳ್ಳಿಯಾಗಿದ್ದರೂ, ಆ ಶತಮಾನಕ್ಕೆ ಸೇರಿದ ಅವಶೇಷಗಳೇನು ಇಲ್ಲವೆನ್ನಬಹುದು. ಸದ್ಯ ವಿಜಯನಗರ ಕಾಲದ (೧೪ ರಿಂದ ೧೬ ನೇ ಶತಮಾನದ) ಕೆಲವು ದೇವಾಲಯಗಳು ಮತ್ತು ಶಿಲ್ಪಗಳು ಉಳಿದುಕೊಂಡಿವೆ. ಆ ಕಾಲದ ಎರಡು ದೇವಾಲಯಗಳಿದ್ದು, ಅವುಗಳಲ್ಲಿ ಒಂದು ಶೈವದೇವಾಲಯ, ಇನ್ನೊಂದು ವೈಷ್ಣವ ದೇವಾಲಯ. ವೈಷ್ಣವ ದೇವಾಲಯ ವಿಸ್ತೀರ್ಣದಲ್ಲಿ ಶೈವ ದೇವಾಲಯಕ್ಕಿಂತಲೂ ದೊಡ್ಡದು.

ಈ ವೈಷ್ಣವ ದೇವಾಲಯ ಚಿಕ್ಕದಾಗಿದ್ದರೂ. ಅನೇಕ ವಿಜಯನಗರ ವಾಸ್ತುಶಿಲ್ಪದ ಲಕ್ಷಣಗಳನ್ನು ಹೊಂದಿದೆ. ಬಹುಶಃ ಈ ದೇವಾಲಯ ೧೬ ನೇ ಶತಮಾನದ ಮಧ್ಯಭಾಗದ್ದಿರಬೇಕೆಂದು ತೋರುತ್ತದೆ.

ಈ ದೇವಾಲಯ ಗರ್ಭಗೃಹ. ಅಂತರಾಳ ಮತ್ತು ನವರಂಗಗಳನ್ನೊಳಗೊಂಡಿದೆ. ಚೌಕುಕಲ್ಲಿನಿಂದ ಕಟ್ಟಿದ ಈ ದೇವಾಲಯ ಗರ್ಭಗೃಹ ಮತ್ತು ಅಂತರಾಳಗಳನ್ನು ಸದ್ಯ ಮೇವು ಮತ್ತು ಹೊಟ್ಟನ್ನು ಇರಿಸಲು ಉಪಯೋಗಿಸಲಾಗುತ್ತಿದ್ದು ಅವುಗಳನ್ನು ಅಭ್ಯಸಿಸಲು ತೊಂದರೆದಾಯಕವಾಗಿರುವದು.

ಅಂತರಾಳದ ದ್ವಾರವು ಚೆನ್ನಾಗಿ ಕಟೆದ ಸಮಕಟ್ಟಾದ ದ್ವಾರಪಾಲರ ಮೂರ್ತಿಗಳನ್ನು ದ್ವಾರಶಾಖಿಗಳ ಮೇಲೆ ಹೊಂದಿದೆ. ದ್ವಾರಪಾಲರ ಹೊರತು, ದ್ವಾರಶಾಖಿಗಳು ಹೇಳಿಕೊಳ್ಳುವಂತಹ ಕುಸುರಿನ ಕೆಲಸದ ಶಿಲ್ಪಗಳನ್ನು ಹೊಂದಿಲ್ಲ. ಮುಂಗಳ ಫಲಕದ ಮೇಲೆ ಸಾಮಾನ್ಯವಾಗಿ ಕಂಡುಬರುವ ಗಜಲಕ್ಷ್ಮಿಯ ಮೂರ್ತಿ ಇರದೆ ನಾಲ್ಕು ದಳಗಳುಳ್ಳ ಹೂವನ್ನು ಒಳಗೊಂಡಿದೆ. ಬಲದ್ವಾರಶಾಖಿದ ಮೇಲಿರುವ ದ್ವಾರಪಾಲ ಶಿಲ್ಪ ಸುಮಾರು 3'9" ಎತ್ತರವಿರುವನು. ಇವನು ನಿಂತಿರುವ ಭಂಗಿ ಆ ಕಾಲಕ್ಕೆ ಸಾಮಾನ್ಯವಾಗಿದ್ದ ಭಂಗಿಯಲ್ಲಿದೆ. ಬಲಕಾಲನ್ನು ಗಟ್ಟಿಯಾಗಿ ಊರಿದ್ದಾನೆ. ಎಡದ ಕಾಲನ್ನು

1. South Indian Inscriptions, Vol. IX Part I, No. 98.

ಚೆನ್ನಾಗಿ ಕಟೆದ ಗದೆಯ ಮೇಲೆ ಇರಿಸಿದ್ದಾನೆ. ಇವನು ಎತ್ತರವಾದ ಮಕುಟ, ಕುಂಡಲ, ಹಾರ, ಕಂಕಣ, ಉದರಬಂಧ, ಭುಜದ ಅಲಂಕಾರ ಮಣಿಗಳು ಮತ್ತು ಕಟಿಬಂಧವನ್ನು ಧರಿಸಿದ್ದಾನೆ. ಬಿಗಿಯಾದ ಉಡುಪು ಹಿಮ್ಮಡದ ವರೆಗೂ ಉಟ್ಟಿದ್ದಾನೆ. ಕಟಿಬಂಧಕ್ಕೆ ಕಟ್ಟಿದ ವಸ್ತ್ರಗಳು ಎರಡೂ ಬದಿಯಲ್ಲಿ ಹಾರಾಡುತ್ತಿವೆ. ಇವನು ಚತುರ್ಭುಜನು. ಕೈಯಲ್ಲಿ ಧರಿಸಿರುವ ಆಯುಧಗಳು ವೈಷ್ಣವ ಆಯುಧಗಳು. ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖವನ್ನು, ಕೆಳಗಿನ ಎಡಗೈಯಲ್ಲಿ ಗದೆಯನ್ನು ಹಿಡಿದಿದ್ದು, ಬಲದ ಕೆಳಗೈ ಅಭಯ ಮುದ್ರೆಯಲ್ಲಿದೆ. ಚಕ್ರ ಮತ್ತು ಶಂಖಗಳನ್ನು ಕರ್ತರಿ ಹಸ್ತದಲ್ಲಿ ಹಿಡಿದಿದ್ದಾನೆ.

ಎಡದ್ವಾರ ಶಾಖೆಯ ಮೇಲೆ ಕೆತ್ತಲ್ಪಟ್ಟ ದ್ವಾರಪಾಲನ ಮೂರ್ತಿ ಸುಮಾರು 3′9″ ಎತ್ತರವಿದೆ. ಇವನು ಬಲಪಾರ್ಶ್ವದಲ್ಲಿರುವ ದ್ವಾರಪಾಲನ ಭಂಗಿಯಲ್ಲೇ ನಿಂತಿದ್ದಾನೆ ಎನ್ನಬಹುದು. ಅವನಂತೆಯೇ ಇವನೂ ಚತುರ್ಭುಜನು. ಆದರೆ ಆಯುಧಗಳನ್ನು ಹಿಡಿದ ರೀತಿಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಹಿಡಿದಿದ್ದಾನೆ. ಕೆಳಗಿನ ಎಡದ ಕೈಯಲ್ಲಿ ಗದೆಯು ಇರದೆ, ಕಟಿಹಸ್ತ ಭಂಗಿಯಲ್ಲಿದ್ದು, ಬಲದ ಕೈ ಅಭಯ ಹಸ್ತದಲ್ಲಿದ್ದು ಗದೆಯನ್ನು ಹೊಂದಿದೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದೆ. ಇದು ಹೆಚ್ಚು ಕಡಿಮೆ ಚೌಕೋಣಾಕಾರವಾಗಿದ್ದು ಸುಮಾರು 32′.6″×31′.8″ ವಿಸ್ತೀರ್ಣವಿದೆ. ಮಧ್ಯದಲ್ಲಿ ನಾಲ್ಕು ಅಲಂಕೃತ ಕಂಬಗಳು. ಗೋಡೆಗಳ ಮೇಲೆ ಎಂಟು ಗೋಡೆಗಂಬಗಳು. ಪ್ರತಿ ಗೋಡೆಯ ಮೇಲೆ ಎರಡು ಗೋಡೆಗಂಬಗಳು ಇವೆ. ಅಲ್ಲದೆ ನಾಲ್ಕು ಮೂಲೆಗಳಲ್ಲಿ ಮೂಲೆ ಕಂಬಗಳಿವೆ. ಗೋಡೆಗಂಬಗಳು ವಿಶೇಷವಾದ ಕೆತ್ತನೆಗಳನ್ನು ಹೊಂದಿರದೆ, ಚತುರಾಕಾರವಾಗಿವೆ. ಮಧ್ಯದಲ್ಲಿರುವ ನಾಲ್ಕು ಕಂಬಗಳು ವಿಜಯನಗರ ಶೈಲಿಯ ಕೊನೆಯ ಘಟ್ಟದಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಟ್ಟ ಕಂಬದ ಮಾದರಿಯನ್ನು ಹೋಲುತ್ತವೆ. ಈ ಕಂಬಗಳಲ್ಲಿ ಘನಾಕಾರದ ಮೂರು ಭಾಗಗಳಿದ್ದು ಪ್ರತಿಯೊಂದು ಘನಾಕಾರವೂ ಅಷ್ಟಕೋನಾಕೃತಿಯ ಪಟ್ಟಿಕೆಯಿಂದ ಬೇರ್ಪಟ್ಟಿದ್ದು ವೃತ್ತಪೀಠಿಗೆಗಳನ್ನೂ ಹೊಂದಿವೆ.

ಕಂಬದ ಎರಡು ಬದಿಗಳಲ್ಲಿ ಸುಂದರವಾದ, ಅಲಂಕೃತವಾದ ಕುಂಭಪಂಜರಗಳನ್ನು ಕೆತ್ತಲಾಗಿದೆ. ಇಂತಹ ಕುಂಭ ಪಂಜರಗಳು ವಿಜಯನಗರದ ಹದಿನಾರನೇ ಶತಮಾನದ ದೇವಾಲಯಗಳಲ್ಲಿ ಸಾಮಾನ್ಯ. ಕಂಬದ ಉಳಿದ ಎರಡು ಬದಿಗಳಲ್ಲಿ ಉಬ್ಬು ಚಿತ್ರಗಳನ್ನು ಕೆತ್ತಲಾಗಿದೆ. ಈ ಶಿಲ್ಪಗಳು ವಿವಿಧ ಪ್ರಸಂಗಗಳನ್ನು ಪ್ರತಿಪಾದಿಸುತ್ತವೆ. ಈ ಶಿಲ್ಪಗಳಾವುವೆಂದರೆ :

i) ಕುಳಿತ ಸಿಂಹ. ಇದು ವಿಜಯನಗರ ಶಿಲ್ಪಗಳಲ್ಲಿ ಬಹಳವಾಗಿ ಕಂಡು ಬರುವುದು.

ii) ಹಂಸಗಳು.

iii) ಆಲೀಢಾಸನದಲ್ಲಿರುವ ಅಂಬಿಗನು. ತನ್ನೆರಡು ಕೈಗಳಲ್ಲಿ ಸಂಚಿಯ ಬಟ್ಟುಗಳನ್ನು ಹೊತ್ತಿರುವನು.

iv) ಸುಂದರವಾಗಿ ಕೆತ್ತಿರುವ ಮಯೂರ.

v) ಆಸೀನನಾದ ವಿಷ್ಣು. ಧನುರ್ಧಾರಿಯಾಗಿರುವ ಭಕ್ತನೊಬ್ಬ ಅಂಜಲಿ ಹಸ್ತದಲ್ಲಿ ನಿಂತಿರುವನು. ವಿಷ್ಣುವು ನಾಮಧಾರಿಯಾಗಿದ್ದಾನೆ.

vi) ಸಮಭಂಗದಲ್ಲಿರುವ ವಿಷ್ಣು. ಚತುರ್ಭುಜನಾಗಿದ್ದು ಚಕ್ರ, ಶಂಖ, ಗದಾ ಮತ್ತು ಅಭಯ ಹಸ್ತದಲ್ಲಿ ಪದ್ಮ ಹಿಡಿದಿದ್ದಾನೆ. ಚತುರ್ವಿಂಶತಿ ವಿಷ್ಣುಗಳಲ್ಲಿ ಒಬ್ಬನಾದ ಜನಾರ್ಧನನ ಶಿಲ್ಪವಿದು.

vii) ಆಕಳು ಮತ್ತು ಕರು.

viii) ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವ ನರಸಿಂಹ. ಅಷ್ಟಭುಜವುಳ್ಳವನು. ಕೆಳಗಿನ ಎರಡು ಕೈಗಳು ರಾಕ್ಷಸನ ಹೊಟ್ಟೆಯನ್ನು ಸೀಳುತ್ತಿವೆ. ಇನ್ನೊಂದು ಕೈ ಹಿರಣ್ಯಕಶಿಪುವಿನ ಮೊಣಕಾಲನ್ನು ಗಟ್ಟಿಯಾಗಿ ಹಿಡಿದಿದೆ. ಇನ್ನೊಂದು ಕೈ ಅವನ ತಲೆಯನ್ನು ಒತ್ತಿ ಹಿಡಿದಿದೆ. ಇನ್ನೆರಡು ಕೈಗಳಲ್ಲಿ ಚಕ್ರ ಮತ್ತು ಶಂಖ ಧರಿಸಿದ್ದಾನೆ. ಉಳಿದೆರಡು ಕೈಗಳಲ್ಲಿರುವ ಆಯುಧಗಳು ಸ್ಪಷ್ಟವಿಲ್ಲ. ಹಿರಣ್ಯಕಶಿಪು ಖಡ್ಗ ಮತ್ತು ಢಾಲನ್ನು ಹಿಡಿದಿದ್ದಾನೆ.

ix) ಹಿರಣ್ಯಾಕ್ಷನೊಂದಿಗೆ ಹೋರಾಡುತ್ತಿರುವ ವರಾಹಮೂರ್ತಿ. ಚತುರ್ಭುಜ ವರಾಹನು ಚಕ್ರ, ಶಂಖ ಮತ್ತು ಖಡ್ಗ ಹಿಡಿದಿದ್ದು ಇನ್ನೊಂದು ಕೈ ರಾಕ್ಷಸನ ಕುತ್ತಿಗೆ ಹಿಡಿದಿದೆ(?) ಹಿರಣ್ಯಾಕ್ಷನು ಖಡ್ಗ ಮತ್ತು ಢಾಲನ್ನು ಹಿಡಿದಿದ್ದಾನೆ. ಕರ್ನಾಟಕದ ದೇವಾಲಯಗಳಲ್ಲಿ ವರಾಹನ ಶಿಲ್ಪಗಳು ಸಾಕಷ್ಟಿವೆ. ಆದರೆ ವರಾಹ–ಹಿರಣ್ಯಾಕ್ಷರ ಯುದ್ಧವನ್ನು ಪ್ರತಿಬಿಂಬಿಸುವ ಶಿಲ್ಪಗಳು ಬಹಳ ಕಡಿಮೆ. ಅಂತಹವುಗಳಲ್ಲಿ ಇದೊಂದು.

x) ಕಾಳಿಂಗನ ಮೇಲೆ ನರ್ತಿಸುತ್ತಿರುವ ಕೃಷ್ಣ.

xi) ರಾಮಾನುಜಾಚಾರ್ಯರು.

xii) ತ್ರಿಭಂಗಿಯಲ್ಲಿರುವ ಆಂಜನೇಯ. ಅಂಜಲಿ ಹಸ್ತದಲ್ಲಿದ್ದಾನೆ.

xiii) ಮತ್ಸ್ಯಾವತಾರಿ ವಿಷ್ಣು. ಅರ್ಧ ಮತ್ಸ್ಯ, ಅರ್ಧ ಮನುಷ್ಯಾಕಾರನಾಗಿದ್ದು ಚಕ್ರ, ಶಂಖಗಳನ್ನು ಮೇಲಿನ ಎರಡು ಕೈಗಳಲ್ಲಿ ಹಿಡಿದಿದ್ದಾನೆ, ಕೆಳಗಿನ ಕೈಗಳು ವರದ ಮತ್ತು ಅಭಯ ಹಸ್ತದಲ್ಲಿವೆ.

xiv) ಬೆಣ್ಣೆ ಕದಿಯುತ್ತಿರುವ ಬಾಲಕೃಷ್ಣ.

xv) ಸರ್ಪದೊಂದಿಗೆ ಸರಸವಾಡುತ್ತಿರುವ ಯಕ್ಷ.

xvi) ಅಂಜಲಿ ಹಸ್ತದಲ್ಲಿರುವ ಗರುಡ.

xvii) ಸುಂದರವಾಗಿ ಕಟೆದ ಗಂಡಭೇರುಂಡಪಕ್ಷಿ. ಕಾಲಿನ ಉಗುರುಗಳ ಮಧ್ಯ ಮತ್ತು ಕೊಕ್ಕುಗಳಲ್ಲಿ ಆನೆಗಳನ್ನು ಹಿಡಿದಿದೆ.

xviii) ಮದ್ದಳೆಯವನು.

xix) ಕುಚಬಂಧವನ್ನುಳ್ಳ ಸ್ತ್ರೀ

ಮೆಚ್ಚಿನ ಶಿಲ್ಪಗಳು ವೈಷ್ಣವ ಸಂಪ್ರದಾಯಕ್ಕೆ ಸೇರಿವೆ. ವಿಷ್ಣುವಿನ ದಶಾವತಾರಗಳಲ್ಲಿ ಕೆಲವು, ಮತ್ತು ಕೃಷ್ಣ ಲೀಲೆಯಿಂದ ಆಯ್ದ ಸನ್ನಿವೇಶಗಳಿವೆ. ಅಲ್ಲದೆ, ಶ್ರೀವೈಷ್ಣವ ಆಚಾರ್ಯರಾದ ರಾಮಾನುಜಾಚಾರ್ಯರ ಶಿಲ್ಪವು ಆಕರ್ಷಣೀಯವಾಗಿದೆ. ರಾಮಾನುಜಾಚಾರ್ಯರ ಶಿಲ್ಪಗಳು ವಿಜಯನಗರದ ಅನೇಕ ದೇವಾಲಯಗಳಲ್ಲಿ ಕಂಡುಬರುತ್ತವೆ. ಮೇಲಿನ ಶಿಲ್ಪಗಳು ಮತ್ತು ದ್ವಾರಪಾಲರುಗಳ ಆಧಾರದಿಂದ ಈ ದೇವಾಲಯವು ಶ್ರೀವೈಷ್ಣವರಿಂದ ಕಟ್ಟಲ್ಪಟ್ಟಿತೆಂದು ಹೇಳಬಹುದು. ಶ್ರೀವೈಷ್ಣವ ಪಂಥ ವಿಜಯನಗರ ಕಾಲದಲ್ಲಿ ಮಹತ್ವದ ಪಂಥವಾಗಿತ್ತು. ಸಂಗಮರ ಕಾಲದಲ್ಲಿ ತಿರುಪತಿ, ಮೇಲುಕೋಟೆ ಮುಂತಾದ ಸ್ಥಳಗಳು ಶ್ರೀವೈಷ್ಣವರ ಮುಖ್ಯ ಕೇಂದ್ರಗಳಾಗಿದ್ದವು. ಬುಕ್ಕರಾಯನ ಕ್ರಿ. ಶ. 1368 ರ ಶಾಸನವು ಹದಿನೆಂಟು ನಾಡಿನ ಶ್ರೀವೈಷ್ಣವರನ್ನು ಹೆಸರಿಸುತ್ತದೆ.[2] ಅನೇಕ ಸಲ ಅವರಲ್ಲಿ ಹಲವರು ಅರಸರಿಂದ ಅನೇಕ ಗೌರವಗಳನ್ನು ಹೊಂದಿದ್ದರು. ಉದಾಹರಣೆಗೆ, ವೆಂಕಟಾತಾತಾರ್ಯರು ಧಾರ್ಮಿಕ ಅಧಿಕಾರವನ್ನು ಕ್ರಿ. ಶ. 1523 ರಲ್ಲಿ ಕೃಷ್ಣದೇವರಾಯನಿಂದ ಪಡೆದರು. ಅವರು ರಾಮಾನುಜರ ಅನುಯಾಯಿಗಳ ನಡತೆಯ ಬಗ್ಗೆ ವಿಚಾರಿಸುವ ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಅಧಿಕಾರವನ್ನು ಹೊಂದಿದ್ದರು.

ನವರಂಗದ ಒಳಗೋಡೆಯ ಮೇಲೆ ಗಣೇಶನ ಮೂರ್ತಿಯೊಂದಿದೆ. ಚತುರ್ಭುಜಗಳಲ್ಲಿ ಗಣೇಶನು, ಪರಶು, ಪಾಶ, ಮೋದಕ ಮತ್ತು ದಂತವನ್ನು ಹಿಡಿದಿದ್ದಾನೆ. ಅಲ್ಲದೆ ಸರ್ಪವೊಂದನ್ನು ಹೊಟ್ಟೆಗೆ ಬಿಗಿದಿದ್ದಾನೆ.

ನವರಂಗದಲ್ಲಿರುವ ಗೋಡೆಗಂಬಗಳು ಮತ್ತು ಕಂಬಗಳು ನವರಂಗವನ್ನು ಮಧ್ಯಭಾಗ ಮತ್ತು ಇಕ್ಕೆಲಗಳಾಗಿ ವಿಭಾಗಿಸುತ್ತವೆ. ಪ್ರತಿ ವಿಭಾಗದಲ್ಲಿ ಮೂರು ಮೇಲ್ಗಣ್ಣುಗಳಿದ್ದು (Ceiling)–ಒಟ್ಟು ಒಂಭತ್ತು– ಇಕ್ಕೆಲಗಳಲ್ಲಿರುವವು ಯಾವುದೇ ಶಿಲ್ಪವನ್ನೊಳಗೊಂಡಿರದೆ ಚಪ್ಪಟೆಯಾಗಿವೆ. ಮಧ್ಯಭಾಗದ ಮುಂದಿನ ಮೇಲ್ಗಣ್ಣು ಬಿದ್ದುಹೋಗಿದೆ. ಮಧ್ಯದಲ್ಲಿರುವ ಮೇಲ್ಗಣ್ಣು ಅಷ್ಟಕೋನಾಕೃತಿಯಲ್ಲಿದೆ. ಅಂತರಾಳದ ಮುಂದಿರುವ ಮೇಲ್ಗಣ್ಣು ಚಪ್ಪಟೆಯಾಗಿದೆ.

ನವರಂಗದ ಬಲಭಾಗದ ಮುಂದಿನ ಗೋಡೆ ಬಿದ್ದಿದೆ.

ನವರಂಗದ ದ್ವಾರವು ಅಂತರಾಳದ ದ್ವಾರದ ಹಾಗೆ ದ್ವಾರಪಾಲ ಮೂರ್ತಿಗಳನ್ನೊಳಗೊಂಡಿವೆ. ಬಲಭಾಗದಲ್ಲಿರುವ ದ್ವಾರಪಾಲ ಕತ್ತರಿ ಭಂಗಿಯಲ್ಲಿ ನಿಂತಿರುವನು. ಎಡಗಾಲನ್ನು ಸ್ಥಿರವಾಗಿ ಊರಿದ್ದು, ಬಲಗಾಲನ್ನು ತನ್ನ ಎಡಭಾಗಕ್ಕಿರುವ ಗದೆಯ ಮೇಲೆ ಊರಿರುವನು. ತನ್ನ ನಾಲ್ಕು ಕೈಗಳ ಪೈಕಿ ಮೂರರಲ್ಲಿ ಚಕ್ರ, ಶಂಖ ಮತ್ತು ಗದೆಯನ್ನು ಹಿಡಿದಿದ್ದು ಮತ್ತೊಂದು ಕೈ ಕಟಿಹಸ್ತದಲ್ಲಿದೆ. ಎಡಭಾಗದ ದ್ವಾರಪಾಲನು ಕೂಡ ಕತ್ತರಿ ಭಂಗಿಯಲ್ಲಿದ್ದು ಮೂರು ಕೈಗಳಲ್ಲಿ ಚಕ್ರ, ಶಂಖ ಮತ್ತು ಗದೆಗಳನ್ನು

2. Epigraphia Carnatica. Vol. II, No. 136,

ಹಿಡಿದಿದ್ದು ಇನ್ನೊಂದು ಕೈಯನ್ನು ತೊಡೆಯ ಮೇಲಿರಿಸಿದ್ದಾನೆ. ಮುಂಗಣ ಫಲಕದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ದೇವಾಲಯದ ಅಧಿಷ್ಠಾನ ಮಣ್ಣಿನಲ್ಲಿ ಹೂತುಹೋಗಿದೆ. ಹೊರಗೋಡೆಗಳು ಯಾವುದೇ ಹೇಳಿಕೊಳ್ಳುವಂತಹ ಶಿಲ್ಪಗಳನ್ನು ಒಳಗೊಂಡಿಲ್ಲ. ಕೇವಲ ಅಲ್ಲೊಂದು ಇಲ್ಲೊಂದು ಮೀನಿನ ಶಿಲ್ಪಗಳಿವೆ. ಇತ್ತೀಚೆಗೆ ನವರಂಗದಲ್ಲಿ ಕೆಲವು ಬದಲಾವಣೆಗಳಾದುದು ಕಂಡುಬರುತ್ತದೆ.

★ ಎಸ್. ರಾಜಶೇಖರ

ಕನ್ನಡ ಉಪಪದಗಳು (Prefixes)

ಕನ್ನಡದಲ್ಲಿ ಉಪಪದಗಳಿವೆಯೆ ? ಎಂಬುದು ಚೆನ್ನಾಗಿ ಅಭ್ಯಸಿಸಬೇಕಾದ ಕನ್ನಡ ಭಾಷೆಯ ವ್ಯಾಕರಣದಲ್ಲಿಯ ಒಂದು ಸಮಸ್ಯೆ. ಸಂಸ್ಕೃತದ ಜಾಡು ಹಿಡಿದು ನಡೆದ ಕನ್ನಡ ಸಂಸ್ಕೃತ ವ್ಯಾಕರಣದ ಉಳಿದೆಲ್ಲವುಗಳನ್ನೂ ಅಳವಡಿಸಿಕೊಂಡು ಉಪಪದ (ಉಪಸರ್ಗ)ಗಳನ್ನಷ್ಟೇ ಹೊರಗಿಟ್ಟಿದೆ. ಇಲ್ಲವೆ ಅಳವಡಿಸಿಕೊಳ್ಳದೆ ಮಡಿವಂತಿಕೆ ತೋರಿದೆ. ಶಬ್ದಮಣಿದರ್ಪಣದ ಕೇಶವನು ತನ್ನ ಗ್ರಂಥದಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯಗಳೆಂದು ಎಂಟು ಸಂಧಿಗಳನ್ನು ರಚಿಸಿದ್ದಾನೆ. ಆದರೆ ಹೆಚ್ಚಿ ಹೆಚ್ಚಿಗೆ. ಸಂಸ್ಕೃತದಲ್ಲಿ ಹೇರಳವಾಗಿ ದೊರಕುವ ಉಪಪದಗಳ ಬಗ್ಗೆ ಯಾವ ಸೊಲ್ಲೂ ಅವನ ಶಬ್ದಮಣಿದರ್ಪಣದಲ್ಲಿಲ್ಲ. ಇಂದಿನವರೆಗೂ ಯಾವ ವೈಯಾಕರಣಿಯೂ ಕನ್ನಡ ಉಪಪದಗಳ ಬಗ್ಗೆ ವಿಚಾರಮಂಥನ ನಡೆಸಿದಂತೆ ತೋರುವದಿಲ್ಲ. ಸಂಸ್ಕೃತದ ಪ್ರಭಾವ ಈ ವಿಷಯದಲ್ಲಿ ತೀರ ತುಸು ಎನ್ನಬಹುದು. ಆದರೂ ಉಪಪದಗಳ ಬಳಕೆ ಕನ್ನಡದಲ್ಲಿ ಇಲ್ಲ-ಇದ್ದಿಲ್ಲ ಎಂದು ಹೇಳಲು ಬಾರದು. ಕೆಲವರು ಸಂಸ್ಕೃತ ಮಾದರಿಯ ಉಪಪದಗಳ ಬಳಕೆ–ಪ್ರಯೋಗ ನಡೆಸಿದ್ದು ಕಂಡು ಬರುತ್ತದೆ. ಪ್ರಿ. ಧಾರವಾಡಕರರು ತಮ್ಮ ಭಾಷಾ ಶಾಸ್ತ್ರದಲ್ಲಿ ಇಂತಹ ಉದಾಹರಣೆಗಳನ್ನು ಎತ್ತಿತೋರಿಸಿ, ಉಪಪದಗಳ ಬಳಕೆ ಕನ್ನಡದಲ್ಲಿ ಕೇವಲ ಪ್ರಯೋಗಾವಸ್ಥೆಯಲ್ಲಿಯೇ ಕಮರಿದ ಬಗ್ಗೆ ವಿಷಾದಿಸಿ, ಇನ್ನಾದರೂ ಅವುಗಳ ಬಳಕೆ ಹೆಚ್ಚಲೆಂದು ಸೂಚಿಸಿದ್ದಾರೆ. ಅವರು ಕೊಟ್ಟ ಉದಾಹರಣೆ— "ಅಲ್ಲಳಿಗಾಳಗ" ಇದರ ಬಗ್ಗೆ ಅವರು ಸುಂದರ ವಿವೇಚನೆ ನೀಡಿದ್ದಾರೆ. ಇದರಲ್ಲಿ ಮುಖ್ಯವಾಗಿ ಎರಡು ಉಪಪದಗಳಿವೆ. 'ಅಲ್ಲ' ಮತ್ತು 'ಅಳಿ' 'ಅಳಿಗಾಳಗ'–ಸಾಯುವ ಕಾಳಗ–ಎಂದರೆ ನಿಜವಾದ ಕಾಳಗ. 'ಅಲ್ಲ–ಅಳಿಗಾಳಗ' ಕಾಳಗದಲ್ಲಿ ಸಾಯುವ ಪರಿಸ್ಥಿತಿ ಇಲ್ಲ. ಎಂದರೆ ಅದು ನಿಜವಾದ ಕಾಳಗವಲ್ಲ-ಹುಸಿ ಕಾಳಗ–ಅದೊಂದು ಕಾಳಗದ ನಟನೆ ಮಾತ್ರ. ಅದನ್ನೇ ಇನ್ನೊಂದು ರೀತಿಯಲ್ಲಿ 'ಸೋಗುಗಾಳಗ' ಎಂದೂ ಕರೆಯಬಹುದು. ಹೀಗೆ 'ಅಲ್ಲ, ಅಳಿ, ಹುಸಿ, ಸೋಗು' ಈ ಪದಗಳು, ಉಪಪದ ಸ್ಥಾನಕ್ಕೆ ನಿಂತು, ಮುಖ್ಯ ಪದಕ್ಕೆ ಅರ್ಥವ್ಯಾಪ್ತಿ, ಅರ್ಥವಿರೋಧ ಕೊಡುತ್ತವೆ. ಹೀಗೆ ಉಪಪದಗಳ ಸೃಷ್ಟಿ ಕನ್ನಡದಲ್ಲಿ ಏಕಾಗಬಾರದು ?

ಸಂಸ್ಕೃತದಲ್ಲಿ ಉಪಸರ್ಗಗಳ ಸಂಖ್ಯೆ ಸರಾಸರಿ ೨೨ ಎಂದು ಕಂಡುಬರುತ್ತದೆ. ಈ ಎಲ್ಲ ಉಪಸರ್ಗಗಳು ಒಂದೇ ಅರ್ಥವನ್ನು ಕೊಡುವದಿಲ್ಲ. ಕೆಲವು ವಿರುದ್ಧಾರ್ಥಕ ಕೊಡುತ್ತಿದ್ದರೆ, ಕೆಲವು ನಿಷೇಧಾರ್ಥಕ ಸೂಚಿಸುತ್ತವೆ. ಕೆಲವು ಮುಖ್ಯಪದಕ್ಕೆ ಅರ್ಥವ್ಯಾಪ್ತಿ ಕೊಡುತ್ತಿದ್ದರೆ, ಕೆಲವು ಅರ್ಥಪರಿಮಾಣವನ್ನು ತೋರಿಸುತ್ತವೆ. ಹೀಗೆ ಸಂಸ್ಕೃತ ಉಪಸರ್ಗಗಳ ತಾರತಮ್ಯವನ್ನು ಅವುಗಳ ಪ್ರಯೋಗದ ಮೇಲಿಂದ ಅರಿಯು

ಬಹುದು. "ನಿರ್" ಉಪಪದ "ಇಲ್ಲ" ಎಂಬ ಅಸ್ತಿತ್ವ ನಿಷೇಧ ಸೂಚಕವಾಗಿದೆ. ಜಲ-ನಿರ್ಜಲ, ದಯ-ನಿರ್ದಯ, ಮಲ-ನಿರ್ಮಲ, ಬಲ-ನಿರ್ಬಲ. "ಸಮ್" ಎಂಬುದು ಅರ್ಥಪುಷ್ಟಿ ಕೊಡುವದು. ಸಮ್-ಗಮ, ಸಮ್‌ಪೂರ್ಣ. ಸಮ್-ಮಿಲನ. ಸಮ್-ವಾದ. ಇಂತಹ ಉದಾಹರಣೆಗಳಲ್ಲಿ "ಸಮ್" ಜೊತೆ ಸೂಚಕವಾಗಿ ಬರುವದೂ ಕಂಡುಬರುತ್ತದೆ. "ಪ್ರ" ಅರ್ಥಪುಷ್ಟಿಯನ್ನಿತ್ತರೂ "ಸಮ್" ಮತ್ತು "ಪ್ರ" ಈ ಎರಡರ ಪ್ರಯೋಗಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬರುತ್ತವೆ. ಬಲ-ಪ್ರಬಲ, ಯೋಗ-ಪ್ರಯೋಗ, ಯುಕ್ತ-ಪ್ರಯುಕ್ತ, ನೀತ – ಪ್ರಣೀತ. ಇಂತಹ ಉದಾಹರಣೆಗಳಲ್ಲಿ "ಪ್ರ". "ಸಮ್"ದಂತೆ ಜೊತೆ ಸೂಚಕವಾಗಿಲ್ಲ. ಹೀಗೆ ಉಪ-ಸರ್ಗಗಳಲ್ಲಿಯು ಈ ಭೇದಗಳು ಸಂದರ್ಭಾನುಸಾರ ಒಡಮೂಡುತ್ತವೆ. ಒಂದು ಮುಖ್ಯ ಪದಕ್ಕೆ, ಬೇರೆ ಬೇರೆ ಉಪಪದಗಳನ್ನು ಸೇರಿಸಿದರೆ. ಬೇರೆ ಬೇರೆ ಅರ್ಥ ಕೊಡುವುದನ್ನು ನೋಡಬಹುದು. ಇದಕ್ಕೆ "ಹೃ" ಉತ್ತಮ ದೃಷ್ಟಾಂತ. ಧಾತು ಹೃ-ಒಯ್ಯು, ನಡೆಸು, ಕದಿಕೊಲ್ಲು ಮುಂತಾದ ಅರ್ಥ ಕೊಡುತ್ತದೆ. ಇದಕ್ಕೆ ಉಪಸರ್ಗಗಳು ಸೇರಿದಾಗ ಆಗುವ ಅರ್ಥ ಮಾರ್ಪಾಡುಗಳನ್ನು ಕೆಳಗಿನಂತೆ ಕಾಣಬಹುದು.

ಅನುಹೃ– ತೋರಿಸು (ಒಬ್ಬರಂ ಮಾಡಿದಂತೆ) ಮಾಡು.

ಅಪಹೃ-ಕದಿ, ಸೆಳೆ, ಒಯ್ಯು, ಸುಲಿ.

ಅಭಿ+ಅವ–ಹೃ–ತಿನ್ನು, ಉಣ್ಣು.

ಆ-ಹೃ-ತಾ, ತರು, ಸಾಗಿಸು. ಗೈ, ನೆರವೇರಿಸು,ಒಂದು ಪಡೆ, ತಳೆ, ರೂಪುಗೊಳ್ಳು, ಸೆಳೆ, ಹಿಂತೆಗೆ.

ಉದ್–ಹೃ–ಹೊರದೆಗೆ, ಹಿಂಡು, ಮೇಲೆತ್ತು, ಎತ್ತು, ಈ ಪಡು. ಕೊಡು, ಕೀಳು, ಅಳಿಸು, ಕಳೆ.

ಉದಾ–ಹೃ– ಹೇಳು, ನುಡಿ, ಉಲಿ, ತೋರು, ಬಣ್ಣಿಸು, ಉದಾಹರಿಸು.

ಉಪ–ಹೃ– ಈ ಕೊಡು. ಉಪಾ–ಹೃ–ತಾ–ತರು.

ಪರಿ–ಹೃ. ಬಿಡು, ತಪ್ಪಿಸು, ತೆಗೆ, ಅಳಿಸು.

ಪ್ರಹೃ- ಹೊಡೆ, ಒಗೆ, ಮುತ್ತು, ಎರಿಬರು, ಗಾಯಗೊಳಿಸು. ಇರಿ. ತಿವಿ, ಕಸಿ, ಸೆಳೆ, ಒದೆ.

ವಿ.ಹೃ–ಕದಿ, ಸೆಳೆ, ಕಾಲಕಳೆ, ಕೀಳು. ಹಾಳಿಸು, ಕೆಡಿಸು. ಸಲಿ.

ವ್ಯವ-ಹೃ-ವ್ಯವಹರಿಸು, ನಡೆ.

ವ್ಯಾ–ಹೃ-ನುಡಿ, ಹೇಳು, ಮಾತಾಡು.

ಸಮ್–ಹೃ–ಒಕ್ಕು, ಒಟ್ಟು. ಒಟ್ಟುಗೂಡಿಸು, ತೆಗೆದುಕೊಳ್ಳು, ಕಟ್ಟು, ಒತ್ತು, ಬಿಗಿ, ಕೆಡಿಸು, ಕೊಲ್ಲು. ಅಳಿಸು, ಮುದುಕು, ಕುಗ್ಗಿಸು.

ಸಮಾ–ಹೃ–ತಾ, ತರು. ಸಾಗಿಸು, ಒಯ್ಯು. ಮುಟ್ಟಿಸು, ಕೊನೆಗೊಳಿಸು. ಎಳೆ, ಸೆಳೆ, ಹಾಳಿಸು, ಒಟ್ಟುಗೂಡಿಸು, ಒಕ್ಕು.

ಇವೆಲ್ಲ ಧಾತುಗಳಿಗೆ ಹತ್ತುವ ಉಪಪದಗಳು. ಇದೇ ಧಾತು ಮತ್ತು ಉಪಪದಗಳಿಂದ ನಾಮಪದ ಮಾಡಿಕೊಂಡರೆ. ವಿಹಾರ. ಆಹಾರ. ಸಂಹಾರ. ಸಮಾಹಾರ. ವ್ಯವಹಾರ, ವ್ಯಾಹೃತಿ,ಉದಾಹರಣ.ಅಪಹರಣ.ಉದ್ಧೃತಿ,ಉದ್ಧಾರ, ಪರಿಹಾರ.ಪ್ರಹಾರ,ಅಪಹಾರ, ಹೀಗೆ ಎಷ್ಟೋ ನುಡಿಗಳು ಸಂಸ್ಕೃತದಲ್ಲಿ ರೂಪುಗೊಂಡಿವೆ. ಇವು ಒಂದಕ್ಕೊಂದು ವಿರೋಧಿ ಗುಣಗಳನ್ನು ಪಡೆದಿರುವುದೂ ಉಂಟು. ಇದರಂತೆ ಕನ್ನಡದಲ್ಲಿಯೂ ಉಪಪದಗಳ ಪ್ರಯೋಗ. ಅವುಗಳ ಅರ್ಥಾಭಿವ್ಯಕ್ತಿ, ಇವುಗಳ ಕಡೆಗೆ ವಿಶೇಷ ಗಮನವಿತ್ತಲ್ಲಿ ಭಾಷಾ ಸಂಪತ್ತಿ ಇನ್ನೂ ಹೆಚ್ಚುತ್ತದೆ. ಭಾಷೆ ಬಲಗೊಂಡು ಮುಂಬರಿದ ಭಾಷೆಗಳ ಹೆಗಲಿಗೆ ಹೆಗಲು ಹಚ್ಚಿ ಮುನ್ನಡೆಯಲು ನೆರವಾಗುತ್ತದೆ.

ವಿರುದ್ಧಾರ್ಥಕ ಉಪಪದಗಳು ಸಂಸ್ಕೃತದಲ್ಲಿ ಸಾಕಷ್ಟಿರುತ್ತವೆ. ಸತ್-ಜನ, ದುರ್-ಜನ, ಸುಗುಣ-ದುರ್ಗುಣ. ನಿರ್ಗುಣ, ಹಾಸ್ಯ-ಅಪಹಾಸ್ಯ, ವಿಹಾಸ್ಯ-ಕೀಳು ಅರ್ಥದಲ್ಲಿ ಬರುತ್ತವೆ. ಸಜೀವ-ನಿರ್ಜೀವ. ಭಾವ-ಅಭಾವ-ನಿರ್ಭಾವ. ವಿಭಾಜ್ಯ-ಅವಿಭಾಜ್ಯ. ಭಾಗ್ಯ-ಅಭಾಗ್ಯ-ನಿರ್ಭಾಗ್ಯ. ಮಂಗಲ-ಅಮಂಗಲ-ಆಶಾ-ನಿರ್-ಆಶಾ, ಇಚ್ಛಾ-ನಿರ್-ಇಚ್ಛಾ. 'ನಿರ್' ಒಮ್ಮೊಮ್ಮೆ ಅರ್ಥಪುಷ್ಟಿ ಕೊಡುತ್ತದೆ. ನಿರ್-ದೇಶ, ನಿರ್-ಮಾಣ. ನಿರ್-ಮಾತ್ಯ, ನಿರ್-ಧಾರ.

ಯುರೋಪಿಯನ್ ಭಾಷೆಗಳಲ್ಲಿಯೂ ಈ ತೆರನಾದ ಉಪಪದಗಳ ಪ್ರಾಚುರ್ಯ ಇರುವುದು ಕಂಡುಬರುತ್ತದೆ. ನನಗೆ ಗೊತ್ತಿದ್ದ ಮಟ್ಟಿಗೆ ಇಂಗ್ಲೀಷದಲ್ಲಿ ಉಪಪದಗಳು (Prefixes) ಹೇರಳವಾಗಿವೆ. ವಿರುದ್ಧಾರ್ಥಕಗಳು, ಅಸಾಧ್ಯಗಳು ಹೆಚ್ಚಾಗಿ ಕಂಡು ಬರುತ್ತವೆ. In-un-im-Omni, re, pre, retro, en, em, pre, post, for ಮುಂತಾದ ಉಪಪದಗಳನ್ನು ನೋಡಬಹುದು. ಇವುಗಳಲ್ಲಿ in, un, im, ಇವು, ನಿಷೇಧ. ವಿರೋಧ. ಅಸಾಧ್ಯಗಳನ್ನು ಸೂಚಿಸುತ್ತವೆ. en-em ಇವು ಅರ್ಥಪುಷ್ಟಿ ಕೊಡುತ್ತವೆ. Re- ಮತ್ತೆ. ತಿರುಗಿ ಎಂಬರ್ಥ. Retro ಎಂಬುದು ಹಿನ್ನೋಟ ಸೂಚಿಸುತ್ತದೆ. ಆದರೆ ಸಂಸ್ಕೃತ ಉಪಪದಗಳ ವೈವಿಧ್ಯ ಸೊಗಸು ಯುರೋಪಿಯನ್ ಭಾಷೆಗಳಲ್ಲಿ ಕಡಿಮೆಯಿರುವುದು ತೋರುತ್ತದೆ. ಹೀಗೆ ಇಂಡೋ-ಯುರೋಪಿಯನ್ ಭಾಷೆಗಳಲ್ಲಿಯು ಉಪಪದಗಳು, ಭಾವ, ಅಭಿವ್ಯಕ್ತಿ, ವೈವಿಧ್ಯ, ಸೊಗಸು ಅರ್ಥಪುಷ್ಟಿ ಕೂಡಿ, ಆಯಾ ಭಾಷೆಗಳಲ್ಲಿ ಬಹು ಪಾತ್ರವನ್ನಾಡುತ್ತ ಭಾಷೆಯ ಸಂಪತ್ತು ಉಳಿಸಿ-ಬೆಳೆಸಿ, ಬೆಳಗುತ್ತಲಿವೆ. ಕನ್ನಡದಲ್ಲಿಯೂ ಈ ತೆರನಾಗಿ ಉಪಪದಸಂಪತ್ತು ಇರಬಾರದೇಕೆ?

ದ್ರಾವಿಡ ಭಾಷಾ ಗುಂಪಿನಲ್ಲಿಯೇ ಉಪಪದ ಸಂಪತ್ತು ಕಡಿಮೆ. ಮತ್ತು ಅದರ ಬಳಕೆಯೂ ಕಡಿಮೆ ಎಂದು ತೋರುತ್ತದೆ. ಎಲ್ಲ ದ್ರಾವಿಡ ಭಾಷೆಗಳ ತಾಯಿ ತಮಿಳಿನಲ್ಲಿಯೇ ಇದರ ಪ್ರಭಾವ ಕಡಿಮೆ ಎಂಬುದು ಕಂಡು ಬರುತ್ತದೆ. ಅದನ್ನು ಬೆಂಬಲಿಸಿ, ಅದರಿಂದ ಬೇರೆಯಾದ ಉಳಿದ ದ್ರಾವಿಡ ಭಾಷೆಗಳೂ ಉಪಪದ ಸಂಪತ್ತಿಯ ಕಡೆಗೆ ಲಕ್ಷ್ಯಕೊಟ್ಟಿಲ್ಲ. ಸಂಸ್ಕೃತ ಪ್ರಭಾವಿತ, ತೆಲಗು, ಮಲೆಯಾಳ ಮತ್ತು ಕನ್ನಡಗಳೂ ಈ ಉಪಪದ ಮಹತ್ವವನ್ನು ಅರಿತಿಲ್ಲ. ಸಂಸ್ಕೃತ ಭಾಷೆಯ ವ್ಯಾಕರಣಕ್ಕೆ ಸಾರು

ಹೋದ ಈ ನುಡಿಗಳು ತದ್ಧಿತ ಕೃದಂತಗಳ ಕಡೆಗೆ ವಿಶೇಷ ಲಕ್ಷ್ಯ ಹರಿಸಿವೆ. ಕನ್ನಡದಲ್ಲಿ ಯಂತೂ ಕೃದಂತ ತದ್ಧಿತಗಳಿಂದ ಬೇರೆಬೇರೆ ಶಬ್ದ ಸೃಷ್ಟಿ ಹೇರಳವಾಗಿ ಆದದ್ದು ವ್ಯಾಕರಣದಿಂದ ತಿಳಿಯಬಹುದು. ಕೇಶಿರಾಜನು ಈ ಭಾಗಗಳಿಗೆ ವಿಶೇಷ ಮಹತ್ವ ಕೊಟ್ಟಿರುವನು. ತದ್ಧಿತ ಕೃದಂತಗಳಂತೆಯೇ ಉಪಪದಗಳು ಕನ್ನಡ ನುಡಿಗಡಣಕ್ಕೆ ಅತ್ಯವಶ್ಯ. ಇವುಗಳನ್ನು ತದ್ಧಿತ ಕೃದಂತಗಳಂತೆಯೇ ಕೆಲವೊಂದು ಪ್ರತ್ಯಯಗಳಿಂದ ಮಾಡಿಕೊಳ್ಳಬಹುದು.

ಸಂಸ್ಕೃತ ಉಪಸರ್ಗ, ತದ್ಧಿತ, ಕೃದಂತಗಳಂತೆಯೆ. ಕೇಶಿರಾಜನು ಕನ್ನಡ ತದ್ಧಿತ ಕೃದಂತ ಪ್ರತ್ಯಯಗಳೂ ವಿಶೇಷ ಅರ್ಥಕೊಡುತ್ತವೆ ಮತ್ತು ಅವುಗಳ ಬಳಕೆ ಯಾವ ತೆರನಾಗಿರುತ್ತದೆಂಬುದನ್ನು ವಿಂಗಡಿಸಿ, ಸಂಶೋಧನಾತ್ಮಕ ರೀತಿಯಲ್ಲಿ ವಿಶದವಾಗಿ ಬರೆದಿರುವನು. ಶಬ್ದಮಣಿದರ್ಪಣದ ತದ್ಧಿತ ಪ್ರಕರಣದಲ್ಲಿಯ ಮೊದಲ ಸೂತ್ರ,

ಪರಿ ನಿರ್ಮಿಪ ಮಾಜಾಡುವ
ದೊರೆವಡೆದ ನಿಯೋಗದನೃತದಜೀತಗುಣದಾ
ಚರಣವ ಶಿಲ್ಪದ ಮೂಲದ
ನರನಂ ಪೇಳ್ವಲ್ಲಿ ಮಾಟ್ಕಿಗ ಪ್ರತ್ಯಯಮಂ.

ಇಲ್ಲಿ 'ಇಗ' ಪ್ರತ್ಯಯವನ್ನು ಎಲ್ಲೆಲ್ಲಿ ಹೇಗೆ ಹೇಗೆ ಬಳಸಬೇಕೆಂಬುದನ್ನು ವಿವರಿಸಿರುವನು.

ಮಾಡುವವ — ಕಬ್ಬಿಗ, ಸರವಂದಿಗ, ಬಿಂಗರಿಗ, ತೋಟಿಗ
ಮಾರುವವ — ಗಂಧಿಗ, ದೂಸಿಗ, ತಂಬುಲಿಗ
ನಿಯೋಗ — ಅಡಪಿಗ, ಚಾಮರಿಗ
ಅನೃತ — ಅಟಮಟಿಗ, ಮಾಳಿಗ, ಪುಸಿಗ
ಅಜೀತ — ಜೋಯಿಸಿಗ, ಲೆಕ್ಕಿಗ, ಪೊಲಬಿಗ
ಗುಣ — ಸಾಲಿಗ, ಹಂಗಿಗ
ಆಚರಣ — ದೇಗುಲಿಗ, ಅಕ್ಕರಿಗ, ಭಾಂಡಸಿಗ
ಶಿಲ್ಪ — ಚಿತ್ರಿಗ
ಮೂಲ — ದೂಳಿಗ

ಹೀಗೆ 'ಇಗ' ಪ್ರತ್ಯಯದಿಂದ ಎಷ್ಟು ತರದ ಶಬ್ದ ಸೃಷ್ಟಿಯಾಗುತ್ತದೆಂಬುದನ್ನು ಕೇಶಿರಾಜ ಅವರ ಅರ್ಥಭೇದಗಳೊಡನೆ ತೋರಿಸಿರುವನು. ತದ್ಧಿತ ಪ್ರಕರಣದಲ್ಲಿಯ ಎಲ್ಲ ತದ್ಧಿತ ಪ್ರತ್ಯಯಗಳನ್ನು ಅಭ್ಯಸಿಸಿದರೆ. ಕೇಶಿರಾಜನಲ್ಲಿ ಶಾಸ್ತ್ರದೃಷ್ಟಿ. ಸೌಂದರ್ಯ ದೃಷ್ಟಿ. ಸಂಶೋಧನ ದೃಷ್ಟಿಗಳ ಸಮ್ಮಿಲನ ಕಂಡು ಬರುತ್ತದೆ. ಇದೇ ತ್ರಿಪಥದೃಷ್ಟಿ. ಉಪಪದಗಳ ಕಡೆಗೆ ಹೊರಳಿದ್ದರೆ ಕನ್ನಡ ಭಾಷಾ ಸಂಪತ್ತು ತುಂಬಿ ತುಳುಕ ಬಹುದಿತ್ತು !

ಕನ್ನಡದಲ್ಲಿ ಉಪಪದಗಳಿವೆಯೆಂದು ಅವರ ಅಭ್ಯಾಸದಿಂದ ತಿಳಿದು ಬರುತ್ತದೆ. ಸಂಸ್ಕೃತದಂತೆ ಪ್ರತ್ಯೇಕ ವೈವಿಧ್ಯಯುತ ಉಪಪದಗಳು ಇರಲಿಕ್ಕಿಲ್ಲ. ಆದರೆ ಇದ್ದವುಗಳನ್ನಾದರೂ ಶೋಧಿಸಿ. ಹೆಕ್ಕಿ ತೆಗೆದು ಬಯಲಿಗಿಡಬೇಕು. ಹಿಂದೆ-ಮುಂದೆ ಇವುಗಳ ಹಳಗನ್ನಡ ರೂಪ ಹಿಂತು-ಮುಂತು ಇವು ಉಪಪದಗಳಂತೆಯೇ ಇರುತ್ತವೆ. ಹಿಂದಲೆ, ಮುಂದಲೆ. ಹಿನ್ನಡಿ. ಮುನ್ನಡಿ ಮುಂತಾಗಿ ರೂಢಿಯಲ್ಲಿರುವುದನ್ನು ನೋಡುತ್ತೇವೆ. ಇವುಗಳಲ್ಲಿಯ ಹಿನ್-ಮುನ್ ರೂಪಗಳನ್ನು ಉಪಪದಗಳೆಂದು ಬಳಸಲು ಯಾವ ತೊಂದರೆಯೂ ಇಲ್ಲ. ಇದರಂತೆ ಜೆನ್ನುಡಿ, ಕೆನ್ನಾಲಿಗೆ ಇವುಗಳ ಜೆನ್-ಕೆನ್ ಗಳನ್ನು ಉಪಪದಗಳೆಂದು ತಿಳಿದು ರೂಢಿಸಿಕೊಳ್ಳಬೇಕು. ತುಂಬುಹೊನಲು ಎಂಬುದನ್ನು ತುಮ್ಹೊನಲು, ತುಂಬೊನಲು ಎಂದು ಬರೆಯಬಹುದು. ತುಂಬು ಇದರ ರೂಪ 'ತುಮ್' ಉಪಪದ. ಇದರ ವಿರುದ್ಧಾರ್ಥಕ 'ಬರಿದು' ಇದನ್ನು ಬರಿದು ಹೊನಲು ಎಂದು ಇಷ್ಟುದ್ದ ಬರೆಯದೆ, ಬರಿಹೊನಲು ಇಲ್ಲವೆ ಬರ್ಹೊನಲು ಬರೆಯಬೇಕು. ಬೊಬ್ಬಾಟದಂತೆ ಚಿಪ್ಪುಗಣ್ಣು ಎಂಬ ಶಬ್ದ ಹಿಂದಿನ 'ಚಿಪ್ಪು' ಪೂರ್ಣ ಬರೆಯದೆ 'ಚಿ' ಅಷ್ಟನ್ನೇ ತೆಗೆದುಕೊಂಡು 'ಚಿಗ್ಗಣ್ಣು' ಎಂದು ರೂಢಿಸಿಕೊಳ್ಳಬೇಕು. ಇದರ ವಿರುದ್ಧಾರ್ಥಕ ಬೊಗಸೆಗಣ್ಣು ಎಂಬುದನ್ನು 'ಬೊಗ್ಗಣ್ಣು' ಎಂದು ಮಾಡಿಕೊಳ್ಳಬಹುದು. ಬರ್ಹೊನಲು. ಚಿಗ್ಗಣ್ಣು. ಬೊಗ್ಗಣ್ಣು ಈ ಶಬ್ದಗಳ ಹೊನಲು, ಕಣ್ಣು ಇವುಗಳಿಗೆ ದ್ವಿತ್ವ ಬರುತ್ತದೆಂಬುದನ್ನು ಲಕ್ಷಿಸಬೇಕು. ಇಂತಹ ಪದಗಳ ಉಪಯೋಗ. ಜನರ ಆಡುನುಡಿಯಲ್ಲಿ ಇದ್ದುದ್ದು ನಾನು ಕಂಡಿದ್ದೇನೆ. ಕೇಳಿದ್ದೇನೆ. ಇದಕ್ಕೆ ಉತ್ತಮ ಉದಾಹರಣೆ 'ಕಸುವು' ಇದರ ನಿಷೇಧಾರ್ಥಕ 'ನಿಕ್ಕಸುವು' ಎಂಬುದು ರೂಢಿಯಲ್ಲಿದೆ. "ಅವನು ನಿಕ್ಕಸುವಿನ ಮೇಲೆ ಬಂದ" ಎನ್ನುವ ರೂಢಿ ಕೆಲವು ಕಡೆಗೆ ಕಂಡು ಬರುತ್ತದೆ. ಇಲ್ಲಿ 'ನಿ' ಉಪಪದ 'ಕಸುವು' ಮುಖ್ಯ ಪದ. 'ನಿ' ಒತ್ತಿದಾಗ ಕಕಾರದ್ವಿತ್ವ ಹೊಂದುತ್ತದೆ. ಈ ರೀತಿಯ ಒಂದು ನಿಯಮವನ್ನು ಉಪಪದ ಬಳಕೆಯಲ್ಲಿ ಇಟ್ಟುಕೊಳ್ಳಬಹುದು. ನಿಷೇಧಾರ್ಥಕ ಬೇಕಾದಲ್ಲಿ 'ಇಲ್ಲ-ಅಲ್ಲ' ಮುಂತಾದ ನಿಷೇಧ ರೂಪಗಳನ್ನು ಉಪಪದಗಳಂತೆ ಬಳಸಬಹುದು. ಮುಖ್ಯಪದಕ್ಕೆ ಬಾಧಕವಾಗುವ ಅವುಗಳ ರೂಪಗಳನ್ನು ಸೃಷ್ಟಿಸಿಕೊಳ್ಳಬೇಕು. "ಅಲ್ಲಳಗಾಳಗ" ಎಂಬ ಉದ್ದ ಬರಹ ತೊಂದರೆಯಾಗುತ್ತದೆ. ಆದ್ದರಿಂದ 'ಅಗಾಳಗ' ಎಂದು ಬರೆದು ಮೂಲ ಅರ್ಥವನ್ನೇ ಅದರಲ್ಲಿ ಆರೋಪಿಸಬಹುದು. ಅದರಂತೆ ಬಲ್ಲಾಳಗ ಇದರ ನಿಷೇಧ "ಇಲ್ಲಾಳಗ" ಎಂದು ಮಾಡಬಹುದು. "ಬಲ್" ಮತ್ತು "ಇಲ್" ಇವುಗಳ ಸಂಕ್ಷಿಪ್ತ ರೂಪ "ಬ" "ಇ" ಎಂದು ಇಟ್ಟುಕೊಂಡು ದೊಡ್ಡಮನೆ, ಕಿರಿಮನೆ ಎನ್ನದೆ "ದೊಮ್ಮನೆ. ಕಿಮ್ಮನೆ" ಎಂದು ಕರೆಯಬಹುದು. "ಅಲ್ಲ" ಎಂಬುದರ ಸಂಕ್ಷಿಪ್ತ ರೂಪ "ಅ" ಎಂದು ಮಾಡಿಕೊಂಡು "ಅಲ್ಲಗಿಡ" ಎನ್ನದೆ "ಅಗಿಡ" ಎನ್ನಬಹುದು. "ಅ" ಸಂಸ್ಕೃತದಲ್ಲಿಯೂ ನಿಷೇಧಾತ್ಮಕವಿದೆ. ಅನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಇದನ್ನು ಬಳಸಬಹುದು. ಅಲ್ಲದೆ ಕೆಲಸ ಅಗ್ಗೆಲಸ, ಕಾಲ-ಅಕಾಲ. ಕೈ-ಅಕೈ. ಮನೆ-ಅಮ್ಮನೆ, "ಅಲ್ಲ" ಇದರ ಸಂಕ್ಷಿಪ್ತ

ರೂಪ "ಇ" ಇಲ್ಲದ ಕೆಲಸ–ಇಗ್ಗೆಲಸ ಹೀಗೆ ಅಲ್ಲ–ಇಲ್ಲ ಸಂಕ್ಷಿಪ್ತ ರೂಪ. "ಅ–ಇ" ನಿಷೇಧ ರೂಪದಲ್ಲಿ ಅನುಕೂಲ ನೋಡಿಕೊಂಡು ಬಳಸಿದರೆ ಉತ್ತಮ ಪರಿಪಾಟಿಕೆ ತೋರದೆ, ಬಳಸಲು ಇವೆಲ್ಲ ಉಪಪದಗಳು ಉಪಯೋಗವಾಗುತ್ತವೆ.

ಕನ್ನಡದತ್ತ ಹೊರಳಿದರೆ, ಸಂಸ್ಕೃತ ಮತ್ತು ಯೂರೋಪಿಯನ್ ಮಾದರಿಯ ಉಪಪದ ಸಂಪತ್ತು ಅದರಲ್ಲಿದೆಯೆ? ಎಂಬ ಸಂದೇಹ ಎದೆಯಾಡುತ್ತದೆ. ನನಗೆ ತಿಳಿದ ಮಟ್ಟಿಗೆ ಸಂಸ್ಕೃತದಂತೆ ವೈವಿಧ್ಯ ಕೂಡಿದ ಉಪಪದಗಳು ಕನ್ನಡದಲ್ಲಿ ಕಡಿಮೆ. ಇಲ್ಲವೆನ್ನಲಾಗದು. ಇದನ್ನು ತಿಳಿದೇ 'ಅಲ್ಲಳಿಗಾಳಗ'ದಂತಹ ಪ್ರಯೋಗಗಳು ಬುದ್ಧಿಪೂರ್ವಕ ಕನ್ನಡದಲ್ಲಿ ದೊರೆಯುತ್ತವೆ. ಆದರೆ ಈ ತರದ ಪ್ರಯೋಗ ಕನ್ನಡ ಜಾಡಕ್ಕೆ ಹೊಂದಿಕೊಳ್ಳದೆಯೋ, ಇಲ್ಲವೆ ಅರ್ಥಾಭಿವ್ಯಕ್ತಿಯ ಕೊರತೆಯಾಗಿಯೋ, ಇಲ್ಲವೆ. ಸಂಸ್ಕೃತ ಭಾಷೆಯ ಮೋಹ, ಪ್ರಭಾವಕ್ಕೊಳಗಾಗಿಯೋ ರೂಢಿಯಲ್ಲಿ ಬರದೆ ಹಿಂದೆಗೆಯಿತು.

ಸಂಸ್ಕೃತದಲ್ಲಿಯ ಉಪಪದಗಳ ಅಭ್ಯಾಸ ಮಾಡಿ, ಕನ್ನಡಕ್ಕೆ ಹೊಂದಿಕೊಳ್ಳುವ, ಉಪಪದಗಳನ್ನು ಆಯ್ದು ಕನ್ನಡ ಉಪಪದ ಮಾಲಿಕೆಯಲ್ಲಿ ಅವನ್ನು ಪೋಣಿಸಬೇಕು. ಇದರಲ್ಲಿ ಸೌಕರ್ಯ, ಸೌಂದರ್ಯ, ಮತ್ತು ಸಂಶೋಧನ, ಈ ತ್ರಿಪಥ ದೃಷ್ಟಿ ಇರಬೇಕು. ಸಂಸ್ಕೃತ ಉಪಪದ ಸಂಪತ್ತು ಕನ್ನಡಕ್ಕೆ ಭಾರವಾಗದಂತೆ ನೋಡಿಕೊಳ್ಳಬೇಕು. ಹಾಗಾಗದಿದ್ದರೆ ಮಂತ್ರಕ್ಕಿಂತ ಉಗುಳು ಹೆಚ್ಚಾದೀತು. ಇಲ್ಲವೆ ಮೂಗಿಗಿಂತ ಮೂಗುತಿ ಭಾರವಾದೀತು. ಬಹಳ ಎಚ್ಚರದಿಂದ ಸಂಸ್ಕೃತ ಉಪಪದಗಳನ್ನು ಎತ್ತಿ ತೆಗೆದುಕೊಳ್ಳಬೇಕು. 'ನಿರ್' ಉಪಪದ ಕನ್ನಡಕ್ಕೆ ನಿಷೇಧರೂಪದಲ್ಲಿ ಹೊಂದಿಕೆಯಾಗಬಹುದೆಂದು ನನ್ನ ಎಣಿಕೆ. ಸಂಸ್ಕೃತದಲ್ಲಿ – ನಿರ್ – ನಿಸ್ – ನಿಷ್ – ನಿಶ್ – ನಿಃ ಹೀಗೆ ಸಂದರ್ಭಾನುಸಾರ ಈ ಉಪಪದ ಬರುತ್ತದೆ. ಉದಾಹರಣೆಗೆ— ನಿರ್ – ಗಮನ, ನಿಸ್ – ಸಾರ, ನಿಷ್ – ಕಾಮ, ನಿಃಕಲ ನಿಶ್ – ಚಲ, ನಿಷ್ – ಕಲಂಕ. ಇದೇ ರೀತಿಯಾಗಿ ಕನ್ನಡಕ್ಕೂ 'ನಿರ್' ಮತ್ತು ಅದರ ಅನುಕೂಲ ರೂಪಗಳನ್ನು ತೆಗೆದುಕೊಂಡು ಬಳಸಬಹುದು. ಸಂಸ್ಕೃತ ರೂಪಗಳನ್ನೇ ಬಳಸಬೇಕೆಂಬ ನಿಯಮವನ್ನಿಡುವ ಕಾರಣವಿಲ್ಲ. 'ನಿರ್' ಇದರ ರೂಪ 'ನಿ' ಇಷ್ಟನ್ನೇ ತೆಗೆದುಕೊಂಡು. ನಿಕ್ಕಸುಬು. ನಿಗ್ಗೆಲಸ, ನಿಮ್ಮನೆ, ಹೀಗೆ ನಿಷೇಧ ರೂಪಗಳನ್ನು ರೂಢಿಯಲ್ಲಿ ತರಬಹುದು. 'ನಿರ್' ಉಪಯೋಗಿಸಿ ಅಂಗಡಿ – ನಿರಂಗಡಿ. ಬಯಲು – ನಿರ್ಬಯಲು – ನಿಬ್ಬಯಲು (ನಿರ್ವಯಲು ಎಂಬ ರೂಪ ಶರಣರ ವಚನಗಳಲ್ಲಿ ಕಾಣುತ್ತದೆ) ಉಪ್ಪು – ನಿರುಪ್ಪು. ಮರ – ನಿರ್ಮರ – ನಿಮ್ಮರ ಗಿಡ – ನಿರ್ಗಿಡ – ನಿಗ್ಗಿಡ. ಹೀಗೆ ರೂಪಿಸಬಹುದು. 'ಅಪ' ಉಪಪದ ಈಗಲೂ ಕನ್ನಡದಲ್ಲಿ ನಿಷೇಧ ರೂಪದಲ್ಲಿ ಬಳಕೆಯಲ್ಲಿದೆ. ನಂಬಿಗೆ – ಅಪನಂಬಿಗೆ. ಇದನ್ನೇ ಇನ್ನೂ ಹೆಚ್ಚು ನಿತ್ಯಬಳಕೆಯಲ್ಲಿ ತರಬಹುದು. ತಿಳಿವು – ಅಪತಿಳಿವು. ಬಲ – ಅಪಬಲ, ಕೇಡು – ಅಪಕೇಡು. ನೀರು – ಅಪನೀರು. ಕೆಲಸ – ಅಪಕೆಲಸ. ಗೈಮೆ – ಅಪಗೈಮೆ. ಮಾತು – ಅಪಮಾತು. ನುಡಿ – ಅಪನುಡಿ.

ದಾರಿ – ಅಪದಾರಿ. 'ಅನು' ಉಪಪದ ಎಲ್ಲ ರೀತಿಯಿಂದಲೂ ಅನುಕೂಲವಿದೆ. 'ಅಣು' ಎಂಬ ಕನ್ನಡ ಉಪಪದ ಸಂಸ್ಕೃತ 'ಅನು' ಎಂಬುದರಿಂದಲೇ ಬಂದಿದೆ ಯೆಂಬುದು ನಿಚ್ಚಳವಾಗುತ್ತದೆ. ಅನುಮಾಡಿ – ಅಣುಮಾಡು. ಅನುಗೊಳಿಸು – ಅಣುಗೊಳಿಸು ಅನುಗ್ಗೈ – ಅಣುಗ್ಗೈ. ಅನು – ಗೆಲಸ – ಅಣುಗೆಲಸ. ಅನುದಿನ್ನು-ಅಣು ದಿನ್ನು. ಅನುದಂಡೆ – ಅಣುದಂಡೆ ಈ ತೆರನಾಗಿ ಇವುಗಳನ್ನೆಲ್ಲ ರೂಢಿಸಿಕೊಳ್ಳಬಹುದು. "ಉಪ" ಎಂಬುದನ್ನು ಕಿರಿಯ, ಚಿಕ್ಕ ಎಂಬರ್ಥದಲ್ಲಿ ಬಳಸಿ, ಉಪ – ತೋಟ, ಉಪ – ಬಯಲು. ಉಪ – ದಾರಿ, ಉಪ – ಮನೆ, ಉಪ – ಶಾಲೆ, ಉಪಬಾವಿ ಎಂದು ರೂಢಿಸ ಬಹುದು. 'ಪರಿ' ಎಂಬುದನ್ನು 'ಸುತ್ತು' ಎಂಬರ್ಥದಲ್ಲಿ ಪರಿನುಡಿ ಬಳಸುಮಾತು, ಸುತ್ತುಮಾತು, ಪರಿ – ದಾರಿ – ಬಳಸುದಾರಿ ಪರಿ – ಓಟ (ಪರಿಯೋಟ) ಸುತ್ತುಓಟ, ಪರಿ – ಊಟ (ಪರಿಯೂಟ) ಬಹಳ ಹೊತ್ತು ಮಾಡುವ ಊಟ, ಹೆಚ್ಚು ಊಟ ಪರಿನೋಟ – ಚೆನ್ನಾದನೋಟ. ಇಲ್ಲವೆ ಬಹಳ ಹೊತ್ತು ನೋಡುವದು, ಸುತ್ತು ನೋಟ, ಪರಿ-ಗೈ, ಉದ್ದಕೈ, ಪರಿಗಾಲು ಉದ್ದಕಾಲು. ಪರಿ–ಗಣ್ಣು–ಅಗಲುಕಣ್ಣು ಹೀಗೆ ರೂಪಸಿದ್ಧಿ ಮಾಡಿಕೊಳ್ಳಬಹುದು.

ಅಂತೂ ಕನ್ನಡದಲ್ಲಿ ಈ ಉಪಪದ ರೂಢಿಸುವ ಪ್ರಯತ್ನ ಹಿಂದೆ ನಡೆದಿದೆ – ಮುಂದೆ ನಡೆಯಬಹುದು ಆದರೆ ಕನ್ನಡ ಉಪಪದಗಳ ಪ್ರಯೋಗ ವೈವಿಧ್ಯತೆಯನ್ನು ಅರಿಯದೆ ತಾತ್ಸಾರಮಾಡಿ ಬಿಟ್ಟರೆ, ಕನ್ನಡಕ್ಕೆ, ಕನ್ನಡ ನುಡಿ ಮುನ್ನಡೆಗೆ ಈಗಿನವರು ದ್ರೋಹಬಗೆದಂತಾದೀತು. ಕನ್ನಡ ನುಡಿ ಸರ್ವಾಂಗಸುಂದರವಾಗಿ ಬೆಳೆದು ಪರಿಪುಷ್ಟಿ ಗೊಳ್ಳಬೇಕಾದರೆ, ಅದರ ಒಂದು ಮುಖ್ಯಾಂಗವಾದ ಉಪಪದ ಸಂಪತ್ತಿಯೂ ಬೆಳೆಯ ಬೇಕು. ಈ ನೋಟದಿಂದ ಕನ್ನಡ ನೋಡಬೇಕು. ನೋಡಿ, ಬೆಳೆಸಿ, ಬಳಸಬೇಕು.

ತದ್ಧಿತ, ಕೃದಂತಗಳಂತೆ ಉಪಪದಸೃಷ್ಟಿ, ಸಮ್ಯಕ್-ದೃಷ್ಟಿ ಸಾಧ್ಯವಿದೆ. ಅದು ಅನಿವಾರ್ಯವೂ ಅಹುದು. ಆದ್ದರಿಂದ ಕನ್ನಡದಲ್ಲಿ ಹಿಂದೆ ಇದ್ದ ಈಗಿರುವ ಎಲ್ಲ ಉಪಪದಗಳನ್ನು ಅವು ಗ್ರಂಥಸ್ಥವೇ ಇರಲಿ–ಜಾನಪದ ರೂಢಿಯಲ್ಲಿಯೇ ಇರಲಿ ಅವನ್ನು ಕಲೆ ಹಾಕಿ. ಉಪಪದ ಸಂಪತ್ತು ಬೆಳೆಸುವ ಕಾರ್ಯ ನಡೆಯಬೇಕಾಗಿದೆ. ಇದಕ್ಕಾಗಿ ಒಂದು ಸುಯೋಜಿತ ಪ್ರಯತ್ನ ನಡೆಯಬೇಕು. ನನಗೆ ಸರಿ ಎನಿಸಿದ ವಿಚಾರ ಗಳನ್ನು ನಾನಿಲ್ಲಿ ವಿವರಿಸುವೆ.

೧) ಸಂಸ್ಕೃತ ಪ್ರಾಕೃತ ಇಲ್ಲವೆ ನೆರೆಹೊರೆಯ ಯಾವುದೇ ಭಾಷೆಯ ಉಪ ಪದಗಳು ಕನ್ನಡಕ್ಕೆ ಹೊಂದಾಣಿಕೆಯಾಗುವುದಾದರೆ ಅನುಕೂಲವಿದ್ದರೆ, ಅವುಗಳನ್ನು ಎತ್ತಿ ತೆಗೆದುಕೊಳ್ಳಬಹುದು. ಇಲ್ಲಿ ಶುದ್ಧತೆಯ ಮಡಿವಂತಿಕೆ ಬಿಟ್ಟು ಭಾಷೆಯ ಸಂಪೂರ್ಣತೆಯ ಕಡೆಗೆ ಲಕ್ಷ್ಯವಿಡಬೇಕು.

೨) ಕನ್ನಡದಲ್ಲಿ ಹಿಂದೆ ಇದ್ದ, ಈಗಿರುವ, ಎಲ್ಲ ಉಪಪದಗಳನ್ನು–ಗ್ರಂಥ ಸ್ಥವಿರಲಿ–ಜಾನಪದರೂಢಿಯಲ್ಲಿರಲಿ ಕಲೆಹಾಕಿ ಬೆಳಕಿಗೆ ತರಬೇಕು.

೩) ತದ್ಧಿತ-ಕೃದಂತ ಪ್ರತ್ಯಯಗಳು ಮತ್ತು ಸಮಾಜದ ಪೂರ್ವಪದಗಳು ಉಪಪದ ಸ್ಥಾನಕ್ಕೆ ಯೋಗ್ಯವಾಗಿದ್ದರೆ. ಅವುಗಳನ್ನು ಕೆಲವೊಂದು ಮಾರ್ಪಾಡುಗಳೊಡನೆ ಉಪಪದಗಳೆಂದು ರೂಢಿಯಲ್ಲಿ ತರಬಹುದು.

೪) ಕೆಲವೊಂದು ಉಪಪದಗಳನ್ನು ಹೊಸದಾಗಿ ಸೃಷ್ಟಿಸಿ, ಕನ್ನಡಕ್ಕೆ ಹೊಂದಿಕೊಳ್ಳುವಂತೆ ಬಳಸಬೇಕು.

ಈ ತೆರನಾಗಿ ಉಪಪದ ಸಂಪತ್ತು, ಹೆಚ್ಚಿ ಕನ್ನಡದಲ್ಲಿ ಅದನ್ನು ಬಳಸಲು ನಾವು ಯಾವುದೇ ಕಟ್ಟುತಡೆಗಳನ್ನು ಇಟ್ಟುಕೊಳ್ಳದೆ, ಕನ್ನಡ ಶಬ್ದ ಸಂಪತ್ತು ಸರ್ವಾಂಗ ಸುಂದರವಾಗಿ ಬೆಳೆವ ದಾರಿಯನ್ನು ಹುಡುಕಬೇಕು. ಹೀಗಾದಲ್ಲಿ ಮಾತ್ರ ಕನ್ನಡ ಉಪಪದ ಸಂಪತ್ತು ಬೆಳೆದು, ಉಳಿದು, ಆದರ ಬಳಕೆಯಾಗಬಹುದು.

ನಾನು ಸೂಚಿಸಿದ ತೆರನಾಗಿಯೇ ಉಪಪದಗಳ ಬಳಕೆ, ಕನ್ನಡದಲ್ಲಿ ಬರಬೇಕೆಂದು ನನ್ನ ಹಟವಿಲ್ಲ. ಕನ್ನಡ ಉಪಪದಗಳ ಕೊರತೆ ನೀಗಿಸಲು ನಾನು ವಿಚಾರವಾಹಿನಿ ಹರಿಬಿಟ್ಟಿರುವೆನು. ನನ್ನ ಅಭ್ಯಾಸಕ್ಕೆ ತಕ್ಕಂತೆ ಕೆಲವು ದಾರಿಯನ್ನೂ ಸೂಚಿಸಿರುವೆನು. ಬಲ್ಲಿದರು ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿಗೆ ಅಭ್ಯಾಸ-ಸಂಶೋಧನೆ ಮಾಡಿ, ಕನ್ನಡ ಉಪಪದ ಸಂಪತ್ತಿನ ಕೊರತೆಯನ್ನು ನೀಗಿಸಬೇಕು.

★ ವಿಷ್ಣು ಸುತ

ಇವರು ನನ್ನವರು

ಐದು ಜನ ನನ್ನವರು
ಕಿತ್ತು ತಿನ್ನುವರು
ನನ್ನ ಮನೆ ಕೊನೆಯಲ್ಲಿ ನಾಲ್ವರ ಬಿಡಾರ
ಕೊಂಚ ಪರವಾಯಿಲ್ಲ ಇವರ ವಿಚಾರ

ನೋಡಿ ನೋಡಬಾರದ್ದನ್ನೆ
ಖುಷಿಪಟ್ಟು, ಕಿಲಕಿಲನೆ
ನಕ್ಕು, ಕುಲುಕಾಡುವವನೊಬ್ಬ,

ಸೇವು ಮಾವು ಹೂಗಳ ಬಿಟ್ಟು,
ಕೊಚ್ಚೆ ಬಚ್ಚಲಿನ
ವಾಸನೆಯ ಮೂಸುವವನಿನ್ನೊಬ್ಬ,

ಸಿಕ್ಕಸಿಕ್ಕದ್ದನ್ನೆಲ್ಲ
ನೆಕ್ಕುತ್ತ ಮುಕ್ಕುತ್ತ
ಮತ್ತೆ ಕಕ್ಕುತ್ತ ಕೂರುವವ ಮತ್ತೊಬ್ಬ,

ಒಳ್ಳೆ ಮಾತನು ಬಿಟ್ಟು
ಕೆಟ್ಟ ಮಾತಿಗೇ ಪಟ್ಟುಕೊಟ್ಟು
ಕುಣಿಯುವವ ಮಗದೊಬ್ಬ —

ಕೊಂಚ ಪರವಾಯಿಲ್ಲ ಈ ನಾಲ್ವರ ವಿಚಾರ.

ಇದ್ದಾನೆ ಇನ್ನೊಬ್ಬ ಕಿಲಾಡಿ.
ಮೈಯ ಮೈಲಿಗೆ ಮಾಡಿ.
ಮನಸಚಂಚಲಗೊಳಿಸಿ ಹರಿವ ಸಂಚಾರಿ
ಮನೆಯ ಉದ್ದಗಲಕ್ಕು ಅವನದೆ ಸವಾರಿ.

ಇವರೆಲ್ಲರ ಸಮೂಹ–
ದಲಿ ನಡೆವ ಸನ್ನಾಹ–
ದಲಿ ನಾನೂ ಆಗಿದ್ದೇನೆ ಸ್ವಾಹ.

★ ಕೆ. ಎಸ್. ಮಧುಸೂದನ

ಚೌಟ ಮತ್ತು ಭೈರರಸ ಒಡೆಯರ ರಾಜಕೀಯ ಸಂಬಂಧ

ತುಳು ನಾಡಿನಲ್ಲಿ ಆಳಿದ ರಾಜಮನೆತನಗಳಲ್ಲಿ ಪುತ್ತಿಗೆ ಚೌಟರು ಮತ್ತು ಕೆರವರಸೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಕಳಸ–ಕಾರ್ಕಳ ಭೈರರಸ ಒಡೆಯರು ಪ್ರಮುಖರು. ಚೌಟ ಮತ್ತು ಭೈರರಸ ಒಡೆಯರು ವಿಜಯ ನಗರ ಅರಸರಿಗೆ ಕಪ್ಪವನ್ನಿತ್ತು ಒಳ ಆಡಳಿತದಲ್ಲಿ ಸ್ವತಂತ್ರರಾಗಿದ್ದರು. ಈ ಎರಡು ರಾಜ್ಯಗಳಿಗೆ ಸಾಮಾನ್ಯವಾದ ಗಡಿ ಇರುವದರಿಂದ ಅವರೊಳಗೆ ಕಲಹಗಳು ನಡೆಯುತ್ತಿದ್ದು ಕೊನೆಗೆ ಯಾವ ರೀತಿಯಲ್ಲಿ ಅವರು ಒಪ್ಪಂದಕ್ಕೆ ಬಂದರೆಂಬುದನ್ನು ಈ ಲೇಖನದಲ್ಲಿ ತಿಳಿಸಲಾಗುವುದು.

ಕಾರ್ಕಳ ಭೈರರಸ ಒಡೆಯರು ಜಿನದತ್ತ ರಾಯನಿಂದ ತಮ್ಮ ವಂಶ ಪ್ರಾರಂಭವಾಯಿತೆಂದು ಮತ್ತು ಆ ಕಾಲದಿಂದ ತಾವು ರಾಜ್ಯವನ್ನು ಆಳಿದರೆಂದು ತಿಳಿಸಿದರೂ ಅದಕ್ಕೆ ಯಾವ ಸಮರ್ಪಕ ಆಧಾರವಿಲ್ಲದ ಕಾರಣ ಅದನ್ನು ನಂಬುವುದು ತೀರಾ ಕಷ್ಟವಾಗಿದೆ.[೧] ಪ್ರಸಿದ್ಧ ಇತಿಹಾಸಜ್ಞ ಡಾ. ಸಾಲೆತ್ತೂರರವರ ಅಭಿಪ್ರಾಯದಂತೆ ಕಳಸ–ಕಾರ್ಕಳ ಚರಿತ್ರೆಯು ಶಾಂತರ ಅರಸರ ಚರಿತ್ರೆಯೊಂದಿಗೆ ಹೆಣೆದುಕೊಂಡಿದೆ. ಜಿನದತ್ತರಾಯನು ಕ್ರಿ.ಶ. ೯ನೇ ಶತಮಾನದಲ್ಲಿ ಶಾಂತರ ವಂಶವನ್ನು ಸ್ಥಾಪಿಸಿದನು. ಜಿನದತ್ತರಾಯನ ವಂಶದವರು ಪಟ್ಟಿಪೊಂಬುಚ್ಚದಿಂದ ಕಳಸಕ್ಕೂ ನಂತರ 14ನೇ ಶತಮಾನದಲ್ಲಿ ರಾಜಧಾನಿಯನ್ನು ಕಾರಕಳದ ಸಮೀಪವಿರುವ ಕೆರೆವರಸೆಗೂ ಬದಲಾಯಿಸಿದರು.[೨]

ಕಾರ್ಕಳದ ಸಮೀಪವಿರುವ ಮಾರ್ಣೆ ಮತ್ತು ಕೊರೆಗಾನದಲ್ಲಿ ಸಿಕ್ಕಿದ ಶಾಸನಗಳು ಮೊದಲನೆಯ ಭೈರವರಾಯನು ಕೆರೆವರಸೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಕ್ರಿ. ಶ. ೧೪೦೮ ರಲ್ಲಿ ಆಳಿದನೆಂದು ತಿಳಿಸುವ ಶಾಸನಗಳಲ್ಲಿ ಪ್ರಾಚೀನವಾಗಿವೆ.[೩] ಆದುದರಿಂದ ಭೈರವರಾಯನ ವಂಶದವರು ಕೆರವರಸೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಹದಿನೈದನೇ ಶತಮಾನದ ಆದಿಯಲ್ಲಿ ಆಳಿದರೆಂದು ಸಾಮಾನ್ಯವಾಗಿ ಒಪ್ಪಬಹುದು.[೪] ಇದೇ ರೀತಿಯಲ್ಲಿ ಚೌಟ ವಂಶ

---

೧. ಗಣಪತಿರಾವ್ ಐಗಳ: **ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ** P. 325-328.

೨. Dr. B. A. Saletore: *Ancient Karnatak Vol. I P. 224 to 25..........* *Mediaeval Jainism* P. 361 to 62.

೩. *Annual Report of South Indian Epigraphy - 1928-29.* No. 530 and 537.

೪. ಕ್ರಿ. ಶ 1385ರ ತೇದಿಯಲ್ಲಿ ಮಿಯ್ಯಾರಲ್ಲಿ ಸಿಕ್ಕಿದ ಶಾಸನವು ವೀರಜೆನ್ನರಸ ಮತ್ತು ಅವನ ಬಿರುದುಗಳಾದ "ಅರಿರಾಯರ ಗಂಡ ಮರೆ ಹೊಕ್ಕವರ ಕಾವ, ಸಾರಂಗತ ವಜ್ರ ಪೂಜರ" ಎಂಬುದಾಗಿ ತಿಳಿಸಿದೆ. ಆದರೆ ಈ ಶಾಸನ ಅವನ ರಾಜಧಾನಿ ಕೆರವರಸೆ ಎಂದು ಉಲ್ಲೇಖಿಸದ ಕಾರಣ ಇವನು ಭೈರವವಂಶದವನಲ್ಲವೆಂದೂ ಅಭಿಪ್ರಾಯ ಪಡಲು ಆಸ್ಪದಗಳಿವೆ. *(A. R. S. I. E. of 1928 - 29 No. 531.)*

ದವರು ಪುತ್ತಿಗೆ ಮತ್ತು ಮೂಡಬಿದ್ರೆಗಳನ್ನು ರಾಜಧಾನಿಯಾಗಿ ಮಾಡುವುದಕ್ಕಿಂತ ಮೊದಲು ಮೊದಲನೆಯ ಚೌಟ ಅರಸನಾದ ತಿರುಮಲರಾಯನು ಉಲ್ಲಾಳವನ್ನು ರಾಜಧಾನಿಯಾಗಿ ಮಾಡಿಕೊಂಡು ಕ್ರಿ.ಶ. ೧೧೬೦ ರಿಂದ ೧೧೭೯ ರ ವರೆಗೆ ಆಳಿದ್ದನೆಂದು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವನ್ನು ಮೊದಲು ಸಂಶೋಧನೆ ಮಾಡಿದ ಗಣಪತಿರಾವ ಐಗಳು ತಮ್ಮ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ"ದಲ್ಲಿ ತಿಳಿಸಿದ್ದಾರೆ.[೫] ಆದರೆ ಇದರ ಕುರಿತಾಗಿ ಸಮ–ಕಾಲೀನ ದಾಖಲೆಗಳು ಏನನ್ನೂ ತಿಳಿಸದ ಕಾರಣ ಈ ವಾದವನ್ನು ಒಪ್ಪಿಕೊಳ್ಳುವುದು ತೀರಾ ಕಷ್ಟವಾಗಿದೆ. ಚೌಟರು ಶಾಸನಗಳಲ್ಲಿ ಮೊತ್ತ ಮೊದಲು ಕಾಣಿಸಿಕೊಳ್ಳುವುದು ಕ್ರಿ.ಶ. ೧೩೯೦ ರ ಮೂಡುಬಿದ್ರೆ ಶಾಸನದಲ್ಲಿ. ಈ ಶಾಸನವು ವಿಕ್ರಮ ಚಾವುಟನನ್ನು ಉಲ್ಲೇಖಿಸುತ್ತದೆ.[೬] ಆದುದರಿಂದ ಚೌಟರು ತುಳುನಾಡಿನಲ್ಲಿ ಕ್ರಿ.ಶ. 1390ರ ಕಾಲದಲ್ಲಿ ಆಳಿಕೊಂಡಿದ್ದರೆಂದು ಅಭಿಪ್ರಾಯ ಪಡಲು ಬಲವಾದ ಆಧಾರಗಳಿವೆ.

ಗಡಿಗಳು: ಕಾರ್ಕಳ ಭೈರರಸ ಒಡೆಯರ ರಾಜ್ಯವು ಘಟ್ಟದ ಮೇಲಣ ಸೀಮೆಗಳಾದ ಬಾಗುಂಜಿ ಕಳಸ ಮೂಡಿಗೇರಿ ಮತ್ತು ಘಟ್ಟದ ಕೆಳಗಿನ ಭಾಗಗಳಾದ ಕೆರೆವಸೆ, ಕಾರ್ಕಳ, ಮೂರೂರು ಮಾಗಣೆ, ನಾಲ್ಕೂರು ಮಾಗಣೆ, ಐದೂರು ಮತ್ತು ಆರೂರು ಮಾಗಣೆಗಳನ್ನೊಳಗೊಂಡಿತ್ತು. ಅವರ ರಾಜ್ಯವು ಚಿಕ್ಕಮಂಗಳೂರಿನ ಜಿಲ್ಲೆಯ ಬಾಳೆಹೊನ್ನೂರು, ಚಿತ್ರದುರ್ಗ ಜಿಲ್ಲೆಯ ಸ್ವಲ್ಪ ಭಾಗಗಳು ಮತ್ತು ಉಡುಪಿ ತಾಲೂಕಿನ ಈಶಾನ್ಯ ಭಾಗಗ–ಳನ್ನು ಒಳಗೊಂಡಿದೆ ಎಂದು ಸಾಮಾನ್ಯವಾಗಿ ಅಭಿಪ್ರಾಯ ಪಡಬಹುದು.[೭] ಚೌಟರ ಉಚ್ಛ್ರಾಯದ ಕಾಲದಲ್ಲಿ ಅವರ ರಾಜ್ಯವು ಉಲ್ಲಾಳ, ಪುತ್ತಿಗೆ ಸೀಮೆ ಮಿಜಾರ ಮಾಗಣೆ, ಅರ್ಕುಳ ಮಾಗಣೆ, ಪೇಜಾವರ ಸೀಮೆ, ಮತ್ತು ಮುಂಡ-ಕೂರು ಸೀಮೆಗಳನ್ನು ಒಳಗೊಂಡಿತ್ತು.[೮] ಒಟ್ಟಿನಲ್ಲಿ ಅವರ ರಾಜ್ಯವು ಈಗಿನ ಮಂಗಳೂರು ತಾಲೂಕು ಮತ್ತು ಕಾರ್ಕಳ ತಾಲೂಕಿನ ಕೆಲವು ಭಾಗಗಳನ್ನು ಒಳಗೊಂಡಿತ್ತು.

---

೫. ಐಗಳ–ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ P. 297. ಈ ವಾದವನ್ನು ಯಾವ ರೀತಿಯಲ್ಲೂ ಸಮರ್ಥಿಸದೆ ಡಾ. ಚಟ್ಟೀಸ್ ಮತ್ತು ಸ್ಟೆಮ್‌ಫೋರ್ಡ್‌ಸ್ಮಿತರು ಒಪ್ಪಿಕೊಂಡಿದ್ದಾರೆ. ಡಾ. ಚಟ್ಟೀಸ್ *Keladi Government and administration* P. 344 [Unpublished Thesis Submitted to Karnatak University 1963–] Stemford Smith 'Chowtas'. Article Published in *Quarterly Journal of Mythic Society*–X,LVI P. 69, July 1955.

೬. *South Indian Inscription* Vol. VII No. 229.

೭. *Epigraphica Indica* Vol. No. 8 P. 129.

೮. ಐಗಳ–ದಕ್ಷಿಣ ಕನ್ನಡಜಿಲ್ಲೆಯ ಇತಿಹಾಸ P. 304.

ಚೌಟ ಭೈರರಸರ ಗಡಿ ಘರ್ಷಣೆಗಳು : ಭೈರರಸ ಮನೆತನದಲ್ಲಿ ಒಬ್ಬನಾದ ಪಾಂಡ್ಯ ರಾಜನು "ಪಟ್ಟಿ ಡೊಂಬುಚ್ಚ ಪುರಾಧೀಶ್ವರ"ನೆಂಬ ಬಿರುದ ಪಡೆದು ಕಳಸ–ಕಾರಕಳ ರಾಜ್ಯವನ್ನು ಆಳಿಕೊಂಡಿರುವಾಗ ಚೌಟರು ಮತ್ತು ಬಂಗರು ಒಂದಾಗಿ ಕಳಸ ಕಾರ್ಕಳ ರಾಜ್ಯವನ್ನು ಆಕ್ರಮಿಸುವ ಹೊಂಚಿನಲ್ಲಿರುವಾಗ ಇದನ್ನು ತಪ್ಪಿಸಲು ಎರಡನೇ ಪಾಂಡ್ಯನು ಬಂಗವಾಡಿ ಅರಸ ಕಾಮಿರಾಯನೊಡನೆ ಕ್ರಿ. ಶ. ೧೪೬೧ರಲ್ಲಿ ಒಪ್ಪಂದ ಮಾಡಿಕೊಂಡನೆಂದು ಕೆರವಸೆಯಲ್ಲಿ ಸಿಕ್ಕಿದ ಒಂದು ಶಾಸನವು ತಿಳಿಸುತ್ತದೆ.[೯] ಈ ಒಡಂಬಡಿಕೆಯಂತೆ ಕಳಸ ಕಾರ್ಕಳ ಯಾ ಬಂಗವಾಡಿಯ ಮೇಲೆ ಯಾರಾದರೂ ದಾಳಿ ಮಾಡಿದ್ದರೆ ಇಬ್ಬರು ಒಂದಾಗಿ ಆ ದಾಳಿಯನ್ನು ಎದುರಿಸಬೇಕು. ಒಬ್ಬರ ಅನುಮತಿ ಇಲ್ಲದೆ ಮತ್ತೊಬ್ಬರು ಚೌಟರೊಡನೆ ಪರಸ್ಪರ ಒಪ್ಪಂದ ಮಾಡಿಕೊಳ್ಳಬಾರದು. ಈ ಕರಾರುಗಳಿಗೆ ಮನುಷ್ಯ ದೋಷದಿಂದಾಗಿ ಏನಾದರೂ ಲೋಪ ಉಂಟಾದರೆ ಸಮಾಧಾನದಿಂದಲೇ ಬಗೆಹರಿಸಿಕೊಳ್ಳಬೇಕು.[೧೦] ಈ ಕರಾರಿನಿಂದ ತಿಳಿದು ಬರುವುದೇನೆಂದರೆ ಕಳಸ ಕಾರ್ಕಳ ರಾಜ್ಯಕ್ಕೆ ಚೌಟರ ಆಕ್ರಮಣದ ಭೀತಿ ಇದ್ದಿತೆಂದೂ, ಅವರನ್ನು ಎದುರಿಸಲು ಭೈರರಸ ಒಡೆಯರು ಬಂಗರಾಜರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತೆಂದೂ ಮತ್ತು ಚೌಟ ಮತ್ತು ಬಂಗರ ಆಕ್ರಮಣ ಎದುರಿಸಲು ಕಳಸ ಕಾರ್ಕಳ ರಾಜ್ಯವು ಸಮರ್ಥವಿರಲಿಲ್ಲ. ಕಳಸ ಕಾರ್ಕಳ ರಾಜ್ಯದಲ್ಲಿ ೨ ನೇ ಪಾಂಡ್ಯನ ನಂತರ ಇವನ ಅಳಿಯ ೩ ನೇ ಪಾಂಡ್ಯ (೨ ನೇ ಭೈರವರಾಯ) ಪಟ್ಟಕ್ಕೆ ಬಂದನು. ಇವನು ತನ್ನ ರಾಜ್ಯವನ್ನು ರಕ್ಷಿಸಲು ಕ್ರಿ. ಶ. ೧೪೮೩ರಲ್ಲಿ ಕಿನ್ನಿಕ್ಕ ಹೆಗ್ಗಡೆ ಮತ್ತು ಕುಂದ ಹೆಗ್ಗಡೆಯವರೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡನೆಂದು ಬಂಟಕಲ್ಲು ಗ್ರಾಮದ ಶಾಸನದಿಂದ ತಿಳಿಯುತ್ತದೆ.[೧೧] ಈ ಒಪ್ಪಂದಕ್ಕೆ ಚೌಟರ ಭೀತಿಯೇ ಮೂಲಕಾರಣವೆಂದು ತಿಳಿದರೆ ತಪ್ಪಾಗಲಿಕ್ಕಿಲ್ಲ.

ಚೌಟ ಮತ್ತು ಭೈರರಸ ಮನೆತನಗಳೊಳಗೆ ಪುನಃ ಘರ್ಷಣೆ ಬಂದುದನ್ನು ಸೀಮಂತೂರು ಮತ್ತು ಪುತ್ತಿಗೆ ಸೋಮನಾಥ ದೇವಸ್ಥಾನಗಳಲ್ಲಿನ ಶಾಸನಗಳು ತಿಳಿಸುತ್ತವೆ. ಈ ಶಾಸನಗಳ ಕಾಲ ಕ್ರಿ. ಶ. ಇದರಂತೆ ೧೫೧೨. ಕೃಷ್ಣದೇವರಾಯನ ನಿರೂಪದಿಂದ ರತ್ನಪ್ಪ ಒಡೆಯರು ಬಾರಕೂರು ಮಂಗಳೂರು ರಾಜ್ಯವನ್ನು ಆಳಿಕೊಂಡಿರುವಾಗ ಕುಂದ ಹೆಗ್ಗಡೆ ಮನೆತನದ ದೇವರೊಡೆಯ.

---

೯. *Annual Report of Indian Epigraphy*—1961–62.

೧೦. ಈ ಕರಾರಿನ ಮುಖ್ಯಾಂಶ ಡಾ. ಕೆ. ವಿ. ರಮೇಶರ ತುಳು ನಾಡಿನ ಇತಿಹಾಸ ದಿಂದ ದೊರಕಿದೆ.

೧೧. *A.R.S.I.E.* of 1930–31. No. 370.

ಕಿನ್ನಿಕ್ಕ ಹೆಗ್ಗಡೆಯ ಮನೆತನದ ತಿರುಮಲ ಅರಸ ಮತ್ತು ಚೌಟ ಮನೆತನದ ತಿರುಮಲರಾಯ ಚೌಟರು ಒಂದಾಗಿ ಒಂದು ಒಪ್ಪಂದವನ್ನು ಮಾಡಿಕೊಂಡರು. ಈ ಕರಾರಿನಂತೆ ಮೂವರು ಅರಸುಗಳು ಒಂದಾಗಿ ಒಬ್ಬರಿಗೊಬ್ಬರು ಸಹಾಯ ನೀಡಬೇಕಲ್ಲದೆ, "ಆ ನಗರಿಇಂದ ಭೈರಸರಿಂದ ಕಾಳಗಬಂದರೆ ನಂಮ, ನಂಮ ಮುಂದಿಗೆ ಪ[ಡಿಪಾ]ಯ [ವ] ನಂಮ ಕೈಯಿಂದ ಪೆ[ಚ್ಚಿ]ಸಿ ಪೊದಗಿ ಕಾದುವು ದಕ್ಕೆ ತಪ್ಪೆವು. ಭೈರಸರ ತಮ್ಮ [ತಾ]ವೆರಡು ಬಗೆಯ ಕೂಡಿಕೊಂಡು ಬಂದು ನಿಂಮ ಸೀಮೆಯ ಮೇಲೆ ಕಾದಿ ಸಲ್ಲದು."[೧೨]

ಈ ಶಾಸನದಲ್ಲಿ ಉಲ್ಲೇಖಿಸಿರುವ ಕುಂದ ಹೆಗ್ಗಡೆಯವರು ಕಾಪು ಬಲ್ಲಾಳ ಮನೆತನದವರೆಂದು ಮತ್ತು ಕಿನ್ನಿಕ್ಕ ಹೆಗ್ಗಡೆ ಮನೆತನದ ತಿರುಮಲ ಅರಸರು ಮೂಲಿಕೆ ಸಾಮಂತ ಮನೆತನದವರಾಗಿರಬೇಕು. ಏಕೆಂದರೆ ಸೀಮಂತೂರು ಮೂಲಿಕೆ ಸಾಮಂತರ ಮೊದಲ ರಾಜಧಾನಿಯಾಗಿತ್ತು. ಅಲ್ಲಿ ಸಿಕ್ಕಿದ ಶಾಸನಗಳು ಸಾಮಂತ ಅರಸರ ಕುರಿತಾಗಿ ತಿಳಿಸುತ್ತದೆ.[೧೩]

ಈ ಶಾಸನವು "ನಗರಿಇಂದ ಭೈರಸರಿಂದ ಕಾಳಗ ಬಂದರೆ ನಮ್ಮ ನಮ್ಮ ಮುಂದಿಗೆ ಪ[ಡಿಪಾ]ಯ[ವ] ಹೆಚ್ಚಿಸಿ ಒದಗಿ ಕಾದುವುದಕ್ಕೆ ತಪ್ಪೆವು." ಎಂದು ಉಲ್ಲೇಖಿಸಿರುವುದರಿಂದ, ಇಲ್ಲಿ ಉಲ್ಲೇಖಿಸಿದ ಭೈರಸನು ನಗರಿ ಭೈರಸ ನೆಂದು ಡಾ. ಕೆ. ವಿ. ರಮೇಶರು ತಮ್ಮ "ತುಳುನಾಡಿನ ಇತಿಹಾಸ"ದಲ್ಲಿ ತಿಳಿಸಿದ್ದಾರೆ.[೧೪] ನಗರಿ ರಾಜ್ಯವು ಈಗಿನ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗೆರಸೊಪ್ಪೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದರು. ಅವರ ಮೇಲೆ ಹೊನ್ನಾವರ ಮಿರ್ಜಾನ್ ಮತ್ತು ಅಂಜದೀವ್‌ದವರೆಗೆ ಹಬ್ಬಿತ್ತೆಂದು ಆ ಕಾಲದಲ್ಲಿ ಬಂದ ಪ್ರವಾಸಿ ಟೋಮಿಪೈರಿಸ ತನ್ನ ವರದಿಯಲ್ಲಿ ತಿಳಿಸಿದ್ದಾನೆ.[೧೫] ಇದರಿಂದ ಪುತ್ತಿಗೆ ಚೌಟರ ರಾಜ್ಯಕ್ಕೂ ಯಾವ ರೀತಿಯಲ್ಲೂ ಗಡಿ ಹೊಂದಾಣಿಕೆ ಇರಲಿಲ್ಲವೆಂದು ತಿಳಿಯಬಹುದು. ಅದೇ ಕಾಲದಲ್ಲಿ ಗೆರಸೊಪ್ಪೆಯನ್ನು ರಾಜಧಾನಿಯಾಗಿ ಮಲ್ಲಿರಾಯ ಆಳುತ್ತಿದ್ದನೆಂದೂ ಅವನು

೧೨. *A.R.S.I.E of* 1930–31; *sii vol 7*. No. 228.

೧೩. ಐಗಳ್- ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ P. 343; A.R.S.I.E. of 1930–31. No. 339, 341; ಡಾ. ಪಿ. ಗುರುರಾಜಭಟ್- *A Political and Cultural history of Tulu Nadu.* (Unpublished Thesis Mysore University 1967).

೧೪. ಕೆ. ವಿ. ರಮೇಶ್- ತುಳು ನಾಡಿನ ಇತಿಹಾಸ P. 105.

೧೫. *Suma Oriental of Tome Pires.* P. 61. ಇವನು ಗೆರಸೊಪ್ಪೆ ಮತ್ತು ಇನ್ನಿತರ ಕೆನರಾ ಪ್ರದೇಶವನ್ನು ಕ್ರಿ. ಶ. ೧೫೧೨ರಲ್ಲಿ ಸಂದರ್ಶಿಸಿದನು. [ಅರಮೆಂಡೊ ಕೊರ್ಟೆಸನ್ ನಿಂದ ಭಾಷಾಂತರಿಸಲ್ಪಟ್ಟಿದೆ–1944.]

ಪೋರ್ತುಗೀಸರೊಡನೆ ಒಪ್ಪಂದ ಮಾಡಿಕೊಂಡಿದ್ದನೆಂದು ಪೋರ್ತುಗೀಸ್ ದಾಖಲೆಗಳು ತಿಳಿಸಿವೆ.[೧೬]

ಈ ಶಾಸನದ ಮತ್ತೊಂದು ಪಂಕ್ತಿಯಲ್ಲಿ ಭೈರಸನೆಂದು ತಿಳಿಸಿದ ಕಾರಣ, ಅದೇ ಕಾಲದಲ್ಲಿ ಭೈರವರಾಯನೆಂಬ ಅರಸನು ಕಾರ್ಕಳದಲ್ಲಿ ಆಳಿಕೊಂಡಿರುವುದರಿಂದ[೧೭], ಕಾರ್ಕಳ ಭೈರರಸ ರಾಜ್ಯಕ್ಕೂ ಮತ್ತು ಚೌಟ ರಾಜ್ಯಕ್ಕೂ ಸಾಮಾನ್ಯ ಗಡಿ ಇರುವುದರಿಂದ ಮತ್ತು ಅವರೊಳಗಿನ ಘರ್ಷಣೆ ಕುರಿತು ಈ ಹಿಂದೆ ಕೆಲವು ಶಾಸನಗಳು ಉಲ್ಲೇಖಿಸಿರುವುದರಿಂದಲೂ, ಇಲ್ಲಿ ಉಲ್ಲೇಖಿಸಿದ ಭೈರವರಾಯನು ಕಳಸ ಕಾರ್ಕಳ ಭೈರರಸನೆಂದು ತಿಳಿಯುವುದು ಸೂಕ್ತವಾಗಿದೆ.

ಬಂಗ : ಕಾರ್ಕಳ ಅರಸರು ಒಂದಾಗಿ ಚೌಟ ಸೀಮೆಯನ್ನು ಧಾಳಿ ಮಾಡಲು ಹೊಂಚು ಹಾಕುತ್ತಿರುವ ಕಾಲದಲ್ಲಿ ಚೌಟ ತುಳುವ ಅರಸ ಮತ್ತು ನಂದಳಿಕೆ ಕಿನ್ನಕ್ಕ ಹೆಗ್ಗಡೆಯವರು ಶ್ರೀ ಕೃಷ್ಣಾನಂದ ಒಡೆಯರ ಮತ್ತು ಅವರ ಶಿಷ್ಯರಾದ ವೇದಾನಂದ ಒಡೆಯರ ಸಮ್ಮುಖದಲ್ಲಿ ಕ್ರಿ. ಶ. ೧೫೨೮ರಲ್ಲಿ ಒಪ್ಪಂದವನ್ನು ಮಾಡಿಕೊಂಡರು. ಈ ಒಪ್ಪಂದದಂತೆ "ತೆಂಕ ಬಡಗು ಬಂಗರು ಭಯಿರರಸರು ಎಲ್ಲರು ಕುಂದ ಹೆಗ್ಗಡೆಯವರು ನಿಮ್ಮ ಮೇಲೆ ಅರಸು ಅನುಸರಿಸಿಗಳ ಕೂಡಿಕೊಂಡು ಬಹಾಗ ನಾವು ನಮ್ಮ ಮಂದಿ ಮಾರ್ಗಣವನ್ನು ಕೂಡಿಕೊಂಡು ನಮ್ಮ ಅರ್ಥ ಪ್ರಾಣವನ್ನು ವೆಚ್ಚಿಸಿ ನಿಮ್ಮ ಕೂಡೆ ಒದಗಿ ನಿಲ್ಲುವುದಕ್ಕೆ ತಪ್ಪೆವು. ಭಯಿರರಸರು ವೊಳಸಂದಾನವಿಕ್ಕಿ ನಮ್ಮನ್ನು ಕಾಣಿಸಿಕೊಳ್ಳ ಬೇಕೆಂದಾಗ ನಾವು ನಿಮ್ಮ ಬಿಟ್ಟು ಕಾಣೆವು. ಕಂಡರೂ ಇತ್ತರ್ತರಿಗೂ ಒಂದಾಗಿ ಕಾಣುವುದಲ್ಲವೆ ಒಬ್ಬರ ಬಿಟ್ಟು ಒಬ್ಬರು ಕಾಣಸಲ್ಲದು.......... ನಮ್ಮ ಮೇಲೆ ಕಾರಕಳದ ಭಯಿರರಸರು ಭಂಗರು ಕುಂದ ಹೆಗ್ಗಡೆಯವರು ಅರಸು ಅನುಸರಿಸಿ ಕೊಂಡು ನಮ್ಮ ಸೀಮೆಯನ್ನು ಕೆಡಿಸಬೇಕೆಂದು ಖಿರಿಟ್ಟುಕೊಂಡು ಬಂದಾಗ ನಿಮ್ಮ ಅರ್ಥ ಪ್ರಾಣವನ್ನು ವೆಚ್ಚಿಸಿ ಕಾದುಕೊಡುವುದಕ್ಕೆ ತಪ್ಪಬಾರದು. ನಿಮಗೂ ಭೈರಸರಿಗೂ ಸಂಧಾನವಾದರೆ ಒಬ್ಬರು ಬಿಟ್ಟು ಒಬ್ಬರು ನೋಡಸಲ್ಲದು. ನೋಡಿದರೂ ಇಬ್ಬರು ಒಂದಾಗಿ ನೋಡುವ. ಬಂಗರು ನಮ್ಮ ಮೇಲೆಅರಸು ಅನುಸರಿಗಳ ಕೂಡಿಕೊಂಡು ಮೊಹರ್ಲಿ ಬಹಾಗ ನಿಮ್ಮ ಮೂರುಸಾವಿರಗಳು ಪಕ್ಷ ವಿಕ್ಕ್ಯಸಹ ನಿಮ್ಮ ಅರ್ಥ ಪ್ರಾಣವನ್ನು ವೆಚ್ಚಿಸಿ ಕಾದು ಕೊಡುವುದಕ್ಕೆ ತಪ್ಪಲಾಗದು....ಬಾಳಿದರೂ ಒಂದಾಗಿ ಬಾಳುವೆವಲ್ಲದೆ ನಿಮ್ಮ ಬಿಟ್ಟು ಕಾದಸಲ್ಲದು. ಇದಕ್ಕೆ ತಪ್ಪಿದವರು ವಾರಣಾಸಿಯಲ್ಲಿ ಸಾವಿರ ಮಂದಿ ಯತೀಶ್ವರರ

---

೧೬. Danvers–*The Portugues in India*. I. P.215.

೧೭. ಕೆ. ವಿ. ರಮೇಶರು ಕಳಸ–ಕಾರಕಳ ಅರಸರ ವಂಶಾವಳಿಯಲ್ಲಿ ಇವನು ಭೈರವನು 1510–1535ರ ವರೆಗೆ ಆಳಿದನೆಂದು ತಿಳಿಸಿದ್ದಾರೆ. ತುಳು ನಾಡಿನ ಇತಿಹಾಸ P. 120.

ಕೊಂದಪಾಪಕ್ಕೆ ಹೋಹೆವು. ಏಳು ಘಟ್ಟದಲ್ಲಿ ಇಳಿದ ಕಪಿಲೆಯ ಕೊಂದ ಪಾಪಕ್ಕೆ ಹೋಹೆವು. ಈ ಬರಹ ತಾಮ್ರ ಶಾಸನದ ಒಕ್ಕಣೆಗೆ ನಾವು ತಪ್ಪಿದರೆ ನಮ್ಮ ಸಂತಾನದ ಮೇಲೆ ನಂದಳಿಕೆ ದಯಿಯವಗಳು ವಿಚಾರಿಸಿಕೊಂಬರು. ನಿಮ್ಮ ಸಂತಾನದ ಮೇಲೆ ನಂದಳಿಕೆ ದೈಯಿಗಳು ವಿಚಾರಿಸಿಕೊಂಬರು."[೧೮]

ಈ ಶಾಸನವಲ್ಲಿ ತುಳುವರಸ ಚೌಟ, ನಂದಳಿಕೆ ಶಿಸ್ನಕ್ಕ ಹೆಗ್ಗಡೆಯವರು ಒಂದು ಪಕ್ಷವಾಗಿಯೂ ಇನ್ನೊಂದು ಪಕ್ಷದಲ್ಲಿ ಬಂಗರು ಭೈಯಿರರಸ ಒಡೆಯರು ಮತ್ತು ಕುಂದ ಹೆಗ್ಗಡೆಯವರು ಕಾಣಿಸಿಕೊಳ್ಳುತ್ತಾರೆ. ಈ ಪಂಗಡಗಳು ತಮ್ಮ ತಮ್ಮೊಳಗಿನ ವೈರವನ್ನು ಸಾಧಿಸುತ್ತಿದ್ದರೆಂದು ಶಾಸನದಿಂದ ತಿಳಿಯುತ್ತದೆ. ಭೈರರಸ ಒಡೆಯರು ಚೌಟರ ಪ್ರಾಬಲ್ಯ ಮುರಿಯಲು ಚೌಟ ಒಕ್ಕೂಟದ ರಾಜರಲ್ಲಿ ಒಳಸಂಧಾನದಂತೆ ಕುಯುಕ್ತಿಯನ್ನೆಸಗುತ್ತಿದ್ದರೆಂದೂ ಆದರಿಂದ ಜಾಗ್ರತರಾಗಿರಬೇಕೆಂದೂ ಈ ಕರಾರು ಒತ್ತಿ ತಿಳಿಸುತ್ತದೆ. "ಬಾಳಿದರೆ ಒಂದಾಗಿ ಬಾಳುವ, ಅಲ್ಲದೆ ನಿಮ್ಮ ಬಿಟ್ಟು ಕಾದ ಸಲ್ಲದು." ಎಂಬುದೇ ಈ ಕರಾರಿನ ತಿರುಳು. ಒಟ್ಟಿನಲ್ಲಿ ಈ ಕರಾರು ಅಂದಿನ ತುಳುನಾಡಿನ ರಾಜಕೀಯ ಸ್ಥಿತಿಯನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. ನಂದಳಿಕೆ ಮತ್ತು ಚೌಟರ ಒಪ್ಪಂದವು ಕೃಷ್ಣಾನಂದ ಒಡೆಯ ಮತ್ತು ಅವರ ಶಿಷ್ಯ ವೇದಾನಂದ ಒಡೆಯರ ಸಮ್ಮುಖದಲ್ಲಾಯಿತು. ಇದರಿಂದ ಧಾರ್ಮಿಕ ಪ್ರಭಾವಶಾಲಿಗಳು ರಾಜಕೀಯದಲ್ಲಿ ಸಮತೋಲನವನ್ನು ಕಾದುಕೊಂಡು ಬರಲು ಪ್ರಯತ್ನಿಸಿರುವರೆಂದು ಈ ಶಾಸನದಿಂದ ತಿಳಿಯಬಹುದು.

ಚೌಟ ಮತ್ತು ಭೈರರಸರ ಒಪ್ಪಂದ : ಪರಸ್ಪರ ಕಚ್ಚಾಡಿಕೊಳ್ಳುತ್ತಿದ್ದ ಈ ಅರಸುಮನೆತನದವರು ಕ್ರಿ. ಶ. ೧೫೪೩ ರಲ್ಲಿ ಒಂದು ಒಪ್ಪಂದಕ್ಕೆ ಬಂದರೆಂದು ಕಾರ್ಕಳದಲ್ಲಿ ಸಿಕ್ಕಿದ ಒಂದು ಶಾಸನವು ತಿಳಿಸುತ್ತದೆ. ಇದರಂತೆ "ಶಾಲಿವಾಹನ ಶಕ ವರುಷ ೧೪೬೫ನೇ ಶೋಭಕೃತು ಸಂವತ್ಸರದ ಚೈತ್ರಶುದ್ಧ ೪ ರಲ್ಲು ಶ್ರೀಮತ್ ಚಂದಲದೇವಿಯ ಕುವರ ಪಾಂಡ್ಯಪ್ಪ ಅರಸರಿಗೂ, ತಿರುಮಲರಸ ಚೌಟರಿಗೂ ನಾಡ್ರಬಳ್ಳಿ ಅಯಿಸಾವಿರ ಅಳಾ ಮಾರಮ್ಮ ಹೆಗ್ಗಡೆಯವರ ಮುಂದಿಟ್ಟುಕೊಟ್ಟ ತಾಮ್ರ ಶಾಸನದ ಕ್ರಮವೆಂತೆಂದರೆ ನಾವು ನೀವು ಏಕೋಭಾವದಲ್ಲಿ ನಡೆವಾಗ ಒಳಗೆ ಒಂದು ಹೊರಗೆ ಅನ್ಯರು ರಾಯರು ದನಕರು ಮುಣಿದು ಬಹಾಗ ನಿಮ್ಮ ಸಂಗಡ ನಮ್ಮ ಮಂದಿ ಕುದುರೆ ಸಹವಾಗಿ ಒದಗಿ ನಿಲ್ಲುವೆವು. ನಮ್ಮ ಮೇಲೆ ಮುನಿದು ಬಹಾಗ ನೀವು ನಿಮ್ಮ ಮಂದಿ ಮಾರ್ಗಣೆ ಸಹ ಕೂಡಿ ಒದಗಿ ನಿಲ್ಲುವುದು. ನಮ್ಮ ನಿಮ್ಮ ಗಡಿಯಲ್ಲಿ ನಾಡಿರ ಕಾಲಕ್ಕೆ ಕಾಳಗ ಸಲ್ಲದು ಅಥವಾ ದುರ್ಮನುಷ್ಯರು ಮಾಕ್ಕಳಿಂದ ಕಸ್ತಿಕಲಹ ಬಂದರು

೧೮. ಐಗಳ-ದ. ಕ. ಜಿಲ್ಲೆಯ ಇತಿಹಾಸ P. 440–71.

ಮಾತುಕತೆ ತಿದ್ದಿಕೊಂಬ ನಮ್ಮ ನಿಮ್ಮ ಅನುಸರಿಗಾಗಿ ಹೊರತು ನಮ್ಮ ತೆಗೆದು ನೀವು ಕಾಣಿಸಿ ಕೊಳ್ಳಸಲ್ಲದು, ಕೊಳ್ಳಲಿಲ್ಲ. ನಮ್ಮಲ್ಲಿ ದೋಷದ್ರೋಹಗಳ ಮಾಡಿ ಬಂದವರನ್ನು ನೀವು ಇರಿಸಿಕೊಳ್ಳಸಲ್ಲದು. ಈ ಕಬ್ಬಿಗೆ ತಪ್ಪಿದರೆ ಗುಮ್ಮಟನಾಥ ನೇಮೀಶ್ವರರಿಗೂ, ನಮಗೂ, ಸುಲಲಿತ ಕೀರ್ತಿ ಭಟ್ಟಾರಕರಿಗೂ, ನಂದಳಿಕೆ ನಾಲ್ಕು ದೈವಗಳಿಗೂ ತಪ್ಪಿದರೆಂದು ಬರಸಿ ಕೊಟ್ಟ ಶಾಸನ."[೧೯]

ಈ ಒಪ್ಪಂದದ ಪ್ರಾಮುಖ್ಯತೆ ಏನೆಂದರೆ, ಚೌಟ ಮತ್ತು ಕಾರಕಳ ರಾಜ್ಯಕ್ಕೆ ತುಳುನಾಡಿನ ಹೊರಗಿನಿಂದ ಅಪಾಯ ಒದಗಿ ಬಂತು. ಇದನ್ನು ಎದುರಿಸಲು ಪರಸ್ಪರ ಕಚ್ಚಾಡುತ್ತಿದ್ದ ಚೌಟ ಮತ್ತು ಭಯಿರಸ ಒಡೆಯರು ಪರಸ್ಪರ ಒಪ್ಪಂದವನ್ನು ಮಾಡಿಕೊಂಡರು. ತುಳುನಾಡಿಗೆ ಈ ಕಾಲದಲ್ಲಿ ಹೊರಗಿನಿಂದ ಬಂದ ಅಪಾಯ ಯಾವುದು ? 'ಕೆಳದಿ ನೃಪವಿಜಯ' ಕಾವ್ಯವು ತಿಳಿಸುವಂತೆ ಕೆಳದಿ ಸದಾಶಿವ ನಾಯಕನು ಅಚ್ಯುತರಾಯನ ಆಜ್ಞೆಯಂತೆ ತುಳುರಾಜರನ್ನು ಬಗ್ಗಿಸಿ ಕಾಸರಗೋಡಿನಲ್ಲಿ ತೊಲಗದ ಕಂಬವನ್ನು ರಚಿಸಿದನು.[೨೦] ವೀರಶೈವ ಮತಾವಲಂಬಿಗಳಾದ ಕೆಳದಿ ಅರಸರ ಆಕ್ರಮಣದ ಭೀತಿಯನ್ನು ಹೋಗಲಾಡಿಸಲು ಕಳಸ–ಕಾರ್ಕಳ ಮತ್ತು ಚೌಟರು ಒಪ್ಪಂದಕ್ಕೆ ಬಂದರೆಂದು ಊಹಿಸಲು ಆಸ್ಪದವಿದೆ. ಈ ಕರಾರು ಎಮಾರ್ಳು ಮಾರಮ್ಮ ಹೆಗ್ಗಡೆಯವರ ಸಮ್ಮುಖದಲ್ಲಾಯಿತು.[೨೧]

ಹಿಂದಿನ ಕರಾರು ಶ್ರೀಕೃಷ್ಣಾನಂದ ಮತ್ತು ಅವರ ಶಿಷ್ಯವೇದಾನಂದರ ಮಧ್ಯಸ್ಥಿಕೆಯಲ್ಲಿ ನಡೆಯಿತೆಂದು ತಿಳಿದಿದ್ದೇವೆ. ಆದುದರಿಂದ ಯಾವ ರಾಜಕೀಯ ಒಪ್ಪಂದವೂ ಮೂರನೆಯವರ ಸಮ್ಮುಖದಲ್ಲಿ ಆಗುತ್ತಿತ್ತೆಂದು ಈ ಎರಡು ರಾಜಕೀಯ ಒಪ್ಪಂದಗಳಿಂದ ತಿಳಿಯಬಹುದು. ಕಾರ್ಕಳ ದೊರೆಯಂತೆ ಚೌಟರ ಸರಿಗೆ ಅಶ್ವಬಲ ಇರಿಸಿಕೊಳ್ಳುವ ಸಾಮರ್ಥ್ಯವಿರಲಿಲ್ಲವೆಂಬ ಡಾ. ಕೆ. ವಿ. ರಮೇಶರ ಅಭಿಪ್ರಾಯವು ಇಲ್ಲಿ ಸಮರ್ಪಕವಾಗಿದೆ.[೨೨] ಇದೇ ರೀತಿಯಲ್ಲಿ ಚೌಟರ ಕಾಲಾಳು ಸೈನ್ಯ ಭೈರರಸರಿಗಿಂತ ಉತ್ತಮ ರೀತಿಯಲ್ಲಿ ಇಲ್ಲವೆಂದು ಈ ಕರಾರಿ

---

೧೯. ಐಗಳ–**ದ. ಕ. ಜಿಲ್ಲೆಯ ಇತಿಹಾಸ** P. 442.

೨೦. ಲಿಂಗಣ್ಣ ಕವಿ–**ಕೆಳದಿ ನೃಪವಿಜಯ** ಸಂಧಿ ೨ ಪದ್ಯ 61. Rice: *History of Mysore* P. 442.

೨೧. ದ. ಕನ್ನಡ ಜಿಲ್ಲೆಯಲ್ಲಿ ಜೈನರು ರಾಜ್ಯ ಸ್ಥಾಪನೆ ಮಾಡಿದ ಮೇಲೆ ಒಂದೊಂದು ಮಾಗಣೆಗೆ ಒಬ್ಬೊಬ್ಬ ಜೈನ ಬಲ್ಲಾಳರನ್ನು ನೇಮಿಸಿದರು. ಇವರಲ್ಲಿ ಎನಾರ್ಳು ಮಾರಮ್ಮ ಹೆಗ್ಗಡೆಯವರು ಒಬ್ಬರು. ಇವರ ರಾಜ್ಯಕ್ಕೆ ಬೀಡು ಎನ್ನುತ್ತಾರೆ. ಎನಾರ್ಳು ಹೆಗ್ಗಡೆಯವರ ಕೈಕೆಳಗೆ ಬಹ ಮತ್ತು ಕೆಂಕ ಗ್ರಾಮಗಳಿದ್ದುವು. ಇವರ ಬೀಡು ಎನಾರ್ಳಿನಲ್ಲಿದೆ. ಎನಾರ್ಳು ಜನಾರ್ಧನ ದೇವಸ್ಥಾನ ಶೀಮೆ ದೇವಸ್ಥಾನವಾಗಿದೆ.

೨೨. ಡಾ. ಕೆ. ವಿ. ರಮೇಶ–**ತುಳು ನಾಡಿನ ಇತಿಹಾಸ** P. 117.

ನಿಂದ ತಿಳಿದು ಬರುತ್ತದೆ. ಸಾವಿರ ಕಾಲಕ್ಕೂ ನಮ್ಮ ನಿಮ್ಮ ಗಳಿಯಲ್ಲಿ ಕಾಳಗ ಸಲ್ಲದು ಅಥವಾ ದುರ್ಮನುಷ್ಯರು ಮುಕ್ಕಳಿಂದ ಕಸ್ತಿ ಕಲಹ ಬಂದರೂ ಮಾತು ಕತೆ ತಿದ್ದಿಕೊಂಬ." ಎಂಬುದು ಈ ಕರಾರಿನ ತಿರುಳು.

ಈ ಒಪ್ಪಂದದ ನಂತರ ಶಾಸನಗಳಲ್ಲಾಗಲೀ ಯಾ ಇನ್ನಿತರ ಸಮಕಾಲೀನ ಐತಿಹಾಸಿಕ ದಾಖಲೆಗಳಾಗಲೀ ಕಾರ್ಕಳ ಮತ್ತು ಚೌಟರಸರ ಘರ್ಷಣೆಯ ಕುರಿತು ಯಾವ ಉಲ್ಲೇಖನವೂ ಈ ವರೆಗೆ ತಿಳಿದುಬಂದಿಲ್ಲ. ಆದರೂ ಶ್ರೀಯುತ ಗಣಪತಿರಾವ್ ಐಗಳವರು "ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ"ದಲ್ಲಿ ಎರಡನೇ ಅಬ್ಬಕ್ಕದೇವಿ ನಂತರ ಅವಳ ಮಗಳಾದ ತಿರುಮಲಾದೇವಿ ಪಟ್ಟಕ್ಕೆ ಬಂದಳು. ಇವಳು ಕಾರ್ಕಳ ಭೈರರಸ ಒಡೆಯರೊಡನೆ ಕಾದಾಡಿ ಯುದ್ಧರಂಗದಲ್ಲಿ ಸತ್ತಳೆಂದೂ ನಂತರ ಇವಳ ಮಗ ಚಂದ್ರಶೇಖರ ಚಿಕ್ಕರಾಯನು ಪಟ್ಟಕ್ಕೆ ಬಂದು ಭೈರವರಾಯನ ಮೇಲೆ ದ್ವೇಷದ ಪ್ರತಿಕ್ರಿಯೆ ಸಾಧಿಸಲು ಕೆಳದಿ ಅರಸರ ವೆಂಕಟಪ್ಪ ನಾಯಕನ ಸಹಾಯಬೇಡಿದನೆಂದೂ ಮತ್ತು ಇವರಿಬ್ಬರು ಒಂದಾಗಿ ಭೈರರಸ ಒಡೆಯರನ್ನು ಸೋಲಿಸಿದರೆಂದು ತಿಳಿಸಿದ್ದಾರೆ.[೨೩]

ಆದರೆ ತಿರುಮಲಾದೇವಿಯು ಅಬ್ಬಕ್ಕ ರಾಣಿಯ ಮಗಳೆಂದು ಈ ವರೆಗೆ ಸಿಕ್ಕಿದ ಶಾಸನಗಳಾಗಲೀ ಯಾ ಸಮಕಾಲೀನ ದಾಖಲೆಗಳಾಗಲೀ ಸಮರ್ಥಿಸುವುದಿಲ್ಲ. ಇವರ ಅಭಿಪ್ರಾಯದಂತೆ ತಿರುಮಲಾದೇವಿ ಕ್ರಿ.ಶ. ೧೫೮೨ ರಿಂದ ೧೬೦೬ ವರೆಗೆ ಉಲ್ಲಾಳವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿಕೊಂಡಿದ್ದಳು. ಆದರೆ ಪೋರ್ತುಗೀಸರ ದಾಖಲೆಗಳು ೧೫೯೧ರಲ್ಲಿ ಉಲ್ಲಾಳದಲ್ಲಿ ರಾಜನಿದ್ದನೆಂದು ತಿಳಿಸಿವೆ.[೨೪] ಚಂದ್ರಶೇಖರ ಚಿಕ್ಕರಾಯ ಚೌಟನು ಕ್ರಿ.ಶ.೧೬೦೬–೧೬೨೮ರ ವರೆಗೆ ಉಲ್ಲಾಳದಲ್ಲಿ ಆಳಿದ್ದಾನೆಂದು ತಿಳಿಸಿದ್ದಾರೆ. ಆದರೆ ಇಟೇಲಿ ಪ್ರವಾಸಿ ಡೆಲ್ಲಾವೆಲ್ಲಿ ಕ್ರಿ. ಶ. ೧೬೨೩ರಲ್ಲಿ ಉಲ್ಲಾಳದಲ್ಲಿ ಹಿಂದಿನ ರಾಣಿಯ ತಂಗಿ ಅಬ್ಬಕ್ಕದೇವಿಯು ಆಳಿದ್ದಳೆಂದು ತಿಳಿಸಿದ್ದನಲ್ಲದೆ ಅವಳನ್ನು ಭೆಟ್ಟಿ ಮಾಡಿದ ವಿಚಾರ ತನ್ನ ವರದಿಯಲ್ಲಿ ತಿಳಿಸಿದ್ದಾನೆ.[೨೫] ಆದುದರಿಂದ ಐಗಳು ತಿಳಿಸುವ ಚೌಟ–ಭೈರರಸ ಘರ್ಷಣೆಯನ್ನು ಒಪ್ಪಿಕೊಳ್ಳುವುದು ಇಲ್ಲಿ ಕಷ್ಟವಾಗಿದೆ.

---

೨೩. ಐಗಳ–ದ. ಕನ್ನಡ ಜಿಲ್ಲೆಯ ಇತಿಹಾಸ P. 302.

೨೪. ಪೋರ್ತುಗೀಸ ಅರಸನು ಗೋವೆ ರಾಜನಿಗೆ ಬರೆದ ಪತ್ರ. ಈ ಕಾಗದವು 12-1-1591 ರಲ್ಲಿ ಬರೆಯಲ್ಪಟ್ಟಿದೆ. *ARCHIVOPORTUGUESE ORIENTAL NOVA GOA* III Volume P. 243–44. quoted by Dr. Shastri Thesis– *The Portuguese in Kanara 1498-1763*. P. 134. Unpublished Thesis Submitted to Bombay University 1969.

೨೫. Della Valle–*His travels* II. P. 307–334. Trans by Edvard Gray.

ಕ್ರಿ.ಶ. ೧೬೪೬ರಲ್ಲಿ ಭೈರವರಾಯನು-ಕಾರ್ಕಳದಲ್ಲಿ ಗುಮ್ಮಟಾಭಿಷೇಕವನ್ನು ಜರುಗಿಸಿದಾಗ "ಚೌಟರು ನಿತ್ಯ ಪೂಜೆಗೆ ಮನಮುಟ್ಟಿ ಭೂಮಿಯನ ವಿಂಗಡಿಸಿ ಪಟ್ಟಿ ಬರೆಸಿ ಗುಮ್ಮಟ ಜಿನನಿಗೆ ಕೊಟ್ಟರೆಂದು," ಆ ಕಾಲದಲ್ಲಿ ಜೀವಿಸಿದ್ದ ಕವಿ ಚಂದ್ರಮ ತಿಳಿಸಿದ್ದಾನೆ.[೨೬] ಇದರಿಂದ ಕಾರ್ಕಳ ಭೈರರಸ ಮತ್ತು ಚಾವುಟರೊಳಗೆ ಉತ್ತಮ ಸಮ್ಬಂಧವಿತ್ತೆಂದು ತಿಳಿದರೆ ತಪ್ಪಾಗಲಿಕ್ಕಿಲ್ಲ.

★ **ಕೆ. ಜಿ. ವಸಂತ ಮಾಧವ**

---

೨೬. ಚಂದ್ರಮ ಕವಿ : Edited by J. S. Chandrashekharan. **ಕಾರ್ಕಳ ಗೋಮಟೇಶ್ವರ ಚರಿತ್ರೆ.** ಸಂಧಿ ೧೭. ಪದ್ಯ ೮೦.

ವಚನಗಳಲ್ಲಿ ಪಂಚಮಹಾಪಾತಕದ ಕಲ್ಪನೆ

ಮಾನವನ ನಾಗರಿಕ ಜೀವನದಲ್ಲಿ ಪಾಪ–ಪುಣ್ಯಗಳ ಕಲ್ಪನೆಯು ಒಂದು ಬಹು ಪ್ರಮುಖವಾದ ಘಟ್ಟ: ಇದರಿಂದ ಅವನ ಧಾರ್ಮಿಕ ಜೀವನವು ಪ್ರಾರಂಭವಾಯಿತೆನ್ನಬಹುದು. ಈ ಕಲ್ಪನೆಯು ನಂತರವೇ ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ವಿಧಿ–ನಿಷೇಧಗಳು ಪ್ರವೇಶವಾಯಿತು. ಪಾಪ–ಪುಣ್ಯಗಳೆಂಬಿವು ಪರಸ್ಪರ ವಿರೋಧವೆನಿಸಿದ ಕಲ್ಪನೆಗಳಂತೆ ಕಂಡರೂ ಅವೆರಡೂ ಕ್ರಿಯೆಯೊಂದನ್ನು ಎರಡು ವಿರುದ್ಧ ದೃಷ್ಟಿಕೋನಗಳಿಂದ, ಎಂದರೆ ಇತ್ಯಾತ್ಮಕವಾಗಿ ಹಾಗೂ ನೇತ್ಯಾತ್ಮಕವಾಗಿ, ನೋಡಿ ಮೂಡಿಸಿಕೊಂಡ ಕಲ್ಪನೆಗಳಾಗಿವೆ. ಯಾವುದನ್ನು ಮಾಡಿದರೆ ಅಥವಾ ಭಾವಿಸಿದರೆ ತಪ್ಪು ಎಂದು ನಂಬಲಾಗಿದೆಯೋ ಆ ಕ್ರಿಯೆ ಅಥವಾ ಭಾವನೆಯು ಪಾಪಕರವಾದದ್ದು, ಅದಕ್ಕೆ ವಿರುದ್ಧವಾದದ್ದು (ಎಂದರೆ ಯಾವ ಕ್ರಿಯೆ ಅಥವಾ ಭಾವನೆ ಅಪೇಕ್ಷಣೀಯವೋ ಅದು) ಪುಣ್ಯಪ್ರದವಾದದ್ದು. ಆದರೆ 'ತಪ್ಪು' ಎನ್ನುವುದು ಮತ್ತು 'ಅಪೇಕ್ಷಣೀಯ' ಎನ್ನುವುದು ಕೇವಲ (absolute) ವಾದವಲ್ಲ, ಸಾಪೇಕ್ಷವಾದದ್ದು. ಆದ್ದರಿಂದ ಇವುಗಳ ನಿರ್ಧಾರಕ್ಕೆ ಒಂದು ಮಧ್ಯವರ್ತಿಯಾದ ಮಾನವೊಂದು ಬೇಕಾಗುತ್ತದೆ. ಈ ಮಾನವೇ ಧಾರ್ಮಿಕ ಗ್ರಂಥಗಳ ಉಕ್ತಿಗಳು; ಇವುಗಳನ್ನು ಅತಿಮಾನುಷವಾದ, ಕೇವಲವಾದ ಶಕ್ತಿಯೊಂದರ ಸಂಕಲ್ಪಗಳೆಂದು ನಂಬಲಾಗಿದ್ದುದರಿಂದ ಆ ಉಕ್ತಿಗಳಿಗೆ ವಿರುದ್ಧವಾಗಿ ನಡೆಯುವುದನ್ನೋ, ಅಥವಾ ಕೊನೆಯ ಪಕ್ಷ, ಆ ನಿಯಮಗಳಿಗೆ ಒಳಗಾಗದಿರುವುದನ್ನೋ ಪಾತಕವೆಂದು ಧಾರ್ಮಿಕ ಪರಿಸರದಲ್ಲಿ ನಾವು ಭಾವಿಸುತ್ತೇವೆ. ಎಂದರೆ ಅತಿಮಾನುಷವೆಂದು ನಂಬಿರುವ ಶಕ್ತಿಯನ್ನು ಕೆರಳಿಸುವ ಭಾವನೆಯನ್ನೋ ಕಾರ್ಯವನ್ನೋ ಪಾತಕ ಎಂದು ಸೂತ್ರಬದ್ಧವಾಗಿ ಹೇಳಬಹುದು.[೧] ಎಂದರೆ ಮಾನವನ ಧಾರ್ಮಿಕ ಜೀವನಕ್ಕೆ ಪಾಪ–ಪುಣ್ಯಗಳ ಕಲ್ಪನೆಯೇ ಬುನಾದಿಯೆಂದು ಹೇಳಬಹುದೇನೋ.

ಜಗತ್ತಿನಲ್ಲಿ ಉಪಲಬ್ಧವಿರುವ ಅತಿ ಪ್ರಾಚೀನ ಸಾಹಿತ್ಯವು ಧಾರ್ಮಿಕ ಸಾಹಿತ್ಯವೇ ಆಗಿರುವುದರಿಂದ ಜಗತ್ತಿನ ಸಾಹಿತ್ಯವು ಧಾರ್ಮಿಕ ಸಾಹಿತ್ಯವಾಗಿಯೇ ಮೊದಲು ರೂಪುಗೊಂಡಿತು ಎನಿಸುತ್ತದೆ. ಭಾರತದ ಅತ್ಯಂತ ಪ್ರಾಚೀನ ಸಾಹಿತ್ಯವಾದ ವೇದಗಳಲ್ಲಿ ಈ ಪಾಪ-ಪುಣ್ಯಗಳ ಕಲ್ಪನೆಯು ಆಳವಾಗಿರುವುದರಿಂದಲೇ ಅದು ಬಹು ಮಟ್ಟಿಗೆ ಪ್ರಾರ್ಥನಾ ಸಾಹಿತ್ಯವಾಗಿರುವುದು ಋಗ್ವೇದದ ಋಚಿಗಳಲ್ಲಿನ ಪಾಪದ ಕಲ್ಪನೆಯು ಸಾಕಷ್ಟು ಬೆಳೆದಿರುವ ಸ್ಥಿತಿ

---

೧. Encyclopaedia of Religion and Ethics, Vol. XI: p. 545

ಯುವು. ಪಾತಕಗಳಿಂದ ಯಾವ ಅತಿಮಾನುಷ ಶಕ್ತಿಗಳಿಗೆ ಕೋಪವುಂಟಾಗಬಹುದೋ ಅವುಗಳನ್ನು, ಅದರಲ್ಲಿಯೂ ವರುಣ ಮತ್ತು ಆದಿತ್ಯರನ್ನು ಕುರಿತು ಹಲವಾರು ಪ್ರಾರ್ಥನಾ ಪದ್ಯಗಳು ಋಗ್ವೇದದಲ್ಲಿವೆ.[೨] ಆದರೆ ಋಗ್ವೇದದ ಕಲ್ಪನೆಯ ಪ್ರಕಾರ ಪಾಪಕೃತ್ಯವು ಮಾನವನ ಶಕ್ತಿಯನ್ನು ಮೀರಿ ನಡೆಯುವಂತಹುದು: ಮನುಷ್ಯನು ಪಾತಕವನ್ನು ಮಾಡುವುದಕ್ಕೆ ಕಾರಣ ವಿಧಿ, ಮಾದಕ ದ್ರವ್ಯಗಳು, ಕೋಪ, ದ್ಯೂತ, ಅಜಾಗರೂಕತೆ, ಅಥವಾ ಸ್ವಪ್ನಸ್ಥಿತಿಯೆಂದು ಅಲ್ಲಿ ಒಂದೆಡೆ ಹೇಳಿದೆ (ಋಗ್ವೇದ: VII 86·6)[೩]. ಸೂತ್ರಗಳ ಕಾಲಕ್ಕೆ ಪಾತಕಗಳನ್ನು ಅವುಗಳ ತೀವ್ರತೆಗನುಗುಣವಾಗಿ ವರ್ಗೀಕರಿಸಲಾಯಿತು. ಒಂದು ರೀತಿಯ ವರ್ಗೀಕರಣದ ಪ್ರಕಾರ ಪಾತಕಗಳು ಎರಡು ಬಗೆ: ಪತನೀಯ (ಒಬ್ಬನನ್ನು ಜಾತಿಭ್ರಷ್ಟನನ್ನಾಗಿ ಮಾಡುವ ತೀವ್ರತೆಯುಳ್ಳ ಪಾಪ) ಮತ್ತು ಅಶುಚಿಕರ (ಜಾತಿಹೀನನಾಗದಿದ್ದರೂ ಅಪವಿತ್ರನನ್ನಾಗಿ ಮಾಡುವ ಪಾತಕಗಳು). ವಸಿಷ್ಠ ಧರ್ಮಸೂತ್ರವು ಪಾತಕಿಗಳನ್ನು ಏನಸ್ವಿಗಳು, ಮಹಾಪಾತಕಿಗಳು ಮತ್ತು ಉಪಪಾತಕಿಗಳೆಂದು ವಿಂಗಡಿಸಿದರೆ, ಬೌಧಾಯನ ಧರ್ಮಸೂತ್ರವು ಪತನೀಯ, ಉಪಪಾತಕ ಮತ್ತು ಮಹಾಪಾತಕಗಳೆಂದು ಪಾತಕಗಳ ವಿಂಗಡಣೆ ಮಾಡುತ್ತದೆ.[೪] ಈ ವಿಂಗಡಣೆಯನ್ನು ಗಮನಿಸಿದರೆ ಪತನೀಯವನ್ನೇ ಮುಂದೆ ಮಹಾಪಾತಕವೆಂದು ಪರಿಗಣಿಸಿದಂತೆ ಕಾಣಿಸುತ್ತದೆ. ಛಾಂದೋಗ್ಯ ಉಪನಿಷತ್ತಿನ ಕಾಲಕ್ಕಾಗಲೇ ಮಹಾಪಾತಕಗಳ ಸಂಖ್ಯೆಯು ಐದು ಎಂದು ಭಾವಿಸಲಾಗಿತ್ತು, ಆದರೆ ಅವು ಯಾವುವು ಎನ್ನುವ ಬಗ್ಗೆ ಏಕಾಭಿಪ್ರಾಯವಿರಲಿಲ್ಲ. ಛಾಂದೋಗ್ಯದಲ್ಲಿ ಹೇಳಿರುವ ಮಹಾಪಾತಕಗಳೆಂದರೆ ಬ್ರಹ್ಮಹತ್ಯೆ, ಸುರಾಪಾನ, ಬ್ರಾಹ್ಮಣ ಸುವರ್ಣಾಪಹರಣ, ಗುರುತಲ್ಪಗಮನ ಮತ್ತು ಈ ನಾಲ್ಕು ಪಾತಕಗಳಲ್ಲಿ ಯಾವುದೊಂದನ್ನಾದರೂ ಮಾಡಿದವನ ಸಹವಾಸ.[೫] ಆದರೆ ಒಂದು ಕೋಶವು ಈ ಮೇಲಿನ ಪಟ್ಟಿಯಲ್ಲಿ ಮಿಕ್ಕ ನಾಲ್ಕು ಒಂದೇ ಆಗಿದ್ದು, ಗುರುತಲ್ಪಗಮನದ ಬದಲಾಗಿ ತಾಯಿಯೊಡನೆ ಇರಿಸಿಕೊಂಡ ಲೈಂಗಿಕ ಸಂಬಂಧವನ್ನು ಹೇಳಿ, ಆ ಐದು ಬಹುಪಾಲು ಸ್ಮೃತಿಗಳಲ್ಲಿ ಉಕ್ತವಾದ ಮಹಾಪಾತಕಗಳೆಂದು ಹೇಳುತ್ತದೆ.[೬]

ಹೀಗೆ ಮಹಾಪಾತಕಗಳು ಯಾವುವು ಎಂಬುದರ ಬಗ್ಗೆ ಏಕಾಭಿಪ್ರಾಯವಿಲ್ಲವಿದ್ದರೂ, ಅವು ಐದೇ ಎಂಬುದು ಸ್ಥಿರವಾಯಿತು; 'ಪಂಚಮಹಾಪಾತಕ

---

೨. P. V. Kane: History of Dharmasastra, Vol. IV: P. 5

೩. ಅದೇ: ಪು. 8

೪. ಅದೇ: ಪು. 12-13

೫. ಅದೇ: ಪು. 15-16

೬. Sures Chandra Banerji: A Glossary of Smriti Literature: P. 91.

ವೆಂಬ ಮಾತೇ ಇದಕ್ಕೆ ನಿದರ್ಶನ. ಭಾರತದಲ್ಲಿನ ಇತರ ಧರ್ಮಗಳಲ್ಲಿಯೂ ಪಂಚಮಹಾಪಾತಕದ ಕಲ್ಪನೆಯು ಪ್ರವೇಶ ಪಡೆಯಿತು. ಆಯಾ ಧರ್ಮದ ಕಲ್ಪನೆಗನುಗುಣವಾಗಿ ಅವುಗಳು ಯಾವುವೆಂಬುದು ಭಿನ್ನರೀತಿಯಲ್ಲಿ ಹೇಳಲ್ಪಟ್ಟಿವೆ. ಜೈನರಿಗೆ ಬಾಲವಧೆ, ಸ್ತ್ರೀವಧೆ, ಗೋವಧೆ, ಬ್ರಾಹ್ಮಣವಧೆ ಮತ್ತು ಋಷಿವಧೆ- ಈ ಐದು ಪಂಚಪಾತಕಗಳೆಂದು 'ವಡ್ಡಾರಾಧನೆ'ಯು ಹೇಳುತ್ತದೆ.[೭] ಆದರೆ ಇವು ಹಿಂಸೆ, ಅಸತ್ಯ, ಚೌರ್ಯ, ಪರಸ್ತ್ರೀಸೇವನೆ, ಪರಿಗ್ರಹಮಹತ್ವವೆಂದು 'ಜೈನ ಪರಿಭಾಷೆ'ಯೆಂಬ ಕೋಶದಲ್ಲಿ ಹೇಳಲಾಗಿದೆ.[೮] ಬೌದ್ಧರಿಗೆ ಪಂಚ ಅಂತರಾಯಗಳೇ ಪಂಚಮಹಾಪಾತಕಗಳು.[೯] ಈ ಐದು ಅಂತರಾಯಗಳೆಂದರೆ ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ ಮತ್ತು ವೀರ್ಯಾಂತರಾಯಗಳು.[೧೦] ಆದರೆ ಬೇರೊಂದು ಆಕರದಲ್ಲಿ ಬೌದ್ಧರ ಪಂಚಾಂತರಾಯಗಳನ್ನು ಮಾತೃವಧೆ, ಪಿತೃವಧೆ, ಅರ್ಹತ್‌ವಧೆ, ಬೌದ್ಧನೊಬ್ಬನ ರಕ್ತಪಾತ ಮತ್ತು ಪುರೋಹಿತವರ್ಗದಲ್ಲಿ ಭೇದವನ್ನುಂಟು ಮಾಡುವುದು ಎಂದು ಹೇಳಿದೆ.[೧೧] ಈ ಮಾರ್ಗವನ್ನನುಸರಿಸಿ 'ವಿವೇಕ ಚಿಂತಾಮಣಿ'ಯೂ "ಬ್ರಹ್ಮಹತ್ಯ, ಸುರಾಪಾನ, ಸುವರ್ಣಸ್ತೇಯ, ಗುರುತಲ್ಪಗಮನ, ಮತ್ತವರ್ಕ ತತ್ಸಂಯೋಗವೆಂಬ ಮಹಾಪಾತಕಗಳು" ಎಂದು ಹೇಳುತ್ತದೆ.[೧೨] ಪಂಚಮಹಾಪಾತಕಗಳನ್ನು ಮಾಡಿದವರ ಮೇಲೆ ವಿಧಿಸಿರುವ ದಂಡವನ್ನು ಪಡೆಯುವ ಅಧಿಕಾರವನ್ನು ಕೆಲವು ಶಾಸನಗಳು 'ಪಂಚಾಪರಾಧ'ವೆಂದು ಕರೆಯುತ್ತವೆ.[೧೩]

---

೭. ವಡ್ಡಾರಾಧನೆ (1970): ಪು. 96.
೮. ಟಿ. ವಿ. ವೆಂಕಟಾಚಲಶಾಸ್ತ್ರೀ: ಶ್ರೀವತ್ಸ ನಿಘಂಟು: ಪು. 255.
೯. Binoytosh Bhattacharya: An Introduction to Buddhist Esoterism: P. 58.
೧೦. ತತ್ತ್ವರತ್ನ ಪ್ರದೀಪಿಕೆ: ಪು. 292.
೧೧. Corpus Inscriptionum Indicanum, III: P. 34 ಅಡಿ ಟಿಪ್ಪಣಿ.
೧೨. ವಿವೇಕ ಚಿಂತಾಮಣಿ (ಸಂ. ಜಿ. ಎಂ. ಉಮಾಪತಿಶಾಸ್ತ್ರಿ, 1969): ಪು. 154.
೧೩. Indian Epigraphical Glossary; P. 231.
ಅಂತೆಯೇ 'ಪಂಚಾಪರಾಧ'ಗಳೆಂದು ಪ್ರಸಿದ್ಧವಾಗಿರುವ ಪಾತಕಗಳನ್ನು ಮಾಡಿದವರಿಗೆ ಶಿಕ್ಷೆಯನ್ನು ವಿಧಿಸುವ ನ್ಯಾಯಾಧಿಕಾರಿಗೆ 'ಪಂಚಾಪರಾಧಿಕ' ಎಂದು ಕೆಲವು ಶಾಸನಗಳಲ್ಲಿ ಬರುತ್ತದೆ. ಹಾಗೆಯೇ "ಪಂಚಾಪರಾಧ"ವು ಈ ಅಪರಾಧಕ್ಕೆ ಹಾಕುವ ದಂಡವನ್ನು ಸೂಚಿಸುತ್ತದೆ. 'ಪಂಚಾಪರಾಧ'ಗಳೆಂದರೆ ಕಳವು, ಸ್ತ್ರೀಹತ್ಯೆ, ವ್ಯಭಿಚಾರ, [illegible], ನಿಯಮೋಲ್ಲಂಘನೆ, [illegible], ಅನಧಿಕೃತ ಗರ್ಭಧಾರಣೆ, ಅಶ್ಲೀಲತೆ, ಪರಹಿಂಸೆ ಮತ್ತು ಗರ್ಭಪಾತವೆಂದು ಕೆಲವರ ಅಭಿಪ್ರಾಯ (ಅದೇ: ಪು. 85). ಸ್ತೇಯ, ನಿಯಮವಿರುದ್ಧ ಹತ್ಯೆ, ಪರಸ್ತ್ರೀಗಮನ ಇವು ಮೂರೂ ದೈಹಿಕ ಪಾತಕಗಳು: ವಾಕ್ಪಾರುಷ್ಯ, ಅಸತ್ಯ, ಪರನಿಂದೆ, ಅಸಂಬದ್ಧ ಮಾತುಕತೆಗಳು
[ಮುಂದಿನ ಪುಟಕ್ಕೆ]

೨

ಪ್ರಸ್ತುತ ಲೇಖನದಲ್ಲಿ ಪರಿಶೀಲನೆಗೆ ಮುಖ್ಯವಾದ ವಿಚಾರವೆಂದರೆ ಹನ್ನೆರಡನೆಯ ಶತಮಾನದ ಪರಿಸರದ ವಚನಕಾರರು ಹೇಗೆ ಈ ಪಂಚಮಹಾಪಾತಕದ ಕಲ್ಪನೆಯನ್ನು ತಮ್ಮ ಉದ್ದೇಶಸಾಧನೆ ಮತ್ತು ಧ್ಯೇಯಪ್ರಸಾರ, ಧರ್ಮಪ್ರಸಾರಗಳಿಗಾಗಿ ಬಳಸಿಕೊಂಡರು ಎಂಬುದು. ವಚನಕಾರರ ಕಾಲಕ್ಕೆ ಮಹಾಪಾತಕವೆಂದರೆ ಮೇಲೆ ಹೇಳಿದ ಪಟ್ಟಿಗಳಲ್ಲಿ ಉಕ್ತವಾದ ಯಾವುವಾದರೊಂದು ಎಂಬ ಪಾರಿಭಾಷಿಕ ಅರ್ಥಕ್ಕಿಂತ ತುಂಬ ಘೋರವಾದ ಪಾಪ ಎಂಬ ಸಾಮಾನ್ಯಾರ್ಥವೇ ಹೆಚ್ಚು ಪ್ರಚಲಿತವಾಗಿತ್ತು. ಉದಾಹರಣೆಗೆ ಈ ವಚನವನ್ನು ನೋಡಿ:

"ಶರಣ ಸಂಬಂಧ ವನಳಿದ ಬಳಿಕ
ಮರಳಿ ಭವಿಯ ಬೆರೆಸಲಾಗದು.
ಬ್ರಹ್ಮಹತ್ಯ, ಭ್ರೂಣಹತ್ಯ, ವೈತರಣಿ, ದುರ್ಗತಿ
ಪಂಚಮಹಾತಕದಿಂದಧಿಕ ನೋಡಾ"[೧೪]

ಇಲ್ಲಿ ಘೋರತೆಯನ್ನು ಆರೋಹಣ ಕ್ರಮದಲ್ಲಿ ಸೂಚಿಸಲಾಗಿದೆ: ಬ್ರಹ್ಮಹತ್ಯೆಗಿಂತ ಭ್ರೂಣಹತ್ಯೆ ಹೆಚ್ಚು ಘೋರವಾದುದು, ಆವೆರಡಕ್ಕಿಂತ ವೈತರಣಿ, ಆ ಮೂರಕ್ಕೂ ಹೆಚ್ಚು ಘೋರವೆಂದರೆ ದುರ್ಗತಿ, ಎಲ್ಲಕ್ಕಿಂತ ಅಧಿಕವಾದುದೆಂದರೆ ಪಂಚಮಹಾಪಾತಕ ಎಂಬುದನ್ನು ಕ್ರಮವಾಗಿ ಹೇಳಿ "ಶರಣ ಸಂಬಂಧವನಳಿದ ಬಳಿಕ ಭವಿಯನ್ನು ಬೆರಸು"ವುದು ಎಷ್ಟು ಘೋರವೆಂಬುದನ್ನು ಹೆಚ್ಚು ಹೆಚ್ಚು ತೀವ್ರವಾದುದನ್ನು ಕ್ರಮವಾಗಿ ಹೇಳಿ ಭಯೋತ್ಪಾದನೆಯನ್ನು ಮಾಡುವ ತಂತ್ರವನ್ನಿಲ್ಲಿ ಬಳಸಲಾಗಿದೆ. ಮೇಲೆ ಹೇಳಿದ ಸಾಮಾನ್ಯಾರ್ಥವು "ಲಿಂಗಪ್ರಸಾದಿಗಳಲ್ಲದವರ ಸಂಗ ಪಂಚಮಹಾಪಾತಕವೆಂದುದು ಲಿಂಗವಚನ"[೧೫] ಎಂಬ ವಚನಭಾಗದಲ್ಲಿ ಹೆಚ್ಚು ಸ್ಪಷ್ಟವಾಗಿದೆ. ವಚನಕಾರರು ತಪ್ಪು ಎಂದು

[ಹಿಂದಿನ ಪುಟದಿಂದ]

ಮಾತಿಗೆ ಸಂಬಂಧಿಸಿದ ಪಾತಕಗಳು; ಪರರ ಆಸ್ತಿಯ ಆಸೆ, ಕಳ್ಳದ ವಸ್ತುಗಳ ಬಗ್ಗೆ ಆಲೋಚನೆ, ಅಸತ್ಯವನ್ನೇ ಸತ್ಯವೆಂದು ಸಮರ್ಥಿಸುವುದು– ಈ ಮೂರೂ ಮಾನಸಿಕ ಪಾತಕಗಳು ಹೀಗೆ ಹತ್ತು ಬೇರೆಯ ಅಪರಾಧಗಳನ್ನು ಮತ್ತೆ ಕೆಲವರು ಹೇಳುತ್ತಾರೆ. (Corpus Inscriptionum Indicarum III: P. 189 ಅಡಿಟಿಪ್ಪಣಿ). ಬೌದ್ಧರ ಪ್ರಕಾರ "ದಶಾಪರಾಧ"ಗಳೆಂದರೆ ಇವು: ಹತ್ಯೆ, ಸ್ತೇಯ ಪರಸ್ತ್ರೀಗಮನ, ಅಸತ್ಯ, ನಿಂದೆ, ಇತರರನ್ನು ನೋಯಿಸುವುದು, ಸೋಮಾರಿತನ, ದ್ವೇಷ, ದುರಾಸೆ ಮತ್ತು ಧಾರ್ಮಿಕ ನಿಯಮೋಲ್ಲಂಘನೆ. (A. Getty ; The Gods of Northern Buddhism : XXV foot note). "ದಶಾಪರಾಧ"ಗಳ ಕಲ್ಪನೆಯು ಬೌದ್ಧರಿಗೆ ವಿಶಿಷ್ಟವಾದುದೆಂದು ಕಾಣುತ್ತದೆ.

೧೪. ಬಸವ ವ. 670: ಪು. 267-8.

೧೫. ಅದೇ: 781: ಪು. 314.

ಉಗ್ಗಡಿಸುತ್ತಿರುವ ನಡವಳಿಕೆಯು ಎಷ್ಟು ತೀವ್ರವಾದ ಪಾತಕ ಎಂದು ಮನದಟ್ಟು ಮಾಡಿಕೊಡಲು ಅವರು ಆಗಲೇ ಜನಮನದಲ್ಲಿ ಆಳವಾಗಿ ಬೇರೂರಿದ್ದ ಪಂಚಮಹಾಪಾತಕದ ಕಲ್ಪನೆಯನ್ನು ನೆರವಿಗೆ ಪಡೆದರು. ಹಾಗೆಯೇ ತಾವು ಪ್ರಸಾರ ಮಾಡುತ್ತಿದ್ದ ಧ್ಯೇಯಗಳಿಗನುಗುಣವಾಗಿ ನಡೆಯುದವನನ್ನು 'ಪಂಚಮಹಾಪಾತಕ'ನೆಂದು ಕರೆದರು.[೧೬] ಚನ್ನಬಸವಣ್ಣನ ವಚನವೊಂದರಲ್ಲಿ ಅಂತಹವನನ್ನು 'ಪಂಚಮಹಾತಕಿ'ಯೆಂದೂ ಕರೆಯಲಾಗಿದೆ.[೧೭]

ವಚನಕಾರರು 'ಪಂಚಮಹಾಪಾತಕ'ದ ಕಲ್ಪನೆಯನ್ನು ಉಪಯೋಗಿಸಿಕೊಂಡ ವೈಶಿಷ್ಟ್ಯವು ಅದಕ್ಕೆ ಪಾರಿಭಾಷಿಕಾರ್ಥದ ಬದಲು ಸಾಮಾನ್ಯಾರ್ಥವನ್ನು ರೂಢಿಗೆ ತಂದು, ಅದೊಂದು ಕನ್ನಡದ ನುಡಿಗಟ್ಟಾಗುವಂತೆ ಮಾಡಿದುದಕ್ಕೆ ಮಾತ್ರ ಸೀಮಿತವಾಗಲಿಲ್ಲ. ಅದನ್ನು ಮತ್ತಷ್ಟು ಆಳವಾದ ಪರಿಣಾಮಕ್ಕಾಗಿ ಬಳಸಲಾಯಿತು; ಎಷ್ಟೋ ವೇಳೆ, ಐದು ವಿಷಯಗಳನ್ನು ಸಂದರ್ಭಕ್ಕೆ ತಕ್ಕಂತೆ ನಿರೂಪಿಸಿ, ಅವುಗಳನ್ನೇ 'ಪಂಚಮಹಾಪಾತಕ'ಗಳೆಂದು ಕರೆದರು. ತಾವು ಯಾವ ನಡತೆ, ಭಾವನೆಗಳ ವಿರುದ್ಧವಾದ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದರೋ ಅವುಗಳ ಹೀನತೆಯು ತೀವ್ರತೆಯು ಪರಿಣಾಮಕಾರಿಯಾಗಿ ಜನತೆಯಲ್ಲಿ ಅನುಭವಕ್ಕೆ ಬರುವಂತೆ ಆಗಲೇ ದೃಢಮೂಲವಾಗಿದ್ದ ಕಲ್ಪನೆಯೊಂದನ್ನು ಅನೇಕ ಸಂದರ್ಭಗಳಲ್ಲಿ ಅನೇಕ ಪಟ್ಟಿಗಳನ್ನು ಕೊಡುವುದರ ಮೂಲಕ ಪ್ರಯತ್ನಿಸಿದ್ದು ಅವರ ವೈಶಿಷ್ಟ್ಯ. ಹೀಗೆ ವಿಭಿನ್ನ ಪಟ್ಟಿಗಳನ್ನು ಕೊಡುವುದು ಅನಿವಾರ್ಯವಾಯಿತವರಿಗೆ. ಏಕೆಂದರೆ ಅವರು ಬೋಧಿಸಬೇಕಾದ ವಿಷಯಗಳು ಎಷ್ಟೋ ಇದ್ದಂತೆ, ಅವರು ತೊಡೆದು ಹಾಕಬೇಕಾದ ಕೊಳೆಯೂ ಸಾಕಷ್ಟಿತ್ತು; ಮತ್ತು ಆ ಕೊಳಕು ವಸ್ತುಗಳು ಸಮಾನವಾಗಿ ಹೀನವೆಂದು ಅವರಿಗೆನಿಸಿದುದರಿಂದ ಅವನ್ನು ಮಹಾಪಾತಕದಂತೆ ಹೀನವಾದುದು ಎಂದು ಹೇಳಬೇಕಾಯಿತು. ಎಂದರೆ 'ಪಂಚಮಹಾಪಾತಕ'ಗಳೆಂಬ ಪೂರ್ವದ ಕಲ್ಪನೆಯನ್ನು ವೀರಶೈವ ಧರ್ಮದ ಚೌಕಟ್ಟಿನಲ್ಲಿ ಮತ್ತೆ ಹೊಸದಾಗಿ ಅಳವಡಿಸಿದರು.

ಹಡಪದ ರೇಚಣ್ಣನೆಂಬೊಬ್ಬ ವಚನಕಾರನು ಪಂಚಮಹಾಪಾತಕಗಳೆಂದು ಕಳವು, ಪರದ್ವಾರ, ಹುಸಿ, ಅಂತಿಕಾಂಕ್ಷೆ ಮತ್ತು ಹಿಂಸೆಗಳೆಂದು ಪಟ್ಟಿ ಮಾಡುತ್ತಾನೆ.[೧೮] ಇದೇ ಪಟ್ಟಿಯೇ ಬೇರೆಯ ಕ್ರಮದಲ್ಲಿ ವಚನಶಾಸ್ತ್ರ

---

೧೬. ಬಸವ ವ. 411: ಪು. 162; ಅಕ್ಕನ ವ. 243: ಪು. 108; ಚನ್ನಬಸವ. 498: ಪು.224; ಅಲ್ಲಮ ವ ಚಂ. 730: ಪು. 161: ಶಿವರ ವ. ಪು. 302 ಇತ್ಯಾದಿ.

೧೭. ಚನ್ನಬಸ.ವ. 409: ಪು. 286.

೧೮. ಕರ್ನಾಟಕ ವಿಶ್ವವಿದ್ಯಾಲಯದ ವಚನಶಾಸ್ತ್ರ ವಿಭಾಗದ ಹಸ್ತಪ್ರತಿ 603: ವಚನ 1.

ಸಾರದಲ್ಲಿ ಕಾಣಿಸಿಕೊಂಡಿವೆ.[೧೯] ಈ ಪಟ್ಟಿಯಲ್ಲಿ ವೀರಶೈವ ಧರ್ಮಕ್ಕೆ ವಿಶಿಷ್ಟವಾದ ಕಲ್ಪನೆಗಳಲ್ಲಾವುದೂ ಸೇರಿಲ್ಲ. ಹಾಗೆಯೇ ಆದಯ್ಯನ ಈ ಕೆಳಗಿನ ವಚನದಲ್ಲಿ ಐದು ದೊಡ್ಡ ಪಾತಕಗಳನ್ನು ಹೆಸರಿಸುತ್ತಾನೆ:

“ಪರಸತಿಗಳುಪುವ ಪಾರದಾರಿಯರಿವು ಪರಕು ಕಾಣಿಭೋ!
ಭ್ರೂಣಹತ್ಯಕನ್ರ್ನಿಯು ಶಿವಜ್ಞಾನ ಸ್ವಯವಲ್ಲ ಕಾಣಿಭೋ!
ಸ್ತ್ರೀ ಬಾಲ ಘಾತಕಂಗೆ ನಿಜಭಾವ ತಾನೆ ಭ್ರಮೆಯುಕ್ಕು ಕಾಣಿಭೋ!
ಕ್ಷಣಕ್ಕೊಂದು ಬಗೆವ ಕ್ಷಣಿಕಚಿತ್ತರಿಗೆ ಬ್ರಹ್ಮಾನುಸಂಧಾನದನು
ನೈದದು ಕಾಣಿಭೋ!”[೨೦]

ಈ ವಚನದಲ್ಲಿ ಹೇಳಿರುವ ಪರದ್ವಾರ, ಭ್ರೂಣಹತ್ಯ, ಸ್ತ್ರೀಘಾತಕ, ಬಾಲಘಾತಕ ಮತ್ತು ಕ್ಷಣಿಕ ಚಿತ್ತಗಳನ್ನು, ಅವನು ಸ್ಪಷ್ಟಪಡಿಸದಿದ್ದರೂ, ಪಂಚಮಹಾಪಾತಕಗಳೆಂದು ಭಾವಿಸಿದಂತಿದೆ. ಏಕೆಂದರೆ ಇಲ್ಲಿ ಉಕ್ತವಾದವುಗಳಲ್ಲಿ ಬಹುಪಾಲು ಸ್ಮೃತಿಗಳಲ್ಲಿ ಬರುವ ಪಟ್ಟಿಯಲ್ಲಿ ಕಾಣಿಸುವ ಪಾತಕಗಳು.

ಆದರೆ ಇತರ ಹಲವಾರು ವಚನಗಳಲ್ಲಿ ಕಾಣುವ ಪಟ್ಟಿಗಳು ವೀರಶೈವದ ವಿಶಿಷ್ಟ ಕಲ್ಪನೆಗಳಾದ ಪಂಚಾಚಾರ, ಅಷ್ಟಾವರಣ ಮುಂತಾದವುಗಳಿಗೆ ಸಂಬಂಧಿಸಿದವುಗಳು. ವಚನಕಾರರು ಶಿವಭಕ್ತರನ್ನು ಶಿವನೆಂದೇ ಭಾವಿಸುತ್ತಿದ್ದವರು. ಅಂತಹ ಭಕ್ತರೊಂದಿಗೆ ನಡೆದುಕೊಳ್ಳಬೇಕಾದ ರೀತಿಯನ್ನು ಚೆನ್ನಬಸವಣ್ಣ ಹೀಗೆ ವಿವರಿಸುತ್ತಾನೆ:

“ನಿಮ್ಮ ಭಕ್ತರ ಕಂಡು ಉದಾಸೀನವ ಮಾಡಿದಡೆ ಒಂದನೆಯ ಪಾತಕ,
ನಿಮ್ಮ ಭಕ್ತರ ಸಮಯೋಚಿತವನರಿಯದಿದ್ದಡೆ ಎರಡನೆಯ ಪಾತಕ,
ನಿಮ್ಮ ಭಕ್ತರೊಡನೆ ಮಾಱುತ್ತರವ ಕೊಟ್ಟಡೆ ಮೂಱನೆಯ ಪಾತಕ,
ನಿಮ್ಮ ಭಕ್ತರ ಸಕಲಾರ್ಥಕ್ಕೆ ಸಲ್ಲದಿದ್ದಡೆ ನಾಲ್ಕನೆಯ ಪಾತಕ,
ನಿಮ್ಮ ಭಕ್ತರಿಗೆ ಮಾಡಿದೆನೆಂದು ಮನದಲ್ಲಿ ಹೊಳೆದಡೆ ಐದನೆಯ ಪಾತಕ.
ಇಂತೀ ಮಹಾಪಾತಕವ ಕಳೆದುಳಿದ ಕೂಡಲ ಚೆನ್ನಸಂಗಯ್ಯ
ನಿಮ್ಮ ಶರಣ”[೨೧]

ಈ ವಚನದಲ್ಲಿ ಭಕ್ತನೊಡನೆ ನಡೆದುಕೊಳ್ಳಬೇಕಾದ ಐದು ಅಂಶಗಳನ್ನು ಸೂಚಿಸಿ, ಅವುಗಳಲ್ಲಿ ಪ್ರತಿಯೊಂದರ ವಿರುದ್ಧವಾಗಿ ನಡೆದುಕೊಳ್ಳುವುದನ್ನು ಒಂದೊಂದೂ ಮಹಾಪಾತಕದೊಡನೆ ಸಮೀಕರಿಸಿ, ಅವುಗಳನ್ನು ನಿವಾರಿಸಿಕೊಂಡವನು ಶರಣತ್ವಕ್ಕೇರುತ್ತಾನೆಂದು ಚನ್ನಬಸವಣ್ಣನ ಭಾವನೆ.

---

೧೯. ವಚನಶಾಸ್ತ್ರಸಾರ III. ಪು. 121.
೨೦. ಆದಯ್ಯ ವ. 150: ಪು. 90.
೨೧. ಚನ್ನಬ ವ. 423: ಪು. 192.

ಶಿವಭಕ್ತನಿಗೆ ತನಗೆ ಸಂಬಂಧಿಸದ ಯಾವುದರ ಬಗ್ಗೆಯೂ ಆಸಕ್ತಿಯಿರಬಾರದು; ಲೌಕಿಕವಾದ ಪರರ ವಸ್ತುಗಳ ಬಗ್ಗೆ ಮಾತ್ರವಲ್ಲ ಪರದೈವವೂ ಇವನಿಗೆ ಹೊಲ್ಲ ಎಂಬುದು ಶರಣರ ಅಭಿಪ್ರಾಯ. ತಾನು ನಂಬಿದ ದೈವದ ಬಗ್ಗೆ ಸಂಪೂರ್ಣ ನಿಷ್ಠೆಯಿಂದಿರಲು ಸಾಧ್ಯವಾಗುವುದು ಇತರ ದೈವಗಳಿಂದ ದೂರವಿದ್ದಾಗ ಮಾತ್ರ ಸಾಧ್ಯ, ಎಲ್ಲ ದೈವಗಳನ್ನೂ ಏಕರೀತಿಯಲ್ಲಿ ಪೂಜಿಸಹೊರಟರೆ ಯಾವುದರ ಬಗ್ಗೆಯೂ ಆಳವಾದ ನಿಷ್ಠೆ ಬೆಳೆಯಲಾರದೆಂಬುದು ಇದರ ಹಿಂದಿನ ಮನೋಭಾವ. ಹೀಗಾಗಿ ಒಬ್ಬ ಶರಣನು ಪರದೈವವನ್ನು ನಂಬುವುದನ್ನೂ ಮಹಾಪಾತಕವೆಂದು ಪರಿಗಣಿಸಿ ಅದನ್ನು ಇನ್ನಿತರ ನಾಲ್ಕು ವಿಷಯಗಳ ಜೊತೆಗೆ ಒಬ್ಬ ವಚನಕಾರ ಸೇರಿಸುತ್ತಾನೆ. ನೋಡಿ :

"ಪರಧನ, ಪರಸತಿ, ಪರದೈವ, ಪರನಿಂದೆ, ಪರಹಿಂಸೆ ಎಂಬ ಮಹಾಪಾತಂಕಗಳೊಡನೆ ಕೂಡಿ ಚರಿಸುವುದೇ ಕುಬುದ್ಧಿ".[೨೨]

ಬಹುಶಃ ಇಲ್ಲಿ ಪರದೈವವನ್ನು ನಂಬುವುದು ಎಷ್ಟು ಹೀನವಾದುದೆಂಬುದನ್ನು ಸ್ಪಷ್ಟಪಡಿಸಲೋಸುಗವಾಗಿಯೇ ಅದನ್ನು ಇತರ ಸಾರ್ವತ್ರಿಕವಾಗಿ ಪಾತಕಗಳೆಂದು ಪರಿಗಣಿಸಲಾಗಿರುವುದರೊಡನೆ ಸೇರಿಸಲಾಗಿದೆ. ಅಂತೆಯೇ ವೀರಶೈವ ಧರ್ಮವನ್ನು ಸ್ವೀಕರಿಸಿದ ವ್ಯಕ್ತಿ ಆ ಧರ್ಮವನ್ನು ಅಪ್ಪಿರುವುದು ಅದರ ವೈಶಿಷ್ಟ್ಯಗಳಿಗಾಗಿ; ಈ ಧರ್ಮದ ಪರಿಧಿಯೊಳಗೆ ಬಂದ ಮೇಲೂ ಹಿಂದಿನ ತನ್ನ ಆಚಾರ-ವ್ಯವಹಾರಗಳನ್ನುಳಿಸಿಕೊಳ್ಳುವುದಾದರೆ ಈ ಮತಾಂತರ ಅರ್ಥಹೀನ. ಆದ್ದರಿಂದ ವೀರಶೈವನು ವೀರಶೈವನಾಗಿಯೇ ಉಳಿಯಬೇಕಾದರೆ ತನ್ನ ಧರ್ಮದ ವಿಶಿಷ್ಟ ನಿಯಮಗಳಿಗೆ ಅನುಸಾರವಾಗಿ ನಡೆಯಬೇಕು. ಚನ್ನಬಸವಣ್ಣನ ಒಂದು ವಚನ ಹೀಗಿದೆ :

"ಭವಿಪಾಕವೆಂಬುದು ಪ್ರಥಮಪಾತಕ,
ಪ್ರತಿವಾದಿಗಳಿಗೆಣಗಿದಡೆ ಎರಡನೆಯ ಪಾತಕ,
ಗುರುವಾಕ್ಯವ ಮೀಱಿದಡೆ ಮೂರನೆಯ ಪಾತಕ,
ಪರಧನ ಪರಸ್ತ್ರೀಗಳುಪಿದಡೆ ನಾಲ್ಕನೆಯ ಪಾತಕ,
ಶಿವನಿಂದೆಯ ಕೇಳಿದಡೆ ಐದನೆಯ ಪಾತಕ,
ಇಂತೀ ಪಂಚಮಹಾಪಾತಕವು ಭಕ್ತಂಗಲ್ಲದೆ ಭವಿಗೆಲ್ಲಿಯದೋ"[೨೩]

ಈ ವಚನದಲ್ಲಿ ವಚನಕಾರನ ಮುಖ್ಯ ಗಮನ ಭಕ್ತ-ಭವಿಗಳಲ್ಲಿರುವ ಅಂತರದ ಮೇಲೆ. ಈ ಎರಡೂ ವಚನಕಾರನ ದೃಷ್ಟಿಯಲ್ಲಿ ಪರಸ್ಪರ ವಿರುದ್ಧವಾದುವು. ಭವಿತ್ವವನ್ನು ನೀಗಿಕೊಂಡು ಭಕ್ತನಾದರೆ ವಚನಕಾರನು ಹೇಳುವ ವಿಷಯಗಳು

೨೨. ವಚನ ಶಾಸ್ತ್ರಸಾರ III: ಪೃ. 111.
೨೩. ಚನ್ನಬ ವ. 391: ಪೃ. 179-80.

ಪಾತಕಗಳಾಗುತ್ತವೆ ಎಂದು ಹೇಳುವುದರ ಮೂಲಕ ಇದು ಭಕ್ತನಿಗೆ (ಎಂದರೆ ವೀರಶೈವನಿಗೆ) ವಿಶಿಷ್ಟವಾದ ಪಾತಕ ಕಾರ್ಯಗಳು ಎಂಬುದನ್ನು ಸೂಚಿಸಲಾಗಿದೆ. ಇಲ್ಲಿಯೂ ಹಿಂದಿನ ವಚನದಲ್ಲಿ ನೋಡಿದ ಹಾಗೆಯೇ ಸಾರ್ವತ್ರಿಕವಾದ ಕೆಲವು ಪಾತಕಗಳನ್ನು ಹೆಸರಿಸಿ (ಉದಾ: ಪರಸ್ತ್ರೀ ಪರಧನ. ಇಲ್ಲಿ ಈ ಎರಡು ಬೇರೆ ಬೇರೆ ಪಾತಕಗಳನ್ನು ಒಂದೇ ಎಂದು ಹೇಳಲಾಗಿದೆ). ಅವುಗಳಂತೆಯೇ ವೀರಶೈವರು ತಿರಸ್ಕರಿಸಿದ ಭವಿಪಾಕ, ಪ್ರತಿಮಾಪೂಜೆ, ಶಿವನಿಂದೆ (ಇದು ಗಣಾಚಾರದ ವ್ಯಾಪ್ತಿಗೆ ಒಳಪಡುವುದು), ಗುರುವಾಕ್ಯೋಲ್ಲಂಘನೆ–ಇವುಗಳೂ ಪಾತಕಗಳೆಂದು ಹೇಳಲಾಗಿದೆ. ಚನ್ನಬಸವಣ್ಣನದೇ ಮತ್ತೊಂದು ವಚನದಲ್ಲಿ ಇಲ್ಲಿ ಹೇಳದ ಮತ್ತೆ ಕೆಲವು ವಿಷಯಗಳನ್ನು ಮಹಾಪಾತಕಗಳೆಂದು ಪಟ್ಟಿ ಮಾಡಲಾಗಿದೆ :

"ಅಂಗದ ಮೇಲಣ ಲಿಂಗ ಹಿಂಗಿದಡೆ ಪ್ರಥಮ ಪಾತಕ,
ಭವಿಪಾಕವನುಂಡಡೆ ದ್ವಿತೀಯ ಪಾತಕ,
ಪ್ರತಿಮಾದಿಗಳಿಗೆಱಗಿದಡೆ ತೃತೀಯ ಪಾತಕ,
ಪ್ರಸಾದ ಸಂಬಂಧವನ್ನಱಿಯದಿರ್ದಡೆ ಚತುರ್ಥ ಪಾತಕ,
ಕಾಯದ ಜೀವದ ಸಂದುಬಿಚ್ಚುವಲ್ಲಿ
ಪ್ರಾಣವ ಲಿಂಗದಲ್ಲಿ ನಿಕ್ಷೇಪವ ಮಾಡದಿರ್ದಡೆ ಪಂಚಮ ಪಾತಕ
ಕೂಡಲ ಚನ್ನ ಸಂಗಮದೇವಾ
ಪಂಚಮಹಾಪಾತಕವ ಕಳೆದಲ್ಲದೆ ಶರಣನಲ್ಲ" [೨೪]

ಈ ವಚನದಲ್ಲಿ ವೀರಶೈವನಾದವನು ಸದಾ ಲಿಂಗಧಾರಿಯಾಗಿರಬೇಕಾದ ನಿಯಮವನ್ನು ಹೇಳುವುದರ ಜೊತೆಗೆ ಸಾವಿನ ಸಂದರ್ಭದಲ್ಲಿಯೂ ಪಾರ್ಥಿವ ದೇಹದಿಂದ ಲಿಂಗವನ್ನು ಬೇರ್ಪಡಿಸಬಾರದೆಂದು ನಿಯಮಿಸಲಾಗಿದೆ. ವಚನಕಾರರ ಕಾಲದಲ್ಲಿ ತಂದೆಯ ಸಾವಿನ ಸಂದರ್ಭದಲ್ಲಿ ಲಿಂಗವನ್ನು ತೆಗೆದು ಅದನ್ನು ಮುಂದೆ ಮಗನು ಧರಿಸುತ್ತಿದ್ದ ರೂಢಿಯಿದ್ದುದನ್ನು ಇಲ್ಲಿ ನೆನೆಯಬಹುದು.[೨೫] ಈ ಎರಡು ವಿಷಯಗಳಲ್ಲದೆ ಮೇಲೆ ಉದಾಹರಿಸಿದ ಭವಿಪಾಕ, ಪ್ರತಿಮಾ ಪೂಜೆಗಳನ್ನೂ ಹೇಳಿ, ಪ್ರಸಾದ ಸಂಬಂಧದ ಮಹತ್ವವನ್ನು ಇಲ್ಲಿ ಹೇಳಲಾಗಿದೆ.

ವೀರಶೈವರ ಆಚಾರ–ವಿಚಾರಗಳು ಸಂಪೂರ್ಣವಾಗಿ ಸಾತ್ವಿಕವಾಗಿರಬೇಕೆಂಬುದು ಎಲ್ಲ ವಚನಕಾರರ ಅಭಿಮತ. ಗುರುಲಿಂಗಜಂಗಮಗಳು ಅವರಿಗೆ ಜೈನರಿಗೆ ರತ್ನತ್ರಯಗಳಿದ್ದಂತೆ ಪವಿತ್ರವಾದವು. ದೇವರ ದಾಸಿಮಯ್ಯನ

೨೪. ಚನ್ನಬ ವ 889: ಪು. 419–20.

೨೫. ಚನ್ನಬ ವ 401: ಪು. 186 (ತಂದೆಯು ಅಂಗದ ಮೇಲಣ ಲಿಂಗವ ಹಿಂಗಿಸಿ ಆತನ ಭೂತಪ್ರಾಣಿಯ ಮಾಡಿ ಕಳುಹುವಾತ ಸುತನೇ? ಅಲ್ಲ; ಅವ ಮಾತೃಕಸು").

ಒಂದು ವಚನವು ಇವುಗಳಲ್ಲಿ ಕೆಲವುಗಳಿಗೆ ವಿರುದ್ಧವಾಗಿ ನಡೆಯುವುದು ಮುಂತಾದ ಐದನ್ನು ಪಂಚಮಹಾಪಾತಕವೆಂದು ಹೇಳುತ್ತದೆ.

"ದರುಶನ ತಪ್ಪುಕ ಪ್ರಥಮ ಪಾತಕ,
ಸ್ಪರ್ಶನ ತಪ್ಪುಕ ದ್ವಿತೀಯ ಪಾತಕ,
ಗುರು ತಪ್ಪುಕ ತೃತೀಯ ಪಾತಕ
ಪರದಾರ ಚತುರ್ಥ ಪಾತಕ,
ಮಾಂಸಾಹಾರ ಪಂಚಮ ಮಹಾಪಾತಕ
ಈ ಐವರೊಡನೆ ನುಡಿಯಲಿಲ್ಲಯ್ಯ"[೨೬]

ಇಲ್ಲಿನ ಪಾತಕಗಳು ಎರಡು ಬಗೆಯವು: ಒಂದು, ವಿಧಿಯರೂಪದಲ್ಲಿರುವಂಥವು, ಮತ್ತೊಂದು ನಿಷೇಧದ ರೂಪದಲ್ಲಿರುವುವು. ಶಿವನ ದರ್ಶನ ಸ್ಪರ್ಶನಗಳು, ಮತ್ತು ಗುರುವಿಗೆ ವಿಧೇಯವಾಗಿರುವುದು ಭಕ್ತನಿಗೆ ಅವಶ್ಯಕವಾದವುಗಳು. ಇವುಗಳಿಗೆ ವಿರುದ್ಧವಾಗಿ ನಡೆಯುವದು ಪಾತಕಗಳಾದರೆ, ಪರದಾರ ಮಾಂಸಾಹಾರಗಳಿಂದ ದೂರವಿರದಿರುವದು ಪಾತಕಗಳು. ವೈದಿಕಗ್ರಂಥಗಳಲ್ಲಿ ನಾಲ್ಕು ಪಾತಕಗಳನ್ನು ಹೆಸರಿಸಿ, ಅವುಗಳಲ್ಲಿ ಯಾವುದೊಂದನ್ನು ಗೈದವನ ಸಂಸರ್ಗವನ್ನೇ ಐದನೆಯ ಪಾತಕವೆಂದು ಹೇಳಿದವೆಂಬುದನ್ನು ಹಿಂದೆಯೇ ನೋಡಿದೆವು. ಅದೇ ಧಾಟಿಯಲ್ಲಿಯೇ ಇಲ್ಲಿ ಐದು ಪಾತಕಗಳನ್ನು ಹೆಸರಿಸಿ, ಅವನ್ನು ಮಾಡಿದವರ ಜೊತೆಯ ವ್ಯವಹಾರವು ವರ್ಜ್ಯ ಎಂದು ಹೇಳಲಾಗಿದೆ.

ಈ ಮೇಲೆ ಹೇಳಿದ ಪಾತಕಗಳು ಬಹುಮಟ್ಟಿಗೆ ಬಾಹ್ಯ ಆಚಾರಗಳಿಗೆ ಸಂಬಂಧಿಸಿದವು. ಸಿದ್ಧರಾಮನು ಅದಕ್ಕಿಂತ ಸ್ವಲ್ಪ ಮುಂದೆ ಹೋಗಿ ಒಂದು ಚೇತನವು ಮುಕ್ತವಾಗಲು ಇರುವ ಮಾನಸಿಕ ಅಡ್ಡಿಗಳನ್ನೇ ಪಾತಕಗಳೆಂದು ಕರೆದು, ಆ ಮಾನಸಿಕ ಆತಂಕ ನಿವಾರಣೆಯೇ ಭಕ್ತನ ಕರ್ತವ್ಯವೆಂಬುದನ್ನು ಸುಂದರವಾಗಿ ಹೇಳುತ್ತಾನೆ.

"ಆಗಮದ ಅನು, ನಿಯಮದ ಸಂದೇಹ; ಯೋಗದ ಭ್ರಾಂತು
ಕ್ರೀಯ ಸಂಕಲ್ಪ, ನಷ್ಟದ ಚಿಂತೆ
ಈ ಪಂಚಮಹಾಪಾತಕವುಳ್ಳಾತ ಭಕ್ತಿಯ ನಿರುಮಗನಲ್ಲ.
ಚಿಂತೆ, ಸಂಕಲ್ಪ, ಭ್ರಾಂತು, ಸಂದೇಹ, ಅನುವಿನ ಗುಣವಳಿದು ತಾನಾದಡೆ
ತಾನೇ ನಿತ್ಯಕ್ಷಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ."[೨೭]

ಈ ವಚನದಲ್ಲಿ ಮಹಾಪಾತಕಗಳೆಂದು ಕರೆದಿರುವುವೆಲ್ಲವೂ ವಿಭಿನ್ನ ಮಾನಸಿಕ

---

೨೬. ದೇವರ ದಾ ವ. 25: ಪು.9–10

೨೭. ಸಿದ್ಧರಾ ವ. 466 ಪು. 141.

ಸ್ಥಿತಿಗಳೇ ಆಗಿವೆ. ಭಕ್ತಿಯು ಸಾಧನೆಯೆಂದರೆ ಆತಂಕ ರೂಪದಲ್ಲಿರುವ ಇವು ಗಳ ನಿವಾರಣೆಯೇ ಎಂಬ ಧ್ವನಿ ಇಲ್ಲಿದೆ.

ಬಸವಾದಿ ವಚನಕಾರರು ಶರಣರು. ಹನ್ನೆರಡನೆಯ ಶತಕದಲ್ಲಿ ಬೆಳೆಸಿದ ವೀರಶೈವಧರ್ಮದ ಪ್ರಸಾರ ಕಾರ್ಯವನ್ನು ಕೈಕೊಂಡರು. ಆ ಕಾರ್ಯದಲ್ಲಿ ಅವರು ಕರ್ನಾಟಕದ ಮಟ್ಟಿಗೆ ಬಹುಪಾಲು ಯಶಸ್ವಿಗಳೂ ಆದರು. ಹಲ-ವಾರು ಜನರು ಇತರ ಧರ್ಮಗಳಿಂದ ವೀರಶೈವಕ್ಕೆ ಮತಾಂತರಗೊಂಡರು. ಇದಕ್ಕೆ ಅನೇಕ ಕಾರಣಗಳಿದ್ದುವು. ಇತರ ಧರ್ಮಗಳಲ್ಲಿ ತುಂಬಿದ್ದ ನಿಯಮ ಗಳ ಕಠೋರತೆ, ಸ್ತ್ರೀ-ಪುರುಷ ಅಸಮಾನತೆ, ಧರ್ಮದ ಹೆಸರಿನಲ್ಲಿ ನಡೆಯು ತ್ತಿದ್ದ ಕ್ರೌರ್ಯ ಮತ್ತಿತರ ಅಸಹ್ಯಕಾರ್ಯಗಳು; ಕತ್ತಲೆಯ ವಾತಾವರಣ ದಲ್ಲಿ ಆಕರ್ಷಣೀಯವಾಗಿ ಕಂಡ ವೀರಶೈವದ ತತ್ತ್ವಗಳು; ಹಲವರಿಗೆ ಶರಣರ ನೇರ ಸಂಪರ್ಕದಿಂದ ಅವರ ವರ್ಚಸ್ಸಿಗೆ ಒಳಗಾಗಿರಲೂ ಬೇಕು. ಹಾಗೆ ಮತಾಂ ತರಗೊಂಡವರಲ್ಲಿ ಕೆಲವರಾದರೂ ಮತ್ತೆ ಇತರ ಧರ್ಮಗಳಿಗೆ ಹೋಗಿರಬೇಕು. ಅಂಥವರ ಬಗ್ಗೆ ವಚನಗಳು ಕೆಲವೆಡೆಗೆ ಖಂಡಿಸುತ್ತವೆ. ಮತ್ತೆ ಕೆಲವೆಡೆ ಅವರು ತುಳಿಯುತ್ತಿದ್ದ ತಪ್ಪು ಹಾದಿಯ ಅರಿವು ಮಾಡಿಕೊಡುವುದರ ಮೂಲಕ ತಿದ್ದಲು ಪ್ರಯತ್ನಿಸುತ್ತವೆ. ಬಸವಣ್ಣನ ಈ ವಚನವು ವೀರಶೈವನಾದವನು ಮತ್ತೆ ಭವಿಯಾದರೆ ಉಂಟಾಗುವ ತಪ್ಪಿನ ಅಗಾಧತೆಯನ್ನು ಅರಿವು ಮಾಡಿ ಕೊಡಲು ಪ್ರಯತ್ನಿಸುತ್ತದೆ.

> **“ಮುತ್ತು ನೀರಲಿ ಹುಟ್ಟಿ ಮತ್ತೆ ನೀರಪ್ಪುದೆ?**
> **ಗುರುಕಾರುಣ್ಯವ ಪಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ**
> **ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ,**
> **ಆಚಾರದ್ರೋಹ, ಪ್ರಸಾದದ್ರೋಹ,**
> **ಇಂತೀ ಪಂಚಮಹಾಪಾತಕಂಗಳು**
> **ಭಕ್ತಂಗಲ್ಲದೆ ಭವಿಗೆಲ್ಲಿಯದೋ?”**[೨೮]

ಹೀಗೆ ವೀರಶೈವದಿಂದ ಹಿಂದಕ್ಕೆ ಹೋದವರು ಕಾಲಕ್ರಮೇಣ ಈ ಧರ್ಮವು ನಿಜವಾಗಿಯೂ ಶಾಂತಿಯನ್ನು ತಾರದಿರಬಹುದು, ಹಲವು ಕಾರಣಗಳಿಗಾಗಿ; ಮತ್ತೆ ಕೆಲವರಿಗೆ ಮತಾಂತರವು ಒಂದು ಬಗೆಯ ಹವ್ಯಾಸವಾಗಿದ್ದಿರಬಹುದು; ಮತ್ತೂ ಹಲವರು ತಮ್ಮ ಹಿಂದಿನ ಅಭ್ಯಾಸವನ್ನು ಬಿಡಲಾರದೆ ಅನಿ ವಾರ್ಯವಾಗಿ ಹಿಂದೆಗೆದಿರಬಹುದು. ಏನೇ ಆಗಲಿ. ಅಂತಹ ಕಾರ್ಯ ನಡೆಯುತ್ತಿತ್ತೆನ್ನಲು ಈ ವಚನದಂತಹ ಮಾತುಗಳು ಸಾಕ್ಷಿ

---

೨೮. ಬಸವ ವ. 767: ಪು. 309

ಅಲ್ಲಮನ ವಚನಗಳೂ, ಅಂತೆಯೇ ವ್ಯಕ್ತಿತ್ವವೂ ತನ್ನದೇ ವೈಶಿಷ್ಟ್ಯವನ್ನು ಪಡೆದವು. ವೀರಶೈವನಾದವನು ನಡೆದುಕೊಳ್ಳಬೇಕಾದ ರೀತಿ, ಅವನ ನಡಿಗೆಯ ಕಷ್ಟ-ನಿಷ್ಠುರಗಳನ್ನು ಆತ ತನ್ನೊಂದು ವಚನದಲ್ಲಿ ಈ ರೀತಿ ವರ್ಣಿಸುತ್ತಾನೆ :

> “ಪಂಚಮಹಾಪಾತಕಗಳಾವುದೆಂದಡೆ ಬಿತ್ತರಿಸುವರು. ಭವಿಯ
> ತಂದು ಭಕ್ತನ ಮಾಡುವುದೇ ಪ್ರಥಮ ಪಾತಕ.
> ಭಕ್ತರಿಗೆ ಶರಣೆಂಬುದೇ ದ್ವಿತೀಯ ಪಾತಕ. ಗುರುವೆಂಬುದೆ
> ತೃತೀಯ ಪಾತಕ, ಗುರುಲಿಂಗ ಜಂಗಮದ ಪ್ರಸಾದವ
> ಕೊಂಡಡೆ ನಾಲ್ಕನೆ ಪಾತಕ. ಗುಹೇಶ್ವರ ಲಿಂಗದಲ್ಲಿ
> ಓರಿದು ಭಕ್ತಿಯ ಮಾಡುವುದು ಪಂಚಮ ಪಾತಕ.”[೨೯]

ಇಲ್ಲಿ ಯಾವುದು ಶ್ರೇಷ್ಠವೋ ಅವುಗಳನ್ನೇ ಪಾತಕಗಳೆಂದು ಕರೆಯುವ ರೀತಿಯು ಓದುಗನನ್ನು ತಟ್ಟನೆ ಕಣ್ಸೆಳೆಯುತ್ತದೆ, ಈ ತಂತ್ರ ತುಂಬ ಪರಿಣಾಮಕಾರಿಯಾಗಿದೆ. ವ್ಯಂಗ್ಯದೊಡನೆ ಇವುಗಳ ಮಹತ್ವವನ್ನು ತಿಳಿಸುವುದರ ಜೊತೆಗೆ, ನಿಜವಾದ ಭಕ್ತನು ತನ್ನ ಆದರ್ಶಗಳನ್ನು ಅನುಸರಿಸುವುದು ಎಷ್ಟು ಕಠಿಣ ಎಂಬುದರ ಬಗ್ಗೆ ಈ ಮಾತಿನ ರೀತಿ ಧವನಿಸುತ್ತದೆ. ನಿಷ್ಠುರವಾದ ಈ ದಾರಿಯು ದುರ್ಬಲ ಮನಸ್ಸಿನವರಲ್ಲಿ ‘ಏಕಾದರೂ ಈ ಪಾತಕದ ಕೆಲಸವನ್ನು ಕೈಕೊಂಡೆವೋ’ ಎನಿಸುವಂತಹುದು. ಹೀಗೆ ವಿರುದ್ಧ ದಿಕ್ಕಿನ ನಿರೂಪಣೆಯಿಂದ ಈ ವಚನ ಪರಿಣಾಮ ಬೀರುವುದರಲ್ಲಿ ಬಹು ಯಶಸ್ವಿಯಾಗುತ್ತದೆ.

ಮೇಲಿನ ವಿವರಣೆಯಿಂದ ವಚನಕಾರರು, ತಮ್ಮ ಕಾಲದಲ್ಲಿ ಆಗಲೇ ಸ್ಥಿರವಾಗಿ ನೆಲೆಗೊಂಡಿದ್ದ ‘ಪಂಚಮಹಾಪಾತಕ’ಗಳ ಕಲ್ಪನೆಯನ್ನು ನೆರವಿಗೆ ಪಡೆದು ವೀರಶೈವ ಧರ್ಮಾಚರಣೆಯು ಯಾವ ವಿಷಯಗಳನ್ನು ನಿವಾರಿಸಲು ಬಯಸುತ್ತದೆ ಎಂದು ಹೇಳಿದರು. ತಾವು ಹೇಳುತ್ತಿರುವ ದೋಷಗಳನ್ನು ಮಹಾಪಾತಕಗಳೊಡನೆ ಸಮೀಕರಿಸುವುದರ ಮೂಲಕ ತಮ್ಮ ಹೇಳಿಕೆಗಳು ಆಳವಾದ ಪ್ರಭಾವ ಬೀರುವಂತೆ ಮಾಡಿದರು. ಎಂದರೆ ವಿಧಿ–ನಿಷೇಧಗಳನ್ನು ಸಾಧಾರಣವಾದ ಭಾಷೆಯಲ್ಲಿ, ಆದರೆ ಪ್ರಭಾವಪೂರ್ಣವಾಗಿ ಹೇಳಲು, ‘ಪಂಚಮಹಾಪಾತಕ’ದ ಕಲ್ಪನೆಯು ವಚನಕಾರರಿಗೆ ಗಣನೀಯ ನೆರವನ್ನು ನೀಡಿತು.

---

೨೯. ಅಲ್ಲಮ ವ. ಸಂ. 552. ಪು. 121.

ಸಂಕೇತಗಳು :

೧. ಬಸವ ವ : ಬಸವಣ್ಣನವರ ವಚನಗಳು (ಸಂ. ಆರ್. ಸಿ. ಹಿರೇಮಠ)

೨. ಚನ್ನಬ ವ: ಚನ್ನಬಸವಣ್ಣನವರ ವಚನಗಳು (ಸಂ: ಆರ್. ಸಿ. ಹಿರೇಮಠ)

೩. ವಚನ ಶಾಸ್ತ್ರಸಾರ : (ಸಂ: ಫ. ಗು. ಹಳಕಟ್ಟಿ)

೪. ಆದಯ್ಯ ವ : ಆದಯ್ಯನ ವಚನಗಳು (ಸಂ: ಉತ್ತಂಗಿ ಚೆನ್ನಪ್ಪ)

೫. ದೇವರ ದಾ ವ : ದೇವರ ದಾಸಿಮಯ್ಯನ ವಚನಗಳು (ಸಂ: ಎಲ್. ಬಸವರಾಜು)

೬. ಸಿದ್ಧರಾ ವ : ಸಿದ್ಧರಾಮೇಶ್ವರ ವಚನಗಳು (ಸಂ: ಆರ್. ಸಿ. ಹಿರೇಮಠ)

೭. ಅಲ್ಲಮ ವ ಚಂ : ಅಲ್ಲಮನ ವಚನ ಚಂದ್ರಿಕೆ (ಸಂ: ಎಲ್. ಬಸವರಾಜು)

೮. ಶಿವಶರ ವ : ಶಿವಶರಣೆಯರ ವಚನಗಳು (ಸಂ: ಆರ್. ಸಿ. ಹಿರೇಮಠ)

★ ಪಿ. ವಿ. ನಾರಾಯಣ

ಭಾಗವತಧರ್ಮ ಮತ್ತು ಕುಮಾರವ್ಯಾಸ

ವೈದಿಕಧರ್ಮದ ಅತ್ಯಂತ ಪ್ರಾಚೀನ ಸ್ವರೂಪವು ಭಕ್ತಿ ಪ್ರಧಾನ. ಜ್ಞಾನಪ್ರಧಾನ, ಯೋಗಪ್ರಧಾನವಿರದೆ ಯಜ್ಞಮಯ ಅಂದರೆ ಕರ್ಮಪ್ರಧಾನವಾಗಿತ್ತು. ಈ ಕರ್ಮಪ್ರಧಾನ ಮಾರ್ಗವು ಜೈಮಿನಿಯ ಮೀಮಾಂಸಾ ಸೂತ್ರದಲ್ಲಿ ವ್ಯವಸ್ಥಿತವಾಗಿ ವಿವೇಚಿಸಲ್ಪಟ್ಟಿತು. ಮೀಮಾಂಸಾ ಎಂಬ ಹೆಸರು ನೂತನವಾದರೂ ಯಜ್ಞಯಾಗಾದಿ ಧರ್ಮ ಪ್ರಾಚೀನವಾಗಿದೆ. ಇದೇ ವೈದಿಕ ಧರ್ಮದ ಮೊದಲನೆಯ ಮೆಟ್ಟಿಲು. ಮುಂದೆ ಯಜ್ಞಯಾಗಾದಿ ಬಾಹ್ಯ ಕರ್ಮಗಳಿಂದ ಜ್ಞಾನವಾಗುವುದು ಹೇಗೆ ಸಾಧ್ಯ ? ಎಂಬ ವಿಚಾರ ತಲೆದೋರಲು, ಜ್ಞಾನವು ಮಾನಸಿಕ ಸ್ಥಿತಿಯ ಪ್ರತೀಕ. ಇದರ ಮೂಲಕ ಪ್ರಯತ್ನ ಮಾಡದ ವಿನಾ ಪರಮೇಶ್ವರನ ಜ್ಞಾನವಾಗಲಾರದು ಎಂಬ ವಿಚಾರವುಂಟಾಗಲು ಕ್ರಮಾನುಸಾರ ಔಪನಿಷದಿಕ ಜ್ಞಾನದ ಪ್ರಾದುರ್ಭಾವವಾಯಿತು. ಮುಂದೆ ಇದಕ್ಕೆ "ವೇದಾಂತ" ಎಂದು ಹೆಸರು ಪ್ರಾಪ್ತವಾಯಿತು. ಅಂದರೆ ಕರ್ಮಕಾಂಡದ ನಂತರ ಜ್ಞಾನಕಾಂಡ ಪ್ರಾರಂಭವಾಯಿತೆಂದು ಹೇಳಬಹುದು. ಇವೆರಡೂ ಪ್ರಾಚೀನ ವಾದವುಗಳೆಂಬುದನ್ನು ಮರೆಯುತಕ್ಕದ್ದಲ್ಲ.

ಉಪನಿಷತ್ ಕಾಲದ ನಂತರ ಮತ್ತು ಬುದ್ಧನ ಪೂರ್ವದಲ್ಲಿದ್ದ ಧರ್ಮ ಗ್ರಂಥಗಳಲ್ಲಿ ಬಹಳಷ್ಟು ಗ್ರಂಥಗಳು ಲೋಪವಾಗಿರುವವು. ಈಗ ಉಪಲಬ್ಧವಿರುವ ಗ್ರಂಥಗಳೆಂದರೆ ಗೀತಾ, ಮಹಾಭಾರತದಲ್ಲಿ ನಿರೂಪಿಸಲ್ಪಟ್ಟಿರುವ ನಾರಾಯಣೀಯೋಪಾಖ್ಯಾನ, ಶಾಂಡಿಲ್ಯ ಸೂತ್ರ, ಭಾಗವತ ಪುರಾಣ, ನಾರದಪಂಚರಾತ್ರ, ನಾರದಸೂತ್ರ ಇವು ಭಾಗವತ ಧರ್ಮದ ಗ್ರಂಥಗಳು.

ಪರಬ್ರಹ್ಮದ ಸಾಕಾರ ರೂಪರಾದ ನರ ಮತ್ತು ನಾರಾಯಣರೆಂಬ ಋಷಿಗಳು ಭಾಗವತ ಧರ್ಮವನ್ನು ಸ್ಥಾಪಿಸಿರುವರೆಂದು ನಾರಾಯಣೀಯೋಪಾಖ್ಯಾನದಲ್ಲಿ ನಿರೂಪಿಸಲ್ಪಟ್ಟಿರುವದು. ಈ ಧರ್ಮದ ಉಪದೇಶವನ್ನು ಭಗವಂತನು ನಾರದನಿಗೆ ಶ್ವೇತದ್ವೀಪದಲ್ಲಿ ಮಾಡಿದನು. ವಾಸುದೇವ ಭಕ್ತಿಯೇ ಈ ಧರ್ಮದ ತಿರುಳಾಗಿದ್ದರೂ ಹರಿಹರರು ಪರಬ್ರಹ್ಮದ ಸಾಕಾರ ರೂಪಗಳಾದ ಪ್ರಯುಕ್ತ ಯಾರನ್ನೇ ಭಕ್ತಿಯಿಂದ ಅರ್ಚಿಸಲಿ, ಅದು ವಾಸುದೇವ ಭಕ್ತಿಯೆಂದೆ ಈ ಧರ್ಮದ ಅಭಿಪ್ರಾಯ. ಭಕ್ತಿ, ವೈರಾಗ್ಯ, ನಿಷ್ಕಾಮಕರ್ಮ, ಈ ಧರ್ಮದ ಲಕ್ಷಣಗಳು.

ಭಾಗವತಧರ್ಮದ ತಳಹದಿಯ ಮೇಲೆ ಭಕ್ತಿಯನ್ನೇ ಪ್ರಧಾನವಾಗಿಟ್ಟುಕೊಂಡು ಶ್ರೀ ರಾಮಾನುಜ ಶ್ರೀ ಮಧ್ವಾಚಾರ್ಯರು ತಮ್ಮ ತಮ್ಮ ಭಕ್ತಿಸಂಪ್ರದಾಯದಲ್ಲಿ ತಮ್ಮ ತತ್ವಗಳನ್ನು ಅಳವಡಿಸಿ ಪ್ರಚಾರಕ್ಕೆ ತಂದರು. ಆದರೆ ಇವರ ಪೂರ್ವದಲ್ಲಿದ್ದ ಮಹಾಭಾರತ ಮತ್ತು ಗೀತೆಗಳಲ್ಲಿರುವ ಭಾಗವತ ಧರ್ಮದ ನಿರೂಪಣವು ಅದ್ವೈತ ಮತವನ್ನು ಸ್ವೀಕರಿಸಿರುವಂತೆ ಕಂಡುಬರುವದು. ಮುಂದೆ ಜ್ಞಾನದೇವ

ನಿಂದ ತುಕಾರಾಮನವರೆಗಿನ ಸಂತ ಪರಂಪರೆಯು ಭಾಗವತಧರ್ಮದ ಅನುಯಾಯಿಗಳು ಭಕ್ತಿಯನ್ನೇ ಪ್ರಧಾನವಾಗಿರಿಸಿ ಶಂಕರ ಸಂಪ್ರದಾಯದ ಅದ್ವೈತ, ಮಾಯಾವಾದವನ್ನು ಒಪ್ಪಿಕೊಂಡು ಶಂಕರ ತತ್ವವನ್ನು ತಮ್ಮ ಅನುಭವದಲ್ಲಿ ಅರಿತುಕೊಂಡರು. ಮತ್ತು ಹರಿಹರರು ಪರಬ್ರಹ್ಮನ ಎರಡು ರೂಪಗಳೆಂದು ಒಪ್ಪಿ, ಯಾವ ದೇವರ ಉಪಾಸನೆಯನ್ನು ಮಾಡಿದರೂ ಅದು "ವಾಸುದೇವನ ಉಪಾಸನೆ" ಎಂದು ಸಾರಿದರು. "ಸರ್ವ ದೇವನ ನಮಸ್ಕಾರ : ಕೇಶವಂ ಪ್ರತಿಗಚ್ಛತಿ."

"ದೇವನೊಬ್ಬ ನಾಮ ಹಲವು" ಎಂದು ಹೇಳುವ ಭಾಗವತ ಧರ್ಮವನ್ನು, ಪಂಡಿತ ಪಾಮರರು ಮೆಚ್ಚಿಕೊಂಡರು. ಈ ಮಾತು ಈಗ ಎಲ್ಲರ ಮನೆಯ ಮಾತಾಗಿದೆ.

"ಅವರವರ ಭಾವನೆಗೆ ಅವರವರ ಅರ್ಚನೆ ।
ಅವರವರಿಗೆ ದೇವ ನೀನೊಬ್ಬನೆ ॥

ಎಂದು ಹೇಳಿದ ಮುಪ್ಪಿನ ಷಡಕ್ಷರಿಗಳ ಮಾತು ಭಾಗವತ ಧರ್ಮದ ತಿರುಳನ್ನು ಎತ್ತಿ ತೋರಿಸಿದಂತಾಗಿದೆ.

ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದ ಭಾಗವತ ಕವಿಗಳು ತಮ್ಮ ತಮ್ಮ ಕಾವ್ಯದಲ್ಲಿ ಹರಿಹರರೆಂಬ ಹಾಸಿನಲ್ಲಿ ಭಾಗವತ ಧರ್ಮವನ್ನು ನೇಯ್ದಿರುವದೆ ಸತ್ಯವು. ಕುಮಾರವ್ಯಾಸನು ಮಹಾಭಾರತವನ್ನು ಕಾವ್ಯಕ್ಕಾಗಿ ಬರೆಯದೆ, ವಿಷ್ಣು ಭಕ್ತಿಗಾಗಿ ಬರೆದನು. ಮಹಾಭಾರತವು ಕಾವ್ಯವೂ ಆಯಿತು. ಭಕ್ತಿಜ್ಞಾನದ ಹೊನಲೂ ಆಯಿತು. ಪಂಡಿತ ಪಾಮರರು ಆ ಕಾವ್ಯವನ್ನು ಓದಿ, ಕೇಳಿ ನಲಿದಾಡಿ ಭಕ್ತಿಯ ಹಾಲಿನಿಂದ ಜ್ಞಾನದ ಬೆಣ್ಣೆಯನ್ನು ಪಡೆದು ನಿಷ್ಕಾಮ ಕರ್ಮವೆಂಬ ಬೆಂಕಿಯಿಂದ ಕಾಯಿಸಿ ಸುವಾಸಿಕ ತುಪ್ಪವನ್ನು ತಿಂದು ಚಪ್ಪರಿಸಿ ತಮ್ಮ ಆನಂದದಲ್ಲಿ ತಮ್ಮನ್ನೇ ಮರೆತು ಹೋಗುವವರನ್ನು ಇಂದಿಗೂ ಕಾಣುತ್ತೇವೆ. ಮುಂದಿನವರೂ ಕಾಣುತ್ತಾರೆ. ಇದು ಅನುಭವ ಸಿದ್ಧವಾದುದು.

ಮಾಧ್ವ ಸಂಪ್ರದಾಯದ ವೈಷ್ಣವ ಕವಿಗಳು ತಮ್ಮ ಕಾವ್ಯದಲ್ಲಿ ಹರಿಸರ್ವೋತ್ತಮತ್ವದ ಕೂಡ ಇತರ ದೇವತೆಗಳನ್ನು ಅವರವರ ತಾರತಮ್ಯದ ಪ್ರಕಾರ ಸ್ತುತಿಸಿರುವರು. ರುದ್ರನು ಅಂದರೆ ಶಿವನು ಭಾಗವತೋತ್ತಮನೆಂದು ಒಪ್ಪಿಕೊಂಡು ಲಕ್ಷ್ಮಿ, ಬ್ರಹ್ಮ, ವಾಯುದೇವರಿಗಿಂತ ಕಡಿಮೆ ಯೋಗ್ಯತೆಯವನು. ಈ ತಾರತಮ್ಯ ಕುಮಾರವ್ಯಾಸನ ಭಾರತದಲ್ಲಿ ತೋರುವದಿಲ್ಲ. ನಾರಾಯಣನು ಅವನಿಗೆ ಸರ್ವೋತ್ತಮನಾದರೂ ಶಿವನು ಅವನಿಂದ ಬೇರೆಯಲ್ಲ. ಇದು ಕುಮಾರವ್ಯಾಸನ ಅಭಿಪ್ರಾಯ.

ಆದಿಪರ್ವದ ಪೀಠಿಕಾ ಸಂಧಿಯಲ್ಲಿ ಮೊದಲು ತನ್ನ ಆರಾಧ್ಯ ದೈವವಾದ ಗದುಗಿನ ವೀರನಾರಾಯಣನನ್ನು ಸ್ತುತಿಸಿ ಆ ಮೇಲೆ "ಶರಣು ಸಂಗವ್ರತನ ಭುಜ

ಗಾಥರು"— ಎಂದು ಶಿವಸ್ತುತಿಯನ್ನು ಮಾಡಿದ್ದಾನೆ. "ಶರಣ ಸಂಗವ್ಯಸನ" ಅಂದರೆ ಶಿವನ ಅಪೇಕ್ಷೆಯು ಯಾವಾಗಲೂ ತನ್ನ ಭಕ್ತರಾದ ಶರಣರ ಸಹವಾಸವಿದ್ದಿರ ಬೇಕೆಂಬುದಾಗಿದೆ ಎಂದು ಅರ್ಥವಾಗುತ್ತದೆ. ಹರಿಗೆ ತನ್ನ ಭಕ್ತರು ಎಷ್ಟು ಇಷ್ಟರೊ ಅಷ್ಟೇ ಹರನಿಗೂ ತನ್ನ ಭಕ್ತರು ಇಷ್ಟರು ಎಂದು ಹೇಳಿದಂತಾಯಿತು. ಹರಿಯು ಕುಮಾರವ್ಯಾಸನಿಗೆ ಎಷ್ಟು ಸರ್ವತಂತ್ರ ಸ್ವತಂತ್ರನೊ ಅಷ್ಟೇ ಶಿವನೂ ಸರ್ವತಂತ್ರ ಸ್ವತಂತ್ರನು.

ಅರ್ಜುನನು ವ್ಯಾಸರಿಂದ ಶಿವನನ್ನು ಸಾಕ್ಷಾತ್ಕರಿಸುವ ಉಪದೇಶವನ್ನು ಪಡೆದು, ಅವರ ಆಜ್ಞೆಯ ಮೇರೆಗೆ ಶಿವನಿಂದ ಪಾಶುಪತಾಸ್ತ್ರ ಸಂಪಾದಿಸಲು ಇಂದ್ರಕೀಲ ಪರ್ವತಕ್ಕೆ ಬರುವನು. ಆಗ ಅವನ ತಪಸ್ಸಿನ ಜ್ವಾಲೆಗಳು ಮೂರು ಲೋಕಗಳನ್ನು ಮುಟ್ಟುವಂತಾದವು. ಆಗ ಅರ್ಜುನನು ಯಾವ ಸ್ಥಿತಿಯಲ್ಲಿದ್ದಾನೆಂಬುದನ್ನು ಕುಮಾರ ವ್ಯಾಸನ ವರ್ಣನೆಯಿಂದಲೆ ತಿಳಿದುಕೊಳ್ಳಬೇಕು.

" ತಾನೊ ಶಿವನೊ ಮೇಣ್ ಶಿವನ
ಧ್ಯಾನ ತನಗದ್ವೈತದನುಸಂ
ಧಾನವಿದು ಜವನಿಕೆಯೋ ಜೀವಾತು ಮನಜಂಜಡಕೆ
ಧ್ಯಾನವೋ ಮೇಣ್ ಧ್ಯೇಯವೊತ್
ದ್ಧ್ಯಾನಕರ್ತೃವೊ ತ್ರಿಪುಟರಹಿತನೊ
ತಾನು ನೇಣೆನವಾಯ್ತು ಚಿತ್ತದ ಶುದ್ಧಿಯರ್ಜುನನ.

ಅರ್ಜುನನು ಶಿವನ ನಿಧಿಧ್ಯಾನದಲ್ಲಿ ತಾನೆ ಶಿವನೋ ಶಿವನು ತಾನೋ ಎಂಬ ಅದ್ವೈತ ಸಿದ್ಧಿಯಲಿ ತಾನೇ ತಾನಾಗಿ ಶೋಭಿಸುತ್ತಿದ್ದನು. ಅಂದರೆ ಜೀವಾತ್ಮ ಪರ–ಮಾತ್ಮರ ನಡುವೆ ಇರುವ ಮಾಯಾಪಟಲವು ಹರಿದು ಧ್ಯಾತಾ, ಧ್ಯಾನ, ಧ್ಯೇಯಗಳೆಂಬ ತ್ರಿಪುಟರಹಿತನಾಗಿ ಶೋಭಿಸುತ್ತಿದ್ದನು.

ಈ ರೀತಿ ತಪಸ್ಸಿನಲ್ಲಿರುವ ಅರ್ಜುನನ ಸತ್ವ ಪರೀಕ್ಷೆ ಮಾಡಲು, ಶಿವನು ಪಾರ್ವತಿ ಸಹಿತ ತನ್ನ ಗಣಗಳೊಡನೆ ಇಂದ್ರಕೀಲ ಪರ್ವತಕ್ಕೆ ಬರುವನು. ಆಗ ವನವೆಲ್ಲ ಅಲ್ಲೋಲ ಕಲ್ಲೋಲವಾಗುವದು. ಕುಮಾರವ್ಯಾಸನು ಶಿವಲೀಲೆಯನ್ನು ಬಣ್ಣಿಸುವ ರೀತಿಯು ಮೆಚ್ಚುವಂತಹದು.

" ಜಯಜಯೆಂದುದು ಮೂನಿಖಿಳ ಜಗಶ್ರುತಿ
ಚಯವು ಭಡಾಳಿಸಿ ಹೊಗಳುತಿರ್ದುದು
ನಯನಗೋಚರನಾಯ್ತು ಸಾಕ್ಷಾತ್ಪರಮ ಶಿವತತ್ವ
ಲಯದ ಜನನದ ಸುಳಿವು ಸುಸ್ಮೃತಿ
ಮಯ ಸಮುದ್ರವ ಸುರಿದು ಸಲಿಸಿ
ಭಯವು ಭಕುತರಿಗೆಂಬುವೊಲು ಮಸಗಿತು ಮಹಾಸುಖದ."

"ಕೊಡೆಕಟ್ಟಿತು ಭೂತಗಣಧ್ವನಿ
ಮಾಡಿ ಜಡಿದುಬ್ಬರಿಸಿ ಮೋರೆಯು
ನೀಡಿ ನಾಯ್ಗಳು ತುಡುಕಿದವು ತಿರುಗಿದೊಳೆ ಹಿಮ್ಮಡಿಯು
ಝಾಡಿಸುತ ಕನಿದೆತ್ತಲೊಂದೇ
ಪಾಡೆ ಬರುತುದು ನೂರುಗಾಯಿನ
ನೋಡುತಿದುರ್ದು ಸೇನೆ ಕಂಡನು ಶೂಲಿ ಸೂಕರವ"

"ಇದುವೆ ಸಮಯವವಾಯೆನುತ ಹೂ
ಡಿದನು ಬಾಣವನುಗಿದು ಪೂರಾ
ಯದಲಿ ತೂಗಿ ಪಿನಾಕಿಯೆಚ್ಚನು ಮೂಕದಾನವ
ಒದೆದು ಹಾಯ್ದುದು ಬಾಣಗರಿಯೊ
ರಿದುದು ಬದಿಯಲಿ ಕೊಡಹಿ ಗೋಳಿಡು
ತದುಧನಂಜಯನತ್ತ ಹೋದುದು ಹೊತ್ತಕಣೆಸಹಿತ"

ಶೂಕರ ರೂಪಿಯಾದ ಮೂಕದಾನವನನ್ನು ಪಿನಾಕದಿಂದ ಹೊಡೆಯಲು ಅದು ಕಣೆಸಹಿತ ಭಯಂಕರ ಶಬ್ದ ಮಾಡುತ್ತ ಅರ್ಜುನನು ತಪಸ್ಸಿಗೆ ಕುಳಿತ ಸ್ಥಾನದತ್ತ ಬರುವದು. ಇದೇ ಶಿವನಿಗೆ ಬೇಕಾಗಿತ್ತು. ಶೂಕರದ ಅಟ್ಟಹಾಸದಿಂದ ಅರ್ಜುನನ ತಪೋಭಂಗವಾಗಿ, ಕಣ್ದೆರೆದು ಶೂಕರವನ್ನು ನೋಡಿದನು. ಆಗ ಅರ್ಜುನನು ತನ್ನ ಗಾಂಡೀವ ಧನಸ್ಸಿನಿಂದ ಅದನ್ನು ಹೊಡೆಯಲು, ಅದು ಅವನ ಮುಂದೆ ಬಿದ್ದು ಅಸುವ ನೀಗಿತು. ಈ ಹಂದಿಯೇ ಪಾರ್ಥ ಶಿವರ ನಡುವೆ ಕದನ ಪ್ರಾರಂಭವಾಗಲು ಕಾರಣ. ಶಿವನು ಹಂದಿಯ ಬಳಿಗೆ ಬಂದು–

"ಬಂದನೀಶ್ವರ ನಾವು ಕೆಡಹಿದ
ಹಂದಿನಮ್ಮದು ತೆಗೆಯಿಯೆನೆನರ
ನೆಂದ ನಮ್ಮಂಬಿನಲಿ ಬಿದ್ದುದು ಸಾರು ನೀನೆನಲು
ಬಂದುದೇಕಾನಿಷ ವಿರೋಧದ
ಕುಂದು ಪಾರ್ಥನ ಚಿತ್ತದಲಿ ಬಾ
ಲೇಂದುಧರನೆಂದೆತ್ತ ಬಲ್ಲನು ಕೆಣಕಿದನು ಶಿವನ"

ಅರ್ಜುನನು ಅದಕ್ಕೊಪ್ಪದೆ ಇವನೊಬ್ಬ ಸಾಮಾನ್ಯ ಕಿರಾತನೆಂದು ತಿಳಿದು ಶಿವನನ್ನು ಈ ರೀತಿ ತೆಗಳಿದನು—

"ಎಲೆ ಕಿರಾತ ಮದೀಯ ಬಾಣದ
ಬಲೆಗೆ ನೀ ಮೃಗವಾಗದಿರು ನಿ
ನ್ನಳವನರಿಯಾ ಬನದ ನರಿ ಮೊಲ ಹುಲ್ಲೆ ಹರಿಣನಲಿ
ಗೆಲಿದ ಗರುವನು ನೀನು ನಿನ್ನ
ಅಗ್ಗಳಿಕೆಗಾನಂಜುವೆವು ನಿನ್ನೀ
ದಳಕೆ ಪತಿಯುಂಟಾದಡಾತನ ಕೊಂಡುಬಾರೆಂದ"

“ ಎನಲು ನಕ್ಕನು ಶಂಭು ಭಕ್ತನ
ಮನದಧೃತಿಯನು ಭುಜಬಲವನಾ
ತನ ಪರಾಕ್ರಮಲಕ್ಷ್ಮಿಯನು ಪಾರ್ವತಿಗೆ ತೋರಿಸುತ
ನೆನೆದು ನುಡಿದುನಿದೇನು ತಮ್ಮಡಿ
ನಿನಗೆ ತಪದಲಿ ಖಡ್ಗವೇಕೀ
ಧನು ಶರಾವಳಿಯೇಕೆ ನಿನ್ನಂಗವಣಿಯೇನೆಂದ ”

ಹೀಗೆ ಶಿವನು ಹಾಸ್ಯಮಾಡಿ ಅರ್ಜುನನನ್ನು ಕೆರಳಿಸುವನು. ಮಾತಿಗೆ ಮಾತು ಬೆಳೆದು ದೇವಭಕ್ತರ ನಡುವೆ ಯುದ್ಧವೆ ಪ್ರಾರಂಭವಾಯಿತು. ಅರ್ಜುನನ ಎಲ್ಲ ಬಾಣಗಳನ್ನು ಕಿರಾತನು ನುಂಗತೊಡಗಲು, ಅರ್ಜುನನು ಆಶ್ಚರ್ಯಚಕಿತನಾಗಿ ತನ್ನನ್ನೇ ತಾನು ನಂಬದಂತಾದನು. ಆದರೂ ಧೃತಿಗೆಡದೆ ಇಂದು ಮೌಳಿಯ ತಪಕೆ ಕಂಟಕನಾದ ಕಿರಾತನ ಮೇಲೆ ಕೋಪಾನಲನಾಗಿ ಅಂದು ಖಾಂಡವವನದ ದಹನದ ಕಾಲಕ್ಕೆ ಬಿಟ್ಟ ಅಕ್ಷಯಾಸ್ತ್ರವನ್ನು ಕಿರಾತನ ಮೇಲೆ ಬಿಡಲು, ಕಿರಾತನು ಆ ಅಸ್ತ್ರವನ್ನೇ ನುಂಗಿಬಿಟ್ಟನು. ಆದರೂ ಅರ್ಜುನನು ಅಧೀರನಾಗದೆ “ಕೈದುವೇಕೆ ಪುಳಿಂದ ನಮ್ಮೊಡ| ನೈದಿ ಸಾಭುಜಯುದ್ಧದಲಿ”— ಎಂದು ಅನ್ನುತ್ತ ಶಿವನಮೇಲೆರಗುವನು. ಆಗ ಶಿವನು—

“ ಕಂಡಿದೆ ದೇವಿಯರು ನರನು
ದ್ದಂಡತನವನು ತರಗೆಲೆಯ ಕೈ
ಗೊಂಡು ತಿಂಗಳು ನಾಲ್ಕು ಪವನಗ್ರಾಸದಿಂಬಳಿಕ
ದಂಡಿಸಿದನೀದೇಹವನು ನಾ
ನಂಡಲೆಯುಲೊದಗಿದನಲೇ ಸವ
ನಂಡಿಯಲಿ ಸವನ್ಯೊಡನೆಯೆಂದನು ನಗುತ ಶಶಿಮೌಳಿ ”

“ ಈತ ನರನೆಂಬುವ ಕಣಾ ಸಂ
ಗಾತಿ ನಾರಾಯಣ ಋಷಿಗೆ ತಾ
ವೀತಗಳು ಹರಿಯುಂ ಶಭೂತರು ಭಕ್ತರಿವರೆಮಗೆ
ಈತ ನೆಮ್ಮಯ ಪಾಶುಪತವಿ
ಖ್ಯಾತಬಾಣವ ಬೇಡಿತಪದಲಿ
ವೀತರಾಗದ್ವೇಷಿಯಾದನು ಕಾಂತೆ ಕೇಳೆಂದ”

ಹೀಗೆ ಪಾರ್ವತಿಗೆ ಅರ್ಜುನನ ಧೈರ್ಯ ಶೌರ್ಯಗಳನ್ನು ತೋರಿಸಿದ್ದಲ್ಲದೆ, “ಇವನು ನಮಗೆ ಪರಮಭಕ್ತನು. ಪಾಶುಪತಾಸ್ತ್ರ ಬೇಡಲು ಬಂದಿರುವನು” ಎಂದು ಹೇಳುವನು. ಮುಂದೆ ಮುಷ್ಟಿಯುದ್ಧದಲ್ಲಿ ಕಿರಾತನ ಸಾಮರ್ಥ್ಯವನ್ನು ನೋಡಿ—

“ ನಿನಗೆ ನಾ ಬೆರಗಾದೆ ನೀನಿಂ
ದೆನಗೆ ಮೆಚ್ಚಿದೆ ದೇವದಾನವ
ಜನವೆನಗೆ ಪಾಡಲ್ಲ ನೀ ಹುಲ್ಲಣಿಸಿದ್ಯೆ ನಮ್ಮ
ಇವನೊ ಮೆಹ್ದೇವೇಂದ್ರನೊ ಹರ
ತನುಜನೊ ಹರಿಯೊ ಮಹಾದೇ
ವನೊ ಕಿರಾತನೊ ನೀನೆನುತ ಮತ್ತೆರಗಿದನು ಶಿವನ”

ಎಂದು ಅಸ್ತ್ರ ಮತ್ತೆ ಕಿರಾತನ ಮೇಲೆರಗಲು. ಆಗ ಕಿರಾತನು ಅರ್ಜುನನನ್ನು ಹಿಡಿದು ಹಿಸುಕಲು ಅವನ ಬಾಯಿ, ಮೂಗುಗಳಿಂದ ರಕ್ತವು ಚಿಮ್ಮತೊಡಗಲು ಶಕ್ತಿಸೆಲೆ ಬತ್ತಿದಂತಾಗಿ ನಿತ್ರಾಣನಾಗಿ—

" ಆವಸುವ್ರತಭಂಗವೊಮೇ
ಣಾವದೈವದ್ರೋಹವೋ ತಾ
ನಾವ ಶಿವಭಕ್ತಾಪರಾಧಿಯೊ ಪೂರ್ವಜನ್ಮದಲಿ."

ಎಂದು ಪಶ್ಚಾತ್ತಾಪಪಡುವನು. ಇವನು ನಿಜವಾದ ಕಿರಾತನಲ್ಲವೆಂಬ ಸಂಶಯ ಬಂದರೂ ಕಿರಾತನನ್ನು ಸೋಲಿಸುವ ಶಕ್ತಿಯನ್ನು ಕೊಡು ಎಂದು ಶಿವನನ್ನು ಪ್ರಾರ್ಥಿಸುವನು—

" ಮಳಲಲಿಂಗವ ಮಾಡಿದನು ನಿ
ರ್ಗುಣನ ಸಗುಣಾರಾಧನೆಯ ಮ
ನ್ನಣೆಗಳಲಿ ವಿಸ್ತರಿಸಿದನು ವಿವಿಧ ಆಗಮೋಕ್ತದಲಿ
ಕಣಗಿಲೆಯ ಬಂದುಗೆಯ ಕಕ್ಕೆಯ
ಸಣಬಸರಿಸದ ಕುಸುಮದಲಿರಿಪು
ಗಣ ಭಯಂಕರನರ್ಚಿಸಿದನಂಧಾಸುರಾಂತಕನ "

ಈ ರೀತಿ ಶಿವನ ಆರಾಧನೆಯನ್ನು ಮಾಡಿ ಸಂತಸಗೊಂಡು ಕಿರಾತನ ಮೇಲೆ ಬೀಳಬೇಕೆಂದು ಕಿರಾತನನ್ನು ನೋಡಲು, ಅವನಿಗೆ ತನ್ನ ಕಣ್ಣನ್ನೇ ತಾನು ನಂಬದಂತಾಯಿತು. ಶಿವಲಿಂಗದ ಮೇಲೇರಿಸಿದ ಪುಷ್ಪಗಳೆಲ್ಲ ಕಿರಾತನ ಮೇಲೆ ಶೋಭಿಸುತ್ತಿದ್ದವು. ಇವನೇ ಪ್ರತ್ಯಕ್ಷ ಶಿವನೆಂದು ನಿಶ್ಚಯವಾಗಲು ಪಶ್ಚಾತ್ತಾಪದಿಂದ—

" ಶಿವನಲಾ ಸಾಕ್ಷಾಚ್ಚತುರ್ದಶ
ಭುವನ ಕರ್ತನಲಾ ಕಿರಾತು
ವ್ಯವಹರಣೆಯಲಿ ಸುಳಿದು ದಸ್ಮದ ಸುಗ್ರಹಾರ್ಥವಲ
ಎವಗಿದನಶನ ತಪದ ಪಿತ್ತದ
ಬವಣೆ ತಲೆಗೇರಿದುದಲಾಶಿವ
ಶಿವಮಹಾದೇವನೆನುತ ಮರಗಿದನು ಕಲಿಪಾರ್ಥ "

ಹೀಗೆ ಅರ್ಜುನನು ಹಲವು ವಿಧವಾಗಿ ಸ್ತೋತ್ರಮಾಡುವನು. ಮುಂದಿನ ಪದ್ಯದಲ್ಲಂತೂ ಸ್ತೋತ್ರವು ಚರಮ ಸೀಮೆಯನ್ನು ಮುಟ್ಟಿರುವದು.—

" ಸರಸಿಜಾಸನ ವಿಷ್ಣುರುದ್ರೇ
ಶ್ವರ ಸದಾಸಿವರಾವಳೊಬ್ಬಳ
ಚರಣ ಸೇವಾಸಂಗದಲ್ಲಿಯೆ ಸುಪ್ರತಿಷ್ಠಿತರು
ಪರಮ ಶಕ್ತಿಯದಾವನಂಘ್ರಿಗೆ
ಶಿರವನೊಡ್ಡಿಹಳಾ ಮಹೊತ್ತಮ
ಪರಮಶಿವನಲಿ ಸೆಣಸಿದೆನಲಾ ಶಿವಶಿವಯೆಂದ "

ಈ ಪದ್ಯದಲ್ಲಿ ಸೃಷ್ಟಿ ಕ್ರಮವನ್ನೇ ಬಣ್ಣಿಸಿರುವನು. ಪರಬ್ರಹ್ಮನಾದ ಶಿವನ ಶಕ್ತಿಯಿಂದ ಈಶ್ವರನು ಅಂದರೆ ಸದಾಶಿವನು ಉದಯಿಸಿದ. ಸದಾಶಿವನಿಂದ ಬ್ರಹ್ಮ, ವಿಷ್ಣು, ರುದ್ರರು ಉದಯಿಸಿದರು. ಈ ತ್ರಿಮೂರ್ತಿಗಳಿಗೆ ಶಕ್ತಿಯೇ ಆಧಾರ. ಅವಳ ಸಹಾಯದಿಂದ ತ್ರಿಮೂರ್ತಿಗಳು ಸೃಷ್ಟಿ, ಸ್ಥಿತಿ, ಲಯಗಳ ಕಾರ್ಯವನ್ನು ಮಾಡುವರು. ಅಂತಹ ಶಕ್ತಿಯು ಯಾವನ ಪಾದಸೇವಕಳೋ ಅಂತಹ ಶಿವನ ಜೊತೆ ಎನ್ನ ಸೆಣಸಾಟವೆ ಎಂದು ಪಶ್ಚಾತ್ತಾಪ ಪಟ್ಟು ಅರ್ಜುನನು ಶಿವನಲ್ಲಿ ಕ್ಷಮೆ ಬೇಡುವನು—

"ಲಿಂಗಮಯ ನಿರ್ಲಿಂಗತೇಜೋ
ಲಿಂಗಲಿಂಗಾತ್ಮಕ ಸದಾಶಿವ
ಲಿಂಗನಿರ್ಮಳಲಿಂಗ ಲಿಂಗಸ್ಥಿತ ಮಹಾಲಿಂಗ
ಲಿಂಗ ನಿಲಸಿತಲಿಂಗ ಚಿನುಮಯ
ಲಿಂಗ ಚೇತನಲಿಂಗ ದುರ್ಗಾ
ಲಿಂಗ ತಾಂಗವಿಲಾಸ ಶಂಕರ ಕರುಣಿಸುವದೆಂದ"

ಹೀಗೆ ಅರ್ಜುನನ ಮುಖಾಂತರ ಶಿವನನ್ನು ಸ್ತುತಿಸುವ ಕುಮಾರವ್ಯಾಸನು ವಿಷ್ಣು ಭಕ್ತನೆ ಎಂಬ ಸಂಶಯ ಬಾರದಿರದು. ಆದರೆ ಕುಮಾರ ವ್ಯಾಸನು ಹರಿಭಕ್ತನೂ ಹೌದು ಹರಭಕ್ತನೂ ಹೌದು. ಇಲ್ಲದಿದ್ದರೆ ಇಷ್ಟೊಂದು ಮನೋಜ್ಞವಾಗಿ ಬಣ್ಣಿಸುತ್ತಿರಲಿಲ್ಲ. ಇದೆ ಕುಮಾರವ್ಯಾಸನ ವೈಶಿಷ್ಟ್ಯ.

ಇನ್ನು ಪಾರ್ವತಿಯನ್ನು ಯಾವ ರೀತಿಯಿಂದ ಸ್ತುತಿಸುವನೆಂಬುದನ್ನು ನೋಡೋಣ—

"ಗಿರಿಜೆ ತ್ರಿಜಗನ್ಮಾತೆ ರಕ್ಷಿಸು
ಪರಮಕರುಣಾಮೂರ್ತಿ ಜಗದೊಳು
ಸಿರಿ ಸರಸ್ವತಿ ಚಂಡಿ ದುರ್ಗಿಯರೆಂಬ ನಾಮದಲಿ
ಚರಿಸುತಿಹ ನಿನ್ನೇಕಮೂರ್ತಿಯ
ಪರಿಯನರಿದವರಾದೆನುತ ತ
ಚ್ಚರಣಯುಗಳಕ್ಕೆರಗಿ ಪುಳಕಿತನಾದನಾಪಾರ್ಥ

ಹೀಗೆ ಪಾರ್ವತಿಯ ಸ್ತುತಿಯನ್ನು ಅಷ್ಟೇ ಭಕ್ತಿಯಿಂದ ಮಾಡಿರುವನು. ಶಕ್ತಿಯ ಮೂರು ರೂಪಗಳೆ ಪಾರ್ವತಿಯೆಂದು ಕುಮಾರವ್ಯಾಸನ ಅಭಿಪ್ರಾಯ.

ಇನ್ನು ಕೃಷ್ಣಸ್ತುತಿಯನ್ನು ಯಾವ ರೀತಿ ಮಾಡಿರುವನೆಂಬುದನ್ನು ನೋಡುವಾ— ಇದು ಭೀಷ್ಮಾಚಾರ್ಯರ ಅಭಿಪ್ರಾಯ.

"ಘನರಜೋಗುಣದಲ್ಲಿ ಚತುರಾ
ನನೆ ತಮೋಗುಣದಲ್ಲಿ ಶಂಕರನೆನಿಸಿ
ಸತ್ವಗುಣಾನುಗತಿಯಲಿ ವಿಷ್ಣುವೆಂದೆನಿಸಿ
ಘನಜಗನ್ಮಯನಾಗಿ ಸರ್ವಾ
ತ್ಮನು ಮಹೇಶ್ವರನೆನಿಪನೀತನ
ನೆನಹನೀತನ ನಿಜವನರಿವ ಮಹಾತ್ಮರಾರೆಂದ"

ಸೃಷ್ಟಿಕರ್ತನೆಂದು ಬ್ರಹ್ಮನಾಗಿಯೂ, ಲಯಕರ್ತನೆಂದು ಶಂಕರನಾಗಿಯೂ, ರಕ್ಷಕನೆಂದು ವಿಷ್ಣುವಾಗಿಯೂ ಇರುವ ಶ್ರೀಕೃಷ್ಣನು ಜಗನ್ಮಯನಾಗಿರುವನು. ಇವನ ಅಳವನ್ನು ಬಲ್ಲ ಮಹಾತ್ಮರು ಯಾರಿರುವರೆಂದು, ಕುಮಾರವ್ಯಾಸನು ತನ್ನ ವಾಣಿಯಿಂದ ತಿಳುಹಿಸಿರುವನು. ತಾತ್ಪರ್ಯವಿಷ್ಟೆ ಕುಮಾರವ್ಯಾಸ ದೃಷ್ಟಿಯಲ್ಲಿ ಹರಿಹರರು ಅಭಿನ್ನರು. ಪರಬ್ರಹ್ಮದ ಎರಡು ಸಾಕಾರರೂಪಗಳು. ಇದೇ ಭಾಗವತ ಧರ್ಮದ ತಿರುಳು. ಸಾಂಪ್ರದಾಯಿಕ ದೃಷ್ಟಿಯನ್ನು ಬದಿಗಿರಿಸಿ ನಿರ್ಮಲ ಮನಸ್ಸಿನಿಂದ ಕುಮಾರವ್ಯಾಸನ ಭಾರತವನ್ನು ಅವಲೋಕನ ಮಾಡಿದಲ್ಲಿ ಈ ಮಾತು ಹೊಳೆಯದಿರದು.

★ ಆರ್. ಜಿ. ಕುಲಕರ್ಣಿ

ಗ್ರಾಮಾಂತರ ಹಣಕಾಸು-ಸಹಕಾರಿ ಬ್ಯಾಂಕುಗಳು

ಕೃಷಿ ಪ್ರಧಾನವಾದ, ಹಳ್ಳಿಗಳಿಂದ ತುಂಬಿದ, ನಮ್ಮ ದೇಶದಲ್ಲಿ ಸುಮಾರು ನೂರಕ್ಕೆ ೭೦ರಷ್ಟು ಜನರು ತಮ್ಮ ಜೀವನೋಪಾಯಕ್ಕೆ ಬೇಸಾಯವನ್ನೇ ಅವಲಂಬಿಸಿರುವರು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ತರುವಾಯ ಕೃಷಿವಿಜ್ಞಾನದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ನಮ್ಮ ರೈತನು ನಿಸರ್ಗದ ಕೈಗೊಂಬೆಯಾಗಿರುವನೆಂದರೆ ಅತಿಶಯೋಕ್ತಿಯಲ್ಲ. ೧೯೬೧ ರಿಂದೀಚೆಗೆ ನಮ್ಮ ಸರಕಾರವು ಹೊಸ ಕೃಷಿವ್ಯೂಹ (New Agricultural Strategy) ದ ಮುಖಾಂತರ ತೀಕ್ಷ್ಣ ಬೇಸಾಯದ ಜಿಲ್ಲಾ ಕಾರ್ಯಕ್ರಮ (Intensive Agricultural District Programme), ತೀಕ್ಷ್ಣ ಬೇಸಾಯದ ಪ್ರಾದೇಶಿಕ ಕಾರ್ಯಕ್ರಮ (Intensive Agricultural Area Programme) ಹೆಚ್ಚು ಇಳುವರಿ ಬೀಜಗಳ ಕಾರ್ಯಕ್ರಮ (High yielding Varities Programme), ಚಿಕ್ಕ ರೈತರ ಅಭಿವೃದ್ಧಿ ಕೇಂದ್ರ (Small Farmers' Development Agencies) ಮುಂತಾದವುಗಳನ್ನೂ ಹಮ್ಮಿಕೊಂಡು 'ಹಸಿರು ಕ್ರಾಂತಿ'ಯು ಯಶಸ್ವಿಯಾಗುವಂತೆ ಮಾಡಿ ರಾಷ್ಟ್ರದ ಬೆನ್ನೆಲುಬಾಗಿರುವ ರೈತನ ಜೀವನ ಮಟ್ಟವನ್ನು ಸುಧಾರಿಸುವುದರ ಜೊತೆಗೆ ದೇಶದ ಅಭಿವೃದ್ಧಿಯನ್ನು ಸಾಧಿಸಲು ಪಂಚವಾರ್ಷಿಕ ಯೋಜನೆಗಳಲ್ಲಿ ತನ್ನ ನೀತಿಯನ್ನು ವ್ಯಕ್ತಪಡಿಸಿರುವುದು ಸೂಕ್ತವಾಗಿದೆ. ಮೇಲೆ ಹೇಳಿದ ಕಾರ್ಯಕ್ರಮಗಳನ್ನು ಆಚರಣೆಯಲ್ಲಿ ತಂದು ಕೃಷಿ ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ ಸುಧಾರಿತ ಬೀಜಗಳು, ರಾಸಾಯನಿಕ ಗೊಬ್ಬರದ, ಸಸಿ ರಕ್ಷಣೆಯ, ಸಾಧನೆ ಸಲಕರಣೆಗಳು, ಯಂತ್ರಗಳು, ನೀರಾವರಿ ಮುಂತಾದವುಗಳ ಬಳಕೆ ರೈತನಿಂದ ಹೆಚ್ಚುಗೊಳ್ಳಬೇಕು. ಇವೆಲ್ಲವುಗಳ ಲಾಭ ಪಡೆಯಲು ರೈತನಿಗೆ 'ಕೃಷಿ ಸಾಲ'ದ ಅಥವಾ ಕೃಷಿ ಪತ್ತಿ (Agricultural Credit) ನ ಆವಶ್ಯಕತೆಯಿದೆ.

ವಾಣಿಜ್ಯ ಬ್ಯಾಂಕುಗಳು, ಹೆಚ್ಚಾಗಿ ಶಹರಗಳಲ್ಲಿರುವುದರಿಂದ ಮುಖ್ಯವಾಗಿ ವಾಣಿಜ್ಯ ಹಾಗೂ ಔದ್ಯೋಗಿಕ ರಂಗಗಳ ಪತ್ತಿನ ಆವಶ್ಯಕತೆಗಳನ್ನು ಪೂರೈಸುತ್ತವೆ. ಬ್ಯಾಂಕುಗಳ ಸಾಮಾಜಿಕ ನಿಯಂತ್ರಣ ಹಾಗೂ ಮುಖ್ಯ ಬ್ಯಾಂಕುಗಳ ರಾಷ್ಟ್ರೀಕರಣದಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಈ ವಾಣಿಜ್ಯ ಬ್ಯಾಂಕುಗಳು ತಮ್ಮ ಶಾಖೆಗಳನ್ನು ತೆರೆಯುತ್ತಿದ್ದರೂ ರೈತರ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಬೇಡಿಕೆಗಳನ್ನು ಪೂರೈಸುವಲ್ಲಿ, ಭದ್ರತಾ ಸಮಸ್ಯೆ (Security Problem) ಹಾಗೂ ಸರಕಾರದ ಸಾಂಸ್ಥಿಕ ಕೃಷಿ-ಸಾಲ (Institutional Agricultural Credit) ನೀತಿಗಳಿಂದಾಗಿ ಯಶಸ್ವಿಯಾಗಿಲ್ಲ.

ಮಾನವನ ಹಣಕಾಸಿನ ಕುಂದುಕೊರತೆಗಳನ್ನು ಹೋಗಲಾಡಿಸಲು, ಸಾಂಘಿಕ ಜೀವನವನ್ನು ಭದ್ರಪಡಿಸಲು ಅವನ ಉನ್ನತಿಗಾಗಿ ಹಗಲಿರುಳು ಶ್ರಮಿಸುವ ಸಂಸ್ಥೆಗಳು

‘ಸಹಕಾರ ತತ್ವಗಳ’ ಆಧಾರದ ಮೇಲೆ ಜನ್ಮವೆತ್ತಿರಬೇಕೆನ್ನುವುದನ್ನು ಇಪ್ಪತ್ತನೇ ಶತಮಾನದ ಆದಿಯಲ್ಲಿಯೇ ಕಂಡುಕೊಂಡಿದ್ದೇವೆ. ಅವುಗಳನ್ನು ಪೋಷಿಸಿಕೊಂಡು ಬರುವಲ್ಲಿ ಸರಕಾರವು ಸಾಕಷ್ಟು ಸಹಾಯ ಮಾಡಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯುವಧಿಯಲ್ಲಿ ಭಾರತದ ಕೇಂದ್ರ ಬ್ಯಾಂಕು (Reserve Bank of India) ಅಖಿಲ ಭಾರತ ಗ್ರಾಮೀಣ ಪತ್ತಿನ ಸಮೀಕ್ಷಾ ಸಮಿತಿ[೧] (All India Rural Credit Survey Committee) ಯನ್ನು ನಿಯಮಿಸಿ ಸಹಕಾರಿ ಸಂಸ್ಥೆಗಳಿಗೆ ಭದ್ರ ಬುನಾದಿ ಹಾಕಿ ಸಹಕಾರಿ ಚಳವಳಿಯನ್ನು ಯಶಸ್ವಿಮಾಡಲು ಸಮಿತಿಯು ಮಂಡಿಸಿದ ಸಿಫಾರಸುಗಳನ್ನು ಕಾರ್ಯಾಚರಣೆಯಲ್ಲಿ ತರಲು ಪ್ರಯತ್ನಿಸಿತು. ಈ ಸಮೀಕ್ಷೆಯ ಪ್ರಕಾರ ರೈತರ ಒಟ್ಟು ಸಾಲದ ಮೊತ್ತವಾದ ೭೫೦ ಕೋಟಿ ರೂ. ಗಳಲ್ಲಿ ಕೇವಲ ನೂರಕ್ಕೆ ಮೂರರಷ್ಟನ್ನು ಸಹಕಾರಿ ಬ್ಯಾಂಕುಗಳು ಪೂರೈಸುತ್ತಿದ್ದವು. ಸುಮಾರು ನೂರರಲ್ಲಿ ತೊಂಭತ್ನಾಲ್ಕರಷ್ಟನ್ನು ಗ್ರಾಮಾಂತರ ಪ್ರದೇಶದಲ್ಲಿರುವ ವ್ಯಾಪಾರಸ್ಥರು ಹಾಗೂ ಸಾಹುಕಾರರು ರೈತರಿಂದ ಹೆಚ್ಚಿನ ಬಡ್ಡಿ ತಗೆದುಕೊಂಡು ಪೂರೈಸುತ್ತಿದ್ದರು. ಇದರಿಂದ ಗ್ರಾಮೀಣ ಹಣಕಾಸಿನಲ್ಲಿ ಸಹಕಾರವು ವಿಫಲವಾದ ಮತ್ತು ರೈತನ ಶೋಷಣೆಯನ್ನರಿತ ಸರಕಾರವು ‘ಸುಸಂಘಟಿತ ಪತ್ತಿನ ಯೋಜನೆ’ (Integrated Credit Scheme)ಯ ಮುಖಾಂತರ ರೈತರ ಆರ್ಥಿಕ ತೊಂದರೆಗಳನ್ನು ಹೋಗಲಾಡಿಸಲು ಸಹಕಾರಿ ಬ್ಯಾಂಕುಗಳನ್ನು ಸಾಕಷ್ಟು ಬಲಿಷ್ಠವಾಗಿ ಬೆಳೆಸಲು ಹಲವಾರು ಯೋಜನೆ-ಗಳನ್ನು ಕಾರ್ಯರೂಪಕ್ಕೆ ತಂದಿದೆ. ಗ್ರಾಮೀಣ ಹಣಕಾಸಿನಲ್ಲಿ ಸಹಕಾರಿ ಬ್ಯಾಂಕುಗಳ ಪ್ರಾಮುಖ್ಯತೆಯನ್ನರಿತ ಸರಕಾರವು ಆಗಾಗ್ಗೆ ಕೇಂದ್ರ ಬ್ಯಾಂಕು ಹಾಗೂ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು (National Development Council)ಗಳ ಮುಖಾಂತರ ಸಮಿತಿಗಳನ್ನು ನಿಯಮಿಸಿ ಅವುಗಳ ಸಿಫಾರಸುಗಳನ್ನು ಕಾರ್ಯಾಚರಣೆಗೊಳಿಸುತ್ತಿರುವುದು ಯೋಗ್ಯವಾದ ಕಾರ್ಯ.

ಸಹಕಾರಿ ಪತ್ತಿನ ರಚನೆ (Co-operative Credit Structure)ಯಲ್ಲಿ ವಿವಿಧ ಕೃಷಿ ಪತ್ತಿನ ಸಂಸ್ಥೆಗಳು ರೈತನಿಗೆ ಸಾಲವನ್ನು ಪೂರೈಸುವುದರಲ್ಲಿ ಸಾಧಿಸಿದ ಪ್ರಗತಿ, ಕುಂದುಕೊರತೆ ಮತ್ತು ಪರಿಹಾರೋಪಾಯಗಳನ್ನು ಸಂಕ್ಷಿಪ್ತವಾಗಿ ವಿವೇಚಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಸಹಕಾರಿ ಬ್ಯಾಂಕುಗಳ ರಚನೆ :

ಅಲ್ಪಾವಧಿ ಮತ್ತು ಮಧ್ಯಮಾವಧಿ ಸಹಕಾರಿ ಸಾಲದ ರಚನೆಯು ಮೂರು ಅಂತಸ್ತು (three-tier) ಗಳುಳ್ಳ ಸಂಯುಕ್ತ (federal)ವಾದುದಾಗಿದೆ. ಕೆಳ

೧ ಈ ಸಮಿತಿಗೆ ಶ್ರೀ ಎ. ಡಿ. ಗೋರವಾಲಾ ಅಧ್ಯಕ್ಷರಿದ್ದರು. ಆದ್ದರಿಂದ ಇದು ಗೋರವಾಲಾ ಸಮಿತಿಯೆಂದು ಕರೆಯಲ್ಪಟ್ಟಿರುತ್ತದೆ.

ಅಂತಸ್ತಿ (base level)ನಲ್ಲಿ ವ್ಯವಸಾಯ ಪತ್ತಿನ ಸಂಘಗಳು(Agricultural Credit Socities) ಹಳ್ಳಿಗಳಲ್ಲಿ, ಅರ್ಬನ್ ಬ್ಯಾಂಕುಗಳು ಹಾಗೂ ವ್ಯವಸಾಯೇತರ ಸಂಘಗಳು ಪಟ್ಟಣಗಳಲ್ಲಿ, ಮಧ್ಯ ಅಂತಸ್ತಿನಲ್ಲಿ ಜಿಲ್ಲಾಮಟ್ಟದ ಕೇಂದ್ರಿಯ ಸಹಕಾರಿ ಬ್ಯಾಂಕುಗಳು ಮತ್ತು ಉಚ್ಚಮಟ್ಟದಲ್ಲಿ ಪ್ರತಿಯೊಂದು ರಾಜ್ಯದಲ್ಲಿ ಒಂದರಂತೆ ರಾಜ್ಯ ಸಹಕಾರಿ ಬ್ಯಾಂಕುಗಳು ಕೆಲಸ ಮಾಡುತ್ತವೆ.


ದೀರ್ಘಾವಧಿ ಸಾಲದ ಆವಶ್ಯಕತೆಗಳನ್ನು ಜಮೀನು ಒತ್ತಿ ಬ್ಯಾಂಕು (Land Mortgage Bank) ಅಥವಾ ಭೂ ಅಭಿವೃದ್ಧಿ ಬ್ಯಾಂಕು (Land Development Bank) ಗಳು ಎರಡು ಅಂತಸ್ತುಗಳಲ್ಲಿ ಕೆಲಸ ಮಾಡುತ್ತವೆ. ಕೆಳಗಿನ ಅಂತಸ್ತಿನಲ್ಲಿ ಪ್ರಾಥಮಿಕ ಅಭಿವೃದ್ಧಿ ಬ್ಯಾಂಕುಗಳು (Primary Land Development Banks) ಮತ್ತು ಮೇಲ್ಮಟ್ಟದಲ್ಲಿ ಕೇಂದ್ರಿಯ ಭೂ ಅಭಿವೃದ್ಧಿ ಬ್ಯಾಂಕುಗಳು (Central Land Development Banks) ಕಾರ್ಯ ಮಾಡುತ್ತವೆ. ಮುಂದಿನ ಪುಟದಲ್ಲಿರುವ ನಕ್ಷೆ–ಯಿಂದ ಸಹಕಾರಿ ಬ್ಯಾಂಕುಗಳ ರಚನೆಯನ್ನು ಸ್ಪಷ್ಟಪಡಿಸಿಕೊಳ್ಳಬಹುದು.

ವಿವಿಧ ಸಹಕಾರಿ ಹಣಕಾಸಿನ ಸಂಸ್ಥೆಗಳ ಪ್ರಗತಿ :

೧. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು : ಗೋರಾವಾಲಾ ಸಮಿತಿಯ ಶಿಫಾರಸುಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಿಝರ್ವ್ ಬ್ಯಾಂಕು ಮತ್ತು ರಾಜ್ಯ ಸರಕಾರಗಳು ತೀವ್ರಗತಿಯಲ್ಲಿ ಜಾರಿಗೆ ತಂದವು. ಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ೧೯೬೦ರ ಸಹಕಾರಿ ಪತ್ತಿನ ಮೇಲಿನ ಸಮಿತಿ (Committee on Co-operative Credit) ಹಾಗೂ ೧೯೬೯ರ ಅಖಿಲ ಭಾರತ ಗ್ರಾಮಾಂತರ ಪತ್ತಿನ ಪುನಃಪರಿಶೀಲನಾ ಸಮಿತಿ (All India Rural Credit Review Committee) ಗಳ ಶಿಫಾರಸುಗಳನ್ನು ಕಾರ್ಯಾಚರಣೆಗೆ ತರಲು ಪ್ರಯತ್ನಗಳು ನಡೆದಿವೆ.

ಕೋಷ್ಟಕ–೧ ರಿಂದ ಪ್ರಾಥಮಿಕ ಕೃಷಿ ಸಾಲ ಸಂಘಗಳ ಸಂಖ್ಯೆ ೧೯೫೧–೫೨ ರಿಂದ ೧೯೬೧–೬೨ ರ ದಶಕದಲ್ಲಿ ನೂರಕ್ಕೆ ೯೯ ರಷ್ಟು ಹೆಚ್ಚಾದದ್ದು ಸ್ಪಷ್ಟವಾಗುವುದು. ಆದರೆ ಜೀವನ ಸಂದಾಯ ಸಾಮರ್ಥ್ಯವಿಲ್ಲದ (non-viable) ಸಂಸ್ಥೆಗಳನ್ನು ಜೀವನ ಸಂದಾಯ ಸಾಮರ್ಥ್ಯವಿದ್ದ (viability) ಸಂಘಗಳ ಕೂಡ ವಿಲೀನಗೊಳಿಸಿ ಮರು ಸಂಘಟನೆ ಮಾಡಿದ್ದರಿಂದ ೧೯೬೯–೭೦ ರಲ್ಲಿ ಸಂಘಗಳ ಸಂಖ್ಯೆ ೧,೬೨,೭೦೦ ಕ್ಕಿಳಿಯಿತು. ಸಂಘಗಳ ಸ್ಸಂಖ್ಯೆಯು ೧೯೬೦ ರ ದಶಕದಲ್ಲಿ ನೂರಕ್ಕೆ ೩೪ ರಷ್ಟು ಕಡಿಮೆಯಾಗಿದೆ. ೧೯೫೧ ರ ದಶಕದಲ್ಲಿ ಸದಸ್ಯರ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ. ಇದನ್ನೇ ೧೯೬೯-೭೦ ರ ಸಂಖ್ಯೆಗೆ ಹೋಲಿಸಿದಾಗ ನೂರಕ್ಕೆ ೨೨೬ ರಷ್ಟು ಹೆಚ್ಚಾದದ್ದು ಕಂಡುಬರುತ್ತದೆ. ಇದರಿಂದ ಸಂಘಗಳ ಸಂಖ್ಯೆ ಕಡಿಮೆಯಾದರೂ ಸದಸ್ಯತ್ವ ಹೆಚ್ಚಾಗಿದೆಯೆಂದು ತಿಳಿದುಬರುತ್ತದೆ. ೧೯೬೧–೬೨ರಿಂದೀಚಿನ ದಶಕದಲ್ಲಿ ಸದಸ್ಯ

ಸಹಕಾರಿ ಪತ್ತಿನ ರಚನೆ (ಜೂನ ೩೦-೧೯೭೦ ರ ಕೊನೆಗೆ,)



ಮೂಲ : Government of India, The Report of the Banking Commission, 1972, P. 54.

ಆವರಣದಲ್ಲಿಯ ಅಂಕಿಗಳು ಸಂಸ್ಥೆಗಳ ಸಂಖ್ಯೆಯನ್ನು ಸೂಚಿಸುತ್ತವೆ.

† ರಾಜ್ಯ ಸಹಕಾರಿ ಬ್ಯಾಂಕುಗಳು ಅಪೆಕ್ಸ ಬ್ಯಾಂಕುಗಳೆಂದೂ ಕರೆಯಲ್ಪಡುತ್ತವೆ ಕೃಷಿ ಹಾಗೂ ಕೃಷಿಯೇತರ ಪತ್ತುಗಳಲ್ಲಿ ಕೇಂದ್ರೀಯ ಸಹಕಾರಿ ಬ್ಯಾಂಕುಗಳು ಭಿನ್ನವಿಲ್ಲ.

* ಬಿಹಾರ, ಗುಜರಾತ, ಜಮ್ಮು ಹಾಗೂ ಕಾಶ್ಮೀರ ಮತ್ತು ಉತ್ತರ ಪ್ರದೇಶ ಅಲ್ಲಿ ದೀರ್ಘಾವಧಿ ಪತ್ತಿನ ರಚನೆ ಏಕತ್ರವಿರುತ್ತದೆ. ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳು ತಮ್ಮ ಶಾಖೆಗಳ ಮುಖಾಂತರ ಪ್ರತ್ಯಕ್ಷವಾಗಿ ಸಾಲ ವಿತರಣೆ ಮಾಡುತ್ತವೆ.

ತ್ವದ ಹೆಚ್ಚಳವು ಕೇವಲ ನೂರಕ್ಕೆ ೫೨ ರಷ್ಟಿದೆ. ಯೋಜನೆಯ ದಶಕದಲ್ಲಿ ಮುಂಗಡ ಸಾಲದಲ್ಲಿ ನೂರಕ್ಕೆ ೮೪೩ ರಷ್ಟು ಹೆಚ್ಚಳ ಕಂಡುಬಂದರೂ ದ್ವಿತೀಯ ದಶಕದಲ್ಲಿ ಕೇವಲ ಶೇಕಡಾ ೧೩೭ ರಷ್ಟು (೧೯೬೧-೬೨ ಕ್ಕೆ ಹೋಲಿಸಿದಾಗ) ಅಧಿಕವಾಗಿದೆ. ೧೯೫೧-೫೨ ರಿಂದ ೧೯೬೯-೭೦ ರ ಅವಧಿಯಲ್ಲಿ ಸುಮಾರು ೨೧ ಪಟ್ಟು ಏರಿದ್ದು ಈ ಸಂಸ್ಥೆಗಳು ರೈತನ ಹಣಕಾಸಿನ ಬೇಡಿಕೆಗಳನ್ನು ಪೂರೈಸಲು ಶ್ರಮಿಸಿದ ಸಂಕೇತವಾಗಿದೆ. ದುಡಿಯುವ ಭಂಡವಾಳ, ಶೇರು ಭಂಡವಾಳ ಮತ್ತು ಠೇವಣಿಗಳಲ್ಲಿಯ ಆಧಿಕ್ಯವು ತಮ್ಮ ಶಕ್ತಿಯನ್ನು ಅಧಿಕಗೊಳಿಸಲು ಕೈಕೊಂಡ ಶ್ರಮದ ದ್ಯೋತಕಗಳು. ಮುಟ್ಟತು ಮೀರಿದ ಸಾಲ, ಮತ್ತು ಬಾಕಿ ಸಾಲಗಳಲ್ಲಿಯೂ ಏರಿಕೆಯಾದದ್ದು ತೋರುತ್ತದೆ. ಸದಸ್ಯತ್ವ, ಶೇರು ಭಂಡವಾಳ, ಸಾಲ ಮುಂತಾದವುಗಳಲ್ಲಿ ಪ್ರತಿಯೊಂದು ಸಂಘದ ಸರಾಸರಿಯು ಅವುಗಳ ಒರೆಗಲ್ಲೆಂದು ಭಾವಿಸಿ ತುಲನೆ ಮಾಡಿದರೂ ಗಣನೀಯ ಪ್ರಗತಿಯು ಗೋಚರವಾಗದಿರಲಾರದು. ಸದಸ್ಯತ್ವದ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದರೂ ೧೯೬೮-೬೯ ರಲ್ಲಿ ಕೇವಲ ಸುಮಾರು ನೂರಕ್ಕೆ ೩೫ ರಷ್ಟು ಗ್ರಾಮಾಂತರ ಜನಸಂಖ್ಯೆಯು ಪ್ರಾಥಮಿಕ ಪತ್ತಿನ ಸಂಘಗಳ ಕಕ್ಷೆಯಲ್ಲಿ ಬಂದುದು ಅಸಮಾಧಾನಕಾರಕ ವಿಷಯ. ಪಂಜಾಬ, ತಮಿಳನಾಡು, ಮತ್ತು ಹಿಮಾಚಲ ಪ್ರದೇಶಗಳಲ್ಲಿ ನೂರಕ್ಕೆ ೫೦ ಕ್ಕಿಂತ ಹೆಚ್ಚು ಗ್ರಾಮಾಂತರ ಜನರು ಈ ಸಂಘಗಳ ಕಕ್ಷೆಯಲ್ಲಿ ಬರುತ್ತಾರೆ. ಆಸಾಮ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳಲ್ಲಿ ಅತಿ ಕಡಿಮೆ ಜನ, ಸಂಘಗಳ ಸದಸ್ಯರಾಗಿರುತ್ತಾರೆ.[೨] ಮರು ಸಂಘಟನೆಯ ಕಾರ್ಯದಿಂದ ಒಟ್ಟು ಸಂಘಗಳ ಸಂಖ್ಯೆಗೆ ನಿಷ್ಕ್ರಿಯ ಸಂಘಗಳ ಸಂಖ್ಯೆ ೧೯೬೧-೬೨ ರಲ್ಲಿ ನೂರಕ್ಕೆ ೧೯.೩ ರಷ್ಟಿದ್ದದ್ದು ೧೯೬೯-೭೦ ರಲ್ಲಿ ೧೧.೭ ಕ್ಕಿಳಿಯಿತು.

೨. **ಕೇಂದ್ರೀಯ ಸಹಕಾರಿ ಬ್ಯಾಂಕುಗಳು** : ಒಂದು ಜಿಲ್ಲೆಗೆ ಸಾಮಾನ್ಯವಾಗಿ ಒಂದೇ ಕೇಂದ್ರೀಯ ಬ್ಯಾಂಕಿರಬೇಕೆಂಬ 'ಗೋರವಾಲಾ ಸಮಿತಿ' ಯ ಸಿಫಾರಸಿನ ಮೇರೆಗೆ ಈ ಬ್ಯಾಂಕುಗಳನ್ನು ಪುನಃ ಸಂಘಟಿಸಲಾಯಿತು. ಆದ್ದರಿಂದ ೧೯೫೧-೫೨ ರಲ್ಲಿ ಬ್ಯಾಂಕುಗಳ ಸಂಖ್ಯೆ ೫೦೯ ರಿಂದ ೧೯೬೯-೭೦ ರಲ್ಲಿ ೩೪೦ ಕ್ಕಿಳಿಯಿತು. ಅಂದರೆ ಅವುಗಳ ಸಂಖ್ಯೆ ನೂರಕ್ಕೆ ೩೪ ರಷ್ಟಿಳಿಯಿತು. ಇದು ಕೋಷ್ಟಕ-೨ ರಿಂದ ಸ್ಪಷ್ಟವಾಗುವದು. ೧೯೬೯-೭೦ ರಲ್ಲಿಯ ಸದಸ್ಯರ ಸಂಖ್ಯೆಯನ್ನು ೧೯೬೧-೬೨ ರ ಸಂಖ್ಯೆಗೆ ಹೋಲಿಸಿದರೆ ನೂರಕ್ಕೆ ೨೦ ರಷ್ಟು ಇಳಿದದ್ದು ಕಾಣುವದು. ಹಣಕಾಸಿನ ಪರಿಸ್ಥಿತಿಯಲ್ಲಿ ಮತ್ತು ಸಾಲ ಹಂಚುವಿಕೆಯಲ್ಲಿ ಸಾಮಾನ್ಯವಾಗಿ ಸತತ ಆಧಿಕ್ಯವು ಕಂಡುಬರುವದು. ೧೯೬೦ ರ ದಶಕದಲ್ಲಿ ಶೇಕಡಾ ೧೩೦ ರಷ್ಟು ಮುಂಗಡ ಸಾಲದಲ್ಲಿ ಹೆಚ್ಚಳವು ತೋರುತ್ತದೆ. ೧೯೫೧-೫೨ ರಲ್ಲಿ ಮುದ್ದತು ಮೀರಿದ ಸಾಲವನ್ನು ಬಾಕಿ

೨. B. Venkata Rao, "Restructuring of Co-operatives at the Primary Level-Rural Banks" in Reserve Bank of India, Technical Studies Prepared for the Banking Commission, Vol. II 1972, P. 75.

ಸಾಲಕ್ಕೆ ಹೋಲಿಸಿದರೆ ನೂರಕ್ಕೆ ೧೩.೫ ರಿಂದ ೧೯೬೯-೭೦ ರಲ್ಲಿ ನೂರಕ್ಕೆ ೨೯ ರಷ್ಟಕ್ಕೆ ಏರಿದ್ದು ಸಾಲ ವಸೂಲಿಯ ಕಾರ್ಯದಲ್ಲಿ ಬ್ಯಾಂಕುಗಳ ಆದಕ್ಷತೆಯನ್ನು ತೋರಿಸುತ್ತದೆ. ಠೇವಣಿ ಸಜ್ಜೀಕರಿಸುವದರಲ್ಲಿಯ ಯಶಸ್ಸನ್ನು ಈ ಬ್ಯಾಂಕುಗಳ ಶಾಖಾ ವಿಸ್ತರಣೆಯ ಮುಖಾಂತರ ತಿಳಿದುಕೊಳ್ಳಬಹುದು. ೧೯೫೧-೫೨ ರಲ್ಲಿ ೭೭೯ ಶಾಖೆಗಳಿಂದ ೧೯೬೯-೭೦ ರಲ್ಲಿ ೩೪೩೮ ಕ್ಕೇರಿತು.[೩] ಇದೇ ಅವಧಿಯಲ್ಲಿ ಠೇವಣಿಗಳ ಮೊತ್ತವು ೩೮ ಕೋಟಿ ರೂ. ಗಳಿಂದ ೩೮೨ ಕೋಟಿ ರೂ. ಗಳಿಗೇರಿತು. ಕೃಷಿ ಉದ್ದೇಶಕ್ಕಾಗಿ ಹಂಚಿದ ಮುಂಗಡ ಸಾಲದ ಮೊತ್ತವು ೧೯೬೦-೬೧ ರಲ್ಲಿ ೨೪೩ ಕೋಟಿ ರೂ. ಗಳಿದ್ದದ್ದು ೧೯೬೯-೭೦ ರಲ್ಲಿ ೬೫೦ ಕೋಟಿ ರೂ. ಗಳಿಗೇರಿತು. ಈ ದಶಕದಲ್ಲಿ ಕೃಷಿಯೇತರ ಉದ್ದೇಶಗಳಿಗೆ ವಿತರಣೆ ಸಾಲದಲ್ಲಿ ಆಧಿಕ್ಯವಿದ್ದರೂ (೧೧೦ ಕೋಟಿ ರೂ. ಯಿಂದ ೨೨೩ ಕೋಟಿಗಳಿಗೇರಿದೆ.) ೧೯೬೭-೬೮ ರಿಂದೀಚೆಗೆ ೨೫೮ ಕೋಟಿ ರೂ. ಗಳಿಂದ ೨೨೩ ಕೋಟಿ ರೂ. ಗಳಿಗಿಳಿದಿದೆ.[೪]

೩ ರಾಜ್ಯ ಸಹಕಾರಿ ಬ್ಯಾಂಕುಗಳು : ಕೆಲವು ರಾಜ್ಯಗಳಲ್ಲಿ ಇವುಗಳನ್ನು ಆಪೆಕ್ಸ ಬ್ಯಾಂಕುಗಳೆಂದೂ ಕರೆಯುವರು. ಪುನಃ ಸಂಘಟನೆಯ ಕಾರ್ಯವು ಈ ವಿಧದ ಬ್ಯಾಂಕುಗಳಿಗೂ ಅನ್ವಯಿಸುತ್ತದೆ. ಪ್ರತಿಯೊಂದು ರಾಜ್ಯದಲ್ಲಿ ಹಾಗೂ ಕೇಂದ್ರ ಶಾಸಿತ ಪ್ರದೇಶದಲ್ಲಿ ಒಂದೊಂದರಂತೆ ರಾಜ್ಯ ಸಹಕಾರಿ ಬ್ಯಾಂಕುಗಳಿರುವವು. ರಿಝರ್ವ ಬ್ಯಾಂಕು ರಾಜ್ಯ ಸಹಕಾರಿ ಬ್ಯಾಂಕುಗಳ ಮುಖಾಂತರ ರಿಯಾಯತಿ ಬಡ್ಡಿ ದರದಲ್ಲಿ ರೈತರಿಗೆ ಸಾಲಸೌಲಭ್ಯವೊದಗಿಸುತ್ತದೆ. ಕೋಷ್ಟಕ-೩ ನ್ನು ಅವಲೋಕಿಸಿದಾಗ ರಾಜ್ಯ ಸಹಕಾರಿ ಬ್ಯಾಂಕುಗಳು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯು ಗೋಚರಿಸುತ್ತದೆ. ೧೯೫೧-೫೨ ರಲ್ಲಿ ಭಾರತದಲ್ಲಿ ಕೇವಲ ೧೬ ರಾಜ್ಯ ಸಹಕಾರಿ ಬ್ಯಾಂಕುಗಳಿದ್ದವು. ಅವುಗಳ ಸಂಖ್ಯೆ ೧೯೬೬-೬೭ ರಲ್ಲಿ ೨೫ ಕ್ಕೇರಿದ್ದು ೧೯೬೯-೭೦ ರಲ್ಲಿ ಏನೂ ವ್ಯತ್ಯಾಸವಾಗಿಲ್ಲ. ೧೯೫೦ ರ ದಶಕದಲ್ಲಿ ಮುಂಗಡ ಸಾಲದ ಪ್ರಮಾಣವು ನೂರಕ್ಕೆ ೩೬೪ ರಷ್ಟು ಹೆಚ್ಚಾಯಿತು. ೧೯೬೦ ರ ದಶಕದಲ್ಲಿ ಸಂಪೂರ್ಣ ಸಾಲದ ಮೊತ್ತವು ಹೆಚ್ಚಾಗಿದ್ದರೂ ಹಿಂದಿನ ದಶಕದ ಪ್ರಮಾಣದ ಆಧಿಕ್ಯಕ್ಕೆ ಹೋಲಿಸಿದಾಗ ನೂರಕ್ಕೆ ಕೇವಲ ೧.೭೬ ರಷ್ಟು ಹೆಚ್ಚಾದುದು ಕಾಣುತ್ತದೆ. ಶೇರು ಭಂಡವಾಳ, ಠೇವಣಿ, ದುಡಿಯುವ ಭಂಡವಾಳ, ಮುಂಗಡ ಸಾಲ ಮುಂತಾದ ದಿಶೆಗಳಲ್ಲಿ ರಾಜ್ಯ ಸಹಕಾರಿ ಬ್ಯಾಂಕುಗಳು ಸಾಕಷ್ಟು ಪ್ರಗತಿಯನ್ನು ಸಾಧಿಸಿವೆ. ೧೯೫೧-೫೨ ರಲ್ಲಿ ಬಾಕಿ ಸಾಲಕ್ಕೆ ಮುದ್ದತು ಮೀರಿದ ಸಾಲದ ಪ್ರಮಾಣವು ನೂರಕ್ಕೆ ೧೬.೧ ರಷ್ಟಿದ್ದದ್ದು ೧೯೬೯-೭೦ ರಲ್ಲಿ ಕೇವಲ ೫.೫ ಕ್ಕಿಳಿದುದು ನಿಜವಾಗಿಯೂ ಶ್ಲಾಘನೀಯ. ಇದು ಈ ಬ್ಯಾಂಕುಗಳ ಸಾಲ ವಸೂಲಿ ಕಾರ್ಯದಕ್ಷತೆಯನ್ನು ತೋರಿಸುತ್ತದೆ. ಕೃಷಿ ಉದ್ದೇಶಕ್ಕಾಗಿ ಒದಗಿಸಿದ ಮುಂಗಡ

---

೩. Government of India, The Report of the Banking Commission, 1972, P. 749.

೪. Ibid, P. 750.

ಸಾಲದ ಮೊತ್ತವು ೧೯೬೦-೬೧ ರಿಂದ ೧೯೬೯-೭೦ ರ ಅವಧಿಯಲ್ಲಿ ೧೮೯ ಕೋಟಿ ರೂ. ಗಳಿಂದ (ಮುಂಗಡ ಸಾಲದ ಒಟ್ಟು ಮೊತ್ತವಾದ ೨೫೮ ಕೋಟಿ ರೂ. ಗಳಲ್ಲಿ) ೫೬೪ ಕೋಟಿ ರೂ. (ಒಟ್ಟು ಸಾಲದ ಮೊತ್ತವಾದ ೭೦೭ ಕೋಟಿ ರೂ. ಗಳಲ್ಲಿ) ಗಳಿಗಿಳಿಯಿತು. ಕೃಷಿಯೇತರ ಸಾಲದ ಮೊತ್ತವು ೧೯೬೫-೬೬ ರಿಂದೀಚೆಗೆ ಏರುಪೇರು ಗಳಿಂದ ಕೂಡಿದೆ. ಕೊನೆಗೆ ೧೯೬೯-೭೦ ರಲ್ಲಿ ೧೩೩ ಕೋಟಿ ರೂ. ಗಳಿಗಿಳಿದಿದೆ. ರಾಜ್ಯ ಸಹಕಾರಿ ಬ್ಯಾಂಕುಗಳು ರಿಝರ್ವ ಬ್ಯಾಂಕಿನಿಂದ ೧೯೬೯-೭೦ ರಲ್ಲಿ ಸಾಲ ಪಡೆದ ಪ್ರಮಾಣವನ್ನು ೧೯೫೧-೫೨ ರ ಮೊತ್ತಕ್ಕೆ ಹೋಲಿಸಿದಾಗ ನೂರಕ್ಕೆ ಸುಮಾರು ೩೪೦೦ ರಷ್ಟು ಅಧಿಕವಾದುದು ಕಂಡು ಬರುತ್ತದೆ.[೫]

೪. ಜಮೀನು ಅಭಿವೃದ್ಧಿ ಬ್ಯಾಂಕುಗಳು : ರೈತನ ದೀರ್ಘಾವಧಿ ಸಾಲದ ಬೇಡಿಕೆಗಳನ್ನು ಪೂರೈಸಲು ಜಮೀನು ಒತ್ತೆ ಅಥವಾ ಅಭಿವೃದ್ಧಿ ಬ್ಯಾಂಕುಗಳು ಜನಿಸಿದವು. ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳು ರಾಜ್ಯ ಸಹಕಾರಿ ಬ್ಯಾಂಕು ಮತ್ತು ಕೃಷಿ ಮರು ಹಣಕಾಸಿನ ಕಾರ್ಪೊರೇಶನಗಳಿಂದ ಹಣವನ್ನು ಪಡೆದು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಇಲ್ಲವೇ ತಮ್ಮ ಶಾಖೆಗಳ ಮುಖಾಂತರ ರೈತರಿಗೆ ದೀರ್ಘಾವಧಿ ಸಾಲದ ವಿತರಣೆ ಮಾಡುತ್ತವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಖ್ಯೆ ೧೯೫೧-೫೨ ರಿಂದ ೧೯೬೯-೭೦ ರ ಅವಧಿಯಲ್ಲಿ ೨೮೩ ರಿಂದ ೮೧೯ ಕ್ಕೇರಿತು. ಅಂದರೆ ಈ ಹೆಚ್ಚಳವು ಸುಮಾರು ೨ ಪಟ್ಟಿನಷ್ಟಾಗಿದೆ. ಇದೇ ಅವಧಿಯಲ್ಲಿ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಖ್ಯೆ ೬ ರಿಂದ ೧೯ ಕ್ಕೇರಿದೆ. ಇವುಗಳ ಶಾಖೆಗಳು ೧೯೬೫-೬೬ ರಿಂದ ೧೯೬೯-೭೦ ರಷ್ಟರಲ್ಲಿ ೩೫೨ ರಿಂದ ೫೦೩ ಕ್ಕೇರಿವೆ. ಇದೇ ಪ್ರಕಾರ ಅವುಗಳ ಆರ್ಥಿಕ ಪ್ರಗತಿಯನ್ನು ಶೇರು ಭಂಡವಾಳ, ದುಡಿಯುವ ಭಂಡವಾಳ, ಹಾಗು ಋಣ ಪತ್ರಿಕೆಗಳ ನೀಡುವಿಕೆಗಳಲ್ಲಿ ಆದ ವ್ಯತ್ಯಾಸಗಳಿಂದ ಕಂಡು ಕೊಳ್ಳಬಹುದು. ಇವುಗಳೆಲ್ಲ ಕೋಷ್ಟಕ-೪. ಮತ್ತು ೫ ರಿಂದ ಸ್ಪಷ್ಟವಾಗುತ್ತವೆ.

ಜಮೀನು ಅಭಿವೃದ್ಧಿ ಬ್ಯಾಂಕುಗಳ ಕಾರ್ಯಗಳನ್ನು ಒಟ್ಟಿಗೆ ಪರಿಶೀಲಿಸಿದರೆ ಬಾಕಿ ಸಾಲಕ್ಕೆ ಮುದ್ದತು ಮೀರಿದ ಸಾಲದ ಪ್ರಮಾಣವು ೧೯೫೧-೫೨ ರಿಂದ ೧೯೬೯-೭೦ ರಲ್ಲಿ ನೂರಕ್ಕೆ ೦.೪ ರಿಂದ ೧.೦ ಕ್ಕೇರಿದೆ. ೧೯೬೬-೬೭ ರಲ್ಲಿ ಇದು ನೂರಕ್ಕೆ ೨.೨ ರಷ್ಟಿದ್ದುದು ೧.೦ ಕ್ಕೆ ಇಳಿದಿದೆಯೆಂದರೆ ಸಾಲ ವಸೂಲಿ ಕಾರ್ಯದಲ್ಲಿಯ ದಕ್ಷತೆಯು ಅರಿವಾಗದಿರದು. ಭೂ ಅಭಿವೃದ್ಧಿ ಬ್ಯಾಂಕುಗಳ ಮುದ್ದತು ಮೀರಿದ ಸಾಲದ ಮೊತ್ತವು ೧೯೫೧-೫೨ ರಿಂದ ೧೯೬೯-೭೦ ರವಧಿಯಲ್ಲಿ ೦.೦೪ ಕೋಟಿ ರೂ. ಗಳಿಂದ ೫.೪ ಕೋಟಿ ರೂ. ಗಳಿಗೇರಿದೆ. ಇವೆರಡು ದಶಕಗಳಲ್ಲಿ ಪ್ರಾಥಮಿಕ ಮತ್ತು ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳು ಮತ್ತು ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳ ಶಾಖೆಗಳು ವಿತರಣೆ ಮಾಡಿದ ಮೊತ್ತವು ೩ ಕೋಟಿ ರೂ.

---

೫ Report of the Banking Commission, op. Cit. see Table on P. 750.

ಗಳಿಂದ ೧೫೩ ಕೋಟಿ ರೂ. ಗಳಿಗೇರಿದೆ.[೬] ಅಂದರೆ ಇದು ನೂರಕ್ಕೆ ೫೦೦೦ ದಷ್ಟು ಏರಿದಂತಾಗಿದೆ.

ರಿಝರ್ವಬ್ಯಾಂಕು ಗ್ರಾಮಾಂತರ ಸಾಲ ವಿತರಣೆಯಲ್ಲಿ ಸಹಾಯವಾಗುವದಕ್ಕೆ ಅವಶ್ಯವಿರುವ ನಿಧಿಗಳನ್ನು ಹಾಗೂ ಸಂಸ್ಥೆಗಳನ್ನು ಸ್ಥಾಪಿಸಿ. ವಿವಿಧ ರಾಜ್ಯಗಳಲ್ಲಿ ಪುನಃ ಸಂಘಟನೆ ಮಾಡಿ ಪೋಷಿಸಿಕೊಂಡು ಬಂದಿರುವದರಿಂದ ರೈತರ ಒಟ್ಟು ಸಾಲದ ಮೊತ್ತದಲ್ಲಿ ಸಹಕಾರಿ ಸಾಲದ ಅಂಶವು ೧೯೬೧-೬೨ರಲ್ಲಿ ನೂರಕ್ಕೆ ೧೫.೫ ಕ್ಕೇರಿದೆ. ಈ ಅಂಶವು ೧೯೬೯-೭೦ ರಲ್ಲಿ ಸುಮಾರು ನೂರಕ್ಕೆ ೨೫ ರಷ್ಟಕ್ಕೇರಿದೆಯೆಂದು ಅಂದಾಜು ಮಾಡಲಾಗಿದೆ.[೭] ಇದೇ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳು ಸಾಮಾನ್ಯವಾಗಿ ಎಲ್ಲ ಹಳ್ಳಿಗಳನ್ನು ಸಾಲದ ಕಕ್ಷೆಯಲ್ಲಿ ತೆಗೆದುಕೊಂಡಿರುತ್ತವೆ. ಅಖಿಲ ಭಾರತ ಗ್ರಾಮಾಂತರ ಸಾಲ ಮರು ಪರಿಶೀಲನಾ ಸಮಿತಿಯು ೧೯೭೩-೭೪ ರ ವೇಳೆಗೆ ಅಲ್ಪಾವಧಿ ಉತ್ಪಾದನಾ ಸಾಲದ ಮೊತ್ತವು ೨೦೦೦ ಕೋಟಿ ರೂ.ಗಳಾಗಬಹುದೆಂದು ಅಂದಾಜು ಮಾಡಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮೊತ್ತವು ಅನುಕ್ರಮವಾಗಿ ೫೦೦ ಕೋಟಿ ರೂ. ಮತ್ತು ೧೫೦೦ ಕೋಟಿ ರೂ, ಗಳಾಗಬಹುದೆಂದೂ ಅಂದಾಜು ಮಾಡಲಾಗಿದೆ.[೮] ಆದ್ದರಿಂದ ಚತುರ್ಥ ಯೋಜನೆಯ ಕೊನೆಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಹಕಾರಿ ಸಾಲದ ಪ್ರಮಾಣವನ್ನು ವರ್ಷವೊಂದಕ್ಕೆ ೭೫೦ ಕೋಟಿ ರೂ.ಗಳಿಗೆ ಮತ್ತು ದೀರ್ಘಾವಧಿ ಸಾಲದ ಪ್ರಮಾಣವನ್ನು ೭೦೦ ಕೋಟಿ ರೂ.ಗಳಿಗೆ ತಲುಪಿಸಬೇಕೆಂದು ಗುರಿಯಿಡಲಾಗಿದೆ.

ಜೂನ ೧೯೬೯ ರಲ್ಲಿ ಎಲ್ಲ ಬ್ಯಾಂಕುಗಳ ಕಚೇರಿಗಳಿಗೆ ಸಹಕಾರಿ ಬ್ಯಾಂಕುಗಳ ಪ್ರಮಾಣ ನೂರಕ್ಕೆ ೩೦ ರಷ್ಟಿತ್ತು. ಆದರೆ ಅವುಗಳ ಠೇವಣೆ, ಉಳಿದ ಬ್ಯಾಂಕುಗಳ ಠೇವಣಿಗೆ ನೂರಕ್ಕೆ ೧೦ ರಷ್ಟಿತ್ತು. ಯಾಕೆಂದರೆ ಸಹಕಾರಿ ಬ್ಯಾಂಕುಗಳು ಮುಖ್ಯವಾಗಿ ಹಳ್ಳಿಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿರುವದರಿಂದ ಠೇವಣಿ ಸಜ್ಜೀಕರಣ ಕಾರ್ಯವು ಅಷ್ಟೊಂದು ತೀವ್ರಗತಿಯಲ್ಲಿ ಆಗಿಲ್ಲ. ಡಿಸೆಂಬರ ೧೯೬೯ರಲ್ಲಿ ಐದು ಸಾವಿರದಿಂದ ಹತ್ತು ಸಾವಿರ ಜನಸಂಖ್ಯೆಯುಳ್ಳ ಊರುಗಳಲ್ಲಿ ಒಟ್ಟು ೧೮೨೫ ಬ್ಯಾಂಕು ಕಚೇರಿಗಳಲ್ಲಿ ೭೮೭ ಅಥವಾ ನೂರಕ್ಕೆ ೪೩.೧ ರಷ್ಟು ಸಹಕಾರಿ ಬ್ಯಾಂಕುಗಳಿದ್ದವು. ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ೧೬೩೦ ಒಟ್ಟು ಬ್ಯಾಂಕುಗಳ

---

೬. Banking Commission Report, op. Cit. p. 750

೭. Banking Commission Report, op. Cit., Pp, 29-24.

೮. Planning Commission, Fourth Five Year Plan 1969-74, Government of India, 1970, P. 140:

ಕಚೇರಿಗಳಲ್ಲಿ ೧.೦೦೨ ಅಥವಾ ನೂರಕ್ಕೆ ೬೧.೫ ರಷ್ಟು ಸಹಕಾರಿ ಬ್ಯಾಂಕುಗಳಿದ್ದವು.[೯] ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರಿ ಬ್ಯಾಂಕುಗಳು ವಿಶಾಲವಾಗಿ ಶಾಖೋಪಶಾಖೆಗಳಾಗಿ ಹರಡಿರುವುದರಿಂದ ಠೇವಣಿ ಸಜ್ಜೀಕರಣವು ಮುಖ್ಯವಾಗಿ ಸಹಕಾರಿ ಬ್ಯಾಂಕುಗಳ ಹೊಣೆಗಾರಿಕೆಯಾಗಬೇಕೆಂದು ಬ್ಯಾಂಕಿಂಗ ಆಯೋಗವು ಅಭಿಪ್ರಾಯ ಪಟ್ಟಿರುವುದು ಸೂಕ್ತವಾಗಿದೆ. ಸಹಕಾರಿ ಬ್ಯಾಂಕುಗಳ ಲೋಪದೋಷಗಳಿಂದ ಕೃಷಿ ಉತ್ಪಾದನೆಯು ಕುಂಠಿತವಾಗಬಾರದೆಂಬ ಉದ್ದೇಶದಿಂದ ಚತುರ್ಥ ಯೋಜನೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಸೂಚಿಸಲಾಗಿದೆ. ಇವುಗಳನ್ನು ಲೇಖನದ ಕೊನೆಗೆ ಸಂಕ್ಷಿಪ್ತವಾಗಿ ಹೇಳಲಾಗುವದು.

ಸಹಕಾರಿ ಬ್ಯಾಂಕುಗಳ ಸಮಸ್ಯೆಗಳು :

೧. ಬಹಳಷ್ಟು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಗೆ ಜೀವನ ಸಾಮರ್ಥ್ಯವಿಲ್ಲದಿರುವದು ಸಹಕಾರಿ ಪತ್ತಿನ ಪದ್ಧತಿಯ ಅತಿ ಮುಖ್ಯ ದೋಷವಾಗಿದೆ. ಆದ್ದರಿಂದ ಇವು ಉತ್ಪಾದನಾ ಹೊಂದಿಕೆಯುಳ್ಳ (Production Oriented) ಸಾಲ ವಿತರಣೆಯಲ್ಲಿ ಅಸಮಾಧಾನಕಾರಕ ಪ್ರತಿನಿಧಿಗಳಾಗಿವೆ.[೧೦] ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರವು ರೈತರಿಗೆ ಹಂಚಬೇಕೆಂದು ಕೊಟ್ಟ ಹಣದ ಹೊರತು ಇವುಗಳಿಗೆ ತಮ್ಮ ಜೀವನದ ಬೇರನ್ನು ನಿಭಾಯಿಸಲಿಕ್ಕೆ ಬೇಕಾಗುವ ಸಂಪನ್ಮೂಲಗಳನ್ನು 'ಠೇವಣಿಗಳ ಸಜ್ಜುಗೊಳಿಸುವಿಕೆ' (Deposit Mobilization) ಯ ಮುಖಾಂತರ ಗಳಿಸಲು ಸಾಧ್ಯವಾಗದಾಗಿದೆ. ಇದರಿಂದ ಹಳ್ಳಿಯ ಮಟ್ಟದಲ್ಲಿ ಈ ಸಂಘಗಳು ಸತ್ತು ಬದುಕಿದಂತಿರುವವು. ಸರಕಾರದ ಪುನಃಸಂಘಟನೆಯ ನೀತಿಯಿಂದಾಗಿ ನಿಷ್ಕ್ರಿಯ ಸಂಘಗಳ ಸಂಖ್ಯೆ ೧೯೬೦–೬೧ ರಿಂದ ೧೯೬೯–೭೦ರ ಅವಧಿಯಲ್ಲಿ ೪೧ ಸಾವಿರದಿಂದ ೧೯ ಸಾವಿರಕ್ಕಿಳಿದದ್ದು ಸಂತೋಷದ ಸಂಗತಿ.

೨. ಕೆಲವು ರಾಜ್ಯಗಳಲ್ಲಿ ಅಪೆಕ್ಸ ಬ್ಯಾಂಕುಗಳಿಂದ ಪ್ರಾಥಮಿಕ ಸಂಘಗಳಿಗೆ ಹರಿಯುವ ಪತ್ತಿನ ಪ್ರವಾಹಕ್ಕೆ ದುರ್ಬಲ ಕೇಂದ್ರ ಬ್ಯಾಂಕುಗಳು ಮುಖ್ಯ ಅಡಚಣೆಗಳಾಗಿವೆ. ಇಂಥ ಬ್ಯಾಂಕುಗಳು ನೂರಕ್ಕೆ ೩೩ ರಷ್ಟು ಇರುವವೆಂದು ಅಂದಾಜು ಮಾಡಲಾಗಿದೆ. ಸ್ಥಳೀಯ ಸಂಪನ್ಮೂಲಗಳು ಹೇರಳವಾಗಿದ್ದರೂ ಅವುಗಳ ಸಲುವಾಗಿ ಹೊರಗಿನವರನ್ನು ಅವಲಂಬಿಸುವ ಮನೋವೃತ್ತಿ ಮತ್ತು ಅದಕ್ಷ ಆಡಳಿತದಿಂದಾಗಿ ಠೇವಣಿ ಸಜ್ಜೀಕರಣದಲ್ಲಿ ಶಹರಗಳಲ್ಲಿ ಬೇರೂರಿರುವ ದಕ್ಷ ವಾಣಿಜ್ಯ ಬ್ಯಾಂಕುಗಳ ಸಂಗಡ ಸಹಕಾರಿ ಬ್ಯಾಂಕುಗಳು ಸ್ಪರ್ಧಿಸಲಾರವು.

---

೯. Banking Commission Report, op, Cit. pp. 101-103.

೧೦. Reserve Bank of India, The Report of the All India Rural Credit Survey Committee, 1954, P. 201.

೪. ಸಾಲ ವಸೂಲಿ ಕಾರ್ಯದಲ್ಲಿಯ ಅದಕ್ಷತೆಯು ಸಹಕಾರಿ ಬ್ಯಾಂಕುಗಳಲ್ಲಿ ಮುದ್ದತು ಮೀರಿದ ಸಾಲದ ಪ್ರಮಾಣದ ಆಧಿಕ್ಯಕ್ಕೆ ಮುಖ್ಯ ಕಾರಣವಾಗಿದೆ. ಈ ಪರಿಸ್ಥಿತಿಯನ್ನು ಹಿಂದುಳಿದ ಮತ್ತು ಅಭಿವೃದ್ಧಿ ರಾಜ್ಯಗಳಲ್ಲಿಯೂ ಕಾಣಬಹುದು. ಸಾಲ ಕೊಡುವ ನೀತಿಯಲ್ಲಿಯ ಕೊರತೆಗಳು, ಆಂತರಿಕ ಸಡಿಲು ಆಡಳಿತೆ ಮತ್ತು ಮೇಲ್ವಿಚಾರಣೆಗಳು ಸಹಕಾರಿ ಬ್ಯಾಂಕುಗಳ ಸಾಲವಸೂಲಿ ಕಾರ್ಯ ಶೈಥಿಲ್ಯಕ್ಕೆ ಎಡೆ ಮಾಡಿಕೊಟ್ಟಿವೆ. ಇನ್ನು ಕೆಲವುಕಡೆ ನೈಸರ್ಗಿಕ ಗಂಡಾಂತರಗಳು ಸಹ ಮುದ್ದತು ಮೀರಿದ ಸಾಲದ ಆಧಿಕ್ಯಕ್ಕೆ ಕಾರಣಗಳಾಗಿವೆ.

೫. ಹಳ್ಳಿಯ ಮಟ್ಟದಲ್ಲಿ ಸಹಕಾರಿ ಸಂಘಗಳು ಜವಾಬ್ದಾರಿಯಿಲ್ಲದ, ಅಧಿಕಾರ ದಾಹದಿಂದ ತುಂಬಿದ, ದೊಡ್ಡ ವ್ಯಕ್ತಿಗಳೆನಿಸಿಕೊಂಡ ಕೆಲವೇ ಕೆಲವು ವ್ಯಕ್ತಿಗಳ ಕೈಯಲ್ಲಿವೆ. ಸಾಲದ ಫಾಯದೆಯನ್ನು ತಾವೇ ತೆಗೆದುಕೊಂಡು ಚಿಕ್ಕ ಹಾಗೂ ಅಂಚಿನ ರೈತರಿಗೆ (Small and marginal farmers) ಸಾಲ ಸಿಗದಂತೆ ಮಾಡುವದು ಸಹಕಾರಿ ಸಂಘಗಳ ಸದಸ್ಯತ್ವ ಹೆಚ್ಚಿದ್ದರೂ ಸಹ ಅಧಿಕ ಸದಸ್ಯರು ಸಂಘಗಳ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸುವದಿಲ್ಲ. ಈ ಸ್ಥಿತಿಯನ್ನು ಜಿಲ್ಲಾಮಟ್ಟದಲ್ಲಿ ಇನ್ನು ಕೆಲವುಕಡೆ ರಾಜ್ಯಮಟ್ಟದಲ್ಲಿಯೂ ಕಾಣಬಹುದು. ಸಹಕಾರಿ ಬ್ಯಾಂಕುಗಳಲ್ಲಿ ಮುಂದಾಳತ್ವದ ಕೊರತೆ ಬಹಳವಿದೆ.

೬. ನಿಯಮಿತ ಸಾಲ. ಸಾಲದ ಅನಿಶ್ಚಿತತೆ, ಸಾಲದೊರಕಿಸುವಲ್ಲಿ ವೇಳೆಯ ಅಪವ್ಯಯ, ಕಠಿಣ ಪ್ರಕ್ರಿಯಾ ತೊಂದರೆಗಳು (Procedural hurdles) ಮತ್ತು ನಾನಾ ಬಗೆಯ ರೈತರಿಗೆ ಒಂದೇ ತರದ ನಿಯಮಗಳನ್ನು ಲಕ್ಷದಲ್ಲಿಟ್ಟುಕೊಂಡು ಸಾಲಕೊಡುವುದು ಇವುಗಳಿಂದಾಗಿ ಚಿಕ್ಕ ರೈತರು ಪರದೇಶಿಗಳಾಗಿ ಪುನಃ ಸಾಹುಕಾರರ ಮೊರೆ ಹೋಗುತ್ತಾರೆ. ಕೃಷಿ ಉತ್ಪಾದನೆ ಹೆಚ್ಚಿಸಲು ಹೊಸ ಯಾಂತ್ರಿಕ ವಿಧಾನಗಳನ್ನು ಬಳಕೆಗೆ ಅವಶ್ಯವಿರುವ ಸಾಲ ಎಷ್ಟೋ ಸಲ ದೊಡ್ಡ ರೈತರಿಗೂ ದೊರಕದಿರುವದು ವಿಷಾದಕರ ಸಂಗತಿ.

೭. ಪ್ರಾಥಮಿಕ ಮಟ್ಟದಲ್ಲಿಯ ಸಂಸ್ಥೆಗಳು ಹಾಗೂ ಜಿಲ್ಲಾ ಮಟ್ಟದಲ್ಲಿಯ ಕೇಂದ್ರ ಸಹಕಾರಿ ಬ್ಯಾಂಕುಗಳು, ಮತ್ತು ಕೇಂದ್ರಿಯ ಬ್ಯಾಂಕುಗಳು ಹಾಗೂ ರಾಜ್ಯ ಅಥವಾ ಅಪೆಕ್ಸ ಬ್ಯಾಂಕುಗಳ ನಡುವೆ ಸಡಿಲಾದ ಸಾಂಘಿಕ ಸಂಬಂಧವು ಸಹಕಾರಿ ಬ್ಯಾಂಕುಗಳ ರಚನೆಯಲ್ಲಿ ಮೂಲ ದೌರ್ಬಲ್ಯವಾಗಿದೆ. ಇದರಿಂದ ಕೇಂದ್ರಿಯ ಸಹಕಾರಿ ಬ್ಯಾಂಕುಗಳು ತಮ್ಮ ಚಟುವಟಿಕೆಗಳಲ್ಲಿ ಅನಾಸಕ್ತ ತಾಳಿರುವದರಿಂದ ಸ್ಥಳೀಯ ಸಂಪನ್ಮೂಲಗಳನ್ನು ಸಜ್ಜೀಕರಿಸುವದರಲ್ಲಿ ಅಶಕ್ತವಾಗಿರುವವು. ಠೇವಣಿಗಳ ಹೆಚ್ಚಳವು ತೀವ್ರಗತಿಯಿಂದ ಆಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಸ್ವತಂತ್ರ ಸಂಸ್ಥೆಗಳಾದ ಕೇಂದ್ರಿಯ ಬ್ಯಾಂಕುಗಳು ರಾಜ್ಯ ಸಹಕಾರಿ ಬ್ಯಾಂಕುಗಳಿಗೆ ಕೇವಲ ಸಂಯೋಜಿತ (affiliated) ವಾಗಿರುವದರಿಂದ ಕೇಂದ್ರೀಯ ಬ್ಯಾಂಕುಗಳ ಠೇವಣಿ ಸಜ್ಜೀಕರಣ

ಹಾಗೂ ಶಾಖಾ ವಿಸ್ತರಣೆ ಕಾರ್ಯಗಳಲ್ಲಿ ಆಸ್ಥೆವಹಿಸದಿದ್ದರೂ ಸಹ ಅಪೆಕ್ಸ್ ಬ್ಯಾಂಕುಗಳು ಏನೂ ಕ್ರಮ ಕೈಕೊಳ್ಳಲಾರವು.[೧೧]

೭. ಕೃಷಿ ಕಾರ್ಯಕ್ರಮಗಳನ್ನು ರೂಪಿಸುವ ಹಾಗೂ ಜಾರಿಗೆ ತರುವ ಮತ್ತು ಸಹಕಾರಿ ಸಾಲದ ವಿತರಣೆಯ ಮೇಲಿರುವ ಅಧಿಕಾರಿಗಳು ಹಾಗೂ ಪ್ರತಿನಿಧಿಗಳ ಮಧ್ಯ ಸರಿಯಾದ ಸಮನ್ವಯವಿಲ್ಲ.[೧೨] ಆದ್ದರಿಂದ ಉತ್ಪಾದನೆಗೆ ಅವಶ್ಯವಿರುವ ಸರಿಯಾದ ಪ್ರಮಾಣದಲ್ಲಿ ವಿವಿಧ ಪ್ರಕಾರದ ಯೋಗ್ಯ ರೈತರಿಗೆ ಸಮಾಧಾನಕಾರಕ ರೀತಿಯಲ್ಲಿ ಸಹಕಾರಿ ಬ್ಯಾಂಕುಗಳು ಸಾಲವನ್ನೊದಗಿಸಲು ಅಶಕ್ತವಾಗಿವೆ.

ಪರಿಹಾರೋಪಾಯಗಳು :

೧. ಪ್ರಾಥಮಿಕ ಮಟ್ಟದಲ್ಲಿ ಸಹಕಾರಿ ಸಂಘಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡಬೇಕಾದರೆ ಜೀವನ ಸಾಮರ್ಥ್ಯವಿಲ್ಲದ ಸಂಘಗಳನ್ನು ಜೀವನ ಸಾಮರ್ಥ್ಯವಿದ್ದ ಸಂಘಗಳ ಜೊತೆ ವಿಲೀನಗೊಳಿಸಬೇಕು. ತೃತೀಯ ಪಂಚವಾರ್ಷಿಕ ಯೋಜನೆಯೊಂದಿಗೆ ಸಹಕಾರಿ ಸಾಲದ ರಚನೆಯನ್ನು ಸಕ್ರಮ ವ್ಯವಸ್ಥೆ (rationalization) ಯ ಕಾರ್ಯಕ್ರಮಗಳ ಮುಖಾಂತರ ಧೃಢಪಡಿಸಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಪುನಃಸಂಘಟನೆಯ ಕಾರ್ಯದಿಂದ ೧೯೬೧–೬೨ ರಿಂದ ೧೯೬೯–೭೦ ರ ವಧಿಯಲ್ಲಿ ಒಟ್ಟು ಸಂಘಗಳ ಸಂಖ್ಯೆ ೨,೧೫,೦೦೦ ರಿಂದ ೧,೬೨,೭೦೦ ಕ್ಕಿಳಿಯಿತು (ಕೇವಲ ಶಕ್ತಿಯುತ ಸಂಘಗಳಷ್ಟೇ ಉಳಿದವು). ಚತುರ್ಥ ಯೋಜನೆಯಲ್ಲಿ ಪುನಃ ಸಂಘಟನೆಯ ಕಾರ್ಯಗತಿಯನ್ನು ಅಧಿಕಗೊಳಿಸಲು, ಪುನಃಸಂಘಟಿತ ಸಂಘಗಳಿಗೆ ಕಾರ್ಯನಿರ್ವಹಣೆ ಸಹಾಯಧನ (Management Subsidy) ಮತ್ತು ಶೇರು ಬಂಡವಾಳ ಒದಗಿಸುವ ಕಾರ್ಯಕ್ರಮಗಳನ್ನು ರಾಜ್ಯಯೋಜನೆಗಳಲ್ಲಿ ಸೇರಿಸಿ ಜಾರಿಗೆ ತರುತ್ತಿರುವುದು ಸೂಕ್ತವಿಚಾರ.[೧೩] ಗ್ರಾಮಾಂತರ ಪ್ರದೇಶಗಳಲ್ಲಿ ಸಾಲದ ರಚನೆಯನ್ನು ಶಕ್ತಿಯುತವಾಗಿ ಮಾಡಲು ದುರ್ಬಲ ಸಹಕಾರಿ ಬ್ಯಾಂಕುಗಳ ಬದಲು 'ಗ್ರಾಮಾಂತರ ಬ್ಯಾಂಕುಗಳನ್ನು'[೧೪] ಸ್ಥಾಪಿಸಲು ಬ್ಯಾಂಕಿಂಗ ಆಯೋಗವು ಶಿಫಾರಸು ಮಾಡಲಾಗಿದೆ.

---

೧೧. B. Venkata Rao, "Restructuring of Co-operatives-District and State Levels", in Reserve Bank of India, Technical Studies vepared for the Banking Commission, Vol II 1972, pp. 110–111.

೧೨. Reserve Bank of India, the Report of the All India Rural Credit Review Committee. 1969. p. 202.

೧೩. Fourth Plan op. Cit. P. 216.

೧೪. ಹೆಚ್ಚಿನ ವಿವರಗಳಿಗಾಗಿ ಬ್ಯಾಂಕಿಂಗ ಆಯೋಗದ ವರದಿಯನ್ನು ನೋಡಬಹುದು. ವಿಶೇಷವಾಗಿ pp. 167–171 ಮತ್ತು pp. 486–1499.

೨. ಜಿಲ್ಲಾ ಮಟ್ಟದಲ್ಲಿಯ ಕೇಂದ್ರೀಯ ಸಹಕಾರಿ ಬ್ಯಾಂಕುಗಳ ಪುನಃಸಜ್ಜೀಕರಣ (rehabilitation) ಮತ್ತು ಸಕ್ರಮ ವ್ಯವಸ್ಥೆ (rationalization) ಗಳ ಬಗ್ಗೆ ಯೋಗ್ಯವಾದ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತರಬೇಕು. ನಾಲ್ಕನೇ ಯೋಜನೆಯಲ್ಲಿ ಈ ದಿಶೆಯಲ್ಲಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮಧ್ಯಾವಧಿಯಲ್ಲಿ ರೈತರಿಗೆ ಸಾಲದ ಪ್ರವಾಹದಲ್ಲಿ ತಡೆಗಳುಂಟಾಗಬಾರದೆಂಬ ಉದ್ದೇಶದಿಂದ ಇಂಥ ಬ್ಯಾಂಕುಗಳ ಕಕ್ಷೆಗಳೊಳಗೆ ಬರುವ ಪ್ರಾಥಮಿಕ ಸಂಘಗಳಿಗೆ ರಾಜ್ಯದಲ್ಲಿಯ ಅಪೆಕ್ಸ ಬ್ಯಾಂಕುಗಳು ಪ್ರತ್ಯಕ್ಷವಾಗಿ ಹಣ ಒದಗಿಸಲು ನಿರ್ಧರಿಸಲಾಗಿದೆ.[೧೫] ಯಾವ ರಾಜ್ಯಗಳಲ್ಲಿ ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕುಗಳು ಪ್ರಬಲವಿರುವವೋ ಅಲ್ಲಿ ಅವುಗಳ ರಚನೆಯಲ್ಲಿ ಬದಲಾವಣೆ ಮಾಡಬಾರದು. ದುರ್ಬಲ ಕೇಂದ್ರೀಯ ಬ್ಯಾಂಕುಗಳ ಸಂಖ್ಯೆ ಯಾವ ರಾಜ್ಯಗಳಲ್ಲಿ ಹೆಚ್ಚಿರುವವೋ ಅಲ್ಲಿ ಇಡೀ ರಚನೆಯನ್ನೇ ಪುನಃಸಂಘಟನೆ ಮಾಡಿ ಅವುಗಳ ಬದಲಾಗಿ ಅಪೆಕ್ಸ ಬ್ಯಾಂಕುಗಳ ಶಾಖೆಗಳನ್ನು ತೆರೆಯಬೇಕು.[೧೬]

೩. ಮುದ್ದತು ಮೀರಿದ ಸಾಲದ ಅಧಿಕಕ್ಕೆ ಬಹುಶಃ ಸಾಲ ಉದ್ದೇಶಪೂರ್ವಕ ತಪ್ಪಿತಸ್ಥರೂ ಕಾರಣರಿರುವರು. ಇಂಥವರ ಕಡೆಯಿಂದ ಕಾಯ್ದೆಶೀರ ಬಾಕಿ ವಸೂಲಿ ಮಾಡಲು ಸಂಘಗಳ ಶಾಸನಗಳಲ್ಲಿ ಏರ್ಪಾಡಿದ್ದರೂ ಕ್ರಮಕೈಕೊಳ್ಳಲಾಗದಿದ್ದಾಗ, ಜಿಲ್ಲಾ ಕೇಂದ್ರೀಯ ಬ್ಯಾಂಕುಗಳು ಇಂಥವರ ಮೇಲೆ ಪ್ರತ್ಯಕ್ಷವಾಗಿ ಕ್ರಮಕೈಕೊಳ್ಳಬೇಕು. ಇದಕ್ಕೆ ಅನುಕೂಲವಾಗುವಂತೆ ಇನ್ನುಳಿದ ಸಹಕಾರಿ ಸಂಘಗಳ ಶಾಸನಗಳಲ್ಲಿ ವ್ಯವಸ್ಥೆ ಮಾಡಲು ಅಖಿಲಭಾರತ ಗ್ರಾಮಾಂತರ ಸಾಲ ಪುನರ್ವಿಮರ್ಶಾ ಸಮಿತಿಯೂ ಶಿಫಾರಸು ಮಾಡಿದೆ.

೪. ವಿವಿಧ ರಾಜ್ಯಗಳಲ್ಲಿ ಸಹಕಾರಿ ವಿಭಾಗಗಳ ಮತ್ತು ಕೇಂದ್ರೀಯ ಬ್ಯಾಂಕುಗಳ ಸಾಲ ವಸೂಲಿಯ ಸಿಬ್ಬಂದಿ ವರ್ಗವನ್ನು ಸಾಕಷ್ಟು ಬಲಪಡಿಸಬೇಕು. ಹೀಗೆ ಮಾಡುವದರಿಂದ ಮುದ್ದತು ಮೀರಿದ ಸಾಲದ ಮೊತ್ತವನ್ನು ಕಡಿಮೆ ಮಾಡಲು ಅನುಕೂಲವಾಗುವದು. ಕೆಲವು ಪ್ರದೇಶಗಳಲ್ಲಿ ನೈಸರ್ಗಿಕ ಗಂಡಾಂತರಗಳಿಂದ ರೈತರಿಗೆ ಸಾಲದ ಮರುಸಂದಾಯ (repayment) ಮಾಡಲು ಸಾಧ್ಯವಾಗದಾಗ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲದಲ್ಲಿ ರೂಪಾಂತರಿಸಬೇಕು. ಇದನ್ನು ಕಾರ್ಯರೂಪಕ್ಕೆ ತರಲು ಬೇಕಾಗುವ ಸಹಾಯವನ್ನು ಸಹಕಾರಿ ಬ್ಯಾಂಕುಗಳ ಕೃಷಿ ಸಾಲ ಸ್ಥಿರೀಕರಣನಿಧಿಗಳ ಮುಖಾಂತರ ಪಡೆಯಲು ಸೂಚಿಸಲಾಗಿದೆ.[೧೭]

೫. ಹಿಂದಿನ ಮುದ್ದತು ಮೀರಿದ ಸಾಲದ ವಸೂಲಿಯು ಸಂಗಡ ಭವಿಷ್ಯದಲ್ಲಿ ಇಂಥ ಸಾಲದ ಮೊತ್ತವು ಹೆಚ್ಚಾಗದಂತೆ ನೋಡಿಕೊಳ್ಳಲು ತರ್ಕಬದ್ಧ ಸಾಲ ನೀತಿ

---

೧೫. Fourth plan, Op Cit p. 216.

೧೬. Banking CommissionReport, op. Cit· pp. 213—16 224.

೧೭. Fourth Plan, Op. Cit, P. 218

ಗಳನ್ನು ಅನುಸರಿಸಬೇಕು. ಉತ್ಪಾದನೆಯ ಹೆಚ್ಚಕ್ಕೆ ಸಾಲಹೊತ್ತಿದ ಸಂಬಂಧ. ಕ್ರಯ ವಿಕ್ರಯ ಸಂಗಡ ಸಾಲದ ಪರಿಣಾಮಕಾರಿಯಾದ ಜೋಡಣೆ. ಸಾಲದ ಹಣವನ್ನು ಯೋಗ್ಯರೀತಿಯಲ್ಲಿ ಬಳಸುವದರ ಮೇಲೆ ದಕ್ಷ ಮೇಲ್ವಿಚಾರಣೆ ಮತ್ತು ಸದಸ್ಯತ್ವಕ್ಕೆ ಸಂಬಂಧಿಸಿದ ಹಕ್ಕು ಬಾಧ್ಯತೆಗಳ ಅರಿವಾಗಲಿಕ್ಕೆ ಅವಶ್ಯವಿರುವ ಶಿಕ್ಷಣ ಇವೆಲ್ಲವುಗಳನ್ನು ಗಮನದಲ್ಲಿರಿಸಿಕೊಂಡು ಪಾಲಿಸಬೇಕು.

೬. ವಿವಿಧ ಮಟ್ಟಗಳಲ್ಲಿ ಸಹಕಾರಿ ಬ್ಯಾಂಕುಗಳು ತಮ್ಮ ಠೇವಣಿ ಸಂಪನ್ಮೂಲಗಳನ್ನು ಹೆಚ್ಚಿಸಿ ಸಾಲದ ಪ್ರವಾಹದಲ್ಲಿ ತೊಂದರೆಗಳಾಗದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಮುದ್ದತು ಮೀರಿದ ಸಾಲವು ಅಧಿಕವಾಗಿ ಅದನ್ನು ದಕ್ಕಿಸಿಕೊಳ್ಳುವ ಶಕ್ತಿಯಿಲ್ಲದಾಗಿ ನಿಷ್ಕ್ರಿಯವಾಗುವ ಸಾಧ್ಯತೆಗಳು ಹೆಚ್ಚು. ತೀಕ್ಷ್ಣ ಬೇಸಾಯವು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಕೃಷಿಸಾಲಕ್ಕೆ ಸಹಜವಾಗಿ ಅಧಿಕಬೇಡಿಕೆಯಿರುತ್ತದೆ. ರೈತರ ಈ ಹೆಚ್ಚಿನ ಬೇಡಿಕೆಗಳನ್ನು ಪೂರೈಸುವಷ್ಟು ಸಹಕಾರಿ ಬ್ಯಾಂಕುಗಳು ಬಲಿಷ್ಠವಾಗಬೇಕು. ಇದರಿಂದ ರೈತರ ಉತ್ಪನ್ನದಲ್ಲಿ ಹೆಚ್ಚಳವಾಗುವದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಉತ್ಪಾದನಾ ವಿನಿಯೋಗವೂ ಅಧಿಕವಾಗುವದು. ಈ ಉದ್ದೇಶಗಳನ್ನು ಸಫಲಗೊಳಿಸಲು ಬ್ಯಾಂಕುಗಳು ಹೆಚ್ಚಿನ ಠೇವಣಿಗಳನ್ನು ಆಕರ್ಷಿಸಬೇಕು. ಅದ್ದರಿಂದ ಠೇವಣಿ ವಿಮಾ ಯೋಜನೆಯನ್ನು ಸಹಕಾರಿ ಬ್ಯಾಂಕುಗಳ ಠೇವಣಿಗಳಿಗೆ ವಿಸ್ತರಿಸಲು ಅನುಕೂಲವಾಗುವ ಕಾಯ್ದೆಗಳನ್ನು ರೂಪಿಸಲು ವಿವಿಧ ಸಮಿತಿಗಳು ಸೂಚಿಸಿವೆ.

೭. ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸಲು ಮತ್ತು ಭೂಮಿಯಲ್ಲಿ ಮುಖ್ಯ ಸುಧಾರಣೆಗಳನ್ನು ಮಾಡಲು ತಗಲುವ ವೆಚ್ಚವನ್ನು ದೀರ್ಘಾವಧಿ ಸಾಲದ ವಿತರಣೆಯಲ್ಲಿ ಚಿಕ್ಕ ರೈತರ ವಿಶೇಷ ಸಮಸ್ಯೆಗಳನ್ನು ಗಮನದಲ್ಲಿಡುವದು ಒಳಿತು.

೮. ಭೂ ಅಭಿವೃದ್ಧಿ ಬ್ಯಾಂಕುಗಳು ಹಾಗೂ ಕೃಷಿಯ ಪುನಃ ಹಣಕಾಸು ಮಂಡಲಿ (Agricultural Refinance Corporation) ಮತ್ತು ಸಹಕಾರಿ ಬ್ಯಾಂಕುಗಳ ಮಧ್ಯೆ ಸರಿಯಾದ ಸಮನ್ವಯವಿರಬೇಕು. ಅಂದರೆ ರೈತನಿಗೆ ತೊಂದರೆಯಾಗುವದಿಲ್ಲ. ರೈತರ ಅರ್ಜಿಗಳ ಪರಿಶೀಲನೆ, ಪತ್ತಿನ ವಿತರಣೆ, ಮೇಲ್ವಿಚಾರಣೆ ಮತ್ತು ಕಂತುಗಳ ವಸೂಲಿ ಮುಂತಾದ ಕಾರ್ಯಗಳನ್ನು ಪ್ರಾಥಮಿಕ ಪತ್ತಿನ ಸಂಘಗಳು ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳ ಪ್ರತಿನಿಧಿಗಳಾಗಿ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲವೆನ್ನುವದನ್ನು ಅರಿಯಲು ಚತುರ್ಥಯೋಜನೆಯಲ್ಲಿ ಮಾರ್ಗದರ್ಶಕ ಸಮೀಕ್ಷೆ (Pilot Survey)ಯ[೬೮] ಪ್ರಯತ್ನ ಮಾಡಲು ಸೂಚಿಸಲಾಗಿದೆ.

---

೬೮. Fourth Plan, Op. Cit. p. 220.

೯. ಸಹಕಾರಿ ಬ್ಯಾಂಕುಗಳು ಸಾಲದ ವಿತರಣೆಯಲ್ಲಿ ಅನುಸರಿಸುತ್ತಿರುವ ಭದ್ರತೆಯ ಆಧಾರದ ಬದಲು ಸಾಲ ತೀರಿಸುವ ಶಕ್ತಿಯ ಮೇಲೆ ಆಧರಿತವಾದ ಬೆಳೆ ಸಾಲ ಪದ್ಧತಿ (Crop Loan System)ಯನ್ನು ದೇಶದಾದ್ಯಂತ ಪ್ರಚಲಿತಗೊಳಿಸಿ ಜಾರಿಯಲ್ಲಿ ತರಬೇಕು.

೧೦. ಅಖಿಲ ಭಾರತ ಸಾಲ ಪುನರ್ವಿಮರ್ಶನ ಸಮಿತಿಯ ಶಿಫಾರಸುಗಳನ್ನು ಗಮನದಲ್ಲಿರಿಸಿಕೊಂಡು ಸಹಕಾರಿ ಬ್ಯಾಂಕುಗಳ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ ನೀತಿ ಹಾಗೂ ಕಾರ್ಯವಿಧಾನಗಳನ್ನು ಚಿಕ್ಕ ರೈತರಿಗೆ ಅನುಕೂಲವಾಗುವಂತೆ ರೂಪಿಸಲು ಚತುರ್ಥ ಯೋಜನೆಯಲ್ಲಿ ಕೆಳಗಿನ ದಿಶೆಗಳಲ್ಲಿ ಬದಲಾವಣೆಗಳನ್ನು ಮಾಡಿರುತ್ತದೆ.[೧೯]

ಅ) ಯಾವದೇ ಒಂದು ಸಂಘಕ್ಕೆ ಅದರ ಎಲ್ಲ ಸದಸ್ಯರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗದಿದ್ದರೆ, ಅಂಥ ಸಂಘವು ಪ್ರಪ್ರಥಮವಾಗಿ ಚಿಕ್ಕ ರೈತರ ಅವಶ್ಯಕತೆಗಳನ್ನು ಪೂರೈಸಬೇಕು.

ಬ) ದೊಡ್ಡ ರೈತರು ತಮ್ಮ ಸಾಲದ ಮೊತ್ತದ ಹೆಚ್ಚಿನ ಪ್ರಮಾಣವನ್ನು ಶೇರು ಬಂಡವಾಳ ಹೆಚ್ಚಿಸುವದಕ್ಕೆ ಸಹಾಯವಾಗಬೇಕು. ಚಿಕ್ಕ ರೈತರಿಗೆ ಶೇರು ಹಣವನ್ನು ಅನುಕೂಲವಾಗುವ ಕಂತುಗಳಲ್ಲಿ ಕೊಡುವ ಸವಲತ್ತು ಕೊಡಬೇಕು.

ಕ) ಬೆಳೆಸಾಲ ಪದ್ಧತಿಯನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರಲು ಹೆಚ್ಚಿನ ಮಹತ್ವ ಕೊಡಲಾಗಿರುವದರಿಂದ ಚಿಕ್ಕ ರೈತರನ್ನು ಗುರುತಿಸಿ ಅವರ ಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಲು ಸಾಲ ಸಮಿತಿ ವಿವರಣೆಗಳನ್ನು ಯೋಗ್ಯ ರೀತಿಯಲ್ಲಿ ಬೇರ್ಪಡಿಸಬೇಕು.

ಡ) ಆಧಾರವಾಗಿ ಕೊಡುವ ಭೂ ಆಸ್ತಿಯ ಉದಾರ ಬೆಲೆ ನಿರ್ಧರಿಸುವಿಕೆ, ಚಿಕ್ಕ ರೈತರ ಗುಂಪುಗಳಿಗೆ ಸಂಯುಕ್ತ ಸಾಲ ಕೊಡುವಿಕೆ, ಸಾಲ ಮಂಜೂರಿಯು ಕೇವಲ ವಾಸ್ತವಿಕ ಆಧಾರದ ಬೆಲೆಯ ಮೇಲೆ ಅವಲಂಬಿಸದೇ, ಯೋಜಿಸಿದ ಬಂಡವಾಳ ತೊಡಗಿಸುವ ಯೋಜನೆಯ ಜೀವನ ಸಾಮರ್ಥ್ಯ ಮತ್ತು ನಿರ್ವಹಣ ದಕ್ಷತೆಗಳ ಮೇಲೆ ಅವಲಂಬಿಸುವಿಕೆ ಮತ್ತು ಚಿಕ್ಕ ರೈತರು ಮರು ಸಂದಾಯ ಶಕ್ತಿಯ ಮೇಲೆ ಕಂತು ನಿರ್ಧರಿಸುವಿಕೆ ಮುಂತಾದವುಗಳ ದಿಶೆಯಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ಸಾಲ ಕೊಡುವ ನೀತಿಗಳನ್ನು ಉದಾರಗೊಳಿಸಬೇಕು.

ಇ) ಅಲ್ಪಾವಧಿಗಳಲ್ಲಿ ಸಾಲ ಮರುಸಂದಾಯ ಮಾಡುವ ದೊಡ್ಡ ರೈತರಿಗೆ ಮಾಧ್ಯಮಾವಧಿ ಸಾಲದ ಫಾಯದೆ ತೆಗೆದುಕೊಳ್ಳಲು ಉತ್ತೇಜನೆಯನ್ನು ಯೋಜಿಸ

೧೯. Fourth Paln, Op. Cit 221.

ಬೇಕು. ಅಂದರೆ ಚಿಕ್ಕ ರೈತರಿಗೆ ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಹೆಚ್ಚಿನ ಮೊತ್ತದಲ್ಲಿ ದೀರ್ಘಾವಧಿ ಸಾಲವನ್ನು ಪಡೆಯಲು ಅನುಕೂಲವಾಗುವದು.

೧೧. ಗ್ರಾಮಾಂತರ ಹಣಕಾಸಿನಲ್ಲಿ ಭಾಗವಹಿಸುವ ಎಲ್ಲ ಬ್ಯಾಂಕುಗಳ ಮಧ್ಯೆ ಹಾಗೂ ಗ್ರಾಮಾಂತರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಅಧಿಕಾರಿಗಳ ನಡುವೆ ಸರಿಯಾದ ಸಮನ್ವಯವಿರಬೇಕು. ಇಂಥ ಸಮನ್ವಯವು ಸರಕಾರದ ದಕ್ಷ ಮತ್ತು ಬಿಗಿ ಆಡಳಿತದ ತಳಹದಿಯ ಮೇಲೆ ನಿರ್ಮಿತವಾಗಿರಬೇಕು. ಇಲ್ಲವಾದರೆ ನಿಜ ಜೀವನದಲ್ಲಿ ನಡೆಯುವ ರೈತನ ಸುಲಿಗೆಯನ್ನು ತಪ್ಪಿಸಲಸಾಧ್ಯವಾಗುವದು.

ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಸಹಕಾರ ತತ್ವಗಳನ್ನು ಚೆನ್ನಾಗಿ ಅರಿತು, ನಿಸ್ವಾರ್ಥ ಬುದ್ಧಿ ಮತ್ತು ಪ್ರಾಮಾಣಿಕತೆಯಿಂದ ಸಹಕಾರಿ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಿದರೆ. ಗ್ರಾಮೀಣ ಹಣಕಾಸಿನ ಸ್ಥಿತಿ ಸುಧಾರಣೆ ಮತ್ತು ದೇಶದ ಸರ್ವತೋಮುಖ ಏಳ್ಗೆಯಾಗುವದರಲ್ಲಿ ಸಂದೇಹವಿಲ್ಲ.

ಕೋಷ್ಟಕ – ೧
ಪ್ರಾಥಮಿಕ ಕೃಷಿ ಸಾಲ ಸಂಘಗಳು

ವಿವರಗಳು	೧೯೫೦-೫೧	೧೯೬೦-೬೧	೧೯೬೬-೬೭	೧೯೬೭-೬೮	೧೯೬೮-೬೯	೧೯೬೯-೭೦
ಸಂಘಗಳ ಸಂಖ್ಯೆ	೧,೦೭,೯೨೫	೨,೧೫,೦೮೧	೧,೭೮,೭೩೫	೧,೭೧,೮೦೪	೧,೬೭,೬೬೦	೧,೬೨,೭೦೦
ಸದಸ್ಯತ್ವ (ಸಾವಿರದಲ್ಲಿ)	೪,೭೭೭	೧೯,೫೭೨	೨೬,೭೦೯	೨೮,೦೪೭	೨೯,೧೭೩	೨೯,೭೬೫
ಶೇರು ಬಂಡವಾಳ (ಲಕ್ಷದಲ್ಲಿ)	೮೯೨	೫೮೬೧	೧೨,೮೬೧	೧೪,೭೬೨	೧೬,೭೩೧	೧೮,೮೭೦
ಠೇವಣಿಗಳು (,,)	೪೩೯	೧,೭೬೪	೩,೯೦೯	೪,೭೦೭	೫,೬೮೪	೫,೨೬೭
ದುಡಿಯುವ ಬಂಡವಾಳ (,,)	೪,೫೨೨	೩೨,೫೩೩	೬೨,೫೨೦	೭೦,೯೨೨	೮೧,೨೨೨	೯೨,೧೬೪
ಮುಂಗಡ ಸಾಲ (,,)	೨,೪೨೧	೨೨,೮೩೧	೩೬,೬೪೭	೪೨,೯೨೦	೫೧,೩೮೬	೫೪,೦೦೦
ಅದೇ ವರ್ಷಗಳಲ್ಲಿ						
ಬಾಕಿ ಸಾಲ (,,)	೨,೩೬೬	೨೫,೬೬೮	೪೭,೭೪೭	೫೩,೪೨೯	೬೧,೮೭೫	೭೦,೧೪೯
ಮುದ್ದತು ಮೀರಿದಸಾಲ (,,)	೮೯೨	೬,೨೯೩	೧೬,೧೦೫	೧೭,೧೯೭	೨೧,೪೦೪	೨೬,೮೭೯
ಪ್ರತಿ ಸಂಘದ ಸರಾಸರಿ						
ಸದಸ್ಯರ ಸಂಖ್ಯೆ (,,)	೪೪	೯೧	೧೪೯	೧೬೩	೧೭೪	೧೮೩
ಶೇರು ಭಂಡವಾಳ (ರೂ.ಗಳು)	೮೨೭	೩,೦೯೦	೭,೧೯೫	೮,೫೯೨	೯,೯೭೨	೧೧,೫೯೮
ಠೇವಣಿಗಳು (,,)	೪೦೮	೮೨೦	೨,೧೮೭	೨,೭೪೫	೩,೩೮೮	೩,೨೩೭
ಮುಂಗಡ ಸಾಲ (,,)	೨,೨೪೩	೧೧,೬೧೫	೨೦,೫೦೪	೨೪,೯೮೨	೩೦,೦೩೪	೩೩,೧೯೭

ಮೂಲ: 1) Government of India, India: A Reference Annual 1971-72, 1971, P. 291.
2) Reserve Bank of India, Statistical Statements Relating to the Co-operative Moment in India. 1969-70 Part - I Credit Societies, 1971. pp. 92–102.

ಕೋಷ್ಟಕ - ೨

ಕೇಂದ್ರೀಯ ಸಹಕಾರಿ ಬ್ಯಾಂಕುಗಳು

ವಿವರಗಳು	೧೯೫೧-೫೨	೧೯೬೧-೬೨	೧೯೬೬-೬೭	೧೯೬೭-೬೮	೧೯೬೮-೬೯	೧೯೬೯-೭೦
ಬ್ಯಾಂಕುಗಳ ಸಂಖ್ಯೆ	೫೦೯	೨೭೩	೩೪೬	೩೪೪	೩೪೧	೩೪೦
ಸದಸ್ಯತ್ವ	೨,೩೧,೩೧೮	೩,೮೭,೭೪೦	೩,೫೨.೩೬೫	೩,೫೪,೫೫೨	೩,೪೦,೨೬೫	೩,೧೧.೫೦೫
ಶೇರುಭಂಡವಾಳ (ಲಕ್ಷದಲ್ಲಿ)	೪೬೨	೪,೬೬೦	೮,೫೯೯	೧೦,೧೧೪	೧೧,೫೨೪	೧೨,೭೯೨
ಮೀಸಲುಗಳು (")	೫೧೯	೧,೩೮೯	೨,೯೬೫	೩,೪೩೧	೩,೯೬೨	೪,೬೨೩
ಠೇವಣಿಗಳು (")	೩.೮೨೩	೧೨,೨೬೨	೨೫,೯೩೨	೩೦,೦೬೨	೩೫,೦೮೪	೩೮.೧೭೧
ದುಡಿಯುವಭಂಡವಾಳ(ಲಕ್ಷದಲ್ಲಿ)	೬,೦೧೧	೩೪.೭೮೯	೬೩,೮೩೦	೭೦,೬೧೪	೮೩,೦೪೫	೯೨,೭೭೯
ಮುಂಗಡ ಸಾಲ (ಆಯಾ ವರ್ಷದಲ್ಲಿ)	೧೦.೫೬೪	೩೭.೯೮೬	೯೪,೨೫೩	೯೮,೫೫೮	೮೬.೦೯೨	೮೭,೨೫೦
ಬಾಕಿ ಸಾಲ	೩,೫೯೧	೨೫,೬೪೮	೪೯,೯೩೫	೫೪.೯೮೭	೬೪,೧೦೪	೭೩,೯೩೯
ಮುದ್ದತು ಮೀರಿದ ಸಾಲ (ಲಕ್ಷದಲ್ಲಿ)	೪೭೮	೪,೦೦೬	೧೨,೪೧.೭	೧೩.೫೮೭	೧೭,೨೯೭	೨೧.೫೨೨

ಮೂಲ: 1) Government of India, A Reference Annual 1971–72, 1971, p. 290

2) Reserve Bank of India, Statistical Statements Relating to the Co-operative Movement in India 1969–70. Part I Credit Societies, 1971.

ಕೋಷ್ಟಕ-೩
ರಾಜ್ಯ ಸಹಕಾರಿ ಬ್ಯಾಂಕುಗಳು

ವಿವರಗಳು	೧೯೫೦-೫೧	೧೯೬೦-೬೧	೧೯೬೬-೬೭	೧೯೬೭-೬೮	೧೯೬೮-೬೯	೧೯೬೯-೭೦
ಬ್ಯಾಂಕುಗಳ ಸಂಖ್ಯೆ	೧೬	೨೧	೨೫	೨೫	೨೫	೨೫
ಸದಸ್ಯತ್ವ	೨೩,೨೭೨	೩೦,೪೬೮	೨೧,೪೫೭	೨೧,೩೮೬	೨೧,೨೬೯	೧೮,೮೬೦
ಶೇರು ಭಂಡವಾಳ (ಲಕ್ಷದಲ್ಲಿ)	೧೯೦	೨,೧೨೬	೩,೧೧೬	೩,೫೧೧	೩,೭೬೯	೩,೯೬೦
ಶಾಸನಬದ್ಧ ಮತ್ತು ಇತರ ಮೀಸಲುಗಳು (ಲಕ್ಷದಲ್ಲಿ)	೨೩೬	೭೫೯	೨,೪೪೯	೨,೯೮೬	೩,೭೭೮	೪,೩೨೨
ಠೇವಣಿಗಳು (ಲಕ್ಷದಲ್ಲಿ)	೨,೧೧೮	೮,೧೪೪	೧೪,೭೩೮	೧೭,೯೬೦	೨೧,೫೬೩	೨೩,೪೩೦
ಇತರ ಸಾಲ ಪಡೆದವುಗಳು (ಲಕ್ಷದಲ್ಲಿ)	೧,೧೨೭	೧೪,೫೭೯	೧೯,೯೯೩	೧೯,೯೦೮	೨೭,೫೪೪	೩೧,೨೩೨
ದುಡಿಯುವ ಭಂಡವಾಳ (")	೩,೬೭೨	೨೫,೬೦೯	೪೦,೨೯೫	೪೪,೩೬೪	೫೬,೬೫೪	೬೧,೯೪೪
ಮುಂಗಡ ಸಾಲ (ಆಯಾ ವರ್ಷದಲ್ಲಿ) (")	೫.೫೨೭	೨೫,೬೨೯	೫೧,೩೧೬	೬೫,೧೦೪	೬೬,೬೬೪	೭೦.೭೦೮
ಬಾಕಿ ಸಾಲ (ಲಕ್ಷದಲ್ಲಿ)	೨,೦೮೧	೧೯,೬೫೧	೩೨,೫೧೬	೩೫,೮೧೪	೪೫,೮೯೫	೫೦,೯೭೫
ಮುದ್ದತು ಮೀರಿದ ಸಾಲ (ಲಕ್ಷದಲ್ಲಿ)	೩೨೨	೮೧೦	೧,೬೯೨	೧,೮೧೨	೨,೩೧೧	೨,೮೯೭

ಮೂಲ : 1) Government of India, A Reference Annual 1971–72, 1973. p. 290.
2) Reserve Bank of India, Statistical Statements Relating to the Co-operative Movement in India 1969–70 Part : I Credit Societies, 1971.

ಕೋಷ್ಟಕ - ೪

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು

ವಿವರಗಳು	೧೯೫೦-೫೧	೧೯೬೦-೬೧	೧೯೬೬-೬೭	೧೯೬೭-೬೮	೧೯೬೮-೬೯	೧೯೬೯-೭೦
ಬ್ಯಾಂಕುಗಳ ಸಂಖ್ಯೆ	೨೮೯	೫೩೬	೭೦೭	೭೩೧	೭೪೦	೮೦೯
ಸದಸ್ಯರ ಸಂಖ್ಯೆ (ಲಕ್ಷದಲ್ಲಿ)	೨.೧೪	೮.೫೨	೨೧.೫೭	೨೪.೪೭	೨೮.೪೨	೩೧.೨೨
ಶೇರು ಭಂಡವಾಳ (ಲಕ್ಷದಲ್ಲಿ)	೫೮	೨೮೩	೧,೪೧೪	೧,೮೬೯	೨,೫೨೬	೩,೩೬೪
ಬಾಕಿ ಸಾಲ ಪಡೆದವ್ರುಗಳು (,,)	೬೮೪	೩,೪೨೬	೧೫,೨೮೩	೧೯,೭೬೪	೨೨,೭೯೦	೩೬,೧೧೩
ದುಡಿಯುವ ಭಂಡವಾಳ (,,)	೭೫೯	೩,೮೩೧	೧೭,೩೫೯	೨೨,೩೪೦	೩೦,೯೭೬	೪೦,೩೯೨
ಮುಂಗಡ ಸಾಲ (ಆಯಾ ವರ್ಷಗಳಲ್ಲಿ) (ಲಕ್ಷದಲ್ಲಿ)	೧೩೦	೧,೨೫೯	೪,೦೮೪	೬,೪೯೦	೧೧,೩೭೬	೧೧,೩೨೨
ಬಾಕಿ ಸಾಲ (,,)	೬೯೬	೩,೫೨೮	೧೫,೪೬೭	೨೦,೩೫೦	೨೮,೫೫೬	೩೬,೬೮೭

ಮೂಲ: 1) Government of India, India: A Reference Annual 1971–72, 1971, P. ೨೯೩.

2) Reserve Bank of India, Statistical Statements Relating to the Co-operative Movement in India 1969–70, Part I: Credit Societies 1971.

ಕೋಷ್ಟಕ-೫

ಕೇಂದ್ರೀಯ ಭೂ ಅಭಿವೃದ್ಧಿ ಬ್ಯಾಂಕುಗಳು

ವಿವರಗಳು	೧೯೫೦-೫೧	೧೯೬೦-೬೧	೧೯೬೬-೬೭	೧೯೬೭-೬೮	೧೯೬೮-೬೯	೧೯೬೯-೭೦
ಬ್ಯಾಂಕುಗಳ ಸಂಖ್ಯೆ	೬	೧೭	೧೯	೧೯	೧೯	೧೯
ಸದಸ್ಯರ ಸಂಖ್ಯೆ	೩೪,೫೭೯	೨,೯೯,೩೮೩	೭,೭೨,೫೨೬	೯,೧೬,೨೪೭	೧೧,೭೧,೩೫೧	೧೨,೩೧,೩೩೩
ಶೇರು ಭಂಡವಾಳ (ಲಕ್ಷದಲ್ಲಿ)	೪೪	೫೭೩	೧,೮೯೩	೨,೪೧೦	೩.೦೯೪	೩,೮೮೬
ಬಾಕಿ ಸಾಲ ಪತ್ರಗಳು (")	೭೮೩	೪,೭೭೪	೨೩,೯೦೩	೨೯,೯೫೫	೪೨,೬೧೧	೫೭,೦೮೦
ದುಡಿಯುವ ಭಂಡವಾಳ(")	೧,೦೧೭	೬,೧೭೦	೨೬,೩೫೮	೩೪,೬೭೦	೪೮,೮೧೯	೬೩.೮೩೨
ಹೊರಡಿಸಿದ ಸಾಲ ಪತ್ರಗಳ (") (ಆಯಾ ವರ್ಷಗಳಲ್ಲಿ)	N.A.	೧,೧೫೦	೫,೭೫೩	೭,೯೩೦	೧೩,೦೬೪	೧೫,೧೯೭
ಮುಂಗಡ ಸಾಲ(ಆಯಾವರ್ಷದಲ್ಲಿ) (ಲಕ್ಷದಲ್ಲಿ)	೨೫೧	೧,೪೭೫	೫,೮೮೫	೯,೩೪೧	೧೪,೨೬೨	೧೫,೩೨೬
ಬಾಕಿ ಸಾಲ (ಲಕ್ಷದಲ್ಲಿ)	೮೦೫	೪,೭೯೦	೨೦,೭೩೭	೨೭,೮೨೯	೩೯,೫೦೬	೫೦,೯೬೯

ಮೂಲ : 1) Government of India, India : A Reference Annual 1971–72, 1971. p. 293.
2) Reserve Bank of India, Statistical Statements Relating to the Co-operative Movement in India 1969–70, Part : 1 Credit Societies, 9971.

★ ಎನ್. ಎಸ್. ಹಿರೇಮಠ

ಹಂತಿಯ ಪದ

೧ನೆಯುವ : ಮೋಟಿಯು ಬಡ್ಡ್ಯಾಗ ಬೋರ್‍ಯಾಡುದೇನೋಽಽ
೨ ,, : ಆವು ನಮ್ಮ ಕಾಡಾಕಳ ಹೋರಿಯ ಹಿಂಡೋಽಽ
ಹುಲಹುಲಗಣ್ಣಾಽ ಹುಲಹುಲಗೋಽಽ ॥ ೧ ॥

೧ನೆಯುವ : ಮೋಟಿಯು ಎತ್ತೋ ಕ್ವಾಟಿಯು ತೆನಿಯೋಽ
೨ ,, : ಕಡೆಸುತ್ತಿನೆತ್ತಽ ಕಟ್ಟ್ಯಾಣಿ ಗುಂಡೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೨ ॥

೧ನೆಯುವ : ಹೊಲದಾನ ಲಕ್ಷ್ಮೀ ಏನ್ಮಾಡತಾಳೋಽ
೨ ,, : ವಾಲಿಯ ಇಟಕೊಂಡು ಲೋಲ್ಯಾಡತಾಳೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೩ ॥

೧ನೆಯುವ : ಆಚಕೀನ ಹೊಲದಾಂವ ಇಚಿಕ್ಯಾಕ ಬಂದೋಽಽ
೨ ,, : ರಾಶಿಯ ಬಾನಕ್ಕ ಆಸೆ ಮಾಡಿ ಬಂದೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೪ ॥

೧ನೆಯುವ : ಬೂದಗ ನಿಮ್ಮವ್ವ ಬುತ್ತಿಯ ತಂದಾಳೋ ಽಽ
೨ ,, : ಯಾಲಕ್ಕಿ ಶುಂಟೀ ಮಂರತ ಬಂದಾಳೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೫ ॥

೧ನೆಯುವ : ಯಾಕಪ್ಪ ಬಸವಾ ಮೈಯೆಲ್ಲಾ ರಾಡ್ಯೋಽಽ
೨ ,, : ಕಾಡಿಗೀ ಜೋಳಾ ಕನಿಗೆಟ್ಟ ತಿನ್ಯೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೬ ॥

೧ನೆಯುವ : ಕಣದ ದಂಡೀ ಮ್ಯಾಲ್ ಬೋರ್‍ಯಾಡುದೇನೋಽಽ
೨ ,, : ಆದ ನಮ್ಮ ರಾಶ್ಯಾನ ರಾಗೋಲ ಕಾಂವೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೭ ॥

೧ನೆಯುವ : ಪರೂತ ಗಿರಿಪ್ಯಾಲ್ ಉತ್ರೋತೀ ಪೂಜ್ಯೋಽಽ
೨ ,, : ಇಲ್ಲಿ ನಮ್ಮ ಕಣದಾಗ ಉತ್ತರಾಣಿ ಪೂಜ್ಯೋಽಽ
ಹುಲಹುಲಗಣ್ಣಾ ಹುಲಹುಲಗೋಽಽ ॥ ೮ ॥

೧ ನೆಯವ : ಕರೀಯು ವಡ್ಡಿನಮ್ಯಾಲ ಕ್ಯಾರS ಹಾಂವೋSS
೨ ,, : ಆದ ನಮ್ಮ ಕಣದಾನ ರಾಗೋಲ ಕಾಂವೋSS
ಹುಲಹುಲಗಣ್ಣಾ ಹುಲಹುಲಗೋSS ॥ ೯ ॥

೧ ನೆಯವ : ಕರಿಯು ಎತ್ತಿನ ವ್ಯಾಲ ಕವಿದಿತೋ ಸುಂಕೋSS
೨ ,, : ಬಿಳೀಯು ಎತ್ತಿನ ವ್ಯಾಲ ಬೆಳದೀತೋ ಸುಂಕೋSS
ಹುಲಹುಲಗಣ್ಣಾ ಹುಲಹುಲಗೋSS ॥ ೧೦ ॥

೧ ನೆಯವ : ಎಂಟೆತ್ತಿನೊಳಗS ಯಾವೆತ್ತ ಚಲುವೋSS
೨ ,, : ಸರಳ ಕೋಡೀನ ಸಾರಂಗ ಚಲುವೋSS
ಹುಲಹುಲಗಣ್ಣಾ ಹುಲಹುಲಗೋSS ॥ ೧೧ ॥

೧ ನೆಯವ : ಬೂದವ್ವ ನಿಮ್ಮವ್ವ ಏನ್ಮಾಡತಾಳೋSS
೨ ,, : ಯಾಲಕ್ಕಿ ಸುಂಟೀ ಹದಮಾಡತಾಳೊSS
ಹುಲಹುಲಗಣ್ಣಾ ಹುಲಹುಲಗೋ ॥ ೧೨ ॥

೧ ನೆಯವ : ಮೂಡಲ ದಿಕ್ಕಿಗೀ ಮೂಡ್ಯಾನ ರಾವೋSS
೨ ,, : ಏರಿಬಾ ನನ್ನ ಎಳೆಚಂದರಾಮೋSS
ಹುಲಹುಲಗಣ್ಣಾ ಹುಲಹುಲಗೋSS ॥ ೧೩ ॥

೧ ನೆಯವ : ಯಾಕಪ್ಪ ಬಸವಾ ಮೆಲ್ಲಕ ನಡಿದ್ಯೋSS
೨ ,, : ಕಣಕಾಲಿನ ರಾಶೀ ಮಣಕಾಲಿಗೆ ಬಡಿದೋSS
ಹುಲಹುಲಗಣ್ಣಾ ಹುಲಹುಲಗೋSS ॥ ೧೪ ॥

೧ ನೆಯವ : ಬೇರೂರ ಹನುಮಗS ಬೇವಿನ ದಂಡ್ಯೋSS
೨ ,, : ನಮ್ಮೂರ ಹನುಮಗS ಮುತ್ತಿನ ದಂಡ್ಯೋSS
ಹುಲಹುಲಗಣ್ಣಾ ಹುಲಹುಲಗೋSS ॥ ೧೫ ॥

೧ ನೆಯವ : ಬೇರೂರ ಭೂಮ್ಯಾಗ ಬಿದ್ದಾವ ರಾಶ್ಯೋSS
೨ ,, : ಎತ್ತಾ ಬಂಡೀ ಹೂಡಿ ತರಬೇಕೋ ರಾಶ್ಯೋ
ಹುಲಹುಲಗಣ್ಣಾ ಹುಲಹುಲಗೋSS ॥ ೧೬ ॥

೧ ನೆಯವ : ಹಾದೀಲೆ ಹೋಗತಾಳೋ ಪರೆಯುದ ಮಿಂಡ್ಯೋSS
೨ ,, : ಆಕೀಯು ಎದಿಮ್ಯಾಲ ರೇಸೀಮಿ ಗುಂಡ್ಯೋSS
ಹುಲಹುಲಗಣ್ಣಾ ಹುಲಹುಲಗೋSS ॥ ೧೭ ॥

೧ ನೆಯವ : ಒಟ್ಟಿದ ಬಣವೀ ಮೆಟಿ ಮೆಟಿ ತಿನ್ನಾವ ನೀಯಾರ ಮಗನs
ಬಸವಯ್ಯನೋss
೨ ,, : ಕಾಲವ ಕೆದರೂತ ಬಾಲವ ಬೀಸೂತ ಬಂದಾನ ಬಸವಯ್ಯ
ಬಣವಿಗೋss
ಹುಲಹುಲಗಣ್ಣಾ ಹುಲುಹುಲಗೋss ॥ ೧೮ ॥

೧ ನೆಯವ : ಬಾರೀಯ ಗಿಡದಾಗ ಕ್ಯಾರಿಯ ಹಾಂವೋss
೨ ,, : ಅದ ನಮ್ಮ ಕಣದಾನ ರಾಗೋಲಕಾಂವೋss
ಹುಲಹುಲಗಣ್ಣಾ ಹುಲಹುಲಗೋss ॥ ೧೯ ॥

★ ಎಸ್. ವಾಯ್. ಹಂಜಿ.

ತತ್ಸಮ (ಸಮಸಂಸ್ಕೃತ) ತದ್ಭವ ಪದಗಳ ಅರ್ಥ

ಸಂಸ್ಕೃತೇತರ ಭಾರತೀಯ ಭಾಷೆಗಳ ವ್ಯಾಕರಣಗಳಲ್ಲಿ ತತ್ಸಮ (ಸಮ ಸಂಸ್ಕೃತ), ತದ್ಭವ, ದೇಶೀ ಎಂಬೀ ಪದಗಳಿಗೆ ಕ್ರಮವಾಗಿ, ವಿಕಾರ ಹೊಂದದ ಸಂಸ್ಕೃತ ಪ್ರಾತಿಪದಿಕಗಳು, ವಿಕಾರ ಹೊಂದಿದ ಸಂಸ್ಕೃತ ಪ್ರಾತಿಪದಿಕಗಳು, ಆಯಾ ದೇಶ ಭಾಷೆಗಳಲ್ಲಿ ಮಾತ್ರವೇ ಬಳಕೆಯಲ್ಲಿರುವ ಶಬ್ದಗಳು, ಎಂಬೀ ಅರ್ಥಗಳು ಪ್ರಸಿದ್ಧವಾಗಿವೆಯಷ್ಟೇ! "ದೇಶೀ" ಪದವು ಸಂದರ್ಭವಶಾತ್ "ದೇಶಭಾಷೆ" ಹಾಗೂ "ತತ್ತ್ವದ್ದೇಶಗಳಲ್ಲಿ ಮಾತ್ರ ಬಳಕೆಯಲ್ಲಿರುವ ಶಬ್ದಗಳು" ಎಂಬೀ ಎರಡು ಅರ್ಥಗಳನ್ನೂ ತಿಳಿಸುತ್ತದೆಂಬುದು ಸುವಿದಿತ. ಇದೇ ರೀತಿ, ತತ್ಸಮ (ಸಮ ಸಂಸ್ಕೃತ) ತದ್ಭವ ಪದಗಳಿಗೂ ಕೂಡ "ಪ್ರಾಕೃತ ಭಾಷೆ" ಎಂಬ ಅರ್ಥವೊಂದಿದೆಯೆಂಬದನ್ನು ಶಾಸ್ತ್ರಕಾರರ ವಚನಗಳಿಂದ ಕಂಡುಕೊಳ್ಳಬಹುದು. ಉದಾಹರಣೆಗೆ :—

ಸಂಸ್ಕೃತಂ ನಾಮ ದೈವೀ ವಾಕ್ ಅನ್ವಾಖ್ಯಾತಾ ಮಹರ್ಷಿಭಿಃ ।
ತದ್ಭವಸ್ತತ್ಸಮೋ ದೇಶೀತ್ಯನೇಕಃ ಪ್ರಾಕೃತಕ್ರಮಃ ॥

(ಕಾವ್ಯಾದರ್ಶ : I—33)

—ಎಂಬೀ ಕಾರಿಕೆಯ ಪೂರ್ವಾರ್ಧದಲ್ಲಿ ಸಂಸ್ಕೃತ "ಭಾಷೆ" ಉಪಕ್ರಾಂತವಾಗಿರುವದರಿಂದ ಉತ್ತರಾರ್ಧದ "ಅನೇಕಃ ಪ್ರಾಕೃತಕ್ರಮಃ" ಎಂಬಲ್ಲೂ ಕೂಡ "ಪ್ರಾಕೃತ ಭಾಷೆಗಳ ಬಗೆ–ತದ್ಭವ, ತತ್ಸಮ, ದೇಶೀ ಎಂದು ಹಲವು" ಎಂದು ಅರ್ಥವೇ ಹೊರತು "ಪ್ರಾಕೃತ ಭಾಷೆಯಲ್ಲಿ ತತ್ಸಮ, ತದ್ಭವ, ದೇಶೀ ಎಂದು ಮೂರು ಬಗೆಯ ಶಬ್ದಗಳಿವೆ" ಎಂಬುದಲ್ಲ.

ತತ್ಸಮ, ತದ್ಭವ ಪದಗಳು "ಪ್ರಾಕೃತ ಭಾಷೆ" ಎಂಬ ಅರ್ಥದಲ್ಲೂ ಪ್ರಯುಕ್ತವಾಗುತ್ತವೆ ಎಂಬುದಕ್ಕೆ ಉಪಷ್ಟಂಭಕವಾಗಿ ಮೇಲಿನ ಕಾರಿಕೆಯ ಜೀವಾನಂದ ವ್ಯಾಖ್ಯಾನದಲ್ಲಿ ಇನ್ನೂ ಎರಡು ಉಕ್ತಿಗಳು ಉದ್ಧೃತವಾಗಿವೆ. "ಆರ್ಷೋತ್ಥಂ ಆರ್ಷತುಲ್ಯಂ ಚ ದ್ವಿವಿಧಂ ಪ್ರಾಕೃತಂ ವಿದುಃ" ಎಂಬುದೊಂದು. ಇಲ್ಲಿನ ಆರ್ಷ ಶಬ್ದಕ್ಕೆ "ಪ್ರಾಚೀನ ಸಂಸ್ಕೃತ"ವೆಂಬ ವಿಶೇಷಾರ್ಥವಿರಬಹುದಾದರೂ "ಸಂಸ್ಕೃತ"ವೆಂಬ ಸಾಮಾನ್ಯಾರ್ಥವು ಅದರಲ್ಲಿ ಅಡಕವಾಗಿಯೇ ಇದೆ. ಅಂತೆಯೇ "ಆರ್ಷೋತ್ಥ" "ಆರ್ಷತುಲ್ಯ" ಪದಗಳಿಗೆ "ತದ್ಭವ" "ತತ್ಸಮ" ಎಂಬ ಅರ್ಥವು ಹತ್ತಿರದ್ದೇ ಆಯಿತು,

"ಸರ್ಗ ಬಂಧೋ ಮಹಾಕಾವ್ಯಂ ಆರಬ್ಧಂ ಸಂಸ್ಕೃತೇನ ಯತ್ ।
ತದ್ಭವಂ ನ ವಿಶೇತ್ತತ್ರ ತತ್ಸಮಂ ನಾಪಿ ಕಿಂಚನ" ॥

(ಅಗ್ನಿಪುರಾಣಂ)

ಎಂಬುದು ಇನ್ನೊಂದು. ಇಲ್ಲಿ ತದ್ಭವ–ತತ್ಸಮ ಪದಗಳಿಗೆ "ಪ್ರಾಕೃತ ಭಾಷಾಭೇದ"ವೆಂಬ ಅರ್ಥವೇ ವಿವಕ್ಷಿತವಾಗಿರಬೇಕೇ ಹೊರತು "ತದ್ಭವ ಅಥವಾ ತತ್ಸಮ ಪದಗಳು" ಎಂಬ ಅರ್ಥವಲ್ಲ. ತದ್ಭವ ಪ್ರಾಕೃತ, ತತ್ಸಮ ಪ್ರಾಕೃತವೆಂಬ ವ್ಯವಹಾರವೂ ಕೂಡ ವ್ಯಾಖ್ಯಾನಗಳಲ್ಲಿ ಕಂಡು ಬರುತ್ತದೆ. (ಶೌರಸೇನ್ಯಾದಿಗಳು ತತ್ಸಮ ಪ್ರಾಕೃತ. ಮಹಾರಾಷ್ಟ್ರೀ ಮೊದಲಾದವು ತದ್ಭವ ಪ್ರಾಕೃತ.)

'ಷಡ್ಭಾಷಾಚಂದ್ರಿಕೆ'ಯಲ್ಲೂ ಕೂಡ ತದ್ಭವ–ತತ್ಸಮ ಪದಗಳು ಪ್ರಾಕೃತ ಭಾಷಾಪರವಾಗಿ ಪ್ರಯುಕ್ತವಾದುದನ್ನು ನೋಡಬಹುದು. "ತ್ರಿವಿಧಾ ಪ್ರಾಕೃತೀ ಭಾಷಾ ಭವೇತ್ಸ್ಯೇಷಾ ಚ ತತ್ಸಮಾ। ತದ್ಭವಾ ಚ ಭವೇದ್ದೇಶ್ಯಾ ತತ್ರ ಲಕ್ಷಣಮಂತರಾ॥ ತತ್ಸಮಾ ಸಂಸ್ಕೃತ ಸಮಾನೇಯಾ ಸಂಸ್ಕೃತ ವರ್ತ್ಮನಾ। ತದ್ಭವಾ ಸಂಸ್ಕೃತ ಭವಾ, ಸಿದ್ಧಾ ಸಾಧ್ಯೇತಿ ಸಾ ದ್ವಿಧಾ"॥ (ಷಡ್ಭಾಷಾ ಚಂದ್ರಿಕಾ: ಉಪೋದ್ಘಾತ.)

ಇಲ್ಲಿ ತತ್ಸಮ–ತದ್ಭವ ಪದಗಳು ಪ್ರಾಕೃತ ಭಾಷಾಸಮಾನಾಧಿಕರಣಕ–ವಾಗಿಯೇ ಪ್ರಯುಕ್ತವಾದುದರಿಂದ, ಅವುಗಳಿಗೆ "ಪ್ರಾಕೃತ ಭಾಷೆ" ಎಂಬರ್ಥವು ಸ್ಪಷ್ಟವಾಗಿಯೇ ಇದೆ.

"ಸಿದ್ಧಂ - ಪ್ರಸಿದ್ಧಂ - ಪ್ರಾಕೃತಂ ತ್ರೇಧಾ ಸಂಸ್ಕೃತಯೋನಿ. ಸಂಸ್ಕೃತಸಮಂ. ದೇಶೀಪ್ರಸಿದ್ಧಂ ಚೇತಿ" ಎಂಬ ಚಂಡನ ಉಕ್ತಿಯೂ ಕೂಡ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ.

"ಪ್ರಾಕೃತ ಚಂದ್ರಿಕೆ" ಮೊದಲಾದ ಗ್ರಂಥಗಳಲ್ಲೂ ಕೂಡ ಈ ಬಗೆಯ ಉಕ್ತಿಗಳು ದೊರೆಯುತ್ತವೆ. ಆಧುನಿಕ ವಿಮರ್ಶಕರೂ ಕೂಡ ಕೆಲವರು ತದ್ಭವ-ತತ್ಸಮ ಶಬ್ದಗಳಿಗೆ "ಪ್ರಾಕೃತ ಭಾಷೆ" ಎಂಬರ್ಥವಿದೆಯೆಂದು ಒಪ್ಪುತ್ತಾರೆ. ಉದಾಹರಣೆಗೆ "ಸರ್ವಮೇವೈತತ್ ಪ್ರಾಕೃತಂ ತದ್ಭವಃ ತತ್ಸಮಃ ದೇಶೀ ಚೇತಿ ತ್ರೇಧಾ ವಿಭಜಂತೇ ಸೂರಯಃ" (ಶ್ರೀ ಉದಯರಾಮಶಾಸ್ತ್ರೀ: ಪ್ರಾಕೃತ ಪ್ರಕಾಶದ ಪ್ರಸ್ತಾವನೆ.)

ಹೀಗೆ, ಅರ್ಥಾಂತರಕ್ಕೆ ಗಮಕವಾಗಿ ಪ್ರಕರಣ ಅಥವಾ ಪದಾಂತರಗಳು ಇಲ್ಲದಿರುವಾಗ, ಹಾಗೂ "ತತ್ಸಮ-ತದ್ಭವ ಶಬ್ದಗಳು" ಎಂಬ ಅರ್ಥ ಹೊಂದದೇ ಇರುವಾಗ ತತ್ಸಮ (ಸಮಸಂಸ್ಕೃತ) ತದ್ಭವ ಪದಗಳಿಗೆ "ಪ್ರಾಕೃತ ಭಾಷೆ" ಎಂಬ ಅರ್ಥವೇ ಶಾಸ್ತ್ರಸಮ್ಮತ. ಪಾಲಿ, ಅರ್ಧಮಾಗಧಿ ಮೊದಲಾದವುಗಳಂತೆಯೇ ಇಂದಿನ ಪ್ರಾಂತೀಯ ಭಾಷೆಗಳೂ ಕೂಡ ವಿಶಾಲಾರ್ಥದಲ್ಲಿ ಪ್ರಾಕೃತ ಭಾಷೆಗಳೇ.

ತತ್ಸಮ (ಸಮಸಂಸ್ಕೃತ) ತದ್ಭವ ಪದಗಳು ಪಾರಿಭಾಷಿಕ ಪದಗಳಂತೆಯೇ ಯೋಗರೂಢಗಳೆಂದು ನನಗನಿಸುತ್ತದೆ

★ ಎಸ್. ಕೃಷ್ಣಶರ್ಮ

ಅಱಿವುದು ಕಾವ್ಯಧರ್ಮಮುಂ ಧರ್ಮಮುಮಂ

೧

ಇದುವೆ ಸುಕವಿಪ್ರಮೋದ।
ಪ್ರದಮಿಂದುವೆ ಸಮಸ್ತಭವ್ಯಲೋಕಪ್ರಮುದ।
ಪ್ರದಮೆನೆ ನೆಗಱ್ದಾದಿಪುರಾ।
ಣದೊಳಱಿವುದು ಕಾವ್ಯಧರ್ಮಮುಂ ಧರ್ಮಮುಮಂ॥

ಕಾವ್ಯಧರ್ಮ ಹಾಗೂ ಧರ್ಮ – ಇವೆರಡನ್ನೂ ಒಟ್ಟಿಗೆ ಹೇಳಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ಪಂಪ ತನ್ನ ಆದಿಪುರಾಣದ ರಚನೆಗೆ ತೊಡಗುತ್ತಾನೆ. ಹಾಗೆ ನೋಡಿದರೆ ಈ ದೃಷ್ಟಿ ಪಂಪನ ಆದಿಪುರಾಣಕ್ಕೆ ಮಾತ್ರ ಸೀಮಿತವಾಗಿಲ್ಲ, ಇಡೀ ಕನ್ನಡ ಸಾಹಿತ್ಯಕ್ಕೇ ಅನ್ವಯಿಸುತ್ತದೆ. ಕಾವ್ಯಗಳನ್ನು ಬರೆಯಲು ಹೊರಟು ಮತ - ಧರ್ಮಗಳ ಹೊಗಳಿಕೆ-ತೆಗಳಿಕೆಗಳನ್ನು ಸೇರಿಸಿರುವುದು ನಮ್ಮ ಹಳಗನ್ನಡ ಹಾಗೂ ನಡುಗನ್ನಡ ಸಾಹಿತ್ಯಗಳಲ್ಲಿ ಅಪರೂಪದ ಸಂಗತಿಯೇನಲ್ಲ. ಆದರೆ ಈ ಸಂಗತಿಯನ್ನು ವಾಚ್ಯವಾಗಿ ಘೋಷಿಸಿಕೊಂಡವನು ಪಂಪ.

ನಮ್ಮವರು ಧರ್ಮ – ಮೋಕ್ಷಗಳನ್ನು ಕಾವ್ಯದ ಮಾರ್ಗ – ಫಲಶ್ರುತಿಗಳಾಗಿ ಸಾರಿದರು. ಸುಭದ್ರವಾದ (ಅಥವಾ ಅಭದ್ರವಾದ) ಧಾರ್ಮಿಕವ್ಯವಸ್ಥೆಯನ್ನು ಒಪ್ಪಿಕೊಂಡು ಬಾಳಿದ ನಮ್ಮ ಕವಿಗಳು ತಮ್ಮ ಕಾವ್ಯಗಳಲ್ಲಿ ಧಾರ್ಮಿಕ ಅಂಶಗಳನ್ನು ಉಳಿಸಿಕೊಂಡು ಬಂದರು. ಅಂದಿನ ಪರಿಸರದಲ್ಲಿ ಈ ದೃಷ್ಟಿ ಬಹುಮಟ್ಟಿಗೆ ಅನಿವಾರ್ಯವೂ ಆಗಿತ್ತು. ಇದನ್ನು ಆಗಿನ ಸಾಮಾಜಿಕ ಹಾಗೂ ಧಾರ್ಮಿಕ ವ್ಯವಸ್ಥೆಗಳೊಂದಿಗೆ ಕವಿಗಳು ಮಾಡಿಕೊಂಡ ಒಂದುರೀತಿಯ ಒಪ್ಪಂದವೆಂದು ಕರೆಯಬಹುದೇನೋ. ಒಂದು ರೀತಿಯಲ್ಲಿ ಈ ಧಾರ್ಮಿಕ ಚೌಕಟ್ಟು ಅವರ ಕಾವ್ಯರಚನೆಗೆ ಅನುಕೂಲತೆಯನ್ನೂ ಒದಗಿಸಿತು. ಸಾಹಿತ್ಯಾಂಶವನ್ನು ನೀತಿ – ಧರ್ಮಗಳಿಂದ ಪ್ರತ್ಯೇಕಿಸಿ ನೋಡದ ಓದುಗರನ್ನು ಈ ಕಾವ್ಯಗಳು ಸುಲಭವಾಗಿ ತಮ್ಮ ಸೆಳವಿನಲ್ಲಿ ಎಳೆದೊಯ್ಯಲು ಸಮರ್ಥವಾದವು. ಆದರೆ ಇಷ್ಟೇ, ಬಹುತೇಕ ಕಾವ್ಯಗಳಲ್ಲಿ ಪ್ರತಿಭೆಯು ಆಭಾಸ ಮಾತ್ರ ಮೆರೆಯುವಂತಾಯಿತು.

ಈ ಪ್ರಬಂಧವನ್ನು ಬರೆಯುವುದರಲ್ಲಿ ಡಾ॥ ಜಿ. ಎಸ್. ಶಿವರುದ್ರಪ್ಪನವರಿಗೆ ವಿಶೇಷವಾಗಿ ಋಣಿಯಾಗಿದ್ದೇನೆ.

ಹೀಗೆಂದ ಮಾತ್ರಕ್ಕೆ ಕಾವ್ಯವು ಧರ್ಮದಿಂದ ಸಂಪೂರ್ಣ ಬೇರೆಯಾಗಿ ನಿಲ್ಲಬೇಕೆಂದಾಗಲೀ, ಹಾಗಾದಾಗಲೇ ಅದು ಉತ್ತಮಕಾವ್ಯವಾಗುವುದೆಂದಾಗಲೀ ಅರ್ಥವಲ್ಲ. ಧರ್ಮ ಮತ್ತು ಕಾವ್ಯಗಳಿಗೆಲ್ಲ ಮೂಲಭೂತವಾದ ಕೇಂದ್ರವೊಂದೇ. ಜೀವನದಲ್ಲಿ ಆಚರಣೆಗೆ ಬಂದಾಗ ಇವೆರಡೂ ಭಿನ್ನವಾಗಿ ತೋರುತ್ತವೆ. ಜೀವನ ಮೌಲ್ಯಗಳನ್ನು ಕುರಿತ ಅಭಿವ್ಯಕ್ತಿಗೆ ಒಳಪಡಿಸಿದಾಗ ಧರ್ಮವೇ ಕಾವ್ಯವಾಗುತ್ತದೆ; ಜೀವನವನ್ನು ಕುರಿತ ವಿಚಾರಗಳೇ ಅನುಷ್ಠಾನದ ಹಂತದಲ್ಲಿ ಧರ್ಮವಾಗುತ್ತದೆ. ನಿಕಟವರ್ತಿಯಾದ ಈ ಧಾರ್ಮಿಕ ಸಂಬಂಧದಿಂದ ಕಾವ್ಯವು ಹೊರಗುಳಿಯುವುದು ಸಾಧುವೂ ಅಲ್ಲವೆಂದು ತೋರುತ್ತದೆ. 'ಒಂದು ಕಾವ್ಯದ ಘನತೆಯನ್ನು ಕಾವ್ಯದ ಹೊರಗಿನ ನೆಲೆಯೊಂದರಿಂದ ಅಳೆಯಬೇಕಾಗುತ್ತದೆಂದು' ಎಲಿಯಟ್ ಹೇಳಿದುದರ ತಾತ್ಪರ್ಯ ಇದೇ ಇರಬಹುದು. 'ಧಾರ್ಮಿಕ ಕಾವ್ಯ'ದ ವಿಷಯವಾಗಿ ಹೇಳುತ್ತ ಎಲಿಯಟ್, ಮೂರು ಹಂತಗಳಲ್ಲಿ ಧಾರ್ಮಿಕ ಕಾವ್ಯಗಳಿರುವುದು ಸಾಧ್ಯವೆನ್ನುತ್ತಾನೆ: ಒಂದು, ಚೇತೋಹಾರಿಯಾದ ಭಾಷೆಯಲ್ಲಿ ಬರೆದ ಧರ್ಮಗ್ರಂಥಗಳು ; ಎರಡು, ಭಕ್ತಿಗೀತರೂಪವಾಗಿ ಬಂದ ಸಾಹಿತ್ಯಗಳು (devotional songs); ಮೂರನೆಯದಾಗಿ, ಕವಿಯ ಧರ್ಮಶ್ರದ್ಧೆ ಅವನಿಗೆ ಅರಿವಿಲ್ಲದೆಯೇ ಅಪ್ರತ್ಯಕ್ಷವಾಗಿ ಹರಿದುಬಂದ ಕಾವ್ಯಗಳು. ಸ್ಥೂಲವಾಗಿ ಈ ವಿಂಗಡಣೆಗಳಿಗೆ ಅನ್ವಯಿಸಿ ಹೇಳುವುದಾದರೆ, ವೇದೋಪನಿಷತ್ತುಗಳಂತಹ ಗ್ರಂಥಗಳು ಮೊದಲನೆಯ ರೀತಿಗೆ ಸಂಬಂಧಿಸಿವೆ. ಹರಿಹರನ 'ಬಸವದೇವರಾಜ ರಗಳೆ' ಯಂತಹ ಕಾವ್ಯಗಳು ಹಾಗೂ ದಾಸ ಸಾಹಿತ್ಯದ ಬಹುಮಟ್ಟಿನ ಭಾಗ ಎರಡನೆಯ ಪ್ರಕಾರಕ್ಕೆ ಸೇರುತ್ತವೆಯೆನ್ನಬಹುದು. ಎಲಿಯಟ್ ಹೇಳಿದ ಮೂರನೆಯ ರೀತಿಯ ಧರ್ಮ – ಕಾವ್ಯಗಳ ಸಂಬಂಧ ನಮ್ಮ ರಾಮಾಯಣ – ಭಾರತಗಳಲ್ಲಿ ಕಾಣಿಸಿಕೊಳ್ಳುವಂತಹದು. ಸಾಮಾನ್ಯವಾಗಿ ಎಲ್ಲ ಮಹಾಕಾವ್ಯಗಳೂ ಈ ರೀತಿಯಲ್ಲಿ ಧರ್ಮವನ್ನು ಹಿನ್ನೆಲೆಯಾಗಿಟ್ಟುಕೊಂಡೆ ರಚಿತವಾಗಿವೆ. ಈ ಮೂರನೆಯ ಪ್ರಕಾರವೇ ಉತ್ತಮಸಾಹಿತ್ಯವೆನಿಸಿಕೊಳ್ಳುತ್ತದೆಯೆಂಬುದು ಎಲಿಯಟ್‌ನ ಅಭಿಪ್ರಾಯ.

೨

ಧಾರ್ಮಿಕ ಕಾವ್ಯಗಳ ರಚನೆಯನ್ನು ಒಪ್ಪಿಕೊಂಡಾಗ ಅದರಲ್ಲಿಯ 'ಧರ್ಮ' ಎಂಬ ಪದದ ಅರ್ಥವ್ಯಾಪ್ತಿ ಎಂತಹುದು ಎಂಬ ಪ್ರಶ್ನೆ ಮೂಡುತ್ತದೆ ಮೇಲೆ ಹೇಳಿದ, ಎಲಿಯಟ್‌ನು ಒಪ್ಪಿಕೊಂಡ ಮೂರನೆಯ ಪ್ರಕಾರದ ಧಾರ್ಮಿಕಕಾವ್ಯಗಳಲ್ಲಿ ಕಂಡುಬರುವ ಧರ್ಮ 'ಸಂಸ್ಕೃತಿ' ಎಂಬ ಪದದ ಅರ್ಥವ್ಯಾಪ್ತಿಯನ್ನು ಪಡೆಯುತ್ತದೆ. ('ಸಂಸ್ಕೃತಿ' ಪದಕ್ಕಿರುವ ಅರ್ಥ

ವ್ಯಾಪ್ತಿಯೂ ನಿರ್ದಿಷ್ಟವಾದದ್ದಲ್ಲ.) ಜೈನ ಧರ್ಮ, ವೀರಶೈವಧರ್ಮ, ವೈದಿಕ ಧರ್ಮ ಮೊದಲಾದವುಗಳಲ್ಲಿ ಕಂಡುಬರುವ ಧಾರ್ಮಿಕತೆಯೆನ್ನುವುದು ಕೆಲವು ವಿಶಿಷ್ಟ ನಿಯಮಗಳಿಂದ ಕೂಡಿದ ಒಂದು ವ್ಯವಸ್ಥೆ. ಇಲ್ಲಿಯ ವ್ಯಕ್ತಿಗಳನ್ನು, ಪರಿಸರವನ್ನು ಅಲೌಕಿಕವಾದ ವ್ಯಕ್ತಿ-ಪರಿಸರಗಳೊಂದಿಗೆ ವಿವಿಧ ರೀತಿಯಲ್ಲಿ ಸಮೀಕರಿಸುವ ಪ್ರಯತ್ನ ಈ ಧರ್ಮಗಳಲ್ಲಿ ಕಂಡುಬರುತ್ತವೆ. (ನಾನು ಕೊಟ್ಟಿರುವ ಈ ವ್ಯಾಖ್ಯಾನ (definition) ಬಹಳ ಸ್ಥೂಲವಾದುದೆಂಬುದು ಸ್ಪಷ್ಟ) ಆದಿಪುರಾಣ, ಅಜಿತನಾಥಪುರಾಣ ಹಾಗೂ ಇನ್ನಿತರ ಅನೇಕ ಕನ್ನಡ (ಧಾರ್ಮಿಕಕಾವ್ಯಗಳೆಂದು ಹೇಳಬಹುದಾದ) ಕಾವ್ಯಗಳಲ್ಲಿ ಕಂಡುಬರುವ ಧರ್ಮ ಈ ರೀತಿಯದೆಂದು ಹೇಳಬಹುದು. ಸಾಹಿತ್ಯದಲ್ಲಿ ಧಾರ್ಮಿಕ ಅಂಶಗಳ ಪ್ರತಿಪಾದನೆಯ ಸಮರ್ಥನೆ ಹೇಗೆಯೇ ಇರಲಿ, ವಿಚಾರ, ಭಾವನೆ, ಘಟನಾವಳಿಗಳ ನಿರೂಪಣೆಗೆ ಖಚಿತತೆಯನ್ನು ಒದಗಿಸಿ ಅವುಗಳನ್ನು ಓದುಗರಿಗೆ ಪರಿಚರಿಸಿಕೊಡುವುದರಲ್ಲಿ ಮಾಧ್ಯಮವಾಗಿ ನಿಂತ ಪ್ರತಿಮೆ-ಸಂಕೇತಗಳು ಸಾಹಿತ್ಯಕ್ಕೆ ಧರ್ಮದ ಒಂದು ಮುಖ್ಯ ಕೊಡುಗೆ ಎಂದೆನಿಸದಿರದು. ಹೀಗೆಂದ ಮಾತ್ರಕ್ಕೆ ಧಾರ್ಮಿಕ ಪ್ರತಿಮೆ-ಸಂಕೇತಗಳಿಗೆ ಇತರ ಪ್ರತಿಮೆ-ಸಂಕೇತಗಳಿಗಿಂತ ಸ್ವಭಾವತಃ ಹೆಚ್ಚಿನ ವೈಶಿಷ್ಟ್ಯಗಳಿವೆಯೆಂದು ಅರ್ಥವಲ್ಲ. ಆದರೆ ಸಾಮಾಜಿಕ ಚಿತ್ರಣವನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡಿದಾಗ ಕನ್ನಡಕಾವ್ಯಗಳಲ್ಲಿ ಧಾರ್ಮಿಕ ಪ್ರತಿಮೆ-ಸಂಕೇತಗಳ ಮಹತ್ವ ಅರಿವಾಗದಿರದು. ಧರ್ಮದ ಕಟ್ಟು-ನಿಟ್ಟುಗಳನ್ನು-ಅವುಗಳ ವಾಸ್ತವಿಕತೆ (reality) ಏನೇ ಇರಲಿ—ಒಪ್ಪಿಕೊಂಡು ಬಾಳಿದ ಜನರಿಗೆ ಇವು ಕೇವಲ ಪ್ರತಿಮೆ-ಸಂಕೇತಗಳಾಗಿರದೆ ಅವರ ಜೀವನದಲ್ಲಿ ತೋರಿದ ಇತರ ಘಟನೆಗಳಷ್ಟೆ ಸ್ವಾಭಾವಿಕವಾಗಿದ್ದವೆಂಬುದನ್ನು ಮರೆಯಬಾರದು. ಈ ಧಾರ್ಮಿಕ ವಲಯದಿಂದ ಹೊರಗೆ ನಿಂತು ನೋಡಿದಾಗ ಮಾತ್ರ ಅವು ಪ್ರತಿಮೆ-ಸಂಕೇತಗಳ ಮಟ್ಟಕ್ಕೆ ಇಳಿಯುತ್ತವೆ. ಪಂಪನ ಸಮಕಾಲೀನ ಜನತೆಗೆ ಅವನ 'ವಿಕ್ರಮಾರ್ಜುನ ವಿಜಯ'ಕ್ಕಿಂತ 'ಆದಿಪುರಾಣ'ವು ಹೆಚ್ಚು ಪರಿಚಿತವಾಗಿ, ಹತ್ತಿರವಾಗಿ ತೋರಿದ್ದರೆ, ಹೆಚ್ಚು ಪ್ರಿಯವಾಗಿದ್ದರೆ ಅಚ್ಚರಿಯೇನಲ್ಲ,

೩

"ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮಂ" ಎಂದು ಪಂಪ ತನ್ನ 'ವಿಕ್ರಮಾರ್ಜುನ ವಿಜಯ' ಹಾಗೂ 'ಆದಿಪುರಾಣ'ಗಳ ವಿಷಯವಾಗಿ ಹೇಳಿಕೊಂಡಿದ್ದಾನೆ. ಈ ರೀತಿಯಾಗಿ ಮೊದಲು ಕಾವ್ಯಗಳನ್ನು ವಿಭಾಗಿಸಿಕೊಂಡು ಬರೆದವನು ಪಂಪನೊ ಅಥವಾ ಅವನಿಗಿಂತ ಹಿಂದೆಯೇ ಈ ಸಂಪ್ರದಾಯ ಬೆಳೆದುಬಂದಿತ್ತೊ ಎನ್ನುವುದು ನಮಗೆ ಇಲ್ಲಿ ಅನವಶ್ಯಕ: ಅದು ಚರಿತ್ರಕಾರರಿಗೆ

ಸೇರಿದ ವಿಷಯ. ಆದರೆ ತನ್ನ ಪ್ರತಿಭೆಯನ್ನು ಧಾರ್ಮಿಕ, ಲೌಕಿಕ ಎಂದು ಎರಡು ಭಾಗಗಳಾಗಿ ಒಡೆದ ಪರಿಣಾಮವಾಗಿ ಪಂಪನ ಕಾವ್ಯಗಳಲ್ಲಿ ಅದರಲ್ಲಿಯೂ 'ಆದಿಪುರಾಣ'ದಲ್ಲಿ ಸಂಕೀರ್ಣತೆ ಬಹುಮಟ್ಟಿಗೆ ಕಡಿಮೆಯಾಯಿತೆಂದು ಹೇಳಬಹುದು. ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ವನ್ನು 'ಲೌಕಿಕ ಕೃತಿ' ಎಂದೇ ಕರೆದಿದ್ದರೂ ಅಲ್ಲಿಯೂ ಧರ್ಮದ ಪ್ರಭಾವ ಸಂಪೂರ್ಣವಾಗಿ ಅಳಿದಿಲ್ಲ; ಹಾಗಾಗುವುದು ಸಾಧ್ಯವೂ ಇರಲಿಲ್ಲ–ಅಂದಿನ ಪರಿಸ್ಥಿತಿಯಲ್ಲಿ. ಆದರೆ ಇಲ್ಲಿ ತೋರುವ ಧಾರ್ಮಿಕ ಪ್ರಜ್ಞೆ ಬಹುಮಟ್ಟಿಗೆ ಎಲಿಯಟ್ ಮೂರನೆಯ ರೀತಿಗೆ ಸೇರಿದುದು. ಹೀಗಿದ್ದರೂ ಪಂಪ ತನ್ನ ಪ್ರತಿಭೆಯನ್ನು ಏಕಮುಖವಾಗಿ 'ವಿಕ್ರಮಾರ್ಜುನ ವಿಜಯ'ದಲ್ಲಿ ಹರಿಬಿಟ್ಟಿದ್ದರೆ ಎಂತಹ ಜಟಿಲತೆಗಳು ತಲೆದೋರಬಹುದಿತ್ತೋ ಅಂತಹುದು ಉಂಟಾಗಲಿಲ್ಲವೆಂದು ಹೇಳಬಹುದು. ಕುಮಾರವ್ಯಾಸನ ಭಾರತದಲ್ಲಿಯ ಕೆಲವು ಪಾತ್ರ–ಘಟನೆಗಳಿಗೆ ಹೋಲಿಸಿದರೆ ಈ ಅಂಶ ವಿದಿತವಾಗುತ್ತದೆ. ಶ್ರೀಕೃಷ್ಣ, ಕರ್ಣ ಮುಂತಾದ ಪಾತ್ರಗಳನ್ನೂ ದ್ರೌಪದಿಯ ಮಾನಭಂಗದಂತಹ ಘಟನೆಯನ್ನೂ ಈ ದೃಷ್ಟಿಯಿಂದಲೆ ನೋಡಬೇಕಾಗುತ್ತದೆ. ಇಲ್ಲಿಯ ಪಾತ್ರಗಳು ನಿಯೋಜಿತವಾದ ಮಾರ್ಗದಲ್ಲಿ ವೈಭವದಿಂದ ಮೆರೆದು ತಮ್ಮ ಕಾರ್ಯಗಳನ್ನು ಸಮರ್ಥವಾಗಿ ಪೂರೈಸುತ್ತವೆ*

ತುಲನಾತ್ಮಕವಾಗಿ ಕುಮಾರವ್ಯಾಸಭಾರತದಲ್ಲಿಗಿಂತ ಪಂಪಭಾರತದಲ್ಲಿ ಸಂಕೀರ್ಣತೆ ಕಡಿಮೆಯಾಗಿದೆಯೆಂದ ಮಾತ್ರಕ್ಕೆ, ಪಾತ್ರಗಳು, ಘಟನೆಗಳು ಒಂದೇ ಸ್ತರದಲ್ಲಿ ಕಾಣಿಸಿಕೊಳ್ಳುತ್ತವೆಯೆಂದ ಮಾತ್ರಕ್ಕೆ, ಪಂಪಭಾರತದಲ್ಲಿಯ ಕಾವ್ಯಾಂಶಕ್ಕೆ ಧಕ್ಕೆ ತಗಲಿತೆಂದಾಗಲೀ ಪಾತ್ರಗಳು ಸಿದ್ಧರೂಪವನ್ನು ಪಡೆದು ಬರುತ್ತವೆಯೆಂದಾಗಲೀ ಅರ್ಥವಲ್ಲ. ಆದರೆ ಇಷ್ಟೇ, ಇಲ್ಲಿಯ ಪಾತ್ರ–ಘಟನೆಗಳು ಹೆಚ್ಚು ಖಚಿತವಾದ ಆಕಾರವನ್ನು ಪಡೆಯುತ್ತ ಬೆಳೆಯುತ್ತವೆ. ಪಾತ್ರಗಳು ಹೆಚ್ಚು ಜವಾಬ್ದಾರಿಯಿಂದ ವರ್ತಿಸುತ್ತವೆ. ಆದರೆ ಕುಮಾರವ್ಯಾಸನ ಭಾರತದಲ್ಲಿ ಪಾತ್ರಗಳು ಕೈಕಾಲುಗಳನ್ನೂರುವ ಸ್ಥಳಗಳಿಗೆ ನಿರ್ದಿಷ್ಟವಾದ ಸೀಮೆಯಿಲ್ಲ. ಮನಬಂದಂತೆ ವರ್ತಿಸುತ್ತವೆ. ಆದ್ದರಿಂದ ಕಾವ್ಯ ಬೆಳೆದಂತೆ ಜಟಿಲತೆಯೂ ಬೆಳೆಯುತ್ತ ಹೋಗುತ್ತದೆ. ಕಾವ್ಯಕ್ಕೆ ಅಲೌಕಿಕ ಹಿನ್ನೆಲೆಯನ್ನು ಬಳಸಿಕೊಂಡಿರುವುದು ಇದಕ್ಕೆ ಪ್ರಮುಖ ಕಾರಣವಾಗುತ್ತದೆ. (ಕವಿಯ ಆವೇಶವೂ ಇದಕ್ಕೆ ಕಾರಣವಾಗಿರಬಹುದು). ಈ ಹಿನ್ನೆಲೆಯ ಕೇಂದ್ರವಿರುವುದು ಶ್ರೀಕೃಷ್ಣನ ಪಾತ್ರದಲ್ಲಿ. ಆದ್ದರಿಂದ ಕೃಷ್ಣನ ಪಾತ್ರದಲ್ಲಾಗುವ ವ್ಯತ್ಯಾಸ "ಭಾರತ"ದ ಇತರ ಪಾತ್ರಗಳ ಮೇಲೆ ಎಂತಹ ಪ್ರಭಾವ

---

* ಕರ್ಣನ ಪಾತ್ರ ಈ ಹೇಳಿಕೆಗೆ ವಿರೋಧವಾಗಿ ತೋರಬಹುದು. ಅದು ಮೇಲುನೋಟಕ್ಕೆ ಮಾತ್ರ.

ವನ್ನು ಬೀರಬಲ್ಲದೆಂಬುದು ಈ ಎರಡು 'ಭಾರತ'ಗಳ ಅವಲೋಕನದಿಂದ ವ್ಯಕ್ತವಾಗುತ್ತದೆ.

ಹೀಗೆ 'ಲೌಕಿಕತೆ'ಯನ್ನು ತಂದು ಗಮನಾರ್ಹ ಬದಲಾವಣೆಗಳನ್ನು ಹೊಂದಿದ ಪಂಪಭಾರತದಿಂದ ಎರಡು ವಿಷಯಗಳು ಮನದಟ್ಟಾಗುತ್ತವೆ; ಒಂದು, ಕೃತಿಯನ್ನು ಲೌಕಿಕಪರಿಸರದಲ್ಲಿಯೆ ನಿಂತು ಪರಿಶೀಲಿಸಲು ಸಾಧ್ಯವಾಗಿರುವುದು; ಇನ್ನೊಂದು ಇದು ಲೌಕಿಕಕೃತಿಯಾದ್ದರಿಂದ ಜೈನಧರ್ಮ ನೇರವಾಗಿ ತನ್ನ ಪ್ರಭಾವವನ್ನು ಬೀರಲು ಅಸಮರ್ಥವಾಗಿರುವುದು. ತೀರ ವಿಶಾಲವಾದ ಅರ್ಥದಲ್ಲಿ ಮಾತ್ರ ಧರ್ಮ ಉಳಿದುಕೊಂಡುಬಂದು, ಕಾವ್ಯಧರ್ಮವಾಗಿ ಕೃತಿಯ ಬೆಲೆಯನ್ನು ಹೆಚ್ಚಿಸುತ್ತದೆ.

೪

ಪಂಪ 'ಕಾವ್ಯ-ಧರ್ಮ-ಧರ್ಮಗಳ ಸಮನ್ವಯ'ದ ಮಾತನ್ನು ಆದಿಪುರಾಣದ ಬಗೆಗೆ ಪ್ರತ್ಯೇಕವಾಗಿ ಹೇಳಿದ್ದಾನೆ. ಇಲ್ಲಿ ಸಮನ್ವಯದ ಪ್ರಯತ್ನ ಸಂಪೂರ್ಣವಾಗಿ ಫಲಿಸಿದೆಯೆಂದು ಹೇಳುವಂತಿಲ್ಲ. 'ಆದಿಪುರಾಣ'ವು ಜೈನಧರ್ಮದ ನೀತಿ ನಿಯಮಗಳನ್ನು ಪ್ರತ್ಯಕ್ಷವಾಗಿಯೇ ಒಪ್ಪಿಕೊಂಡು ಧಾರ್ಮಿಕ ಕೃತಿಯೆಂದೇ ಹೇಳಿಸಿಕೊಂಡಿದ್ದರಿಂದ ಅಲ್ಲಿಯ ಪಾತ್ರ-ಘಟನೆಗಳು ಈ ಧಾರ್ಮಿಕ ವಲಯವನ್ನು ಮೀರಿ ಬೆಳೆಯುವಂತಿಲ್ಲ. ಅವುಗಳಿಗಿರುವ ಅವಕಾಶ ಬಹುಮಟ್ಟಿಗೆ ಸೀಮಿತವಾಗಿದೆ. ಕವಿಯ ಪ್ರತಿಭೆಯನ್ನು ಧರ್ಮದ ಕಡಿವಾಣ ನಿಯಂತ್ರಿಸಿದೆ. ಆದ್ದರಿಂದ "ಆದಿಪುರಾಣ ರಚನೆಯಲ್ಲಿ ಪಂಪ ಕೈಕಟ್ಟಿಸಿಕೊಂಡು ಪಟ್ಟುಗಳನ್ನು ತೋರಿಸುವ ಗರಡಿಯಾಳಿನಂತೆ ತೋರುತ್ತಾನೆ."[೧] ಇಷ್ಟಾಗಿಯೂ ಪಂಪ ತನ್ನ ಧಾರ್ಮಿಕಪ್ರಜ್ಞೆಯನ್ನು ಅನೇಕಕಡೆಗಳಲ್ಲಿ ಅತ್ಯಂತ ಕಲಾತ್ಮಕವಾಗಿ ಮೆರೆದಿದ್ದಾನೆ.

ಆದಿಪುರಾಣದಲ್ಲಿಯ ಕಾವ್ಯ ಧರ್ಮ ಮತ್ತು ಧರ್ಮಗಳ ಸಮನ್ವಯದ ಪ್ರಯತ್ನವನ್ನು ಈ ರೀತಿಯಲ್ಲಿ ವಿಭಾಗಿಸಿಕೊಂಡು ವಿವರಿಸಬಹುದು: ೧) ಧರ್ಮಬೋಧೆಯನ್ನು ನೇರವಾಗಿ ತಂದಿರುವುದು; ೨) ಮತಪ್ರಕ್ರಿಯೆಗಳನ್ನು ಕಾವ್ಯದ ತಂತ್ರವಾಗಿ ತಂದಿರುವುದು; ೩) ಧರ್ಮದ ತಿರುಳನ್ನು ಪ್ರತಿಮಾರೂಪದಲ್ಲಿ ವ್ಯಕ್ತಗೊಳಿಸಿರುವುದು; ೪) ಸನ್ನಿವೇಶ – ಘಟನೆಗಳ ಅಲೌಕಿಕ ಸ್ವರೂಪಗಳ ಮೂಲಕ ಧರ್ಮದ ತತ್ವಗಳನ್ನು ಧ್ವನಿಸಿರುವುದು.

ತನ್ನ ಕಾವ್ಯ ಜೈನಧರ್ಮಕ್ಕೂ ಕನ್ನಡಿಹಿಡಿಯಬೇಕಾದ್ದರಿಂದ ಪಂಪ ಆ ಧರ್ಮದ ಸ್ವರೂಪವನ್ನು ಉಳಿಸಿಕೊಂಡು ಬರಬೇಕಾಯಿತು. ಅಲ್ಲಿಯ

---

೧. ತೀ. ನಂ. ಶ್ರೀ : "ಪಂಪ" (ಪು. ೧೫).

ಲೋಕವಿವರಗಳು, ಭವಾವಳಿಗಳು, ಪಂಚಕಲ್ಯಾಣಗಳು – ಇತ್ಯಾದಿಗಳನ್ನು ಪಂಪ ಬಿಡುವಂತಿಲ್ಲ. ಇವುಗಳೊಂದಿಗೆ ಅನೇಕ ಕಡೆ ಧರ್ಮತತ್ವಗಳ ನೇರವಾದ ನಿರೂಪಣೆಯೂ ಸೇರಿ ಕಾವ್ಯ ನೀರಸವಾಗುತ್ತದೆ ಮಹಾಬಲರಾಜನ ಆಸ್ಥಾನದಲ್ಲಿ ನಡೆದ ತಾತ್ವಿಕ ಚರ್ಚೆ ಇದಕ್ಕೊಂದು ನಿದರ್ಶನ. "ಬಾಳ್ವಿನಮಿಂದ್ರಿಯವರ್ಗ-ದಿಚ್ಛೆಯಂ ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು" (ಆದಿ. ಪು. ೨-೯) ಮುಂತಾದ ವಾಕ್ಯಗಳು ತಮ್ಮಷ್ಟಕ್ಕೆ ಸುಂದರವಾಗಿವೆಯಲ್ಲದೇ ಕಾವ್ಯೋದ್ದೇಶದ ದೃಷ್ಟಿಯಿಂದ ಅವುಗಳನ್ನು ಸಮರ್ಥಿಸುವುದು ಕಷ್ಟವಾಗುತ್ತದೆ.

ಈ ರೀತಿಯಾಗಿ ಧರ್ಮದ ದಿಗ್ಬಂಧನೆಗೆ ಸಿಲುಕಿಕೊಂಡೂ ಪಂಪ ತನ್ನ ಮಹಾಕವಿತ್ವವನ್ನು ಹೇಗೆ ಮೆರೆಯುತ್ತಾನೆಂಬುದಕ್ಕೆ ಆತ ಭವಾವಳಿಯನ್ನು ಉತ್ತಮ ಕಾವ್ಯತಂತ್ರವಾಗಿ ಉಪಯೋಗಿಸಿಕೊಂಡುದುದೇ ಸಾಕ್ಷಿಯಾಗಿದೆ. ಜೀವನದ ಒಂದೊಂದು ಮೌಲ್ಯಗಳ ನಿರೂಪಣೆಗೂ ಒಂದೊಂದು ಭವವನ್ನೇ ಉಪಯೋಗಿಸಿಕೊಂಡು ಒಟ್ಟಿನಲ್ಲಿ ಸಮಗ್ರ ವ್ಯಕ್ತಿತ್ವದ ಪರಿಚಯ ಮಾಡಿಕೊಡುತ್ತಾನೆ. ಒಂದೊಂದು ಮೌಲ್ಯದ ಮಹತಿಯನ್ನೂ ಆ ಮೌಲ್ಯಗಳಿಗೆ ಸ್ಥಿರವಾಗಿ ಅಂಟಿಕೊಳ್ಳಬಯಸುವ ವ್ಯಕ್ತಿಗಳ ಊರ್ಧ್ವಗಮನಕ್ಕಾಗುವ ತಡೆಗಳನ್ನೂ ಈ ಭವಾವಳಿಯ ವರ್ಣನೆಗಳ ಮೂಲಕ ತಿಳಿಸುತ್ತಾನೆ. ಈ ದೃಷ್ಟಿಯಿಂದ ನೋಡಿದರೆ ಆದಿತೀರ್ಥಂಕರನ ಭವಾವಳಿ ಮುಂದೆ ಬರುವ ಭರತಚಕ್ರಿಯ ಲೌಕಿಕದೃಷ್ಟಿಗೆ ಒಂದು ವಿಡಂಬನೆ. ಯಾವ ಮೌಲ್ಯಗಳು ತಮ್ಮಷ್ಟಕ್ಕೆ ತಾವೇ ಅಪೂರ್ಣವೆಂದೂ ಅವೇ ಅಂತಿಮವಾದ ಶ್ರೇಯೋಸ್ಥಾನಗಳಲ್ಲವೆಂದೂ ಈ ಭವಾವಳಿಯಲ್ಲಿ ವ್ಯಕ್ತವಾಗಿದೆಯೋ ಆ ಮೌಲ್ಯಗಳೇ ಭರತಚಕ್ರಿಗೆ ಪರಮಹಂಬಲಗಳಾಗುತ್ತವೆ. ಈ ದೃಷ್ಟಿಯಿಂದಲೇ ಲಲಿತಾಂಗ-ಸ್ವಯಂಪ್ರಭೆ, ಶ್ರೀಮತಿ–ವಜ್ರಜಂಘ ಮುಂತಾದ ಭವಗಳನ್ನು ಅಭ್ಯಸಿಸಬೇಕಾಗುತ್ತದೆ. ದೇವನಾಗಿ ಹುಟ್ಟಿ, ಸ್ವರ್ಗಸುಖವನ್ನು ಅನುಭವಿಸಿ ಪುನಃ ಮರ್ತ್ಯಕ್ಕೆ ಇಳಿಯಲು ಇಚ್ಛಿಸದೆ ದುಃಖಕ್ಕೆ ಒಳಗಾಗಿದ್ದ ಲಲಿತಾಂಗನನ್ನು ನೋಡಿದ ದೇವತೆಗಳು "ಅಮರ ಜನಕ್ಕೆಲ್ಲಮಿೊ ಪಾಂಗೆ" ಎಂದು ಸಂತೈಸುತ್ತಾರೆ. 'ದೇವನೆಂಬವನು ಬೇರಿಲ್ಲ; ಮನುಷ್ಯನೇ ದೇವನೂ ಆಗಬಹುದು, ದೇವನೆ ಮನುಷ್ಯನೂ ಆಗಬಹುದು ಅಥವಾ ತಿರ್ಯಕ್‌ಜಂತುವೂ ಆಗಿ ಹುಟ್ಟಬಹುದು. ಅದು ಆವರವರ ಕರ್ಮವನ್ನು ಅವಲಂಬಿಸಿದೆ. ಆದ್ದರಿಂದ ಕ್ಷಣಿಕವಾದ ಯಾವ ಸ್ಥಿತಿಗೂ ಸ್ಥಿರವಾಗಿ ಅಂಟಿಕೊಳ್ಳಬಾರದು' ಎಂಬ ಜೈನತತ್ವ ಇಲ್ಲಿ ಸುಂದರವಾಗಿ ಪ್ರತಿಬಿಂಬಿತವಾಗಿದೆ ಇವರ ಮುಂದಿನ ಜನ್ಮವಾದ ಶ್ರೀಮತಿ–ವಜ್ರಜಂಘರ ಭವವೂ ಅಷ್ಟೇ ಸುಂದರವಾಗಿದೆ. ಪತಿಪತ್ನಿಯರು ಜೊತೆಗೂಡಿ ಸೆಜ್ಜೆಮನೆಯಲ್ಲಿ ಮಲಗಿರುವಾಗ ಅವರನ್ನು "ಕೊಂಡುದು

ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್." ಆದರೂ ಅವರು "ತೊಳ್ತು ನಡಿಲಿಸದೆ ಪ್ರಾಣಮನ್ ಅಂದು ಒಡಗಳೆದರ್." ಲೌಕಿಕವಾಗಿ ಸಾರ್ಥಕವೆನಿಸಿಕೊಳ್ಳುವ, ಸಮಂಜಸವೆನಿಸಿಕೊಳ್ಳುವ ಈ ಸನ್ನಿವೇಶ ಆಧ್ಯಾತ್ಮಿಕ ದೃಷ್ಟಿಯಲ್ಲಿರುವ ಅಸಾರ್ಥಕತೆಯನ್ನು ಧ್ವನಿಸುತ್ತದೆ.

ಈ ಎರಡು ಭವಗಳು ಮುಂದೆಬರುವ ಆದಿನಾಥನ ಸಮ್ಯಕ್ತ್ವಸಿದ್ಧಿಗೆ ಸುಂದರವಾದ ಹಿನ್ನೆಲೆಯನ್ನೊದಗಿಸಿಕೊಡುತ್ತವೆ. ಭೋಗದ ವಿಪರೀತವನ್ನು ತುಳಿದ ಆದಿದೇವನಲ್ಲಿ ಧಾರ್ಮಿಕ ದೃಷ್ಟಿ ಬೇಗ ಪರಿಣತಗೊಳ್ಳುತ್ತದೆ. ಆದ್ದರಿಂದಲೇ ನೀಲಾಂಜನೆಯ ನೃತ್ಯದಂತಹ ಮೈಮರೆಸುವ ಸನ್ನಿವೇಶದಲ್ಲಿಯೂ ಒಳಗಣ್ಣುಗಳನ್ನು ತೆರೆದಿಟ್ಟು ಲೌಕಿಕತೆ ಹಾಗೂ ಆಧ್ಯಾತ್ಮಿಕತೆಗಳ ಕಲಬೆರಕೆಯನ್ನು ತಟ್ಟನೆ ಗುರುತಿಸುತ್ತಾನೆ.

ಅನೇಕ ಭವಗಳಲ್ಲಿ ಚಿತ್ರಿತವಾದ ಆದಿನಾಥನ ವ್ಯಕ್ತಿತ್ವ ಭೋಗದ ನಿರಾಸಕ್ತಿ ಸಂಕೇತವಾಗಿ ಬಂದರೆ ಆದಿಪುರಾಣದ ಉತ್ತರಾರ್ಧದಲ್ಲಿ ಬರುವ ಭರತ ಚಕ್ರಿಯ ಪಾತ್ರ ವಿಭವದ ನಿಷ್ಫಲತೆಗೆ ಸಂಕೇತವಾಗುತ್ತದೆ. ಆದಿದೇವನ ಧರ್ಮದಿಗ್ವಿಜಯಕ್ಕೂ ಭರತನ ಲೌಕಿಕದಿಗ್ವಿಜಯಕ್ಕೂ ಇರುವ ಅಂತರವನ್ನು ಪಂಪ ಕಲಾತ್ಮಕವಾಗಿ ತಂದಿದ್ದಾನೆ. ಆದಿನಾಥನದು ಅಂತರಂಗ ವಿಜಯವಾದರೆ ಭರತನದು ಬಹಿರಂಗ ವಿಜಯ. ಒಂದು ಮೋಕ್ಷಕ್ಕೆ ದಾರಿ, ಇನ್ನೊಂದು ಅಧಃಪತನಕ್ಕೆ ಮಾರ್ಗ.

ಭರತನ ಜೀವನದಲ್ಲಿ ಬರುವ ಎರಡು ಘಟನೆಗಳು – ವೃಷಭಾಚಲದಲ್ಲಿ 'ಷಟ್ಖಂಡ ಮಂಡಳಾಧೀಶ'ನಾದ ಚಕ್ರಿ ತನ್ನ ಪ್ರಶಸ್ತಿ ಬರೆಯಿಸುವ ಪ್ರಸಂಗ ಹಾಗೂ ಭರತ – ಬಾಹುಬಲಿಯರ ಯುದ್ಧ – ಇವು ಆದಿಪುರಾಣದಲ್ಲಿಯ ಎರಡು ಅತ್ಯಂತ – ಮಹತ್ವದ ಪ್ರಸಂಗಗಳು – ಕಾವ್ಯಾಂಶದ ದೃಷ್ಟಿಯಿಂದ ಹಾಗೂ ಕವಿಯ ಧರ್ಮ – ಕಾವ್ಯಗಳ ಸಮನ್ವಯದ ಪ್ರಯತ್ನದ ದೃಷ್ಟಿಯಿಂದ. ಭರತ ಬರೆಯಿಸುವ ವಿಜಯಪ್ರಶಸ್ತಿ ಚಕ್ರಿಗಳ ವಿಜಯ ಮನಸ್ಸಿನ ಪ್ರತೀಕವಾದರೆ. ಅದು ಧರ್ಮದ, ಆಧ್ಯಾತ್ಮಿಕ ದೃಷ್ಟಿಗೆ ಒಂದು ವಿಡಂಬನೆಯಾಗಿದೆ. ಭರತ – ಬಾಹುಬಲಿಯರ ಯುದ್ಧವು ಧರ್ಮಾಧರ್ಮಗಳ ಹೋರಾಟಕ್ಕೆ ನೀಡಿದ ಒಂದು ಸುಂದರ ಪ್ರತಿಮೆ. ಇದು ಸ್ವಾರಸ್ಯಪೂರ್ಣವಾದ. ನಾಟಕೀಯವಾದ ಘಟನೆ. ಅದೆಷ್ಟೇ 'ಬಹಿರಂಗ ಮಂಡಲದ ಬಲ' ಭರತನಿಗಿದ್ದರೂ 'ಅಂತರ್ಮಂಡಲ ವಿಜಯ' ಅವನಿಗೆ ಇಲ್ಲದ್ದರಿಂದ, ಜೀವನದ ಮೌಲ್ಯಗಳನ್ನು ತಿರಸ್ಕರಿಸಿದುದರಿಂದ ಮುಂದೆ ಬಾಹುಬಲಿಯಿಂದ ಸೋಲೊದಗುವುದು ಖಚಿತ. ಭರತನು ಯೋಗಿಯ ಮಗನಾದರೂ ಅವನ ಕರ್ಮ ಅವನನ್ನು ಬೆನ್ನಟ್ಟಿದೆ ಬಿಡದೆಂಬುದು ಯುದ್ಧಪ್ರಸಂಗದಿಂದ ವ್ಯಕ್ತವಾಗುತ್ತದೆ.

ಪಂಪ ಕೇವಲ ಪಾತ್ರ-ಘಟನೆಗಳಲ್ಲಿ ಮಾತ್ರವಲ್ಲದೆ ಇವುಗಳಿಗೆ ಕೊಡುವ ಹಿನ್ನೆಲೆಯಲ್ಲಿಯೂ ಧಾರ್ಮಿಕ ಅಂಶಗಳನ್ನು ಉಳಿಸಿಕೊಂಡು ಬರುತ್ತಾನೆ ಎನ್ನುವುದಕ್ಕೆ ಭರತನ ದಿಗ್ವಿಜಯಯಾತ್ರೆಯೆ ಒಂದು ನಿದರ್ಶನವಾಗಿದೆ. ಭರತನು ಮಾಡುವ ಯುದ್ಧಗಳೆಲ್ಲ ನಿಶ್ಶಬ್ದಯುದ್ಧಗಳು, ಭರತನ ಅಲೌಕಿಕ ವ್ಯಕ್ತಿತ್ವವನ್ನು ಮೂಡಿಸಲು ಕವಿ ಕೈಗೊಂಡಿರಬಹುದಾದ ತಂತ್ರ ಎನ್ನುವುದರ ಜೊತೆಗೆ ಇದು ಜೈನಧರ್ಮಪರವಾದ ಅಹಿಂಸಾಯುದ್ಧಗಳು ಎಂದೂ ಹೇಳಬಹುದು. ಭರತ-ಬಾಹುಬಲಿಯರ ಯುದ್ಧವೂ ಇಂತಹುದೇ.

೫

'ಆದಿಪುರಾಣ' 'ಪಂಪಭಾರತ'ಗಳನ್ನು ಒಟ್ಟಾಗಿ ಗಮನಿಸಿದಾಗ ಇವೆರಡರ ರಚನಾಕ್ರಮದಲ್ಲಿ ವಿಶೇಷವಾದ ವ್ಯತ್ಯಾಸವೊಂದು ಎದ್ದು ತೋರುತ್ತದೆ. 'ಆದಿಪುರಾಣ'ದಲ್ಲಿ ಕವಿ ಉದ್ದಕ್ಕೂ ಪರಸ್ಪರ ವಿರೋಧವಾದ ಪ್ರಸಂಗಗಳನ್ನು (contrast situations) ತರುತ್ತಾನೆ. ಲಲಿತಾಂಗನಿಗೆ ದೇವಲೋಕದಲ್ಲಿ ಉಳಿಯುವ ಹಂಬಲ ಭರತನಿಗೆ ಮರ್ತ್ಯದಲ್ಲಿ ಮೆರೆಯುವ ಬಯಕೆ; ವಜ್ರಜಂಘನ ಭೋಗತೃಪ್ತಿ-ಭರತನ ಅತೃಪ್ತಿ, ಮರ್ತ್ಯವನ್ನು ತ್ಯಜಿಸುವ ಆದಿದೇವ- ಇಲ್ಲಿಯೇ ಶಾಶ್ವತವಾಗಿ ಉಳಿಯಬಯಸಿ ಪ್ರಶಸ್ತಿ ಬರೆಯಿಸುವ ಭರತಚಕ್ರಿ, ಪಿತೃಪ್ರೇಮ, ಸಹೋದರಪ್ರೇಮ ಮೊದಲಾದ ಮೌಲ್ಯಗಳನ್ನು ಒಪ್ಪಿದ ಬಾಹುಬಲಿ-ಇವುಗಳನ್ನು ತಿರಸ್ಕರಿಸಿದ ಭರತ, ಕೊನೆಗೆ ಭರತ-ಬಾಹುಬಲಿಯರ ರೂಪ-ಆಕಾರಗಳನ್ನು ವರ್ಣಿಸುವಾಗಲೂ ಈ ವಿರೋಧ ಸಂಗತಿಗಳು ಕಾಣಿಸಿಕೊಳ್ಳುತ್ತವೆ. ಬಾಹುಬಲಿ ಅಸಾಧಾರಣ ತೇಜಸ್ಸನ್ನು ಹೊಂದಿದ ವ್ಯಕ್ತಿ; ಭರತನಲ್ಲಿ ಅಂತಹ ತೇಜವಿಲ್ಲ. ಬಾಹುಬಲಿ ಎತ್ತರನಾದ ವ್ಯಕ್ತಿ-ಭರತ ಹಾಗಲ್ಲ. ಈ ರೀತಿಯ ನಿರೂಪಣೆ ಕವಿಯ ಧಾರ್ಮಿಕದೃಷ್ಟಿಯ ಫಲವಾಗಿ ಬಂದದ್ದು. ಧರ್ಮಬದ್ಧವಾದ, ಸಂಪ್ರದಾಯಬದ್ಧವಾದ ದೃಷ್ಟಿ ಸನ್ನಿವೇಶಗಳನ್ನು ಹೀಗೆ ಅಚ್ಚುಕಟ್ಟಾಗಿ ವಿಭಾಗಿಸಿಕೊಂಡು ನೋಡುತ್ತದೆ. ಪಾತ್ರಗಳು ತಾವು ಒಪ್ಪಿಕೊಂಡ ಮೌಲ್ಯಗಳನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತವೆ. ಆದ್ದರಿಂದ ಪರಸ್ಪರ ವಿರೋಧವಾದ ಸನ್ನಿವೇಶಗಳಲ್ಲಿ ಅವು ಎಂದೂ ಸಿಲುಕಿಕೊಳ್ಳುವುದಿಲ್ಲ. ತಾವು ಒಪ್ಪಿಕೊಂಡ ಮೌಲ್ಯಗಳಿಗಾಗಿ ಈ ಪಾತ್ರಗಳು ಹೋರಾಡುವಾಗ, ಅವುಗಳ ಜಯಾಪಜಯಗಳು ಪಾತ್ರಗಳಿಗೆ ಬಿಟ್ಟದ್ದಲ್ಲ. ಸಂಪ್ರದಾಯ ಅಥವಾ ಧರ್ಮವೇ ಅದನ್ನು ನಿಯಂತ್ರಿಸುತ್ತದೆ. ಆದ್ದರಿಂದಲೇ ರಾಮಾಯಣದಲ್ಲಿ ರಾವಣನ ಸೋಲು ಖಚಿತವಾಗುವಂತೆಯೆ ಆದಿಪುರಾಣದಲ್ಲಿ ಭರತನ ಸೋಲು ಖಚಿತವಾಗುತ್ತದೆ. ಆದರೆ ಪಂಪಭಾರತದ ಕರ್ಣಾರ್ಜುನರ ಯುದ್ಧಪ್ರಸಂಗ ಹೀಗಿಲ್ಲ. ಇಲ್ಲಿಯೂ ಕರ್ಣನ ಸೋಲು

ಹೆಚ್ಚುಕಡಿಮೆ ಖಚಿತವಾದರೂ ಭರತನಂತಲ್ಲ; ರಾವಣನಂತಲ್ಲ. ಕರ್ಣಾರು ನರು–(ಧರ್ಮಪರ ಹಾಗೂ ವಿರುದ್ಧವಾದ)–ಪರಸ್ಪರ ವಿರುದ್ಧವಾದ ಮೌಲ್ಯಗಳನ್ನು ಪ್ರತಿನಿಧಿಸಿ ಹೋರಾಡುವುದೇ ಇಲ್ಲ. ಕರ್ಣನೇ ಏಕಕಾಲದಲ್ಲಿ (ಆ ಸನ್ನಿವೇಶಕ್ಕೆ ಮಾತ್ರ ಸೀಮಿತವಾದ) ವಿರೋಧವುಳ್ಳ ಮೌಲ್ಯಗಳನ್ನು ಒಪ್ಪಿಕೊಂಡು ಸಾವು ತಂದುಕೊಳ್ಳುತ್ತಾನೆ. [ತಾಯಿ ಪ್ರೇಮ ಹಾಗೂ ಮಿತ್ರ ಪ್ರೇಮ – ಇವೆರಡು ಮೌಲ್ಯಗಳು ಪರಸ್ಪರ ವಿರೋಧಿಗಳಾಗಿಲ್ಲದಿದ್ದರೂ, ಯುದ್ಧಪ್ರಸಂಗದಲ್ಲಿ (ಕರ್ಣನ ಪಾತ್ರದ ದೃಷ್ಟಿಯಿಂದ) ವಿರೋಧಿಗಳಾಗುತ್ತವೆ] ಆದಿಪುರಾಣದಲ್ಲಿ ಕಾರ್ಯಾಸಕ್ತವಾದ ಪಂಪನ ಧಾರ್ಮಿಕದೃಷ್ಟಿ ಆತನ 'ಭಾರತ'ದಲ್ಲಿ ತಲೆದೋರಿದ್ದರೆ ಕರ್ಣನ ಪಾತ್ರ ಹೇಗಿರಬಹುದಾಗಿತ್ತು ಎಂದು ಊಹಿಸಲು ಕಷ್ಟವಾಗಬಹುದು.

ಆದಿಪುರಾಣದ ಪಾತ್ರಘಟನೆಗಳನ್ನೂ ಕವಿಪ್ರತಿಭೆಯ ಮಿಂಚುಗಳನ್ನೂ ಸುಸಂಬದ್ಧವಾಗಿ, ಅಚ್ಚುಕಟ್ಟಾಗಿ ಧಾರ್ಮಿಕಪರಿಸರದಲ್ಲಿ ಅಳವಡಿಸಿಕೊಂಡು ನೋಡುವುದು ಸಾಧ್ಯವಾದಂತೆ ಪಂಪಭಾರತವನ್ನು ಹಿಂಗಡಿಸಿಕೊಂಡು ನೋಡುವುದು ಸಾಧ್ಯವಿಲ್ಲವೆಂಬುದು ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಆದಿಪುರಾಣದ ಪಾತ್ರಗಳು ಧರ್ಮವನ್ನು ಒಪ್ಪಿಕೊಳ್ಳುತ್ತವೆ ಇಲ್ಲವೆ ಅದನ್ನು ಎದುರಿಸಿ, ಸೋಲುತ್ತವೆ. ಭಾರತದಲ್ಲಿ ಸಮಸ್ಯೆಗಳ ಭಾರವನ್ನು ಹೊತ್ತುಬಂದ ಪಾತ್ರಗಳು ಬಹುಮಟ್ಟಿಗೆ ನಮ್ಮ ನೆಲೆಯಲ್ಲಿಯೆ ನಿಂತು, ಹೋರಾಡಿ ಸಮಸ್ಯೆಗಳೊಂದಿಗೇ ಇಲ್ಲವಾಗುತ್ತಾರೆ. ಜೀವನದಲ್ಲಿ ತೋರಿಬರುವ ಅನೇಕ ಅಪರಿಹಾರ್ಯ ಪ್ರಶ್ನೆಗಳಿಗೆ ಕೊಡುವ ಲೌಕಿಕರೂಪವಾದ ಉತ್ತರದ ರೀತಿಯಿದು. ಆದಿಪುರಾಣದಲ್ಲಿ, ಜೈನಧರ್ಮಪರವಾದ ದೃಷ್ಟಿ ಸಮಸ್ಯೆಗಳು ಉಂಟಾಗಲು ಅವಕಾಶ ಕೊಡದೆ ಇರುವುದರಿಂದ (They are deleted in the order of preference) ಕಾವ್ಯ ಸರಳವಾಗುತ್ತದೆ.

★ ಕೃಷ್ಣಪರಮೇಶ್ವರಭಟ್ಟ

ಕರಸ್ಥಲದ ವೀರಣ್ಣೊಡೆಯರ ಕಂದ

ಕರಸ್ಥಲದ ವೀರಣ್ಣೊಡೆಯ 'ಕರಸ್ಥಲದ ವೀರಣ್ಣೊಡೆಯರ ಕಂದ'ದ ಕರ್ತೃ. ಈತ ವಿಜಯನಗರದ ಸಾಮ್ರಾಟ ಇಮ್ಮಡಿ ಪ್ರೌಢದೇವರಾಯ (೧೪೧೯-೧೪೪೬)ನ ಸಮಕಾಲೀನ. ಈತನ ಶಿಷ್ಯ ನೂರೊಂದು ವಿರಕ್ತರಲ್ಲಿ ಪ್ರಸಿದ್ಧನಾದ ಕರಸ್ಥಲದ ನಾಗಿದೇವ. ಈತನ ಮಗಳನ್ನು ಪ್ರೌಢದೇವರಾಯ ವರಿಸಿದ್ದಂತೆ ವೀರಶೈವ ಕೃತಿಗಳಿಂದ ತಿಳಿದುಬರುತ್ತದೆ.

ಕೃತಿಗಳು :

೧) ಕವಿಚರಿತೆಕಾರರು 'ಕರ್ಣಾಟಕ ಕವಿಚರಿತೆ'ಯ ತೃತೀಯ ಸಂಪುಟ (೧೯೨೯) ಪು. ೩೬೨ ಮತ್ತು ೪೬೦ ರಲ್ಲಿ 'ಕರಸ್ಥಲದ ವೀರಣ್ಣಗಳ ವಚನ'ಗಳ ಬಗೆಗೆ ಉಲ್ಲೇಖಿಸಿದ್ದಾರೆ. ವಚನೋಲ್ಲೇಖಗಳಿಲ್ಲ.

೨) ನಿಷ್ಕಲ ಶತಕ—೧೦೦ ವೃತ್ತಗಳಲ್ಲಿನ ಈ ಕೃತಿ ಸ್ಥಲಾನುಗುಣವಾಗಿ ವಿಭಾಗವಾಗಿದೆ. ವೀರಶೈವಧರ್ಮ ನಿರೂಪಣೆ ಶತಕದ ವಸ್ತು. ಪ್ರತಿ ವೃತ್ತವು 'ನಿಜಶಾಂತನಿಷ್ಕಳಾ' ಎಂಬ ಅಂಕಿತದಿಂದ ಮುಕ್ತಾಯವಾಗುವುದು. ಈ ಕೃತಿ ೧೯೧೧ ರಲ್ಲಿ ಶ್ರೀ ಆರ್. ತಿಪ್ಪಯ್ಯಶಾಸ್ತ್ರಿಗಳಿಂದ ಪ್ರಕಟವಾಗಿದೆ.

೩) ಲಿಂಗಸೂತ್ರದ ವಚನ— ಈ ಕೃತಿಯ ಬಗೆಗೆ 'ಆಚರಣೆ ವಚನಗಳು' ಮುನ್ನುಡಿಯಲ್ಲಿ ಅದರ ಸಂಪಾದಕರಾದ ಶ್ರೀ ಪ್ರಭುಸ್ವಾಮಿಗಳು ಉಲ್ಲೇಖಿಸಿದ್ದಾರೆ. (೧೯೫೧).

೪) ಕರಸ್ಥಲದ ವೀರಣ್ಣೊಡೆಯದೇವರವಚನ–ಇದರಲ್ಲಿ ೭೦ ಕಂದಗಳಿದ್ದು ಪ್ರತಿ ಕಂದವು 'ನಿಜಗುರುಶಾಂತಾ' ಎಂಬ ಅಂಕಿತದೊಡನೆ ಮುಗಿಯುತ್ತದೆ.

[KRI. Vol. VIII, No. 51 (ಪು. 121–23)]

೫) ಪ್ರಸ್ತುತ ಕೃತಿಯಾದ ವೀರಣ್ಣೊಡೆಯರ ಕಂದದ ವಸ್ತು ಇಷ್ಟಲಿಂಗ ಸ್ತುತಿ. ೨೫ ಕಂದಗಳಿವೆ. ಕೊನೆಯ ಕಂದದಲ್ಲಿ 'ಗುರುಶಾಂತ' ಎಂಬ ಅಂಕಿತವಿದೆ.

ಈ ಕೃತಿಯನ್ನು 'ಕ' ಮತ್ತು 'ಮ' ಸಂಕೇತಗಳನ್ನುಳ್ಳ ಓಲೆ ಪ್ರತಿಗಳ ಸಹಾಯದಿಂದ ಸಂಪಾದಿಸಿದೆ. 'ಕ' ಪ್ರತಿ—ಕನ್ನಡ ಅಧ್ಯಯನ ಕೇಂದ್ರದ (ಬೆಂಗಳೂರು) ಸಂಗ್ರಹದಲ್ಲಿದೆ. ಕೃತಿಯ ಕ್ರಮಾಂಕ ಕೆ. ೨೦೧/೨ (ಗರಿ. ೧೪೦-೧೪೧) ಕೃತಿಯಲ್ಲಿ ಶಕಟ ರೇಫದ ಬಳಕೆ ಇದ್ದರೂ ಕ್ರಮವಾಗಿಲ್ಲ. 'ಮ' ಪ್ರತಿ—ಪ್ರೊ. ಸಿ. ಮಹಾದೇವಪ್ಪನವರ ಸಂಗ್ರಹದ ಪ್ರತಿ.

ಮೇಲಿನ ಕೃತಿಗಳನ್ನು ಬಳಸಿಕೊಳ್ಳಲು ಅವಕಾಶವಿತ್ತ ಕನ್ನಡ ಅಧ್ಯಯನ ಕೇಂದ್ರದ ಅಧಿಕಾರ ವರ್ಗದವರಿಗೂ ಮತ್ತು ಪ್ರೊ. ಸಿ. ಮಹಾದೇವಪ್ಪನವರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಕರಸ್ಥಲದ ವೀರಣ್ಣೊಡೆಯರ ಕಂದ

ಉಡುಗಡಣದೊಡೆಯಂನೊಡ ಪಂ
ಗುಡು ಘುಡಿಸುವ ಜಡವನಿತೆಯುಂ ನಡುಜೆಡೆಯೊಡೆಯುಂ
ಹೆಡೆಗಳೆಡೆ ಎಡದ ಕಾಂತಿಯು
ಮೃಡನಡಿಯುಂ ಕಂಡೆನೆನ್ನ ಕರಕಮಲದೊ[೧]ಳಂ[೧] ೧

ಕುಸುಮ [೨]ಶ[೨]ರ ಶಮನ ಪುರಮಂ
ಬಿಸಿಗಣ್ಣಿಂದೆಸೆದು ಪೊಸೆದುಂ ನಗಿದ[೩]ಸ[೩]ವು [೪]ಘ[೪]ನಂ
ಎ[೫]ಸೆ[೫]ವ ಪೊಸಭಸಿತ ನೊಸಲಿನ
ಅಸವಿಷರುಹ ಪದವ ಕಂಡೆ ಕರಕಮಲದೊಳುಂ ೨

ವ[೬]ರ್ಣ[೬] ಕೀರ್ಣ ಪ್ರಪೂರ್ಣದ
[೬]ವರ್ಣ[೬]ಕ್ಕತಿಶಯಂದ ರತ್ನರರ ಪ[೭]ನ್ನ[೭]ಗನಂ
ಕ[೮]ರ್ಣ[೮]ಲಸಿ ಕರದೊಳಿರಿಸಿ[೯]ರ್ದ–[೯]
ಪ[೧೦]ರ್ಣೆ[೧೦]ಯು ನರನಡಿಯು ಕಂಡೆ ಕರಕಮಲದೊಳುಂ ೩

ಕರ್ಬಿನ ವೊರ್ಬಿನ ದುರ್ಬಿನ
ಸರ್ಬಿನ ನಿರ್ಬಿನ ಮೇಘ [ದ] ನೀಲದ ಮಿಗಿಲಂ
ಪೊರ್ಬಿನ ಕೊರ್ಬಿನ [೧೧]ರು[೧೧] ರ್ಬಿನ
[೧೨]ಶರ್ಬಿ[೧೨]ನಭವನಡಿಯು ಕಂಡೆ ಕರಕಮಲದೊಳುಂ ೪

ತಿಣ್ವೆಳಗಿನ ತಣ್ಗದಿರಿನ
ನುಣ್ವೆಳಗಿನ[೧೩] ದೂ[೧೩]ಷ್ಣಗದಿರ [೧೪]ಬಿಣ್ವೆಳಗಿ[೧೪]ನಲಂ
ಕಣ್ವೆಳಗಿನೊಳುಣ್ಮಿದ ಘನ
[೧೫]ನು[೧೫]ಣ್ವೆಳಗಿನ ಪದವ ಕಂಡೆ ಕರಕಮಲದೊಳುಂ ೫

---

೧. X (ಕ) ೨. ಸ (ಕ) ೩. ಶ (ಕ) ೪. ಗ (ಕ) ೫. ಸ (ಕ) ೬. ನ್ನF (ಕ)
೭ ನ್ನೆ (ಕ) ೮. ನ್ನಿF (ಕ) ೯ ದ (ಕ) ೧೦. ನ್ನೆF (ಕ) ೧೧. ಉ (ಕ) ೧೨ ಸಬF (ಕ)
೧೩ ನೂ (ಕ) ೧೪. ಬಣ್ವಳಗ (ಕ) ೧೫. ಪು (ಕ)

ಪೊಸ ಕುಸುಮವೆಸರದೆಸವಂ
ದೆಸೆ ದೆಸೆಯೊಳ್ಮಸುಕಿ ಪಸರಿಸುವ ಪರಿಮಳದಾ
ರಸವಾಸ ವೆಸವ ನಾಸಿಕ
ದ[1]ಸ[1]ಮುನ ಲಸತಡಿಯ ಕಂಡೆ ಕರಕಮಲದೊಳುಂ ೬

ಉದಯರವಿ ಪದುಮರಾಗದ
ವೊದವಿದ ನವ ಕಾಂತಿಯಧರ ಮೃದು ರಾಜಿಸುತಂ
ರದನವಿದಂ [2][ದೀವಿ][2] ಚೆಲುವಿನ
ಸದಮಲ ಪದಯುಗವ ಕಂಡೆ ಕರಕಮಲದೊಳುಂ ೭

ವೇದ ಮೊದಲಾದ ಶಾಸ್ತ್ರದ
ಲಾದಿಯ ಪೌರಾಣದಾಗಮ ರಹಸ್ಯಗ[3]ಳಂ[3]
ಬೋಧಿಸಿದ ನಾದ ಮೂರ್ತಿಯ
ಪಾದ ಸುಪದ್ಮವನು ಕಂಡೆ ಕರಕಮಲದೊಳುಂ ೮

ತರಳಳಿಗಳಿರುಳ ತಿರುಳಿನ
ಹುರುಳಿಂ ಮಿಗೆ ಹೊಳವ ದುರುಳ ಗರಳದ ಬಳವಂ
ಕೊರಳಿನೊಳು [೦] ಥಳಥಳಿಸುವ
ಅರಳಂಬುಜದಡಿಯ ಕಂಡೆ ಕರಕಮಲದೊಳುಂ ೯

ನಳ ನಳಿಪ ನಳಿನ ಮಿಱುಪಿನ
ಥಳಥಳಿಸಿಯೆ ಹೊಳವ ಪುಷ್ಪಮಾಲೆಗೆ ಮಿಗಿಲಂ
ತೊಳ ತೊಳಪ [ತೋ]ಳ ಚೆಲುವಿನ
ಬೆಳಬೆಳಪ ಮಳಡಿಯ ಕಂಡೆ ಕರಕಮಲದೊಳುಂ ೧೦

ಏಣ ಫಣಿ ಪಾಶಮಂಕುಶ
ಮಾಣದೆ ವರದ ಭಯ ವಜ್ರಮಗ್ನಿ ತ್ರಿಶೂಲಂ
ಕಾಣಿಸುವ ಘಂಟೆಸಹ ಸರ
ಪಾಣಿಯ ಪದಯುಗವ ಕಂಡೆ ಕರಕಮಲದೊಳುಂ ೧೧

ಸು[4]ರು[4]ಚಿರ ವರ ಲಾವಣ್ಯದ
ಸುರ ಶಿರಸರವಾಲೆ ನೆ[5]ಜ್ರಿ[5]ವಿರಾಜಿಸು[6]ತ್ತಿ[6] ಪಾರ್
ಕರಿಮುಖ ಗುಹನಾಲಂಗಿಪ
ಸುರುಚಿರ ಪದಯುಗವ ಕಂಡೆ ಕರಕಮಲದೊಳುಂ ೧೨

---

೧. ಶ (ಕ) ೨. ದಿದಿವಿ (ಕ) ದೀ ಧಿ ವಿ (ಮ) ೩. ಳುಂ (ಕ) ೪. ರ (ಕ) ೫. ರ (ಕ)
೬. ತ್ರಿ (ಕ)

ನಳನಳಿಪ ನಳಿನ ಮಿ[೧]ಱು[೧]ಪಿನ
ಥಳಥಳಿಸುವನಮಳ ಕರ್ಣಿಕೆಯ ಕಾಂತಿಯೊಲುಂ
ಸುಳಿನಾಭಿ ಮಿಳಿರ್ವ ಸೊಬಗಿನ
ಹೊಳವತಿ ಪದತಳವ ಕಂಡೆ ಕರಕಮಲದೊಳುಂ ೧೩

ಘಲಘಲನೆ ಉಲಿವ ಕಿಂಕಿಣಿ
ಸುಲಲಿತ ಸಲೆಕಾಂತಿಯೊಡನೆ ರಾಜಿಸುತಿರ್ಪಾ
ಚೆಲುವಿನ ಬಲುಂಕಟಯೊಳಗಿನ
ಪುಲಿದೊ[೨]ವ[೨]ಲವನಡಿಯ ಕಂಡೆ ಕರಕಮಲದೊಳುಂ ೧೪

ಎಳೆವಾಳೆಯ ನಳನಳಿಕೆಯ
[೩]ಥ[೩]ಳಥಳಿಸಿಯೆ ಹೊಳವನಮಳಕಾಂತಿಯ ಚೆಲುವಿಂ
ಛಳಿಗಿರಿಯ ಮಗಳು ಕು[೪]ಳಿ[೪]ತಿಹ
ಒಳುದೊಡೆಯುವನಡಿಯ ಕಂಡೆ ಕರಕಮಲದೊಳುಂ ೧೫

ಪರಕೆ ಪೆರ ಪರಮ ಪರತರ
ಪರಮಾತ್ಮನ ಪೆರಮ ತತ್ವಮಯ ಪರಶಿವನಂ
ಕಿ[೫]ಱು[೫]ದೊಡೆಯ ಕಿರಣ ರಾಜಿಪ
ಸು[೬]ರು[೬]ಚಿರ ಪದಯುಗವ ಕಂಡೆ ಕರಕಮಲದೊಳುಂ ೧೬

ಅಜ ಹರಿ ಸುರ ಮನುಮುನಿಗಳು
ಭಜಿಸುವ ಭಾವನೆಗೆ[೭][ನಿ][೭]ಲುಕದ ಜಡದ್ವಯನಂ
ಸುಜನ ಹೃ[೮]ದಂ[೮]ಬುಜ ವಾಸನ
ನಿಜ ಪದಯುಗದಡಿಯ ಕಂಡೆ ಕರಕಮಲದೊಳುಂ ೧೭

ಕೋಟಿ ರವಿ ಶಶಿ ತತ್[೯]ಪ್ರ[೯]ಭೆ
ನೀಟೆನಿಸುವಲಯ ಕೃಪೀ[೧೦]ಟ[೧೦]ಜ್ವಾಲಾಮಯು[೧೧]ಮಂ[೧೧]
ಪಾಟಸಿದ ಪಾತ್ರನಂ ಪದ
ಪೀಠವನೇಱಿ ಕಂಡೆನೆನ್ನ ಕರಕಮಲದೊಳು ೧೮

ಕಂಡು ಕಡುಪುಳಕತತಿಯೆಡೆ
ಗೊಂ[೧೨]ಡುಂ[೧೨]ಕೊಂಡಾಡಿ ತೊಂಡುಗೆಡವೃತ ಪದಮಂ
ಮಂಡಳಿಪ ಕುಸುಮ ತಂಡದ
ಯಿಂಡೆಗಳಿಂದಭವನಡಿಯನರ್ಚಿಸುತಿರ್ದೆಂ ೧೯

---

೧. ರು (ಕ) ೨. ಗ (ಕ) ೩ ತ (ಕ) ೪. ಳು (ಕ) ೫. ರು (ಕ) ೬. ರ (ಕ) ೭. ಸಿ (ಕ, ಮ)
೮. ದಯಾಂ (ಕ) ೯. ಪ್ರಭೆ (ಕ) ೧೦. ಠ (ಕ) ೧೧. ನಂ (ಕ) ೧೨. ಡಂ (ಕ)

ಅರವಿಂದ ಸುರಗಿ ಸಂಪಗೆ
ಸುರ ಹೊನ್ನೆಯುಂ ಉರಗಸಂಪೆಗೆಯುಂ ಕರವೀರಂ
ಇರವಂತಿ ವರ ಸುಗಂಧಿಯು
ಪರಿಪರಿ ದಂಡೆಗಳೊಳೊಲಿದು ಪೂಜಿಸುತಿರ್ದೆಂ ೨೦

ಮೊಲ್ಲೆ ಮುಡಿವಾಳ ಮಾಲತಿ
ಕಲ್ಹಾರದ ಕನಕಜಾಲ ಪಾಲಾಸಗಳಿಂ
ಚೆಲ್ವೆಸದಿಹ ಚೆಂಗಣಿಗಿಲ
ಝಲ್ಲರಿಯಿಂ (?) ಶಿವ[1][ನಡಿಯುಸು][1] ಪೂಜಿಸು[2]ತ್ರಿ[2]ರ್ಪೆಂ ೨೧

ಪಾದರಿಯು ಪಾರಿಜಾತದ
ಮಾಧವಿ ಮಾದ[3]ಲ[3] ಸೇವಂತಿ[4]ಯು[4] ಬಂದುಗೆ[5]ಯುಂ[5]
ಕೇದಗೆಯು ನಂದಿವರ್ತದ
[6]ಮಾಧು[6]ರದ ವಲ್ಲರಿಗಳಿಂದ ಭಜಿಸುತಿರ್ಪೆಂ ೨೨

ಮರುಗ ಮಾಂದಳಿರು ಪಚ್ಚೆಯು
ದೂರ್ವಾಂಕುರ[7]ಶೋ[7]ಕೆ ಬಿಲ್ವ ಮಂಚುತ್ತ್ರಲ[8]ಣೆಂ[8]ಲ
ಪರಿಮಳಿಪ ದವನ ಮುಡಿವಳ
ದಿರವಿಂ ಪರಶಿವನ ಪದವನೊಲಿದರ್ಚಿಸುವೆಂ ೨೩

ಕರಕೆ ಮೃದುವಾಗಿ ನಯನಕೆ
ವರ ಶೋಭನವಾದ ಪತ್ರೆ ಪುಷ್ಪಗಳಿಂದಂ
ಪರಿಮಳೋದಕದ ಗಂಧದಿ
ಕರುಣಾಕರನಮಲ ಪದವನೊಲಿದರ್ಚಿಸುವೆಂ ೨೪

ಇಂತುಮನಂತ ವಿಧದಿ ಗುರು
ಶಾಂತನ ಪದಯುಗವನಮಳ ಭಕ್ತಿಗಳಿಂದಂ
ಭ್ರಾಂತು ಭ್ರಮೆಯುಳಿದು ಯೋಜಿಸುತ
ಸಂತತ ನಿಜಸುಖ ನಿವಾಸದೊಳಗೊಪ್ಪಿರ್ದೆಂ ೨೫

[9]ಕರಸ್ಥಲದ ವೀರಣೊಡ್ಡೇವರು ನಿರೂಪಿಸಿದ[9] ಕಂದ ಸಮಾಪ್ತ.

★ ಎಸ್. ಶಿವಣ್ಣ

೧. ನ ಮೆಲ್ಲಡಿಯು (ಕ) ೨. ತ್ರಿ (ಕ) ೩. ಲ ದ (ಕ) ೪. ಯು (ಕ) ೫. ಯುಂ (ಕ)
೬. X (ಕ) ೭. ಸೋ ೮. ಣೆ (ಕ) ೯. ವೀರಣ್ಣೊಡದ್ದೇವರ (ಕ)

ಒರೆಗಲ್ಲು

ಪಂಪಭಾರತದ 'ಡಂಗ' ಪದ ಡಂಗವೆ ?

'ಡಂಗ' ಎಂಬ ಪದವು ಪಂಪಭಾರತದಲ್ಲಿ ಎರಡು ಸಲ ಬಂದಿದೆ :

೧) ಮಲೆ ತಲೆತೋಱಿದೆಂದುದನೆ ಕೊಟ್ಟು [ದು]ಡಂಗಮಡಂಗಿ ಬಂದೊಡೊ।
ಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು ಕಱುಂಬದೆ ಮಿಕ್ಕ ಶತ್ರುಮಂ ॥
ಡಲಿಕರೆ ಮಿತ್ರಮಂಡಳಿಕರಾದರನಾಕುಳಮಿಂದು ನಾಳೆ ಮಾ।
ರ್ಮಲೆದರನಿಕ್ಕೆ ನಮ್ಮ ನೆಮ್ಮಱಿದಿಕ್ಕುಗುಮೀನೆಲೆಯಿಂ ಗುಣಾರ್ಣವಂ ॥

—ವಿ.ವಿ. ೨-೯೦

ಈ ಪದ್ಯಕ್ಕೆ ಯಾವ ಪಾಠಾಂತರಗಳೂ ಇಲ್ಲ. ಇಲ್ಲಿ ನಮ್ಮ ಹೊಸ ಪಾಠಗಳು ಪಂಪನ ಪಾಠವಾಗಿರಲು ಅಸಾಧ್ಯ. ತಿದ್ದುಪಾಡಗಳೂ ಅನಾವಶ್ಯಕ-ಗ್ರಂಥಸಂಪಾದನಾ-ಶಾಸ್ತ್ರ ನಿಯಮದ ಪ್ರಕಾರ ?

೨) ಪೊಂಗುವ ಪುಲಿಪಗ ಮಲೆಗಳ।
ಡಂಗಂ[ಕ]ಣ್ಮಲೆವ ಮಂಡಲಂಗಳ್ ಪ್ರತ್ಯಂ।
ತಂಗಳೆನಲೊಳವೆ ಪಾಂಡವ।
ರಂ ಗೆಡೆಗೊಳೆ ನಿನಗೆ ಕುರುಕುಳಾಂಬರ ಭಾನೂ ॥

—ವಿ.ವಿ. ೯-೩೯

ಈ ಪದ್ಯದಲ್ಲಿ [ಕ] ಇದು ಸಾಹಿತ್ಯ ಪರಿಷತ್ತಿನ ಸಂಪಾದಕರು ಊಹಿಸಿ ಹಾಕಿದ ಪಾಠ. 'ಡಂಗ' ಪದಕ್ಕೆ ಅರ್ಥವನ್ನು ಮೊದಲು ಗುರುತಿಸಿ ಬರೆಯಲು ಪ್ರಯತ್ನಿಸಿ-ದವರು ಪ್ರೊ. ಡಿ. ಎಲ್. ನರಸಿಂಹಾಚಾರ್ಯರು. ಕಂದ ಪದ್ಯದಲ್ಲಿ ಬರುವ '[ಕ]ಣ್ಮಲೆ' ಇದು ಸರಿಯಲ್ಲ. 'ಗಳ್ಮಲೆ' ಎಂಬ 'ಗ' ಪ್ರತಿಯ ಪಾಠವನ್ನು ಸ್ವೀಕರಿಸಬೇಕೆಂದು 'ಪಂಪ ಭಾರತ ದೀಪಿಕೆ'ಗ್ರಂಥದಲ್ಲಿ ಬರೆದಿದ್ದಾರೆ :

ಈ ಪದ್ಯದಲ್ಲಿ ಸ್ವಲ್ಪ ಪಾಠಕ್ಲೇಶವಿದೆ. ಡಂಗು(ಗಳ್) ಎಂದು ತಿದ್ದಿಕೊಳ್ಳಬೇಕು.[೧] ಶ್ರೀಯುತರ ಲೇಖನ 'ಡಂಗ ಎಂದರೇನು ಎಂಬುದು ಹಲವು ವರ್ಷಗಳ ಹಿಂದೆ ಪ್ರಕಟವಾಗಿದೆ.[೨] ಅದರಲ್ಲಿನ ವಿವಿವರಣೆ– ಇತ್ಯಾದಿಗಳನ್ನು ಗಮನಿಸಿದ ಪ್ರೊ. ಎಂ.ಥಿ. ಭೋಯಿಯವರು ಶ್ರೀ ಡಿ.ಎಲ್.ಎನ್. ಅವರ ವಿವರಣೆ ಎಂದರೆ 'ಡಂಗ' ಇದರ ಮೂಲ 'ದ್ರಂಗ'--ಇದರ ಅರ್ಥ ಸುಂಕದ ಕಟ್ಟೆ ಇದು ಸರಿಯಲ್ಲ ಎಂದು ಇತ್ತೀಚೆಗೆ 'ಕರ್ನಾಟಕ ಭಾರತಿ' ಪತ್ರಿಕೆಯಲ್ಲಿ ತಮ್ಮ ವಿಚಾರವನ್ನು ಮಂಡಿಸಿದ್ದಾರೆ.[೩] ಅವಕ್ಕೆ

೧. ಪಂಪಭಾರತ ದೀಪಿಕೆ-ಪುಟ ೩೧೬'

೨. ಶಬ್ದವಿಹಾರ-ಪುಟ ೭೧. ಈ ಲೇಖನ ಅವರ ಕೃತಿ 'ಪೀಠಿಕೆಗಳು ಮತ್ತು ಲೇಖನಗಳು' ಇದರಲ್ಲಿಯೂ ಇದೆ.

೩. 'ಕರ್ನಾಟಕ ಭಾರತಿ' ಸಂಪುಟ ೪-ಸಂಚಿಕೆ ೪ ಪುಟ ೧೬೦-೧೬೩ (ಒರೆಗಲ್ಲು)

ಅವರು ಅತ್ಯುತ್ತಮ ಉದಾಹರಣೆಯನ್ನು ಪಂಪನು ಬಾಳಿ ಬದುಕಿದ ಬೋಧನದ ಹತ್ತಿರದ ೩೫ ಮೈಲುಗಳ ಅಂತರದಲ್ಲಿಯೆ ಇರುವ ನಾಂದೇಡ ಜಿಲ್ಲೆಯ ತಡಖೇಲ ಗ್ರಾಮದ ಶಾಸನದಿಂದ ಎತ್ತಿಕೊಟ್ಟಿದ್ದಾರೆ. ಆ ಪದ್ಯವೆಂದರೆ :

ಅಪಟರೆವೆಂದು ಬೇಗಿ ಬೆಸೆದಿರ್ಪ್ಪ ಸಿತಲ್ಲದೆ ಪೂಣ್ದು ಪೋಗಿ ಡಂ ।
ಗದ ಸವಲಕ್ಕವಿಂದಜ ವರಾಣದ ಲಂಜಿಯ ಚಕ್ರಗೊಟ್ಟದ ॥
ಗ್ಗದ ನೃಪರಂ ಪಳಂಚಲೆದು ವೀರಶಿಖಾಮಣಿ ನಾಗವರ್ಮನಂ
ದದೆ ನೆಲನಂ ಸಮಿಂಚ್ಚಿದವರಾರ್ಗ್ಗಳ ಚಕ್ರಿಯ ದಂಡನಾಯಕರು॥[೪] ಎಂಬುದು

ಶ್ರೀ ಘೋಯಿಯವರು ಇಲ್ಲಿ ಬರುವ ಈ 'ಡಂಗ' ಎಂಬುದು ಸ್ಥಳ-ಎಂಬ ನಿರ್ಧಾರಕ್ಕೆ ಬಂದಿದ್ದಾರೆ. "ಅದು ಊರ ಹೆಸರೊ ಪ್ರದೇಶದ ಹೆಸರೊ ಎಂಬ ಕುತೂಹಲ ವುಂಟಾಗುವದು ಸ್ವಾಭಾವಿಕ" ಎಂದಿದ್ದಾರೆ. ಶಾಸನದ ಸಂಪಾದಕರು 'ಡಂಗ' ಎಂಬುವನ್ನು ಹೊರತು ಪಡಿಸಿ ಮಿಕ್ಕಿನ ಸ್ಥಳಗಳನ್ನು ಅಥವಾ ಪ್ರದೇಶಗಳನ್ನು ಗುರುತಿಸಿದ ವಿಷಯ ವನ್ನು ಅವರು ಬರೆದಿದ್ದಾರೆ. 'ಡಂಗ' ಈ ಪ್ರದೇಶ ಎಲ್ಲಿ ಇದ್ದಿತೆಂದು ಇನ್ನೂ ಖಚಿತ ವಾಗಿಲ್ಲ-ಕಾರಣ ಅದನ್ನು ಗುರುತಿಸಲು "ಡಂಗವೆಂದರೆ ನಿಕರವಾಗಿ ಯಾವುದೆಂಬುದನ್ನು ಭಾರತೀಯ ಶಾಸನಗಳನ್ನು ವಿವರವಾಗಿ ಅಭ್ಯಸಿಸಿದ ಬುದ್ಧಿಯೊಡೆಯರು ಬೆರಳಿಟ್ಟು ಹೇಳುವರೆಂದು ಹಾರೈಸುತ್ತೇನೆ" ಎಂದಿದ್ದಾರೆ. ಶ್ರೀಯುತರು ಈ ಆಹ್ವಾನ ಎದುರಿಸಿ ನಿಲ್ಲುವ ಬುದ್ಧಿಯೊಡೆಯ ನಾನಲ್ಲ. ಪಂಪನನ್ನು ಕುರಿತು ಚಾರಿತ್ರಿಕ ವಿವೇಚನೆ ನಡೆಸಿದ ವಿದ್ಯಾರ್ಥಿಯಾದ ನಾನು ಒಂದೆರಡು ವಿಚಾರಗಳನ್ನು ಮುಂದಿಡಬಹುದು. ಅದು ಉಪ ಯುಕ್ತವೆಂದು ತೋರಿದರೆ- ಅಷ್ಟೇ ತೃಪ್ತಿ.

ತಡಖೇಲ ಶಾಸನದಲ್ಲಿ ಬಂದಿರುವ 'ಡಂಗ' ಇದು ಶ್ರೀ ಘೋಯಿ ಅವರು ಊಹಿಸುವಂತೆ ವಿಂಧ್ಯ, ಲಂಜಿ, ಚಕ್ರಗೊಟ್ಟ ಮುಂತಾಗಿ ಇರುವ ಮಧ್ಯಭಾರತದ ಪ್ರದೇಶಗಳಲ್ಲಿ ಒಂದೆಂಬುದು ಖಚಿತ. ಅದು ಎಲ್ಲಿತ್ತೆಂದು ಪ್ರಶ್ನೆ ಹಾಕಿಕೊಂಡಾಗ ನಮಗೆ ಗುರುತಿಸಲು ಕಷ್ಟವೇನಾಗುವುದಿಲ್ಲ. ಈ ಭೂಭಾಗದ ನಕಾಶೆಯನ್ನು ತೆಗೆದು ನೋಡಿದರೆ ನಮ್ಮೆದುರಿಗೆ ಆ ಪ್ರದೇಶ ನಿಲ್ಲುತ್ತದೆ. ಅದೆಂದರೆ ನಾಸಿಕ ಜಿಲ್ಲೆಯ ಪಕ್ಕ-ದಲ್ಲಿಯೇ ಇರುವ (Cont)-ಈಗಿನ ಗುಜರಾತ ಪ್ರದೇಶದ 'ಡಂಗ' ಜಿಲ್ಲೆ— ಎಲ್ಲಿ ಡಂಗ ಬೆಟ್ಟದ ಹಲವಾರು ಗಿರಿಸಾನುಗಳು— ಪರ್ವತಶಾಖೆಗಳು ಹಬ್ಬಿಕೊಂಡಿವೆ. 'ಡಂಗ' ಎಂದರೆ ಒಂದು ಪ್ರದೇಶವೆಂದು ಒಪ್ಪಿಕೊಂಡರೆ— ಅದು ಗುಜರಾತದ ಈ ಭೂಭಾಗವಾಗಿರಬಹುದು. ಆದರೆ ಇಷ್ಟು ಸುಲಭದಲ್ಲಿಯೇ ಪಂಪನ ಪದ್ಯಗಳ ಸಮಸ್ಯೆ ಗಳು ಮುಗಿಯುತ್ತವೆಯೆಂದು ನನಗೆ ತೋರುವುದಿಲ್ಲ. 'ಡಂಗಂ' ಇದನ್ನು ಶ್ರೀ ಡಿ. ಎಲ್. ಎನ್. ಹೇಳಿದ 'ದ್ರಂಗ'ದ ಜೊತೆಗೆ ಸಮೀಕರಿಸುವುದು ಸರಿಯಲ್ಲವೆಂದು

---

೪. a) ಅದೇ—ಪುಟ ೧೬೧ (b) Inscriptions from Nanded Dist. Page 8-9.

ಭೋಯಿಯವರ ಜೊತೆಗೆ ನಾವೂ ದನಿಗೂಡಿಸಬಹುದು. ತಡಕೋಲ ಶಾಸನದ ಪಟ್ಟಿಗೆ ಈ ಪ್ರದೇಶ ಆಗಬಹುದು.

ಇನ್ನು ೯ನೆಯ ಆಶ್ವಾಸದ ಪದ್ಯ ಮತ್ತು 'ಡಂಗ' ಇವುಗಳನ್ನು ಪರಿಶೀಲಿಸೋಣ. '[ತ]ಣ್ಮಲೆ' ಎಂಬುದು ಊಹಿತ ಪಾಠ. ಇಲ್ಲಿ ಇದ್ದ ಪ್ರತಿಗಳಲ್ಲಿನ ಪಾಠವೆಂದರೆ 'ಕ-ಖ'-ಇವುಗಳಲ್ಲಿ 'ತಣ್ಮಲೆ' 'ಗ' ಪ್ರತಿಯಲ್ಲಿ 'ಗಳ್ಮಲೆ' ಮತ್ತು 'ಘ' ಪ್ರತಿಯಲ್ಲಿ 'ನಣ್ಮಲೆ'. 'ಘ' ಪ್ರತಿಯ 'ನಣ್ಮಲೆ' ಕ-ಖ ಪ್ರತಿಗಳ 'ತಣ್ಮಲೆ'. ಇದಕ್ಕೆ ಹತ್ತಿರದ ಸ್ವರೂಪದ್ದಾಗಿದೆ. 'ನ'ಕಾರಕ್ಕೂ 'ತ'ಕಾರಕ್ಕೂ ೯—೧೦ನೆಯ ಶತಮಾನದಲ್ಲಿ ತುಂಬ ಹತ್ತಿರದ ಚಾಕ್ಷುಷರೂಪ ಇದ್ದಿತು.[೫] ಒಂದೊಮ್ಮೆ ತಕಾರ ಮತ್ತು ನಕಾರಗಳು ಒಂದೇ ಸ್ವರೂಪದಿಂದ ಪ್ರತಿನಿಧಿಸಲ್ಪಡುತ್ತಿದ್ದವು. ಈ ಹಿನ್ನೆಲೆಯಲ್ಲಿ 'ನಣ್ಮಲೆ' ಇದು ಮೂಲತಃ 'ತಣ್ಮಲೆ' ಎಂದಿರಬೇಕು— ಎಂದರೆ ಕ, ಖ, ಘ ಹೀಗೆ. ಮೂರು ಪ್ರತಿಗಳಿಂದ ಇಲ್ಲಿ ಇದ್ದ ಪಾಠ 'ತಣ್ಮಲೆ' ಎಂದು ಸಿದ್ಧವಾಗುತ್ತದೆ. ಆಗ ಆ ಕಂದ ಪದ್ಯ ಹೀಗಿರುತ್ತದೆ:

ಪೊಂಗುವ ಮಲೆಪರ ಮಲೆಗಳ
ಡಂಗಂ ತಣ್ಮಲೆವ ಮಂಡಲಂಗಳ್ ಪ್ರತ್ಯಂ||
ತಂಗಳೆನಲೊಳವೆ ಪಾಂಡವ
ರಂಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ||

'ತಣ್ಮಲೆ' ಇದು ಪಂಪನಿಗೆ ಪರಿಚಿತ ಪದವೆ. ವಿ. ವಿ. ದ. ೩ನೆಯ ಆಶ್ವಾಸದಲ್ಲಿನ ರಗಳೆಯಲ್ಲಿ "ಕಂಪುತಣ್ಮಲೆಯ ಪೂತ ಸುರಯಿಯಿಂ"[೬] ಎಂದಿದೆ. ಆದಿ ಪುರಾಣದಲ್ಲಿ ಮೂರು ಕಡೆಗೆ[೭] ಅದು ಬಂದಿವೆ: (೧) ... ತಣ್ಮಲೆವ ಪೊಸಗಂಪಿನೊಳ್...., (೨) ನೋಡಿ ತಮ್ಮ ಮನದೊಳವರುಪದೇಶ .... ಅಂತರಂಗದೊಳ್ ತಣ್ಮಲೆಯೆ; (೩) ಚಿತ್ತಂಕರು ತಣ್ಮಲೆಯೆ... ಈ ನಾಲ್ಕು ಪ್ರಯೋಗಗಳಲ್ಲಿ 'ತಣ್ಮಲೆ' ಎಂದರೆ 'ವ್ಯಾಪಿಸು' ಎಂದು ಪಂಪಭಾರತದ ನಿಘಂಟುಕಾರರು ಕೊಟ್ಟ ಅರ್ಥ ಸರಿಹೋಗುತ್ತದೆ.[೮]

'ಡಂಗು' ಎಂಬುದು ನಮಗೆ ಸಂಪೂರ್ಣ ಸರಿಯಲ್ಲವೆಂದು ತೋರುತ್ತದೆ. 'ಡಂಗು' ೧೩ನೆಯ ಶತಮಾನದ ವರೆಗೆ 'ಡಂಗಂ' ಎಂಬುದರಿಂದ ಭಿನ್ನವಾದ ಸ್ವರೂಪವಲ್ಲ?[೯]

೫. (a) Indian Epigraphy and South Indian Scripts p. 112 & 121
(b) ಯಾವುದೇ ಭಾರತೀಯ ಲಿಪಿಶಾಸ್ತ್ರದಲ್ಲಿ ಈ ಅಕ್ಷರಗಳನ್ನು ಪರಿಶೀಲಿಸಬಹುದು.

೬. ವಿ. ವಿ. 3 ನೆ ಆಶ್ವಾಸ ಪದ್ಯ ೨೨.

೭. ಆದಿಪುರಾಣ (ಸಂ. ಎಸ್. ಜಿ. ನರಸಿಂಹಾಚಾರ್) ಆ-೧-೬೮: ೫-೬೫ ವ; ೬-೨೬.

೮. ಪಂಪಭಾರತ ನಿಘಂಟು—ಪುಟ ೪೫೦ (ಕ.ಸಾ.ಪ-ಪ.ಭಾ.)

೯. ೧೩-೧೪ನೆಯ ಶತಮಾನದವರೆಗೆ ದ-ಡಗಳ ಚಾಕ್ಷುಷ ರೂಪದಲ್ಲಿ ವ್ಯತ್ಯಾಸವಿಲ್ಲ. ಯಾವುದಾದರೂ ಲಿಪಿಶಾಸ್ತ್ರ ಗ್ರಂಥವನ್ನು ನೋಡಬಹುದು.

'ದಂಗಂ' ಬರೆದು 'ಡಂಗಂ' ಎಂದು ಓದಬಹುದು. ಇನ್ನು ದ>ಡ ಸ್ವರೂಪ ಇತ್ತೀಚಿಗೆ ಎಂದರೆ ಪ್ರತಿಯನ್ನು ಓದುವ ಓದುಗರು ಮಾಡಿರುವ ತಪ್ಪಾಗಿರಬಹುದು. 'ಡಂಗ' ಇದು 'ದಂಗ'ದಿಂದ ಆದ ಲಿಪಿ ವ್ಯತ್ಯಾಸ – ಅಷ್ಟೆ. 'ದಂಗಂ' ಎಂದರೇನು ಎಂಬ ಪ್ರಶ್ನೆ ಉದ್ಭವಿಸಿ ನಿಲ್ಲುತ್ತದೆ. ಪಂಪನ ಕಾಲಕ್ಕೆ 'ಡಂಗ' 'ದಂಗ'ಗಳಿಗೆ ಭಿನ್ನ ಸ್ವರೂಪ ಇದ್ದಿಲ್ಲವೆಂದು ಲಿಪಿಶಾಸ್ತ್ರದಿಂದ ನಿರ್ಧಾರವಾಗುವದರಿಂದ ದಂಗವೇ ಮೂಲ ರೂಪವೆಂಬುದು ನಿಶ್ಚಿತವಾಗುತ್ತದೆ. 'ದಂಗ' ಇದು 'ಧಂಗ' ಶಬ್ದದ ತದ್ಭವರೂಪವಷ್ಟೆ! ಧ>ದ ಆಗುತ್ತದೆ. (ಔಷಧ>ಔಸದಂ; ಶುದ್ಧಿ>ಸುದ್ದಿ)[೧೦] ಆಗ ಈ ಕಂದ ಪದ್ಯದ (ಪಂಪನು ಬರೆದ) ರೂಪ ಹೀಗಿರುತ್ತದೆ:

> ಪೊಂಗುವ ಮಲೆಪರ ಮಲೆಗಳ್[೧೧]
> ದಂಗಂ ತಣ್ಮದ ಮಂಡಲಂಗಳ್ ಪ್ರತ್ಯಂ
> ತಂಗಳೆನಲೊಳವೆ ಪಾಂಡವ
> ರಂಗೆಡೆಗೊಳೆ ನಿನಗೆ ಕುರುಕುಳಾಂಬರ ಭಾನೂ ॥

ಇಲ್ಲಿನ ದಂಗವು ಧಂಗದ ಅಪಭ್ರಂಶರೂಪ. ಧಂಗನೆಂದರೆ ಸುಮಾರು ಕ್ರಿ. ಶ. ೯೦೨ ಅಥವಾ ೯೦೩ ರಲ್ಲಿ ಹುಟ್ಟಿ ನೂರು ವಸಂತಗಳನ್ನು ಕಂಡು ಸು.ಕ್ರಿ.ಶ. ೧೦೦೨-೧೦೦೯ರ ಮಧ್ಯೆ ಜಲಸಮಾಧಿ ಮರಣವನ್ನಪ್ಪಿದ ೨ನೆಯ ಅರಿಕೇಸರಿಯ ಸಮಕಾಲೀನನೇ ಆದ ಛಂದೆಲ್ಲರ ಧಂಗ. ಛಂದೆಲ್ಲರ ಮತ್ತು ರಾಷ್ಟ್ರಕೂಟರ ಮಧ್ಯೆ ಕಾಳಗಗಳು ಜರುಗಿ ೩ನೆಯ ಕೃಷ್ಣನ ಕಾಲಕ್ಕೆ ಛಂದೆಲ್ಲರು ತುಂಬ ಹಿರಿಮೆಯನ್ನು ಅದೂ ಧಂಗನ ಕಾಲಕ್ಕೇ ಪ್ರಬಲರಾಗಿ ಪ್ರಸಿದ್ಧಿಯನ್ನು ಪಡೆದುದು ಇತಿಹಾಸದ ಅಭ್ಯಾಸಿಗಳಿಗೆ ಹೊಸ ವಿಷಯವಲ್ಲ. ರಾಷ್ಟ್ರಕೂಟರ ವಿರುದ್ಧ ಛಂದೆಲ್ಲರು ಪ್ರತಿಹಾರರ ಜೊತೆಗೆ ಬೆರೆತು ಯುದ್ಧಮಾಡಿರಬೇಕು. ರಾಷ್ಟ್ರಕೂಟರ ನಾಡಿನ ನೆರೆಯಲ್ಲಿಯೇ ಇದ್ದ ಛಂದೆಲ್ಲರ ದಂಗನು ರಾಷ್ಟ್ರಕೂಟರ ವಿರುದ್ಧ ನಿಂತಿದ್ದುದು ಚಾರಿತ್ರಿಕ ಸತ್ಯದ ಸಂಗತಿಯಾಗಿದೆ, ಸು. ಕ್ರಿ. ಶ. ೯೪೧-೪೨ ರಲ್ಲಿ ೨ ನೆಯ ಅರಿಕೇಸರಿಯ ತುಲಾಪುರುಷನಾದ ಜಗತ್ಪ್ರಕಟ ಪ್ಲವ ಸಂವತ್ಸರದಲ್ಲಿ ಸಂಪೂರ್ಣವಾಗಿರಬಹುದಾದ ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಆದೇ ಇನ್ನೂ ಸಂಪೂರ್ಣ ಶಕ್ತನಾಗದ ದಂಗನ ಪ್ರಸ್ತಾಪವಿದೆಯೆಂದು ತೋರುತ್ತದೆ. ದಂಗನು ಸ್ವತಂತ್ರನಾದುದು ಕ್ರಿ. ಶ. ೯೫೪-೫೫ (ವಿ. ಸಂ. ೧೦೧೧)ರಲ್ಲಿ ಆತನ ಖಜರಾಹು ಶಾಸನದಿಂದ[೧೨] ಕಾಲಂಜರ ಕೋಟೆಗಾಗಿ ರಾಷ್ಟ್ರಕೂಟರು. ಈ ವಿಷಯ

---

೧೦. ಶಬ್ದಮಣಿದರ್ಪಣಂ (ಸಂ. ಪ್ರೊ| ಡಿ. ಎಲ್. ಎನ್.) ಪುಟ ೩೦೩ (ಮೂರನೆಯ ಮುದ್ರಣ).

೧೧. 'ಳ್' ಪಾಠಾಂತರದಲ್ಲಿ ಸಣ್ಣ ಅಕ್ಷರದಿಂದ ವ್ಯಕ್ತವಾಗುತ್ತಿತ್ತೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಸಣ್ಣ ಅಕ್ಷರವನ್ನೆ ಮುಂದಿನ ಲಿಪಿಕಾರರು ಸಂಪೂರ್ಣ ಅಕ್ಷರದ ಹಾಗೆ ಸ್ವೀಕರಿಸಿದ್ದಾರೆಂದು ನಮಗೆ ತೋರುತ್ತದೆ.

೧೨. a) ಖಜರಾಹು ಶಾಸನ —Ep. Ind. vol I. 8. 126–34
b) Dynastic History of Northern India - Dr. H. C. Ray p. 678

ಸ್ಪಷ್ಟ ಪ್ರತಿಹಾರರು, ಕಳಚೂರಿಯರು (ಚೇದಿ) ಮತ್ತು ಛಂದೆಲ್ಲರು ಒಬ್ಬರಾದ ಮೇಲೆ ಒಬ್ಬರು ಆಗಾಗ ಯುದ್ಧ ಮಾಡಿದುದುಂಟು, ದಂಗನ ತಂದೆ ಯಶೋವರ್ಮನು ಕಾಲಂ-ಜರವನ್ನು ಗೆದ್ದಿದ್ದನು.[೧೩] ರಾಷ್ಟ್ರಕೂಟ ೩ ನೆಯ ಕೃಷ್ಣನ ಜುರಾಶಾಸನ ಇತ್ಯಾದಿಗಳ ಆಧಾರದಿಂದ ಆತನು ಕ್ರಿ. ಶ. ೯೪೦ ಕ್ಕೂ ಮುಂಚಿತವೆ ಒಮ್ಮೆ ಉತ್ತರದ ದಿಗ್ವಿಜಯವನ್ನು ಮಾಡಿದ್ದನೆಂದು ಹೇಳಬಹುದು.[೧೪] ನಾಲ್ಕನೆಯ ಗೋವಿಂದನ ಕಾಲಕ್ಕೇನೆ ಕಾಲಂಜರವು ಛಂದೆಲ್ಲ ದಂಗನ ತಂದೆ ಯಶೋವರ್ಮನಿಂದ ತೆಗೆದುಕೊಳ್ಳಲಾಯಿತಷ್ಟೇ; ಅದನ್ನು ರಾಷ್ಟ್ರಕೂಟರು ಕಸಿದುಕೊಳ್ಳಬೇಕಾದರೆ ಆ ದಂಗ ಮತ್ತು ಆತನ ತಂದೆ ಇವರ ಜೊತೆಗೆ ಹೋರಾಡಿರಬೇಕು. ' ವಿಕ್ರಮಾರ್ಜುನ ವಿಜಯ ಕೃತಿಯ ನಾಯಕನಾದ ಅರಿ-ಕೇಸರಿಯ ಸಹಾಯವಿಲ್ಲದೆ ರಾಷ್ಟ್ರಕೂಟರಿಗೆ ನೆಲೆಯೂರಿ ನಿಲ್ಲಲು ಕಠಿಣಪ್ರಸಂಗವಿತ್ತು. ಆತನನ್ನು ಆಶ್ರಯಿಸಿದರೆ ಮಾತ್ರ ರಾಷ್ಟ್ರಕೂಟರಿಗೆ ಮಲೆಗಳಲ್ಲಿ ವಾಸಿಸುವ ಸಣ್ಣ ಪುಟ್ಟ ರಾಜರು–ಪ್ರಬಲನಾದ ದಂಗನು ವ್ಯಾಪಿಸಿಕೊಂಡ ಮಂಡಲಗಳು (ಚೇದಿ ಇತ್ಯಾದಿಗಳು) ಇವು ಪ್ರತ್ಯಂತಂಗಳ್ ಎಂದರೆ ರಾಷ್ಟ್ರಕೂಟರ ಎಲ್ಲೆಯಿಂದ ಬಾಹಿರ ಎಂದು ಹೇಳಿಸಿಕೊಳ್ಳಲು ಸಾಧ್ಯವಿದ್ದಿಲ್ಲ. ಅರಿಕೇಸರಿ ಮೊದಲಾದ (ಪಾಂಡ)ವರನ್ನು ಸ್ನೇಹಿತರನ್ನಾಗಿ ಮಾಡಿಕೊಂಡರೆ ರಾಷ್ಟ್ರಕೂಟ ೪ ನೆಯ ಗೋವಿಂದ(ದುರ್ಯೋಧನ)ನಿಗೆ ಎಲ್ಲವೂ ನಿರಾಕುಳ–ಯಾರೂ ಔದ್ಧತ್ಯದಿಂದ ವರ್ತಿಸಲು ಸಾಧ್ಯವಿಲ್ಲ–ಇದು ಪದ್ಯದ ಲೌಕಿಕ ಚರಿತ್ರೆಯ ಆಶಯ. ಇನ್ನು ಈ ದಂಗನನ್ನೆ ೨ ನೆಯ ಆಶ್ವಾಸದ ಪದ್ಯ೯೦ ಕೂಡ ಸೂಚಿಸುತ್ತದೆ. ಪ್ರಬಲನಾದ ದಂಗನೆ ಅಡಗಿಬಂದರೆ (ಅಧೀನನಾಗಿ ಬಂದರೆ) ಚಿಕ್ಕ ಚಿಕ್ಕ ಪುಟ್ಟ ಮಾಂಡಲಿಕರು ಮಲೆತು ನಿಲ್ಲದೆ ಶಾಂತರಾಗಿ ರಾಜ್ಯ ಸಸ್ಯ ಸಮೃದ್ಧಿಯಿಂದ (ಒಕ್ಕಲತನದಿಂದ) ಶೋಭಾಯಮಾನವಾಗುತ್ತದೆ. ಶತ್ರುಗಳು ಅಡ್ಡಗಟ್ಟಿ ನಿಲ್ಲಲಾರರು. ಅವರೆಲ್ಲ ಸ್ನೇಹಿತರಾಗುತ್ತಾರೆ. ಆಗ ಇಡೀ ರಾಜ್ಯವೆಲ್ಲ ಅನಾಕುಲದಿಂದ ತುಂಬುತ್ತದೆ (ಕಷ್ಟವಿಲ್ಲದ ಪ್ರದೇಶವಾಗುತ್ತದೆ). ಪ್ರಬಲನಾದ ಅರಿಕೇಸರಿ (ಅರ್ಜುನ) ಎಂಬ ಗುಣಾರ್ಣವ ಎಲ್ಲ ಎದುರಿಸುವವರನ್ನು ಎಳೆದು ಕೊಂದುಹಾಕಿ ರಾಷ್ಟ್ರಕೂಟರನ್ನು (ಕೌರವ)ರು ಅವರ ನೆಲೆಯಿಂದ ಹೊರದೂಡುತ್ತಾನೆ ಎಂಬುದು ಕವಿತೆಯ ಆಶಯ. ಈ ಎರಡು ಪದ್ಯಗಳಿಂದ ೩ ನೆಯ ಕೃಷ್ಣನು ಪ್ರಬಲನಾಗುವದಕ್ಕಿಂತ ಮುಂಚೆ ೨ ನೆಯ ಅರಿಕೇಸರಿಯು ಅತ್ಯಂತ ಪ್ರಬಲ (ಮಾಂಡಲಿಕ) ಸಾಮಂತನಾಗಿದ್ದನೆಂದು ವ್ಯಕ್ತವಾಗುತ್ತದೆ ಮತ್ತು ಆಗಿನ ಕಾಲಕ್ಕೆ ಛಂದೆಲ್ಲ ದಂಗನೂ ಸಮರ್ಥ ವ್ಯಕ್ತಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಪಂಪಭಾರತದಲ್ಲಿ ಬಂದಿರುವ ಪದ ದ್ರಂಗದಿಂದ ಹುಟ್ಟಿದ ಡಂಗವೂ ಅಲ್ಲ; ಗುಜರಾಥ ಪ್ರದೇಶದ ಡಂಗ ಜಿಲ್ಲೆಯೂ ಅಲ್ಲ. ಅದು

---

೧೩. Ibid p. 675

೧೪. a) Dr. P. B. Desai 'Karnatak Through the Ages' –page 239.

b) ಆರ್. ಎಸ್. ಪಂಚಮುಖಿ 'ಕರ್ನಾಟ ಇತಿಹಾಸ' ಪುಟ ೩೫೫

ಜೇಜಭುಕ್ತಿಯನ್ನು ಆಳುತ್ತಿದ್ದ ಚಂಡೇಲ್ಲ ರಾಜ ಧಂಗ ಹೆಸರಿನ ಅಪಭ್ರಂಶಿತ ರೂಪ 'ದಂಗ'.[೧೪] ಇದು ಮುಂದೆ ಅಕ್ಷರದ ರೂಪಸಾದೃಶ್ಯ ಕಾರಣವಾಗಿ, ಲಿಪಿಕಾರರಿಂದ 'ಡಂಗ' ಎಂದು ಲಿಪಿಸಲ್ಪಟ್ಟಿರಬೇಕು.

★ ಸೀತಾರಾಮ ಜಾಗಿರ್‌ದಾರ್

---

೧೪. ಈ ಲೇಖನವನ್ನು ಬರೆಯುವಲ್ಲಿ ಗುರುಗಳಾದ ಡಾ. ಆರ್. ಸಿ. ಹಿರೇಮಠ ಮತ್ತು ನನ್ನ ಅಭ್ಯಾಸಕ್ಕೆ ಇಸಿತು ಅಮೃತಧಾರೆ ಎರೆದ ಡಾ. ಹಾ. ಮಾ. ನಾಯಕ ಇವರುಗಳಿಗೂ ತಮ್ಮ ಲೇಖನದ ಪಡಿಯಚ್ಚು ಪ್ರತಿಯೊಂದನ್ನು (off print) ಕೇಳಿದ ಕೂಡಲೆ ಆತ್ಮೀಯತೆಯಿಂದ ಕಳಿಸಿದ ಪ್ರೊ. ಎಂ. ಬಿ. ಘೋಯಿ ಅವರಿಗೂ ಋಣಿಯಾಗಿರುವೆ.

ಕನ್ನಡ ಜನಪದಸಾಹಿತ್ಯಾಧ್ಯಯನದ ಆದ್ಯರು

ಕನ್ನಡ ಜನಪದಸಾಹಿತ್ಯದ ಬಗೆಗೆ ವಿಶೇಷ ಆಸಕ್ತಿವಹಿಸುತ್ತಿರುವ ಅನೇಕ ವಿದ್ವಾಂಸರು 'ಜನಪದ ಸಾಹಿತ್ಯಾಧ್ಯಯನದ ಇತಿಹಾಸ'ವನ್ನು ಕುರಿತು ಲೇಖನಗಳನ್ನು ಬರೆದಿರುವರು. ಇವರ ಪ್ರಕಾರ ಜಾನ್ ಲೇಡನ್, ಅಬೆದುಬೋಯಿಸ್, ಮೊಗ್ಲಿಂಗ್, ಚಾರ್ಲ್ಸ್ ಇಂಗೋವರ್, ಫ್ಲೀಟ್, ಕಿಟೆಲ್‌ರೆಂಬ ಪಶ್ಚಿಮ ಪಂಡಿತರನ್ನು ಬಿಟ್ಟರೆ ಕನ್ನಡಿಗರಲ್ಲಿ ಆದ್ಯರು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್.

"ಸುಮಾರು ೧೯೧೯ರ ವೇಳೆಗೆ ಬರೆದಿರಬಹುದಾದ ಮಾಸ್ತಿಯವರ ಅಪೂರ್ವ ಲೇಖನ 'ಕನ್ನಡ ಲಾವಣಿ ಸಾಹಿತ್ಯ' ಜನಪದ ಸಾಹಿತ್ಯ ಲೋಕದ ವಿಸ್ಮಯಕಾರಿ ವ್ಯಕ್ತಿಗಳನ್ನೂ ಕಥೆಯ ತುಣುಕುಗಳನ್ನೂ ತೋರಿ ಅತ್ತ ಎಲ್ಲರ ಆಸಕ್ತಿಯನ್ನೂ ಸೆಳೆಯಿತು" ಎಂದು ಪ್ರೊ. ಜೀ. ಶಂ. ಪರಮಶಿವಯ್ಯ, "ಈ ಶತಮಾನದ ಆದ್ಯ ಜಾನಪದ ಸಂಗ್ರಾಹಕರಲ್ಲಿ ಶ್ರೀ ಮಾಸ್ತಿಯವರನ್ನು ಮೊದಲು ಹೆಸರಿಸಬೇಕಾಗುತ್ತದೆ....(ಇವರಿಂದ) 'ಕನ್ನಡ ನಾಡಿನ ಲಾವಣಿ ಸಾಂಗತ್ಯ' ಎಂಬ ಒಂದು ವಿಸ್ತಾರವಾದ ಲೇಖನ ೧೯೧೯ ರಲ್ಲಿ ಪ್ರಕಟವಾಯಿತು" ಎಂದು ಶ್ರೀ ಡಿ. ಕೆ. ರಾಜೇಂದ್ರ ಹೇಳುತ್ತಾರೆ. ಇವರಲ್ಲಿ ಡಿ. ಕೆ. ರಾಜೇಂದ್ರ ಅವರು ಮಾಸ್ತಿಯವರ ಲೇಖನದ ಆಕರ ಸೂಚಿಸಿಲ್ಲ. ಪ್ರೊ. ಜೀ. ಶಂ. ಪರಮಶಿವಯ್ಯನವರು ಮಾತ್ರ ೧೯೫೬ರಲ್ಲಿ ಪ್ರಕಟವಾದ ಶ್ರೀ ಮಾಸ್ತಿಯವರ 'ವಿಮರ್ಶೆ–ಭಾಗ ೧' ಗ್ರಂಥದ ಆಕರ ಹೇಳುತ್ತಾರೆ. ಈ ಗ್ರಂಥದ ಮುನ್ನುಡಿಯಲ್ಲಿ ತಿಳಿಸಿದಂತೆ ಲಾವಣಿಯನ್ನು ಕುರಿತ ಈ ಲೇಖನ ೧೯೨೫ ಜನವರಿಯ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (೯-೪) ಮೊಟ್ಟಮೊದಲು ಅಚ್ಚಾಗಿದೆ. ಹೀಗಿರುವಾಗ "೧೯೧೯ ರಲ್ಲಿ ಪ್ರಕಟ"ವಾದ ಎಂದು "೧೯೧೯ ರ ವೇಳೆಗೆ ಬರೆದಿರಬಹುದಾದ" ಎಂದು ಈ ಉಭಯ ವಿದ್ವಾಂಸರ ಏಕೆ ಹೇಳಿದರೋ ಅರ್ಥವಾಗುವುದಿಲ್ಲ. ಅದಕ್ಕಾಗಿ ಮಾಸ್ತಿಯವರ ಈ ಲೇಖನ ೧೯೨೫ ಜನವರಿಯಲ್ಲಿ ಪ್ರಕಟವಾಯಿತೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಈ ಲೇಖನಕ್ಕೆ ಒಂದು ವರ್ಷ ಮೊದಲು ಅಂದರೆ ೧೯೨೪ ಜನವರಿಯ ಪರಿಷತ್ ಪತ್ರಿಕೆಯಲ್ಲಿ (೮–೯) 'ಹಳ್ಳಿಯ ಹಾಡುಗಳು' ಎಂಬ ಮಧುರಚೆನ್ನರ ಒಂದು ಲೇಖನ ಪ್ರಕಟವಾಗಿದೆ. ಇದು ಮೂಲತಃ ಬಿಜಾಪುರದಲ್ಲಿ ಜರುಗಿದ ೯ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಂಗವಾಗಿ ೧೯೨೩ ಸಪ್ಟೆಂಬರ ೨೭ ನೆಯ ಗುರುವಾರ ಮಧ್ಯಾಹ್ನದ ಅಧಿವೇಶನದಲ್ಲಿ ಓದಿದ ಲೇಖನ.[1] ಈ ಲೇಖನದಲ್ಲಿ "ಈ ಮೊದಲು ಜರುಗಿಹೋದ

---

೧. ಕ.ಸಾ.ಪ. ೬–೨ : (೧೯೨೧ ಜುಲೈ)ದಲ್ಲಿ 'ಕನ್ನಡ ಗಾದೆಗಳ ಜೀರ್ಣೋದ್ಧಾರ' ಎಂಬ ಲೇಖನವನ್ನು ಶ್ರೀ ಎಚ್. ಕೆ. ಮಲ್ಲಪ್ಪ ಅವರು ಬರೆದು ಅಲ್ಲಿ "ಸಾವಿರಾರು ಕನ್ನಡ

[ಮುಂದಿನ ಪುಟಕ್ಕೆ]

ಸಮ್ಮೇಳನದಲ್ಲಿ ಲಾವಣಿಗಳನ್ನು ಕುರಿತು ರಾವ್‌ಬಹಾದ್ದೂರ್ ಶ್ರೀಮಾನ್ ಹನುಮಂತ ಗೌಡರೇ ಮೊದಲಾದವರು ಹೇಳತಕ್ಕುದನ್ನು ಹೇಳಿಬಿಟ್ಟಿದ್ದಾರೆ." ಎಂಬ ವಾಕ್ಯವಿದೆ. ಶ್ರೀ ಹನುಮಂತಗೌಡರು ೧೯೧೯ ರಂದು ಹಾಸನದಲ್ಲಿ ೫ ನೆಯ ಸಾಹಿತ್ಯ ಸಮ್ಮೇಳನ ದಲ್ಲಿ "ಲಾವಣಿಗಳು" ಎಂಬ ವಿಷಯವನ್ನು ಕುರಿತು ಒಂದು ಲೇಖನ ಓದಿದ್ದಾರೆ. ಕ.ಸಾ.ಪ. ೪–೨ ಮತ್ತು ೩ (೧೯೧೯, ಅಕ್ಟೋಬರ)ದಲ್ಲಿ ಅಚ್ಚಾದ ಅದರಲ್ಲಿ ಅರ್ಧ ಪುಟದಷ್ಟು ಲಾವಣಿ ಅಭ್ಯಾಸದ ಮಹತ್ವವನ್ನು ಹೇಳಿ, ಕೆಳಗೆ "ಹೈದರಾಬಾದಿನ ಲಾವಣಿ ಪದ" ಎಂಬ ೪ ಪುಟಗಳ ಲಾವಣಿ ಕೊಟ್ಟಿದ್ದಾರೆ. ಇಲ್ಲಿ Country Ballads ಪದಕ್ಕೆ ಸಮಾನವಾಗಿ (ಹಳ್ಳಿಯವರ ಪದಗಳು) "ಲಾವಣಿ" ಎಂಬ ಪದವನ್ನು ಬಳಸಿದ್ದಾರೆ. ಈ ದೃಷ್ಟಿಯಿಂದ ಇನ್ನೂ ಹಿಂದೆ ನೋಡಿದರೆ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ೩ನೆಯ ಸಂಪುಟ, ೪ನೇಯ ಸಂಚಿಕೆಯ (೧೯೧೯ ಜನವರಿ) ಕೊನೆಗೆ "ಲಾವಣಿಗಳು" ಎಂಬ ತಲೆಬರಹದಲ್ಲಿ ಸಂಪಾದಕರು ಜನತೆ ಲಾವಣಿಗಳನ್ನು ಕಳಿಸಿಕೊಟ್ಟರೆ ಪ್ರಕಟಿಸುವುದಾಗಿ ಅರ್ಧಪುಟದಷ್ಟು ಬಿನ್ನಹ ಬರೆದು, ತಮಗೆ ಬಂದ ಹಲವು ಲಾವಣಿಗಳಲ್ಲಿ "ನಂಜನಗೂಡು ಲಾವಣಿ"ಯನ್ನು ಪ್ರಕಟಿಸಿರುವುದು ಗಮನಕ್ಕೆ ಬರುತ್ತದೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಪ್ರಥಮ ವರ್ಷದ ೩ನೆಯ ಸಭೆ (೨೦ ನವ್ಹೆಂಬರ್, ೧೯೧೫)ಯು ಕರ್ನಾಟಕ ದೇಶಕ್ಕೆ ಸಂಬಂಧಪಟ್ಟ ಚರಿತ್ರಾಂಶಗಳನ್ನು ಒಳಗೊಂಡಿರುವ ಲಾವಣಿಗಳನ್ನೂ ಹಾಡುಗಳನ್ನೂ ಸಂಗ್ರಹಿಸತಕ್ಕದ್ದು ಎಂದು ಆದ ನಿರ್ಣಯಕ್ಕೆ ಅನುಸಾರವಾಗಿ ಕಾರ್ಯನಿರ್ವಾಹಕ ಮಂಡಲಿಯ ಮೆಂಬರುಗಳನ್ನೂ ಇನ್ನೂ ಕೆಲವು ದೊಡ್ಡ ಮನುಷ್ಯರುಗಳನ್ನೂ ಈ ವಿಷಯದಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಂಡುದಾಯಿತು. ಆದರೆ ಈ ವಿಷಯದಲ್ಲಿ ಅಷ್ಟು ವಿಶೇಷವಾದ ಫಲವು ಲಭಿಸಲಿಲ್ಲವೆಂದು ತಮಗೆ ತಿಳಿಸಬೇಕಾಗಿದೆ. ಕಾರ್ಯನಿರ್ವಾಹಕ ಮಂಡಲಿಯ ಮೆಂಬರುಗಳಾದ ಬಿಜಾಪುರದ ಮ|| ರಾ|| ಪಿ. ಜಿ. ಹಳಕಟ್ಟಿ ಬಿ. ಎ., ಎಲ್.ಎಲ್.ಬಿ.ಯವರು ತಮ್ಮ ಪ್ರಾಂತ್ಯದಲ್ಲಿ ದೊರೆತ ಒಂದು ಲಾವಣಿಯನ್ನು ಬರೆದು ಕಳಿಸಿರುವರು. ಮೈಸೂರಿನಿಂದ ಕವಿತಿಲಕ ಅಯ್ಯಾಶಾಸ್ತ್ರಿಗಳು ಮತ್ತೊಂದು ಲಾವಣಿಯ ಪ್ರತಿಯನ್ನು ಕಳಿಸಿಕೊಟ್ಟಿರುವರು. ಇತರ ಕರ್ನಾಟಕ ಭಾಷಾಭಿಮಾನಿಗಳೂ ಕೆಲವು ಕಾಲದಲ್ಲಿಯೇ ನಶಿಸಿ ಹೋಗಬಹುದಾದ ಇಂಥಾ ಲಾವಣಿಗಳ ಪ್ರತಿಗಳನ್ನು ಸಂಪಾದಿಸಿ ಇಲ್ಲಿಗೆ ಕಳುಹಿಸಿಕೊಡುವುದರ ಮೂಲಕ ಕರ್ನಾಟಕ ರಾಜ್ಯದ ಸಂಪೂರ್ಣವಾದ ಚರಿತ್ರೆಯೊಂದನ್ನು ಸಿದ್ಧಪಡಿಸುವ ಮಹತ್ಪ್ರಯತ್ನದಲ್ಲಿ ಸಹಾಯ ಮಾಡಬೇಕೆಂದು ಪ್ರಾರ್ಥನೆ"

ಗಾದೆಗಳನ್ನು....ಪುಸ್ತಕ ರೂಪದಲ್ಲಿ ಪ್ರಚುರ ಪಡಿಸಿರುವ 'ಮಂಗಳೂರು ಬಾಸೆಲ್ ಮಿಷನ್ ಬುಕ್ ಡಿಪೋ'ದವರಿಗೂ ಮತ್ತು ಬೆಳಗಾಂ ಸರದಾರ್ ಹೈಸ್ಕೂಲಿನ ಉಪಾಧ್ಯಾಯರಾಗಿದ್ದ ಮ|| ಹನುಮಂತ ಗೋವಿಂದ ಜೋಷಿ ಎಂಬವರಿಗೂ" ಕೃತಜ್ಞತೆ ಸೂಚಿಸಿದ್ದಾರೆ. ಇದೊಂದು ಜಾನಪದ ಅಭ್ಯಾಸದ ಹೊಸದರಲ್ಲಿ ಬಂದ ಅಪೂರ್ವ ಲೇಖನ.

ಎಂಬ ಗೊತ್ತುವಳಿ ಸ್ವೀಕರಿಸಿದುದನ್ನು ಗಮನಿಸಬೇಕು. ಈ ಗೊತ್ತುವಳಿ ಈ ಹಿಂದಣ ಒಂದನೆಯ ಅಥವಾ ಎರಡನೆಯ ಕಾರ್ಯನಿರ್ವಾಹಕ ಮಂಡಲಿಯು ಸಭೆ ಸ್ವೀಕರಿಸಿದ ಗೊತ್ತುವಳಿಯು ಕಡೆಗೆ ಬೆರಳು ನೀಡುತ್ತದೆ. ಆ ಗೊತ್ತುವಳಿಯನ್ನು ಹುಡುಕಬೇಕು.

ಇದರಿಂದ ಜನಪದ ಸಾಹಿತ್ಯ ಸಂಗ್ರಹದ ಅಭಿಲಾಷೆ ೧೯೧೫ ರಷ್ಟು ಪೂರ್ವ-ದಲ್ಲಿಯೇ ವಿದ್ವಾಂಸರಲ್ಲಿ ಅಂಕುರಿಸಿದ್ದಿತೆಂದು ಸ್ಪಷ್ಟವಾಗುತ್ತದೆ. ಇನ್ನೂ ಹಿಂದೆ ಹೋದರೆ ೧೮೭೫ ರಲ್ಲಿ ಪ್ರಕಟವಾದ ನಾಗವರ್ಮನ ಛಂದಸ್ಸಿನ ಉಪೋದ್ಘಾತದಲ್ಲಿ ಕಿಟೆಲ್‌ರು– "Publications of Dharvad" ಎಂಬ ಶೀರ್ಷಿಕೆಯ ಕೆಳಗೆ ಕಾಮ ದಹನ ರತಿಪ್ರಲಾಪದ ದುಂದುಮೆ, ಕೃಷ್ಣಪಾರಿಜಾತ (ಅಪರಾಳ ತಮ್ಮಣ, ರಾಯಚೂರು ಜಿಲ್ಲೆ). ಕೃಷ್ಣಲೀಲಾದುಂದುಮೆ (ಕುಂದಗೋಳ ಶ್ರೀಗುರು ?). ಕೃಷ್ಣಾರ್ಜುನ ದುಂದುಮೆ (ಕಲಿ ಬಸವಲಿಂಗಯ್ಯ), ದ್ರೌಪದಿ ಮಾನಹರಣ ದುಂದುಮೆ (ಚೆನ್ನ ಸಿದ್ಧೇಶನ ಶಿಷ್ಯ, ಹುಬ್ಬಳ್ಳಿ), ಧಾರವಾಡದಕೇ(ಕೀ ?)ಲರ ದುಂದುಮೆ. ವೀರಸಂಗಯ್ಯನ ದುಂದುಮೆ (ಚೆನ್ನಬಸವ ಸಾಲಿ, ಧಾರವಾಡ), ಶಿವಪಾರಿಜಾತ, ಹುಬ್ಬಳ್ಳಿ ವರ್ಣನ ದುಂದುಮೆ, ಹುಬ್ಬಳ್ಳಿ ಮರ್ಕಟ ದುಂದುಮೆ (ಚೆನ್ನ ವೃಷಭನ ಮಗ, ತರಪೇತ ಸಾಲೀಮಠ, ಧಾರವಾಡ). ಎಂಬ ಕೃತಿಗಳನ್ನು ಹೆಸರಿಸಿದ್ದಾರೆ. ಇವುಗಳಲ್ಲಿ ಕೆಲವಾದರೂ ಜನಪದ ಗೀತಗಳಾಗಿದ್ದ ಪಕ್ಷದಲ್ಲಿ ಕ್ರಿ. ಶ. ೧೮೭೫ ರ ಹಿಂದೆ ಉತ್ತರ ಕರ್ನಾಟಕದಲ್ಲಿ ಜನಪದ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆ ಪ್ರಾರಂಭವಾಗಿದ್ದಿತೆಂದು ಹೇಳಬೇಕಾಗುತ್ತದೆ. ಇದೇ ಸುಮಾರಿಗೆ ಕೆಲವು ಪೂರ್ವ-ಪಶ್ಚಿಮ ಪಂಡಿತರು ಸಿದ್ಧಪಡಿಸಿದ್ದ ಕನ್ನಡ ಪಠ್ಯಪುಸ್ತಕಗಳಲ್ಲಿಯೂ ಜನಪದ ಗೀತೆಗಳಿರುವ ಸಂಭವವಿದೆ.

ಛಂದೋಂಬುಧಿಯ ಉಪೋದ್ಘಾತದಲ್ಲಿ ಹೇಳಲಾದ ಗ್ರಂಥಗಳೂ ಅದೇ ಸಮಯದ ಕನ್ನಡ ಪಠ್ಯಗ್ರಂಥಗಳೂ ನಮ್ಮ ಕೈಗೆ ದೊರೆಯದ ಕಾರಣ ಪರಿಷತ್ತಿನ ನಿರ್ಣಯ (೧೯೧೫) ಎಚ್. ಕೆ. ಮಲ್ಲಪ್ಪ ಅವರ 'ಕನ್ನಡ ಗಾದೆಗಳ ಜೀರ್ಣೋದ್ಧಾರ' ಲೇಖನ (೧೯೨೧) ಮತ್ತು ಮಧುರಚೆನ್ನರ 'ಹಳ್ಳಿಯಹಾಡು' (೧೯೨೩ ಮತ್ತು ೨೪) ಲೇಖನಗಳನ್ನು ಈ ಕ್ಷೇತ್ರದ ಮಹತ್ವಪೂರ್ಣ ಪ್ರಥಮ ಪ್ರಯತ್ನಗಳೆಂದು ಹೇಳ-ಬಹುದು.

★ ಎಂ. ಎಂ. ಕಲಬುರ್ಗಿ

ಗ್ರಂಥಾವಲೋಕನ

ಕರ್ಣಾಟಕ ಶಾಸನ ಸಮೀಕ್ಷೆ: ಲೇಖಕರು: ಡಾ. ಕೊ. ವ್ಯಾ. ರಮೇಶ ಪ್ರ: ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ. ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು. ಪುಟ: ೮೦ ಬೆಲೆ: ೨–೫೦. ೧೯೭೧. ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ, ಎಂಬತ್ತು ಪುಟಗಳ ಈ ಪುಸ್ತಿಕೆಯ ಕರ್ತೃ ಡಾ. ಕೊ. ವ್ಯಾ. ರಮೇಶ. ಇದರಲ್ಲಿ (೧) ಭಾರತದ ಇತಿಹಾಸ ಮತ್ತು ಶಾಸನಸಾಮಗ್ರಿ (೨) ಕರ್ಣಾಟಕದ ಇತಿಹಾಸ ಮತ್ತು ಶಾಸನ ಸಾಮಗ್ರಿ ಮತ್ತು (೩) ಕರ್ಣಾಟಕ ಮತ್ತು ಹೊರನಾಡ ಶಾಸನಗಳು ಎಂಬ ಮೂರು ಅಧ್ಯಾಯಗಳಿವೆ.

ಇಪ್ಪತ್ತೇಳು ಪುಟಗಳ ಮೊದಲ ಅಧ್ಯಾಯ, ಇಡೀ ಭರತಖಂಡದ, ಬೇರೆ ಬೇರೆ ಪ್ರಾಂತಗಳ ಪ್ರಕಟಿತ, ಇತ್ತೀಚೆಗೆ ಪ್ರಕಟಿತ, ಮತ್ತು ಅಪ್ರಕಟಿತ ಶಾಸನಗಳ ಪುನಃ ಪರಿಶೀಲನೆ, ವಿವೇಚನೆ ಮತ್ತು ವಿಮರ್ಶೆಗಳಿಂದ ಕೂಡಿದೆ. ಇದಕ್ಕೆ ಹಿನ್ನೆಲೆಯಾಗಿ ಭಾರತದಲ್ಲಿ ನಡೆದ ಶಾಸನಾಭ್ಯಾಸದ ಇತಿಹಾಸ, ಇತಿಹಾಸ ಪುನಾರಚನೆಯಲ್ಲಿ ಶಾಸನಗಳಿಗಿರುವ ಮಹತ್ವ, ಭಾರತೀಯ ಲಿಪಿಗಳ ಐತಿಹಾಸಿಕ ಬೆಳವಣಿಗೆ, ಭಾರತದ ಉದ್ದಗಲಕ್ಕೂ ಶಾಸನಗಳಲ್ಲಿ ಬಳಸಿರುವ ಭಾಷೆಗಳು ಮತ್ತು ಬೇರೆಬೇರೆ ಸಂವತ್ಸರಗಳ ವಿಸ್ತಾರವಾದ ವಿವರಣೆ, ಕೃತಕ ಶಾಸನಗಳನ್ನು ಗುರುತಿಸುವ ವಿಧಾನ ಇತ್ಯಾದಿ ವಿಷಯಗಳು ಸಂಗ್ರಹವಾಗಿ ಬಂದಿವೆ. ಈ ಭಾಗ ಹೊಸದಾಗಿ ಶಾಸನಾಭ್ಯಾಸ ಮಾಡಬಯಸುವವರಿಗೆ ಹೆಚ್ಚು ಉಪಯುಕ್ತವಾಗಿದೆ.

ಇತಿಹಾಸವನ್ನು ಪುನಾರಚಿಸುವಲ್ಲಿ ಇತಿಹಾಸಕಾರರು, (೧) ಪ್ರಕಟಿತ ಶಾಸನಗಳ ಪುನಃ ಪರಿಶೀಲನೆ (೨) ಐತಿಹಾಸಿಕ ಸ್ಥಳಗಳ ವೈಜ್ಞಾನಿಕ ಉತ್ಖನನ (೩) ಹೊಸ ಶಾಸನಗಳ ತೀವ್ರ ಅನ್ವೇಷಣೆ ಹೀಗೆ ಮೂರು ಕ್ರಮಗಳನ್ನು ಕೈಕೊಳ್ಳಬೇಕೆಂದು ಸೂಚಿಸಿ, ಅವನ್ನೇ ಮುಂದೆ ತಮ್ಮ ಪುಸ್ತಕದುದ್ದಕ್ಕೂ ಅನುಸರಿಸಿದ್ದಾರೆ.

ಪ್ರಕಟಿತ ಶಾಸನಗಳ ಪುನಃ ಪರಿಶೀಲನೆಯಿಂದ, ಹಿಂದೆ ಅವುಗಳನ್ನು ಓದಿದ ಪಂಡಿತರು, ಅಜ್ಞೆಯ ಮೂಲಕವೋ, ಶಾಸನಾಕ್ಷರಗಳನ್ನು ಸರಿಯಾಗಿ ಓದಲು ಸಾಧ್ಯವಿಲ್ಲದುದರಿಂದ, ಕೆಲವು ಶಬ್ದಗಳಿಗೆ ಸಮರ್ಪಕ ಅರ್ಥ ಹೆಚ್ಚುವುದರಲ್ಲಿ ಅಸಮರ್ಥರಾದ ಕಾರಣದಿಂದಲೊ, ಕೈಕೊಂಡ ಕೆಲವು ತಪ್ಪು ನಿರ್ಣಯಗಳನ್ನು ತಿದ್ದುವ ಸಾಧ್ಯತೆಯಿದೆಯೆಂಬುದನ್ನು ಎರಡು ಪ್ರಕಟಿತ ಶಾಸನಗಳ ಪುನಃ ಪರಿಶೀಲನೆಯಿಂದ ತೋರಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಒಂದು ೧೦೫ ವರ್ಷಗಳ ಹಿಂದೆ ಪ್ರಿನ್ಸೆಪ್ ಅವರು ಪ್ರಕಟಿಸಿದ, ಹುಂಡ್‌ಗ್ರಾಮ (ಪಾಕಿಸ್ತಾನದ ಅಟ್ಟಾಕ ಜಿಲ್ಲೆ)ದ ಶಾಸನ. ಶಾರದಾಲಿಪಿ, ಸಂಸ್ಕೃತ ಭಾಷೆಯಲ್ಲಿರುವ ಕ್ರಿ. ಶ. ಹತ್ತನೆಯ ಶತಮಾನದ ಉತ್ತರಾರ್ಧಕ್ಕೆ ಸೇರಬಹುದಾದ ಈ ಶಾಸನ ಎರಡು ಹೋಳಾಗಿ ಒಡೆದು ಒಂದುಭಾಗ ಸವೆದುಹೋಗಿದೆಯಂತೆ. ಶಾಸನ ವಿಷಯ ಸರಿಯಾಗಿ ತಿಳಿಯದೆಂದು ಪ್ರಿನ್ಸೆಪ್ ಅವರು ತಿಳಿಸಿದ್ದರು.

ಆ ಶಾಸನವನ್ನು ಸ್ವತಃ ಲೇಖಕರೆ ಮತ್ತೊಮ್ಮೆ ಪರಿಶೀಲಿಸಿ, ಅನಂತದೇವನೆಂಬವನು ಮುಸಲ್ಮಾನರ ಸೈನ್ಯವನ್ನು ಸಿಂಧದಲ್ಲಿ ಸದೆಬಡಿದನೆಂಬ ಹೊಸ ವಿಷಯವನ್ನು ಹೊರಗೆಡಹಿದ್ದಾರೆ. ಇನ್ನೊಂದು ಡಾ|| ಗಾಯಿ ಮತ್ತು ಶ್ರೀ ಮಾಧವ ಕಟ್ಟಿ ಇಬ್ಬರೂ ಸೇರಿ ಪರಿಶೀಲಿಸಿದ್ದು. ಚಾಲುಕ್ಯರ ಕಾಲದ ಈ ತಾಮ್ರ ಶಾಸನ ಅರವತ್ತು ವರ್ಷಗಳ ಹಿಂದೆ ಶಾಸನ ತಜ್ಞರ ಕಣ್ಣಿಗೆ ಬಿದ್ದಿದ್ದರೂ, ಕೃತಕವೆಂದು ಕಡೆಗಣಿಸಲಾಗಿತ್ತು. ಆದರೆ ಈ ಇಬ್ಬರೂ ಮಹನೀಯರು ಅದನ್ನು ಪುನಃ ಪರಿಶೀಲಿಸಿ ಅದರಲ್ಲಿ ಉಕ್ತನಾಗಿರುವ ಅನೇಕ ನೃಪತಿ ಪರಮೇಶ್ವರನು ಚಾಲುಕ್ಯ ಎರಡನೆಯ ಪುಲಿಕೇಶಿಯೆಂದೂ. ಆ ಶಾಸನವು ಕೃತಕವಲ್ಲವೆಂದೂ ನಿರ್ಣಯಿಸಿದ್ದಾರೆ.

ವೈಜ್ಞಾನಿಕ ಉತ್ಖನನಗಳು ಕೆಲವು ಸಲ, ಗ್ರಂಥಸ್ಥ ಹೇಳಿಕೆಗಳನ್ನೂ, ಇತಿಹಾಸಕಾರರ ಊಹೆಗಳನ್ನೂ ಸಮರ್ಥಿಸುತ್ತವೆಂಬುದಕ್ಕೆ ಎರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ. 'ಧಮ್ಮಪದಟ್ಠಕಥಾ' ಎಂಬ ಪಾಲೀ ಗ್ರಂಥದಲ್ಲಿ, ಬುದ್ಧನ ವಾಸಕ್ಕಾಗಿ "ಘೋಷಿತಾರಾಮ"ವನ್ನು ನಿರ್ಮಿಸಿದ ಉಲ್ಲೇಖ ಬರುತ್ತದೆ. ಅಹಮ್ಮದಾಬಾದ ಜಿಲ್ಲೆಯ ಕೋಸಂದಲ್ಲಿ ನಡೆಸಿದ ಉತ್ಖನನಗಳ ಫಲವಾಗಿ ದೊರೆತ ಕ್ರಿ. ಶ. ಒಂದನೆಯ ಶತಮಾನಕ್ಕೆ ಸರಿಹೋಗುವ ಬ್ರಾಹ್ಮೀಲಿಪಿಯ ಶಾಸನವು, ಮೇಲಿನ ಗ್ರಂಥಸ್ಥ ಹೇಳಿಕೆಯನ್ನು ಸಮರ್ಥಿಸುತ್ತದೆಂದು ಸ್ಪಷ್ಟಪಡಿಸಿದ್ದಾರೆ. ಅದೇ ರೀತಿ ಹ್ಯುಯೆನ್‌ತ್ಸಾಂಗನು ಹೇಳಿರುವ ಕರ್ಣಸುವರ್ಣನಗರ ಮತ್ತು ರಕ್ತಮೃತ್ತಿಕಾ ಬೌದ್ಧ ವಿಹಾರಗಳ ಬಗೆಗೆ ವಿವರಿಸುತ್ತ, ಹಿಂದೆ 'ಲಯಾರ್ಡ' ಎಂಬ ಪಂಡಿತರು, ಮುರ್ಷಿದಾಬಾದ ಜಿಲ್ಲೆ (ಪಶ್ಚಿಮ ಬಂಗಾಳ)ಯ 'ರಾಂಗಾಮಾಟಿ'ಯೇ 'ರಕ್ತ ಮೃತ್ತಿಕಾ' ಎಂದೂ, ಆ ಸ್ಥಳಕ್ಕೆ 'ಕಾನ್ಸೋಣಾಪುರಿ' ಎಂಬ ಹೆಸರಿದ್ದು ಅದು ಕರ್ಣಸುವರ್ಣವೂ ಹೌದೆಂದು ತೋರಿಸಿದ್ದ. ಒಂಬತ್ತು ವರ್ಷಗಳ ಹಿಂದೆ 'ರಾಂಗಾಮಾಟಿ'ಯಲ್ಲಿ ನಡೆಸಿದ ಉತ್ಖನನಗಳಲ್ಲಿ ದೊರೆತ ಮಣ್ಣಿನ ಮುದ್ರೆಯ ಮೇಲಿನ ಎರಡು ಸಾಲಿನ ಆಲೇಖ್ಯ ಆ ಹೇಳಿಕೆಯನ್ನು ಸಮರ್ಥಿಸುತ್ತದೆಂದು ತಿಳಿಸಿದ್ದಾರೆ.

ಇತ್ತೀಚೆಗೆ ದೊರೆತ ಪ್ರಕಟಿತ ಮತ್ತು ಅಪ್ರಕಟಿತ ಸುಮಾರು ಹದಿನೆಂಟು ಇಪ್ಪತ್ತು ಶಾಸನಗಳನ್ನು ಕುರಿತು ಪ್ರಸ್ತಾಪಿಸುತ್ತ ಅವು ಇತಿಹಾಸದ ಮೇಲೆ ಬೀರುವ ಬೆಳಕನ್ನು ಲೇಖಕರು ತೋರಿಸಿದ್ದಾರೆ. ಅವುಗಳಲ್ಲಿ ಶಿಲಾಶಾಸನ. ತಾಮ್ರಶಾಸನ. ಪ್ರತಿಮಾ ಶಾಸನ, ನಾಣ್ಯಶಾಸನ ಮತ್ತು ತ್ರಿಶೂಲ ಶಾಸನ ಇತ್ಯಾದಿ ಬಗೆಬಗೆಯ ಶಾಸನಗಳು ಸಮಾವೇಶವಾಗಿವೆ. ಮಹತ್ವದ ಕೆಲವನ್ನು ಮಾತ್ರ ಇಲ್ಲಿ ಕೊಡಬಹುದು. (೧) ಗುಲಬರ್ಗಾಜಿಲ್ಲೆಯ ಸನ್ನತಿಯಲ್ಲಿ ದೊರೆತ ಕ್ರಿ. ಶ. ಮೊದಲ ಮೂರು ಶತಮಾನಗಳಿಗೆ ಸೇರಬಲ್ಲ ಬ್ರಾಹ್ಮೀಲಿಪಿಯ ಪ್ರಾಕೃತ ಶಾಸನಗಳಿಂದ ಅದು ಒಂದು ಪ್ರಾಚೀನ ಬೌದ್ಧ ಕೇಂದ್ರವಾಗಿತ್ತೆಂಬುದು ಸಿದ್ಧವಾಗುತ್ತದೆ (೨) ದುರ್ಜನಪುರ (ಮಧ್ಯಪ್ರದೇಶ. ವಿದಿಶಾ ಜಿಲ್ಲೆ)ದಲ್ಲಿ ಇತ್ತೀಚೆಗೆ ದೊರೆತ ಮೂರು ಪ್ರತಿಮಾ ಶಾಸನಗಳಿಂದ. 'ರಾಮಗುಪ್ತನು ಕೆಲವರು ತಿಳಿದಿರುವಂತೆ ಒಬ್ಬ ಕಾಲ್ಪನಿಕ ಇಲ್ಲವೇ ತುಂಡರಸನಲ್ಲವೆಂದೂ. ಅವನು

ಗುಪ್ತಸಾಮ್ರಾಟ ರಾಮಗುಪ್ತನೆಂದೂ ತಿಳಿದು ಬರುತ್ತದೆ. (೩) ಪಾಟಣಾ (ಉತ್ತರ ಸಾತಾರಾ ಜಿಲ್ಲೆ)ಯಲ್ಲಿ ದೊರೆತ ಕ್ರಿ. ಶ. ೮೦೫ ರ ರಾಷ್ಟ್ರಕೂಟ ಮೂರನೆಯ ಗೋವಿಂದನ ಆಳಿಕೆಯ ಕಾಲದ ತಾಮ್ರಶಾಸನದಿಂದ, ಬೇರೆ ಬೇರೆ ಅರಸರ ಲಾಂಛನಗಳು ತಿಳಿದು ಬರುತ್ತವೆ. ಅವುಗಳಲ್ಲಿ ಕೊಂಕಣದ ಮೌರ್ಯರ ಲಾಂಛನವು ವರಾಹವೆಂದೂ, ಗೂರ್ಜರ ಪ್ರತೀಹಾರರ ಲಾಂಛನ ಮದ್ದಳೆಯೆಂದೂ, ಕೋಸಲ, ಅವಂತಿ, ಸಿಂಹಳ ಅರಸರ ಲಾಂಛನಗಳ ಮೇಲೆ ಅವರವರ ಹೆಸರುಗಳಿದ್ದವೆಂದೂ, ಬಂಗಾಳದ ಧರ್ಮಪಾಲನ ಲಾಂಛನದ ಮೇಲೆ ತಾರಾಧಿಗವತಿಯ ಚಿತ್ರವಿತ್ತೆಂದೂ ಮೊದಲ ಸಲ ತಿಳಿದು ಬರುತ್ತದೆ. ಹೀಗೆ ಇತಿಹಾಸ ರಚನೆಗೆ ಸಂಬಂಧಪಟ್ಟ ಅನೇಕ ಹೊಸ ವಿಷಯಗಳು ಇತ್ತೀಚೆಗೆ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳಿಂದ ತಿಳಿದು ಬರುವುದನ್ನು ಸಾಧಾರವಾಗಿ ಇಲ್ಲಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯ ಕೇವಲ ಕರ್ನಾಟಕದ ಇತಿಹಾಸ ಮತ್ತು ಶಾಸನ ಸಾಮಗ್ರಿಗಳ ವಿವರಣೆ, ಮತ್ತು ವಿವೇಚನೆಗಳಿಗೆ ಮೀಸಲಾಗಿದೆ. ವಿವರಣೆಯಲ್ಲಿ ಒಂದು ಬಗೆಯ ಕ್ರಮವಿರಲೆಂಬ ಉದ್ದೇಶದಿಂದ ಲೇಖಕರು ಇದನ್ನು (೧) ಪ್ರಾಚೀನ ಯುಗ (ಕ್ರಿ. ಪೂ. ಮೂರನೆಯ ಶತಮಾನದಿಂದ ೧೧ನೆಯ ಶತಮಾನ (೨) ಮಧ್ಯಯುಗ (ಕ್ರಿ. ಶ. ೧೧ರಿಂದ ೧೪ನೆಯ ಶತಮಾನ) ೩) ವಿಜಯನಗರ ಯುಗ (ಕ್ರಿ. ೧೪ ರಿಂದ ೧೬ನೆಯ ಶತಮಾನ) ಎಂದು ಮೂರು ವಿಧವಲ್ಲಿ ವಿಂಗಡಿಸಿ ವಿವರಿಸುತ್ತ ಹೋಗಿದ್ದಾರೆ. ಪ್ರಾಚೀನ ಯುಗದ ಪ್ರಾಕೃತ ಶಾಸನಗಳನ್ನು ಹೇಳಿಅವುಗಳಲ್ಲಿ ಗುಲಬುರ್ಗಾ ಜಿಲ್ಲೆಯ ಸನ್ನತಿ ಗ್ರಾಮದಲ್ಲಿ ಕೆಲವೇ ವರ್ಷದ ಹಿಂದೆ ದೊರೆತ ಮೂವತ್ತಕ್ಕೂ ಮಿಕ್ಕಿದ ಬ್ರಾಹ್ಮೀಲಿಪಿಯ, ಕ್ರಿ. ಶ. ಮೊದಲ ಮೂರು ಶತಮಾನಗಳಿಗೆ ಸೇರಬಹುದಾದ ಪ್ರಾಕೃತ ಶಾಸನಗಳು, ಆ ಪ್ರಾಂತವು ಸಾತವಾಹನ ನೇರ ಪ್ರಭಾವಕ್ಕೆ ಒಳಗಾಗಿದ್ದಿರಬಹುದೆಂಬುದಕ್ಕೆ ಮೊದಲ ಪ್ರತ್ಯಕ್ಷ ಆಧಾರಗಳೆಂದರು ಸೂಚಿಸಿದ್ದಾರೆ.

ಪ್ರಾಚೀನ ಯುಗಕ್ಕೆ ಸಂಬಂಧಿಸಿದಂತೆ ಕ್ರಿ. ಶ. ನಾಲ್ಕನೆಯ ಶತಮಾನದಿಂದ ೧೦ ನೆಯ ಶತಮಾನದ ಮಧ್ಯದವರೆಗೆ ಕರ್ನಾಟಕವನ್ನು ಆಳಿದ, ಬನವಾಸಿಯ ಕದಂಬರ, ಬಾದಾಮಿಯ ಚಾಲುಕ್ಯರ, ಮಳಖೇಡದ ರಾಷ್ಟ್ರಕೂಟರ, ಆಳಿಕೆಗೆ ಸಂಬಂಧಪಟ್ಟ ಶಾಸನಗಳನ್ನು ಬೇರೆ ಬೇರೆಯಾಗಿ ಪ್ರಸ್ತಾಪಿಸುತ್ತ ಆಯಾಕಾಲದ ಶಾಸನಗಳ ಸ್ವರೂಪ, ಕಾಲ ಕಳೆದಂತೆಲ್ಲ ಅವುಗಳ ವಿವರ ಬೆಳೆಯುತ್ತ ಹೋದ ಬಗೆ, ಲಿಪಿಯಲ್ಲುಂಟಾದ ಬೆಳವಣಿಗೆ, ಶಕಟರೇಫ ಮತ್ತು ಱಳಗಳು ರೂಪುಗೊಂಡ ರೀತಿ, ಇತ್ಯಾದಿಗಳನ್ನು ವಿವರಿಸಿದ್ದಾರೆ.

ಈ ಯುಗದ ಸುಮಾರು ಐದು ಪ್ರಕಟಿತ ಶಾಸನಗಳ ಪುನಃ ಪರಿಶೀಲನೆಯಿಂದ ತಿಳಿದು ಬರುವ ಹೊಸ ಸಂಗತಿಗಳನ್ನು ತಿಳಿಸಿಕೊಟ್ಟಿದ್ದಾರೆ. ಅವುಗಳಲ್ಲಿ : (೧, ಚಿಪ್ಳೂಣ ತಾಮ್ರಶಾಸನದಲ್ಲಿ ಬರುವ 'ವಲ್ಲಭ' ಎಂಬುದು ಮೊದಲನೆಯ ಪುಲಿಕೇಶಿಯ ತೃತೀಯ ನಾಮ. ಆದುದರಿಂದ ಫ್ಲೀಟರು ಅರ್ಥೈಸಿದಂತೆ ವಾತಾಪಿಯ ಸ್ಥಾಪಕನು ಕೀರ್ತಿವರ್ಮನಲ್ಲ, ಮೊದಲನೆಯ ಪುಲಿಕೇಶಿಯೇ. (೨) ಗುಜರಾತಿನ

ಚಾಲುಕ್ಯ ದೊರೆ ವಿನಯಾದಿತ್ಯನ ಕ್ರಿ. ಶ. ೬೯೧–೯೨ರ ಮನೋರ್ ತಾಮ್ರಶಾಸನದಲ್ಲಿ, ಪೃಥ್ವೀವಲ್ಲಭ ಬಿರುದಿನ ನಂತರ 'ಸೂನೋಃ' ಪದ ಸೇರಿಸಬೇಕು. ಅದರಿಂದ ಕೀರ್ತಿವರ್ಮನೂ ಅಶ್ವಮೇಧಯಾಗ ಮಾಡಿದನೆಂಬರ್ಥವನ್ನು ತಪ್ಪಿಸಿದಂತಾಗುತ್ತದೆ. (೩) ಮುಧೋಳ ತಾಮ್ರ ಶಾಸನದಲ್ಲಿ ಬರುವ ಪೂಗವರ್ಮನನ್ನು ಕೀರ್ತಿವರ್ಮನೆಂದಿಟ್ಟುಕೊಳ್ಳುವುದು ಮೇಲು. (೪) ಕಿಗ್ಗ ಗ್ರಾಮ (ಚಿಕ್ಕಮಗಳೂರು ಜಿಲ್ಲೆ)ದ ಶಾಸನದಲ್ಲಿ ಬರುವ "ಮುದಿಮೆಗೆಯೆ" ಎಂಬುದಕ್ಕೆ ಕೀರಿಕೊಂಡಾಗ ಎಂದು ಅರ್ಥೈಸದೆ ನಾಡನ್ನು ಆಳುತ್ತಿದ್ದಾಗ ಎಂದು ಅರ್ಥೈಸಬೇಕು—ಇತ್ಯಾದಿ ಊಹೆ ಮತ್ತು ನಿರ್ಣಯಗಳು ಸಂಶೋಧಕರ ಪರಿಶೀಲನೆಗೆ ಅರ್ಹವಾಗಿವೆ.

ಇದೇ ಯುಗಕ್ಕೆ ಸೇರಬಲ್ಲ ಹತ್ತೆಂಟು ಹೊಸದಾಗಿ ಬೆಳಕಿಗೆ ಬಂದ ಶಾಸನಗಳನ್ನು ಉಲ್ಲೇಖಿಸಿ, ಅವುಗಳಿಂದ ತಿಳಿದು ಬರುವ ಹೊಸ ವಿಷಯಗಳನ್ನು ಸಂಗ್ರಹಿಸಿದ್ದಾರೆ. ಅವುಗಳಲ್ಲಿ ಕಲಬುರಗಿ ಜಿಲ್ಲೆಯ ಸನ್ನತಿ ಗ್ರಾಮದಲ್ಲಿ ದೊರೆತ ಎರಡು ಕನ್ನಡ ಶಾಸನಗಳು ಮಹತ್ವದವು. ಕ್ರಿ. ಶ. ಏಳನೆಯ ಶತಮಾನದ ಈ ಕನ್ನಡ ಶಾಸನಗಳಲ್ಲಿ ಒಂದು ಸೇಂದ್ರಕ ಮನೆತನದ ಅರಸನನ್ನು ಸೂಚಿಸಿದರೆ, ಇನ್ನೊಂದರಲ್ಲಿ ಬರುವ ವಿನಯಾದಿತ್ಯನು ಚಾಲುಕ್ಯ ವಿನಯಾದಿತ್ಯನೇ ಇರಬೇಕೆಂದು ಊಹಿಸಿದ್ದಾರೆ. ಇದು ವಿಚಾರಾರ್ಹ.

ಮಧ್ಯಯುಗದ (ಕ್ರಿ. ಶ. ೯೭೩–೧೩೩೬) ಶಾಸನ ಮತ್ತು ತಾಮ್ರ ಶಾಸನಗಳ ಭಾಷೆಯ ಸ್ವರೂಪ, ಲಿಪಿ. ತೇದಿಯ ವಿವರ. ಪ್ರಾಚೀನ ಯುಗದ ಶಾಸನಗಳಿಗಿಂತ ಇವು ಭಿನ್ನವಾಗಿರುವ ಬಗೆ, ಅವುಗಳಲ್ಲಿ ಬರುವ ವಿಷಯ ಇತ್ಯಾದಿಗಳನ್ನು ಆರಂಭದಲ್ಲಿ ಪ್ರಸ್ತಾಪಿಸಿ ತದನಂತರ ಮೂರು ಶಾಸನಗಳ ಪುನಃ ಪರಿಶೀಲನೆಯಿಂದ ತಾವು ಕಂಡವಿವರಗಳನ್ನು ನೀಡಿದ್ದಾರೆ. ರಾಯಬಾಗ ವೀರಗಲ್ ಶಾಸನವನ್ನು ಹದಿನೈದು ವರ್ಷಗಳ ಹಿಂದೆ ಓದಿದವರ ಅಭಿಪ್ರಾಯವನ್ನು ಸಂಪೂರ್ಣ ಒಪ್ಪದೆ, ಅದರಲ್ಲಿ ಬರುವ ಸತ್ತವನ ಹೆಸರು ಚಂದರಸನಲ್ಲ ಚಂಡರಸ, ಅವನ ದೊರೆಯ ಹೆಸರು ಕಾಮರಸನಲ್ಲ ಕೊಂಗಜರಸ ಎಂದು ಸ್ಪಷ್ಟಪಡಿಸಿದ್ದಾರೆ. ಆ ಕೊಂಗಜರಸನ ಸೋದರಿ ಪದುಮಲದೇವಿ ವಿಕ್ರಮಾದಿತ್ಯನ ರಾಣಿಯೆಂಬುದನ್ನು ಮೊದಲ ಸಲ ಈ ಶಾಸನ ತಿಳಿಸುತ್ತದೆಂದು ಇದರ ಅಭಿಪ್ರಾಯ.

ಮಧ್ಯಯುಗಕ್ಕೆ ಸಂಬಂಧಿಸಿದ, ಈಚೆಗೆ ಬೆಳಕು ಕಂಡ, ಕೆಲವು ಶಾಸನಗಳು ಇತಿಹಾಸದ ಮೇಲೆ ಬೀರುವ ಬೆಳಕನ್ನು ಕುರಿತು ಲೇಖಕರು ಪ್ರಸ್ತಾಪಿಸಿದ್ದಾರೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಹೇಳಬಹುದು. (೧) ತಂಬೂರಿ (ಧಾರವಾಡ ಜಿಲ್ಲೆ)ಯಲ್ಲಿ ದೊರೆತ ಆರನೆಯ ವಿಕ್ರಮಾದಿತ್ಯನ ಕ್ರಿ. ಶ. ೧೧೨೫ರ ಶಾಸನದಿಂದ ಹಾನಗಲ್ ಕದಂಬ ದೊರೆಯಾದ ಮಾವುಲಿಗೆ ಹಾಕಿಬಲ್ಲನೆಂಬ ಮಗನಿದ್ದು ಅವನು ಆಗ ವಿಕ್ರಮಾದಿತ್ಯನ ಮಾಂಡಲಿಕನಾಗಿ ಬನವಾಸಿಯನ್ನಾಳುತ್ತಿದ್ದನೆಂದು ಮೊದಲ ಬಾರಿಗೆ ತಿಳಿದುಬರುತ್ತದೆ. ಅಲ್ಲದೆ ಅದೇ ಶಾಸನವು ಗೋವೆ ಮತ್ತು ಹಾನಗಲ್ಲ ಕದಂಬ ಮನೆತನಗಳ ಮೂಲ ಪುರುಷರು ಬೇರೆ ಬೇರೆ ಎಂಬ ಊಹೆಗೆ ಎಡೆಮಾಡಿಕೊಡುತ್ತದೆ. (೨) ಕಲ

ಬುರಗಿ ಜಿಲ್ಲೆಯ ಕಾಳಗಿಯಲ್ಲಿ ಸಿಕ್ಕ ಕ್ರಿ. ಶ. ೧೧೭೩ರ ರಾಯ ಮುರಾರಿ ಸೋವಿದೇವನ ಆಳಿಕೆಯ ಕಾಲದ ಶಾಸನವು ಕಲಚೂರಿ ವಂಶದ ಮೊದಲ ರಾಜರಲ್ಲಿ ಕಿರಿಯ ಅಸಗನೂ ಒಬ್ಬನೆಂಬುದನ್ನು ತಿಳಿಸುತ್ತದೆ.

ವಿಜಯನಗರ ಕಾಲದ ಶಾಸನಗಳನ್ನು ಕುರಿತು ಹೇಳುವ ಪೂರ್ವದಲ್ಲಿ ಅವುಗಳಲ್ಲಿ ಬರುವ ಭಾಷೆ ಮತ್ತು ಅವುಗಳ ಸ್ವರೂಪವನ್ನು ಕುರಿತೂ ಕೆಲವು ಮಾತುಗಳನ್ನು ಪ್ರಾಸ್ತಾವಿಕವಾಗಿ ಹೇಳಿದ್ದಾರೆ. ಈ ಕಾಲಕ್ಕೆ ಸೇರಬಲ್ಲ ಶಾಸನಗಳಲ್ಲಿ ಕ್ರಿ. ಶ. ೧೪೪೯ರ ಬಾರಕೂರಿನ ಪ್ರಕಟಿತ ಶಾಸನವನ್ನು ಪುನಃ ಪರಿಶೀಲಿಸಿ ವಿಜಯನಗರದ ಎರಡನೆಯ ದೇವರಾಯನು. ಕ್ರಿ. ಶ. ೧೪೪೬ ರಲ್ಲಿ ಮರಣ ಹೊಂದದೆ ಕ್ರಿ. ಶ. ೧೪೪೮ರ ಆಗಸ್ಟ ವರೆಗಾದರೂ ಬದುಕಿರಬೇಕೆಂಬ ನಿರ್ಣಯಕ್ಕೆ ಬಂದಿದ್ದಾರೆ. ಇತ್ತೀಚೆಗೆ ಬೆಳಕು ಕಂಡ ಒಂದೆರಡು ಶಾಸನಗಳನ್ನೂ ಉಲ್ಲೇಖಿಸಿದ್ದಾರೆ.

ಮೂರನೆಯ ಅಧ್ಯಾಯ, ಕರ್ನಾಟಕ ಮತ್ತು ಹೊರನಾಡ ಶಾಸನಗಳನ್ನು ಕುರಿತದ್ದು. ಕರ್ನಾಟಕಕ್ಕೂ ಆಗ್ನೇಯ ಏಷ್ಯದ ರಾಷ್ಟ್ರಗಳಿಗೂ ಇದ್ದ ನಿಕಟ ಸಂಪರ್ಕವನ್ನು, ರಾಷ್ಟ್ರಕೂಟರ ಕಾಲದ ಕನ್ನಡ ಲಿಪಿಯಲ್ಲಿರುವ ಕಾಂಬೋಡಿಯದ ಸಾವ್ರೋಣ್ ಶಾಸನ, ಕ್ರಿ. ಶ. ೧೧೦೯ರ ಜಾವಾದ ಶಾಸನ ಇತ್ಯಾದಿ ಇನ್ನೂ ಕೆಲವು ಆಧಾರಗಳಿಂದ ಸ್ಪಷ್ಟಪಡಿಸಿದ್ದಾರೆ. ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ದೊರೆತಿರುವ ಚಾಲುಕ್ಯ ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರ ಅರಸು ಮನೆತನಗಳ ಹಲವಾರು ಶಾಸನಗನ್ನು ಉಲ್ಲೇಖಿಸಿ, ಆ ಪ್ರಾಂತಗಳೊಡನೆ ಕರ್ನಾಟಕಕ್ಕಿದ್ದ ಸಂಬಂಧವನ್ನು ವಿವರಿಸಿದ್ದಾರೆ. ಇದರಿಂದ ಕರ್ನಾಟಕದ ಸಾಮ್ರಾಟರ ಶೌರ್ಯ ಪರಾಕ್ರಮಗಳ, ಮತ್ತು ಅವರ ಸಾಮ್ರಾಜ್ಯದ ವ್ಯಾಪ್ತಿಯ ಅರಿವು ಓದುಗರಿಗುಂಟಾಗುತ್ತದೆ. ಕರ್ನಾಟಕದಲ್ಲಿರುವ ಹೊರನಾಡದೊರೆಗಳ ಶಾಸನಗಳಲ್ಲಿ, ಕ್ರಿ. ಶ. ಏಳನೆಯ ಶತಮಾನದ ಪಲ್ಲವ ನರಸಿಂಹವರ್ಮನ ಆಳಿಕೆಯ ಬಾದಾಮಿಯ ಬಂಡೆಗಲ್ಲು ಶಾಸನವೊಂದನ್ನು ಮಾತ್ರ ಹೇಳಿ. ಹೊರನಾಡ ಶಾಸನಗಳಲ್ಲಿ ಪ್ರಾಚೀನತಮವೆಂದಿದ್ದಾರೆ.

ಶಾಸನಗಳ ಬಗೆಗೆ ಇಷ್ಟೊಂದು ಅತ್ಯುಪಯುಕ್ತ ಮಾಹಿತಿಯನ್ನು ಒದಗಿಸುವ ಈ ಪುಸ್ತಿಕೆಯಲ್ಲಿ ಒಂದೆರಡು ಕೊರತೆಗಳೂ ಇವೆ. ಶಾಸನಗಳ ಸಂಗ್ರಹ ಮತ್ತು ಪ್ರಕಟನೆಯ ಕಾರ್ಯದಲ್ಲಿ ತೊಡಗಿದವರ ಹೆಸರುಗಳಲ್ಲಿ ಉತ್ತರ ಕರ್ನಾಟಕದ ಇನ್ನೂ ಕೆಲವರ ಹೆಸರು ಸೇರಬೇಕೆನಿಸುತ್ತದೆ. ಮತ್ತು ಅಷ್ಟೇ ಮಹತ್ವಪೂರ್ಣ ಕಾರ್ಯದಲ್ಲಿ ಬಹುದಿನಗಳಿಂದ ನಿರತವಾಗಿರುವ ಸಂಸ್ಥೆಗಳಲ್ಲಿ ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯನ್ನು ಹೆಸರಿಸದೆ, ಬಿಟ್ಟಿದ್ದಾರೆ. ಕನ್ನಡ ವಿದ್ವಾಂಸರ ಕುತೂಹಲವನ್ನು ಕೆರಳಿಸಿದ, ಕರೀಂನಗರ ಜಿಲ್ಲೆಯ ಕುರಿಕ್ಯಾಲ ಬಳಿಯ ಬೊಮ್ಮಲಗುಟ್ಟದ (ಗಂಗಾಧರಂ ಶಾಸನ) ತ್ರಿಭಾಷಾ ಶಾಸನದ ಬಗೆಗೆ ವಿವರಿಸುತ್ತ "ಆ ಶಾಸನದ ಕನ್ನಡ ಭಾಗದಲ್ಲಿ ಉಕ್ತವಾಗಿರುವ ಜಿನವಲ್ಲಭನ ತಾಯಿಯ ಹೆಸರು ಅಬ್ಬಣಬ್ಬೆಯೋ. ಬಬ್ಬಣಬ್ಬೆಯೋ ? ಮತ್ತು ಅವಳ ಹೆಸರ ಹಿಂದೆ ಕಂಡುಬರುವ ಶಬ್ದವು ಮರ್ಮಳೋ. ವರ್ಮಪೋ ಎಂಬ

ಬಗೆಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದ್ದು ಆ ಶಬ್ದವು 'ಮಯೂರ್' ಎಂದೇ ಇರುತ್ತದೆ ಎಂಬುದನ್ನೂ. ಡಾ|| ಗಾಯಿ ಅವರು ಈ ವಿವಾದಕ್ಕೆಡೆಯಿಲ್ಲದ ರೀತಿಯಲ್ಲಿ ತೋರಿಸಿಕೊಟ್ಟಿರುವರು" ಎಂದಿದ್ದಾರೆ. ಆದರೆ ಅವರಿಗಿಂತ ಮೊದಲು ಪ್ರಥಮಸಲ ಅದನ್ನು ತೋರಿಸಿಕೊಟ್ಟವರು ಡಾ|| ಎಂ. ಎಂ. ಕಲಬುರ್ಗಿ ಎಂಬುದನ್ನು ಹೇಳದಿರುವುದು ಆಶ್ಚರ್ಯಕರ.

ಮೂವತ್ತುಮೂರನೆಯ ಪುಟದಲ್ಲಿ "ಅವರ (ವಾತಾಪಿಯ ಚಾಲುಕ್ಯರ) ಕಾಲದ ಶಾಸನವಾವುದರಲ್ಲಿಯೂ ಆ ಮನೆತನದ ಹೆಸರನ್ನು 'ಚಾಲುಕ್ಯ' ಎಂದು ದೀರ್ಘ ಚಕಾರವನ್ನು ಬಳಸಿ ಕರೆದಿಲ್ಲ" ಎಂದು ಲೇಖಕರು ತಿಳಿಸಿದ್ದಾರೆ. ಆದರೆ ರಾ. ಹ. ದೇಶಪಾಂಡೆಯವರು ತಮ್ಮ 'ಕರ್ನಾಟಕ ಸಾಮ್ರಾಜ್ಯ' ಸಂಪುಟ–೧, ಪುಟ ೧೭೩ ರಲ್ಲಿ 'ಚಾಲುಕ್ಯ' ಶಬ್ದದ ಬಗ್ಗೆ ವಿವೇಚಿಸಿ ಕೊನೆಗೆ "ಎರಡನೆಯ ವಿಕ್ರಮಾದಿತ್ಯನ ಕ್ರಿ. ಶ. ೭೩೫ ನೆಯ ಇಸ್ವಿಯ ಲಕ್ಷ್ಮೇಶ್ವರ ಶಾಸನದಲ್ಲಿ 'ಚಾಳುಕ್ಯ' ಎಂಬ ರೂಪವು ಕಂಡುಬರುತ್ತದೆ. ಆ ರೂಪವನ್ನೇ ನಾವು ಈ ಇತಿಹಾಸದಲ್ಲಿ ಉಪಯೋಗಿಸಿರುತ್ತೇವೆ" ಎಂದು ಹೇಳಿದುದರತ್ತ ಲೇಖಕರು ಗಮನಹರಿಸಬೇಕು.

ಶಾಸನ ಶಾಸ್ತ್ರವನ್ನು ಕುರಿತ ಇಂತಹ ಕೃತಿಯಲ್ಲಿ ವಾಕ್ಯ ರಚನೆ ಬಹಳ ಉದ್ದವಾಗಿರಲೂ ಬಾರದು ಮತ್ತು ಸಂದಿಗ್ಧತೆಗೆ ಎಡೆಮಾಡಿಕೊಡುವಂತಿರಬಾರದು. ಪುಟ, ೨೪ರಲ್ಲಿ "ಮಹಾರಾಜ ಗೋವಿಂದವರ್ಮನ ಮಗನಾದ" ಎಂದು ಪ್ರಾರಂಭವಾಗುವ ವಾಕ್ಯವು ಒಂಬತ್ತು ಹತ್ತು ಸಾಲುಗಳುದ್ದಕ್ಕೂ ಮುಂದುವರಿದಿದೆ. ಎರಡನೆಯ ಪುಟದಲ್ಲಿ ಬರುವ "ಭಾರತದ ನೇರ ಪ್ರಭಾವಕ್ಕೊಳಗಾಗಿದ್ದ ರಾಷ್ಟ್ರಗಳಲ್ಲಿ ಪಾಕಿಸ್ತಾನದ ಅಶೋಕನ ಅರೆಮ್ಯೆಕ್ ಮತ್ತು ಪ್ರಾಕೃತ ಶಾಸನಗಳೂ..." ಎಂಬ ವಾಕ್ಯ ಸಂದಿಗ್ಧತೆಗೆ ಎಡೆ ಮಾಡಿಕೊಡುತ್ತದೆ.

ಗ್ರಂಥದಲ್ಲಿ ಹಲವಾರು ಮುದ್ರಣ ದೋಷಗಳೂ ಇವೆ. ೩ನೆಯ ಪುಲಿಕೇಶಿ (ಪುಟ–೧೯). ತಾಯ್‌ಹೂಲಿ (ಪುಟ–೩೯). ಆಳಿಕೆಗೊಳಗಾಗಿತ್ತೆಂಬೂ (ಪುಟ–೪೦) ರಾಜಾಶಿತ್ಯ (ಪುಟ–೪೦), ಸಾಮ್ಯವಾಗಿ (ಪುಟ–೪೩), ಶಾಸನಲು (ಪುಟ–೬೮). ಕ್ರಿ. ಶ. ೧೪೬೯ರ ಬದಲು ಕ್ರಿ. ಶ. ೧೪೪೯, ಇರಬೇಕಲ್ಲವೆ? (ಪುಟ–೬೯). ಗರ್ನಾಟಕದ (ಪುಟ–೭೫) ಇತ್ಯಾದಿಗಳು ಅವುಗಳಲ್ಲಿ ಕೆಲವು.

ಶಾಸನಶಾಸ್ತ್ರವನ್ನೂ, ಅವುಗಳನ್ನು ಅಭ್ಯಸಿಸುವ ರೀತಿ ವಿಧಾನಗಳನ್ನೂ ಕುರಿತು ವಿವರಿಸುವ ಮತ್ತು ವಿವೇಚಿಸುವ ಗ್ರಂಥಗಳು ಕನ್ನಡದಲ್ಲಿ ತೀರ ವಿರಳ. ಅಂತಹ ಕೊರತೆಯನ್ನು ತುಂಬಿ ಕೊಡುವಲ್ಲಿ ಈ ಚಿಕ್ಕ ಗ್ರಂಥವು ನಿಶ್ಚಯವಾಗಿಯೂ ನೆರವಾಗುತ್ತದೆ. ಶಾಸನಗಳ ಅಧ್ಯಯನ ಮಾಡಬಯಸುವ ವಿದ್ಯಾರ್ಥಿಗಳಿಗೆ ಇದು ಅನೇಕ ಅತ್ಯುಪಯುಕ್ತ ಮತ್ತು ಮಹತ್ವದ ಮಾಹಿತಿಗಳನ್ನು ಒದಗಿಸುತ್ತದೆ. ಶಾಸನಗಳನ್ನು ಓದುವಾಗ ಮತ್ತು ಅಭ್ಯಸಿಸುವಾಗ ವಹಿಸಬೇಕಾದ ಎಚ್ಚರಿಕೆಗಳನ್ನೂ ತೋರಿಸಿಕೊಡುತ್ತದೆ. ಕನ್ನಡ ನಾಡಿನ ಶ್ರೀಸಾಮಾನ್ಯರಿಗೆ ಅವರ ಭವ್ಯ ಪ್ರಾಚೀನಪರಂಪರೆ, ಮತ್ತು ಸಂಸ್ಕೃತಿಗಳ

ಪರಿಚಯವನ್ನು ತಕ್ಕಮಟ್ಟಿಗೆ ಮಾಡಿಕೊಡುತ್ತದೆ. ಐತಿಹಾಸಿಕ ಮಹತ್ವವುಳ್ಳ ಹಲವಾರು ಅಪ್ರಕಟಿತ, ಮತ್ತು ಇತ್ತೀಚಿನ ಪ್ರಕಟಿತ ಶಾಸನಗಳನ್ನು ಸಮೀಕ್ಷಿಸಿ, ಕೆಲವು ಪ್ರಕಟಿತ ಶಾಸನಗಳನ್ನೂ ಪುನಃ ಪರಿಶೀಲಿಸಿ, ಹೊಸ ಹೊಸ ಸಂಗತಿಗಳನ್ನು ಹೊರಗೆಡಹುವಲ್ಲಿ ಲೇಖಕರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಅವರಿಗೂ, ಅವರ ಕೃತಿಯನ್ನು ಪ್ರಕಟಿಸಿದ ಬೆಂಗಳೂರು ವಿಶ್ವವಿದ್ಯಾಲಯಕ್ಕೂ, ಕನ್ನಡಿಗರ ಹಾರ್ದಿಕ ಅಭಿನಂದನೆಗಳು ಸಲ್ಲಲೇಬೇಕು.

★ ಬ. ವೀ. ಮ.

ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು : ಸಂ : ಡಾ. ಜಿ. ಶಿವರುದ್ರಪ್ಪ. ಪ್ರ : ಪ್ರಕಟಣ ಮತ್ತು ಎಸ್. ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಪುಟ: ೨೨೪ + viii ; ಬೆಲೆ ರೂ. ೬-೦೦, ೧೯೭೨.

ಡಾ. ಜಿ.ಎಸ್. ಶಿವರುದ್ರಪ್ಪ ಅವರು ಸಂಪಾದಿಸಿ ಪ್ರಕಟಿಸಿದ್ದು ಎನ್ನುವದಕ್ಕಿಂತ ಸಂಗ್ರಹಿಸಿದ್ದು ಎಂದರೆ ಹೆಚ್ಚು ಉಚಿತ. ಯಾಕೆಂದರೆ ಇದರಲ್ಲಿ ಸಂಪಾದಕರು ಮಾಡಬೇಕಾದ್ದು ಏನೂ ಇಲ್ಲ. ಲೇಖನಗಳನ್ನು ಇದ್ದಕ್ಕಿದ್ದ ಹಾಗೆ ಸಂಗ್ರಹಿಸಲಾಗಿದೆ. ಎಲ್ಲಾ ಲೇಖನಗಳನ್ನು ಅಭ್ಯಸಿಸಿ ಅದಕ್ಕೆ ಪೂರ್ವಭಾಗಿಯಾಗಿ ಅಭಿಪ್ರಾಯ ಭೇದಗಳನ್ನು ಕುರಿತು ಸಾಕಷ್ಟು ಚರ್ಚಿಸಬಹುದಾಗಿತ್ತು. ಸಂಪಾದಕರು ಯಾವ ಜವಾಬ್ದಾರಿಯನ್ನು ಹೊತ್ತುಕೊಳ್ಳದೆ ಮುಕ್ತರಾಗಿದ್ದಾರೆ. ಇದರಲ್ಲಿ ಸಾಕಷ್ಟು ಬೆಲೆಯುಳ್ಳ ಲೇಖನಗಳು ಇರುವುದಾದರೂ ಸಂಪಾದಕರು ಕೆಲವರ ವೈಯಕ್ತಿಕ ಹೇಳಿಕೆಗಳನ್ನು ನಿರ್ದೇಶಿಸಬಹುದಾಗಿತ್ತು.

ಕನ್ನಡ ಕಾವ್ಯದಲ್ಲಿ ಪರಂಪರೆಯ ಪ್ರಜ್ಞೆ–ಲೇಖನದಲ್ಲಿ ಅವರ ಪೂರ್ವಾಪರಗಳನ್ನು ಆಲೋಚಿಸುತ್ತ ಪರಂಪರೆ ಮತ್ತು ಸಂಪ್ರದಾಯ ಇವೆರಡರ ಅರ್ಥವ್ಯಾಪ್ತಿಯನ್ನು ನಿರ್ದೇಶಿಸಿ–ಇಂಗ್ಲಿಷ್ ಕಾವ್ಯಸಂದರ್ಭದಲ್ಲಿ ಸಂಪ್ರದಾಯ (Tradition) ಪಡೆದುಕೊಂಡಿರುವ ಹೊಸ ಅರ್ಥದ ವಿವರಣೆ ಇದೆ. 'ಯುರೋಪಿನ ನಾಲ್ಕಾರು ಭಾಷೆಗಳಲ್ಲಿಯ ಅಲ್ಲದೆ ಸಂಸ್ಕೃತ ಸಾಹಿತ್ಯದ ನಿಕಟ ಪರಿಚಯವುಳ್ಳ' ಎಲಿಯಟ್ಟನ ನವ್ಯ ಪ್ರಜ್ಞೆಗೆ ಸಂಪ್ರದಾಯದ ಬಗ್ಗೆ ಪ್ರೇರಕವಾಗಿ ಅದು ಆತನ ವೈಯಕ್ತಿಕ ಜರೂರಿಯಾಗಿದ್ದನ್ನು ಎತ್ತಿ ಹೇಳಿ ಹೊಸ ಕಾವ್ಯ ಸಾಹಿತ್ಯ ಸಂದರ್ಭದಲ್ಲಿ ಸಂಪ್ರದಾಯಕ್ಕೆ ಬೇರೆ ಅರ್ಥಪ್ರಾಪ್ತವಾಗಿರುವುದನ್ನು ಸಕಾರಣವಾಗಿ ಮಂಡಿಸಿದ್ದಾರೆ. ಸಾಹಿತ್ಯದ ಬೆಳವಣಿಗೆಗೆ ಸಂಪ್ರದಾಯದ ಬಗ್ಗೆ ಸಹಜವಾದುದೆಂಬುದನ್ನು ಹಾಗೂ ಸಂಪ್ರದಾಯ ನಿರ್ಮಾಣವೆಂಬುದು ಸಾಂಸ್ಕೃತಿಕ ಕ್ರಿಯೆಯಾಗಿರುವುದನ್ನೂ ಶ್ರೀ ಕುರ್ತಕೋಟಿಯವರು ತಮ್ಮ ಲೇಖನದಲ್ಲಿ ಸ್ಫುಟವಾಗಿ ವಿವೇಚಿಸಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಡೆಯುತ್ತ ಸಂಪ್ರದಾಯ ನಿರ್ಮಾಣ ಕ್ರಿಯೆ ಪಂಪನ

ಕಾಲದಿಂದಲೇ ನಡೆದಿರುವುದನ್ನು ಲಕ್ಷ್ಯಕ್ಕೆ ತಂದು ಶ್ರೀ ಜಿ. ಎಸ್. ಶ್ರೀ ಅವರ ಕಾಲದಲ್ಲಿಯೂ ಅಂಥ ಪ್ರಯತ್ನ ನಡೆಯಿತೆಂದು ಹೇಳಿದ್ದನ್ನು ಒಪ್ಪಬಹುದಾದರೂ ಸಂಪ್ರದಾಯ ನಿರ್ಮಾಣ ಸಾಮರ್ಥ್ಯವಿತ್ತೆಂಬುದನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಇಂಗ್ಲಿಷ್ ಗೀತಗಳಿಂದ ಮುಂದೆ ಕನ್ನಡದಲ್ಲಿ "ರೋಮ್ಯಾಂಟಿಕ್ ಕಾವ್ಯ ಬೆಳೆದು ಬಂದದ್ದು ನಿಜವಾದರೂ ಶ್ರೀಯುತರು ಅದನ್ನು ರಚಿಸಿದ್ದು ಅಭಿಜಾತ ದೃಷ್ಟಿಯಿಂದ ಎಂದು ಹೇಳಬಹುದೊ ಏನೊ!" ಎಂಬ ಅಭಿಪ್ರಾಯ ಸಂದೇಹಾಸ್ಪದವೆನ್ನಿಸುತ್ತದೆ. ಇದೇ ಜಾಡಿನಲ್ಲಿ ಶ್ರೀ ಮಾಸ್ತಿ, ಪು. ತಿ. ನ. ಗೋಪಾಲಕೃಷ್ಣ ಅಡಿಗ ಇವರು ತೋರಿದ ಸಂಪ್ರದಾಯ ಪ್ರಜ್ಞೆಯನ್ನು ಗುರ್ತಿಸಿದ್ದಾರೆ.

ಶ್ರೀ ವಿ. ಸೀ.. ಡಿ.ವ್ಹಿ.ಜಿ. ಹಾಗೂ ಕುವೆಂಪು ಇವರ ಸಾಹಿತ್ಯದಲ್ಲಿ ಪರಂಪರೆಯ ಪ್ರಜ್ಞೆ ಬೇಕಾದಷ್ಟಿದ್ದು ಲೇಖಕರು ಯಾಕೆ ಗಮನಿಸಲಿಲ್ಲವೊ? ಹೇಂದ್ರೆಯವರಂತೆ ಕುವೆಂಪು ಕೂಡ ಸಂಪ್ರದಾಯದ ಶಕ್ತಿ-ಸಾಮರ್ಥ್ಯಗಳನ್ನು ತಮ್ಮದಾಗಿಸಿಕೊಂಡು 'ರಾಮಾಯಣ ದರ್ಶನಂ' ದಂತಹ ಕೃತಿಯನ್ನು ರಚಿಸಿದ್ದು ಸಂಪ್ರದಾಯ ಪ್ರಜ್ಞೆಯನ್ನು ಗಟ್ಟಿಗೊಳಿಸಲಿಲ್ಲವೆ ? ಪಂಪನ ಹಾಗೆ ಕುವೆಂಪುಕಾವ್ಯ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿದ್ದನ್ನು. ಅವರ ಕಾವ್ಯ, ಕಾದಂಬರಿಗಳಲ್ಲಿ ಅಭಿವ್ಯಕ್ತವಾಗಿರುವ ಮಾನವೀಯ ಶೀಲ – ಸಂಸ್ಕೃತಿ – ಹಾಗೂ ಅಭಿಜಾತದೃಷ್ಟಿ ಇತ್ಯಾದಿ ಶ್ರೀ ಕುರ್ತಕೋಟಿಯವರ ಲೇಖನದಲ್ಲಿ ಕಣ್ಣಿಗೆ ಹೊಡೆಯುವ ದೊಡ್ಡ ಕೊರತೆಗಳೆನಿಸುತ್ತವೆ.

ರಾಷ್ಟ್ರೀಯತೆ ನವೋದಯ ಕಾವ್ಯದಲ್ಲಿ – ಎಂಬ ಲೇಖನವನ್ನು ವೃಷಭೇಂದ್ರಸ್ವಾಮಿಯವರು ತುಂಬ ಶ್ರಮಪಟ್ಟು–ಕಾವ್ಯದಲ್ಲಿ ಹರಡಿಕೊಂಡಿರುವ ರಾಷ್ಟ್ರೀಯತೆಯ ಅಂಶಗಳನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಕೊನೆಯ ಕಡೆಗೆ ನವ್ಯ ಮಾರ್ಗದ ಕುರಿತು ವ್ಯಕ್ತಮಾಡಿದ ಅಭಿಪ್ರಾಯಗಳು 'ಹಿರಿಕವಿಗಳನ್ನು ಬಿಟ್ಟರೆ ಕಿರಿ ಕವಿಗಳಲ್ಲಿ ಈ ಬಗೆಗೆ ಸಮರ್ಥವಾದ ಅಭಿವ್ಯಕ್ತಿ ನೀಡಿದವರು ಕಡಿಮೆ' ಎಂಬ ಮಾತು ಸತ್ಯವಾದರೂ ಬರಿಯ ಹೆಮ್ಮೆ ಹಾಗೂ ಅಭಿಮಾನಗಳಿಂದ ಮಾತ್ರ ರಾಷ್ಟ್ರೀಯತೆ ಪ್ರೋಷಿತವಾಗದೆ ಕಿರಿಕವಿಗಳಲ್ಲಿ ಅಲ್ಲಲ್ಲಿ ಕಂಡುಬರುವ ಚಿಕಿತ್ಸಕ ಧೋರಣೆಯು ರಾಷ್ಟ್ರೀಯತೆಯನ್ನು ಬಲಗೊಳಿಸುವ ಕಾರ್ಯದಲ್ಲಿ ನೆರವಾಗಿಲ್ಲವೆ ? 'ನವೋದಯ ಸಾಹಿತ್ಯಕ್ಕೆ ಮಣ್ಣಿನ ವಾಸನೆ ಬೇಕೆಂದು ಬರೆಯಹೊರಟ ನವ್ಯಕವಿಗಳು ನೂತನ ಮಾರ್ಗವೊಂದನ್ನು ಹಿಡಿದರೆಂಬುದು ಸಂತಸದ ಮಾತಾದರೂ ಮಣ್ಣಿಗೊ ಬೇರೊಂದು ವಾಸನೆಯನ್ನು ನೀಡುತ್ತಿರುವ ನವೋನವ್ಯ ಕವಿಗಳು ಕಟ್ಟಬೇಕಾಗಿರುವ ನೂತನ ರಾಷ್ಟ್ರಕ್ಕೆ ಏನು ನೀಡಬಲ್ಲರು ? ' – ಎಂಬ ಪ್ರಶ್ನೆಯು ಉತ್ತರವನ್ನೂ ಬೇಗೊಂಡಿದೆ.

ರಾಷ್ಟ್ರೀಯತೆ ನವ್ಯಕಾವ್ಯದಲ್ಲಿ – ಲೇಖನದಲ್ಲಿ ಅಡಿಗರ ನವ್ಯಕಾವ್ಯದ ಕುರಿತ ಶ್ರೀ ಕುರ್ತಕೋಟಿಯವರ ಅಭಿಪ್ರಾಯವನ್ನು ಎಳೆದು ತಂದು ರಾಮಾನುಜನ್‌ರ ಕಾವ್ಯದ ಕುರಿತ ಚರ್ಚೆಗೆ ಅರ್ಥವಿರುವದಾದರೂ ರಾಷ್ಟ್ರೀಯತೆಯನ್ನು ಕುರಿತು ಮಾತನಾಡುವುದು ಸಾಂದರ್ಭಿಕವೆನ್ನಿಸುವುದಿಲ್ಲ. 'ಅಡಿಗರ ನವ್ಯಕಾವ್ಯ ಪಾಶ್ಚಾತ್ಯರ ಅನುಕರಣ

ವೆಂದು ಹಾಗೆಂದು ರಾಮಾನುಜನ್ ಕಾವ್ಯ ಅನುಕರಣವೆಂದು'– ಹೀಗೆ ರಾಷ್ಟ್ರೀಯತೆಯನ್ನು ಗುರ್ತಿಸುವ ಪ್ರಜ್ಞೆಯೇ ಹೋಗಿಬಿಟ್ಟು ಇಬ್ಬರು ಕವಿಗಳ 'ಅನುಕರಣ'ದ ಪ್ರಸ್ತಾಪ ಮಾಡಿರುವ ಶ್ರೀ ಸುಮತೀಂದ್ರ ನಾಡಿಗ್ ಅವರು ಶ್ರೀ ಗೋಕಾಕ, ಕಣವಿ, ಶಿವರುದ್ರಪ್ಪ, ಪಾಟೀಲ-ಈ ಮುಂತಾದವರ ಕಾವ್ಯದಲ್ಲಿ ಅಲ್ಲಲ್ಲಿ ವ್ಯಕ್ತಗೊಂಡ ರಾಷ್ಟ್ರೀಯ ಪ್ರಜ್ಞೆಯನ್ನಿಲ್ಲಿ ಗುರ್ತಿಸುವುದನ್ನು ಮರೆತಿದ್ದಾರೆ.

ನವೋದಯ ಕಾವ್ಯದಲ್ಲಿ–ತಾತ್ತ್ವಿಕ ಹಿನ್ನೆಲೆ ಇರುವ ಐದಾರು ಕವಿಗಳನ್ನು ಎತ್ತಿಕೊಂಡು ಅವರ ಕಾವ್ಯದ ಕುರಿತ ಅಭ್ಯಾಸ–ಅಭಿಪ್ರಾಯಗಳ ಕುರಿತು ಯಾವ ತಕರಾರೂ ಇಲ್ಲ. ಆದರೆ ತಾತ್ತ್ವಿಕ ಹಿನ್ನೆಲೆಯಲ್ಲಿ ಬದುಕನ್ನು ಅನುಭವಿಸಿದ, ತಾತ್ತ್ವಿಕ ಸ್ತರಗಳನ್ನು ಅರ್ಥಮಾಡಿಕೊಳ್ಳಲು ಶ್ರಮಿಸಿದ ಹಾಗೂ ಅಂಥ ಅನುಭಾವವನ್ನು ಕಾವ್ಯದ ಮೂಲಕ ಸಮರ್ಥವಾಗಿ ಪ್ರಕಟಿಸಲು ಹೆಣಗಿದ ಮಧುರಚೆನ್ನರ ಉಲ್ಲೇಖವೇ ಈ ಲೇಖನದಲ್ಲಿ ಇಲ್ಲದಿರುವುದು ಆಶ್ಚರ್ಯವನ್ನುಂಟು ಮಾಡುವ ಹಾಗಿದೆ. ಮಧುರಚೆನ್ನರ ಕಾವ್ಯವನ್ನು ಈ ಸಂದರ್ಭದಲ್ಲಿ ಗಮನಿಸದಿರುವುದಕ್ಕೆ ಕಾರಣವೇನು ತಿಳಿಯದು. ಮಹತ್ವದ ಐದಾರು ಜನ ತಾತ್ತ್ವಿಕ ಹಿನ್ನೆಲೆಯುಳ್ಳ ಕವಿಗಳ ಪಟ್ಟಿಯಲ್ಲಿ ಮಧುರಚೆನ್ನರ ಕಾವ್ಯದ ಹಿನ್ನೆಲೆಯ ಕುರಿತು ಮಾತು ಬರಬೇಕಿತ್ತು. ವಿಚಾರಸಂಕಿರಣದ ಕೊನೆಯಲ್ಲಿ ನಡೆದ ಚರ್ಚೆ ಪ್ರತಿ ಚರ್ಚೆಯಲ್ಲಿಯೂ 'ಮಧುರಚೆನ್ನ'ರ ಕಾವ್ಯದ ಪ್ರಸ್ತಾಪವಿಲ್ಲದಿರುವುದು ಸೋಜಿಗವಲ್ಲದೆ ಮತ್ತೇನು? ತಾತ್ತ್ವಿಕ ಹಿನ್ನೆಲೆಯನ್ನು ಗುರ್ತಿಸುವ ಪ್ರಜ್ಞಾವಂತರು ಯಾರೂ ವಿಚಾರ ಸಂಕಿರಣದಲ್ಲಿ ಇರಲಿಲ್ಲವೆ?– ಈ ಮುಂತಾದ ಪ್ರಶ್ನೆಗಳು ಏಳುತ್ತವೆ. ತಾತ್ತ್ವಿಕ ಹಿನ್ನೆಲೆಯುಳ್ಳ ನವ್ಯಕಾವ್ಯದ ಕುರಿತು ಬರೆಯುತ್ತ ಶ್ರೀ ಅನಂತಮೂರ್ತಿ ಅವರು ಅಡಿಗರ ಕಾವ್ಯಕ್ಕಿರುವ ತಾತ್ತ್ವಿಕ ಹಿನ್ನೆಲೆಯನ್ನು ತುಂಬ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ತಾತ್ತ್ವಿಕ ಒತ್ತಡದಿಂದ ಬಂದ ಕಸಬುದಾರಿಕೆ ಮತ್ತು ತಾತ್ತ್ವಿಕ ಒತ್ತಡವಿಲ್ಲದ ಸೊಗಸುಗಾರಿಕೆಯ ವ್ಯತ್ಯಾಸವೇನೆಂಬುದನ್ನು ಎತ್ತಿತೋರಿದ್ದಾರೆ. ಅಲ್ಲಲ್ಲಿ 'ಎಲ್ಲಾ ಸೆಮಿನಾರ್'ಗಳಲ್ಲಿ ಚರ್ಚಿತವಾಗುವ 'ನಮ್ಮ ಕವಿಗಳು ಪಾಶ್ಚಾತ್ಯ ತತ್ವಗಳಿಂದ ಪ್ರಭಾವಿತರಾಗಿ ಅನುಕರಣಶೀಲರಾಗುತ್ತಿದ್ದಾರೆ. ಭಾರತೀಯ ಪರಂಪರೆಯಲ್ಲಿಯೆ ಯಥೇಚ್ಛ ತತ್ವಗಳು ಸಿಕ್ಕುವದಿಲ್ಲವೆ?'– ಹೀಗೆ ನಿಷ್ಪ್ರಯೋಜಕವಾಗಿ ಚರ್ಚಿಸಲ್ಪಡುವ ವಿಷಯವನ್ನೆತ್ತಿಕೊಂಡು ಸಾಧಕ–ಬಾಧಕಗಳನ್ನು ಸೂಚಿಸಿದ್ದು ಕವಿಗಳೆನ್ನಿಸಿಕೊಳ್ಳುವವರ ಗಮನ ಸೆಳೆಯುವ ಹಾಗಿದೆ. 'ಈಚೆಗೆ ನವ್ಯಕಾವ್ಯ ಬರೆಯುತ್ತಿರುವ ಬಹಳ ಮಂದಿ ತರುಣರು ಹೆಚ್ಚಾಗಿ ಇಂಗ್ಲಿಷ್ ಸಾಹಿತ್ಯದಿಂದ ಪ್ರಭಾವಿತರಾದವರು. ನಾವು ಬಹಳ ಮಂದಿ ಇಂಗ್ಲಿಷ್ ಉಪಾಧ್ಯಾಯರು.' ಹೀಗೆ ಮುಂದುವರಿಯುವ ಅವರ ಮಾತುಗಳನ್ನು ಲೇಖನದಿಂದ ಬಿಟ್ಟುಬಿಡಬಹುದಾಗಿತ್ತು. 'ಭಾರತೀಯ ಲೇಖಕರಾದ ನಾವು ಇಂಗ್ಲಿಷಿನಿಂದ ಮಾತ್ರವಲ್ಲದೆ ಬೇರೆ ಜನಾಂಗಗಳಿಂದಲೂ ಕಲಿಯಬಹುದಾದದ್ದು ಬಹಳವಿದೆ.' ಮತ್ತೆ ಮೂಲ ವಿಷಯಕ್ಕೆ ಬಂದಿದ್ದಾರೆ. ಪ್ರೇಮದಷ್ಟು ತೀವ್ರವಾಗಿ ಭಾವಿಸಬಲ್ಲ ಭಾರತೀಯ ಲೇಖಕರಿಗೆ ತಾತ್ತ್ವಿಕ ಹಿನ್ನೆಲೆಯ ಆವಶ್ಯಕತೆಯ

ಕುರಿತು ಒತ್ತಿ ಹೇಳಿರುವುದು ತುಂಬ ಗಮನಾರ್ಹ ಅಂಶವಾಗಿದೆ. ಬರೆಯುವ ಕವಿಗಳನ್ನು ಉದ್ದೇಶಿಸಿರುವ ಶಿಸ್ತಿನ ವಿಚಾರದ ಅನಂತಮೂರ್ತಿಯವರ ಮಾತುಗಳು ತುಂಬ ಪ್ರಯೋಜಕ. ಅವರು ಲೇಖನದ ಕೊನೆಯಲ್ಲಿ ಎತ್ತಿರುವ ನಾಲ್ಕು ಪ್ರಶ್ನೆಗಳು ಕಾವ್ಯದ ವಿಚಾರಣೆಗೆ ಅವಶ್ಯಕವಾದ ಒಂದು ಸಮೀಕರಣದ ಹಾಗೆ ಸೆಳೆಯುತ್ತದೆ.

ಸಾಮಾಜಿಕ ಪ್ರಜ್ಞೆ – ನವೋದಯ ಕಾವ್ಯದಲ್ಲಿ – ಶ್ರೀ ಗಿರಡ್ಡಿ ಅವರು ಕನ್ನಡದಲ್ಲಿ ಸಾಮಾಜಿಕಪ್ರಜ್ಞೆ ಎಷ್ಟರಮಟ್ಟಿಗೆ ಅನಿವಾರ್ಯವೆಂಬುದರ ಪೂರ್ವಾಪರಗಳನ್ನು ಆಲೋಚಿಸಿ ಕನ್ನಡ ನವೋದಯ ಕಾವ್ಯದಲ್ಲಿ ಬಹುವಾಗಿ ಸಾಮಾಜಿಕಪ್ರಜ್ಞೆಯ ಅಭಾವ ಇರುವುದನ್ನು ಸ್ಥೂಲವಾಗಿ ಗಮನಿಸಿದ್ದಾರೆ. ಭಾವಗೀತೆ ಅರ್ಥದ ಮೇಲೆ ಗಾಡಿ ಹೊಡೆದುಕೊಂಡು ಹೋಗಿ ಒಗ್ಗಾಲಿಯಾದ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ಸಾಮಾಜಿಕ ಪ್ರಜ್ಞೆಯನ್ನೊಳಗೊಂಡ ಕೆಲವು ಕವನ ಉದಾಹರಿಸಿದ್ದಾರೆ. ಸ್ವಾತಂತ್ರ್ಯಪೂರ್ವದ ಹಾಗೂ ಸ್ವಾತಂತ್ರ್ಯ ಬಂದಾಗಿನ ಸ್ಥಿತಿಗಳೆರಡನ್ನೂ ಅನುಲಕ್ಷಿಸಿ – ನವೋದಯ ಕವಿಗಳಲ್ಲಿ ಸಾಮಾಜಿಕ ಪ್ರಜ್ಞೆ ಯಾಕೆ ಅಷ್ಟೊಂದು ತೀವ್ರವಾಗಿಲ್ಲವೆಂಬುದನ್ನು ಸಮರ್ಥವಾಗಿ ನಿರೂಪಿಸಿ, ಸಾಮಾಜಿಕ ಸಮಸ್ಯೆಗಳು ಹೊರಗಿನಿಂದ ಆಕರ್ಷಿಸಿದಾಗ ಆಗುವ ಅಪಾಯವನ್ನು ಸಂಕೇತಿಸಿದ್ದಾರೆ.

ಸಾಮಾಜಿಕಪ್ರಜ್ಞೆ – ನವ್ಯಸಾಹಿತ್ಯದಲ್ಲಿ – ಅಡಿಗರು ಜನಸಂಘದ ಹುರಿಯಾಳಾಗಿ ಸ್ಪರ್ಧೆಗೆ ನಿಂತು ಸೋತ ಉದಾಹರಣೆಯಿಂದ – ಸ್ವಂತದ ಅನಿಸಿಕೆ, ಅಭಿಪ್ರಾಯಗಳನ್ನು ಧಾರಾಳವಾಗಿ ಪ್ರಕಟಿಸಿರುವಲ್ಲಿ ಅರ್ಥವಿರುವುದಾದರೂ ಸಾಹಿತ್ತಿಕ ವಿಚಾರಗಳನ್ನು ಬಿಟ್ಟು ರಾಜಕೀಯ ವಿಷಯವನ್ನು ಹೆಚ್ಚು ಪುಟಗೊಟ್ಟು ಮಾತಾಡಿದ್ದು ಇಲ್ಲಿ ಅಪ್ರಸ್ತುತ ವೆನ್ನಿಸುತ್ತದೆ. ಬೇಂದ್ರೆಯವರ ಕಾವ್ಯದ ಕುರಿತು ಏನನ್ನು ಹೇಳಬಹುದೆಂದು ಗೊತ್ತಿರು ವುದನ್ನು ಹೇಳಿದ ಮೇಲೆ ದೊಡ್ಡ ನಿರಾಶೆಯ ಚಿತ್ರವೊಂದನ್ನು ಕೊಟ್ಟು ಲೇಖಕ ಎಂಥ ಸಂದರ್ಭದಲ್ಲಿದ್ದಾನೆಂಬುದನ್ನು ಹೇಳಿದ್ದಾರೆ. 'ಸಾಮಾಜಿಕ ಪ್ರಜ್ಞೆ – ನವ್ಯ ಸಾಹಿತ್ಯದಲ್ಲಿ'– ವಿಷಯ ಹೀಗಿದ್ದರೂ ಇಬ್ಬರು ಕವಿಗಳನ್ನು ಮಾತ್ರ ನಿರ್ದೇಶಿಸಿ, ರಾಜಕೀಯಕ್ಕೆ ಸಂಬಂಧಪಟ್ಟ ಮಾತನ್ನು ಜಾಸ್ತಿ ಪ್ರಮಾಣದಲ್ಲಿ ಆಡಿದ್ದನ್ನು ಇಲ್ಲಿ ಬಿಡಬಹುದಾಗಿತ್ತು.

ಜನಪದ ಸತ್ವ–ನವೋದಯ ಕಾವ್ಯದಲ್ಲಿ–ಕಂಬಾರರು ಜಾನಪದ ಕಾವ್ಯದ ಕೆಲವು ಮಹತ್ವದ ಲಕ್ಷಣಗಳನ್ನು ಹೇಳುತ್ತ ಬೇಂದ್ರೆಯವರ ಕಾವ್ಯದ ಹೋಲಿಕೆ ಕೊಡುತ್ತ ಹೋಗಿದ್ದಾರೆ. 'ಪ್ರಾಥಮಿಕ ಅವಸ್ಥೆಗಳಿಗಾಗಿ ಅವರ ಕಾವ್ಯ ಹೆಚ್ಚೆಂದರೆ ಜನಪದ ಹಾಡಾಗುತ್ತದೆ. ಅದಕ್ಕಿಂತ ಹೆಚ್ಚಲ್ಲ.' ಎಂದಿರುವುದು ಇನ್ನೊಂದು ಚರ್ಚೆಯನ್ನು ಎಬ್ಬಿಸುವ ಹೇಳಿಕೆಯಾಗಿದೆ. ಯಾಕೆಂದರೆ ಜಾನಪದ ಸಂಸ್ಕೃತಿ-ಪ್ರಭಾವ–ಪರಿಸರಗಳಿಗೂ ಬೇಂದ್ರೆಯವರ ಬದುಕಿನ, ಅನುಭವ ಸಂವೇದನೆಗೂ ಅಂತರವಿದ್ದು ಸುಸಂಸ್ಕೃತ ಪ್ರಜ್ಞೆ ಅವರ ಕಾವ್ಯದ ಸಾಕ್ಷಿ ಪ್ರಜ್ಞೆಯಾಗಿರುವುದನ್ನು ಲೇಖಕರು ಗಮನಿಸಿಲ್ಲ. ಮಧುರ– ಚೆನ್ನರ ಕುರಿತು ಎರಡು ಮಾತು ಆಡಿದ ಹಾಗೆ ಬೆಟಗೇರಿ ಅವರ ಕಾವ್ಯದಲ್ಲಿನ ಜನಪದ

ಸತ್ವಕುರಿತು ಬಂದಿದ್ದನ್ನು ಹೇಳಿದ್ದರೆ ಲೇಖನಕ್ಕೆ ಸಮಗ್ರತೆ ಬರಬಹುದಿತ್ತು.

ಜನಪದ ಸತ್ವ–ನವ್ಯಕಾವ್ಯದಲ್ಲಿ-ಲೇಖನದಲ್ಲಿ ಕಂಬಾರ, ಕಂಪಿ, ಮೊಕಾಶಿ, ಪಾಟೀಲ ಮುಂತಾದವರ ಕಾವ್ಯದಲ್ಲಿ ಜನಪದ ಸತ್ವ ಹೇಗೆ ಬಳಕೆಯಾಗುವದೆಂಬುದನ್ನು ಹೇಳುವ ಪ್ರಯತ್ನ ಲೇಖನದಲ್ಲಿರುವದಾದರೂ ಪಟ್ಟಣಶೆಟ್ಟಿ ಮುಂತಾದವರ ಕಾವ್ಯದಲ್ಲಿಯೂ ಜನಪದ ಸತ್ವವಿರುವದನ್ನು ಲೇಖಕರು ಗುರ್ತಿಸಲು ಮರೆತಿದ್ದಾರೆ.

ನವೋದಯ ಕಾವ್ಯದಲ್ಲಿ ಭಾಷಾಪ್ರಯೋಗ-ಲೇಖನದಲ್ಲಿ ಶ್ರೀ ಜಿ. ಎಚ್. ನಾಯಕ ಅವರು ನವೋದಯ ಕಾವ್ಯದ ಚಾರಿತ್ರಿಕ ಹಿನ್ನಲೆಯಲ್ಲಿ ಭಾಷೆ ಹೇಗೆ ಹಳೆಯ ಬಂಧಗಳಿಂದ ಮುಕ್ತಗೊಂಡು ಸ್ವತಂತ್ರವಾಯಿತು ಹಾಗೂ ಅದು ಹೇಗೆ ಅನುಭವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಬಂತೆಂಬುದನ್ನು ಚೆನ್ನಾಗಿ ಸಮೀಕ್ಷೆ ಮಾಡಿದ್ದಾರೆ.

ಭಾಷಾ ಪ್ರಯೋಗ-ನವ್ಯಕಾವ್ಯದಲ್ಲಿ–ಭಾಷೆ ಬರಿಯ ವಿಚಾರಗಳ ವಾಹಕವಾಗದೆ, ತಮ್ಮ ಅನುಭವವನ್ನು ಶೋಧಿಸಿಕೊಳ್ಳುವ :ತಮ್ಮನ್ನೇ: ತಾವು ಮಾತಿನಲ್ಲಿ ಹುಡುಕಿಕೊಳ್ಳುವ ಆತ್ಮಾನ್ವೇಷಣದ ಸಾಧನವಾಗಿರುವುದೆಂದು ಲೇಖಕರು ಗಮನಿಸಿದ್ದಾರೆ. ಹೊಸ ಕವಿಗಳಲ್ಲಿ ಭಾಷೆ ತನ್ನೆಲ್ಲ ಸಾಧ್ಯತೆಗಳನ್ನು ವಿಸ್ತರಿಸಿಕೊಂಡು ನವೋದಯ ಕಾವ್ಯಕ್ಕಿಂತಲೂ ಅದು ಭಿನ್ನವಾಗಿ ಬಳಕೆಯಾಗುತ್ತಿರುವದನ್ನು ಲಕ್ಷಿಸಿದ್ದಾರೆ. ಭಾಷೆ ಯಾವ ಮಡಿವಂತಿಕೆಯಿಲ್ಲದೆ ಪ್ರಯೋಗಗೊಳ್ಳುವುದನ್ನು ನವೋದಯ ಹಾಗೂ ನವ್ಯಕಾವ್ಯದಲ್ಲಿ ಭಾಷೆ ವ್ಯತ್ಯಾಸಗೊಳ್ಳುವುದನ್ನು ಭಾಷೆಯ ಸಾಮರ್ಥ್ಯವನ್ನು ಇಲ್ಲಿ ಸಮೀಕ್ಷಿಸಿದ್ದಾರೆ. ಕೆ. ಎಸ್. ನ. ಅವರ ಕುರಿತು 'ಬೆರಗು ಕವಿಸುವಷ್ಟು ಜೀವಸಮೃದ್ಧವಾದ ಚಿತ್ರಭಾಷೆ' ಈ ತರಹದ ಹೇಳಿಕೆಗಳಲ್ಲಿ ಸ್ಪಷ್ಟತೆ ಕಂಡು ಬರುವುದಿಲ್ಲ.

ಛಂದಸ್ಸಿನ ಪ್ರಯೋಗಗಳಿಗೆ ಸಂಬಂಧಿಸಿದ ಎರಡು ಲೇಖನಗಳಿದ್ದು–ಇಬ್ಬರೂ ಲೇಖಕರು ಛಂದಸ್ಸಿನಲ್ಲಿ ಆಗುತ್ತಬಂದ ಬದಲಾವಣೆಗಳನ್ನು ಗುರ್ತಿಸಿದ್ದಾರೆ. ಛಂದಸ್ಸನ್ನು ಬಳಸುವಾಗ ಆಡುಮಾತಿನ ಜೀವ ಸ್ವರಗಳು ಕೆಡದಂತೆ ನೋಡಿಕೊಳ್ಳಬೇಕೆಂಬ ಅಭಿಪ್ರಾಯ ಗಮನಾರ್ಹವಾಗಿದೆ.

ಕವಿಯ–ವ್ಯಕ್ತಿತ್ವ–ನವೋದಯ ಕಾವ್ಯದಲ್ಲಿ ಮೊಕಾಶಿ–ಅವರು "ಕಾವ್ಯವು ವ್ಯಕ್ತಿತ್ವದ ಅಭಿವ್ಯಕ್ತಿ" ಎಂಬ ವ್ಯಾಖ್ಯೆ, ಹೇಗೆ ನಿರರ್ಥಕವೆಂಬುದನ್ನು ವಿಚಾರಿಸುತ್ತ "ವ್ಯಕ್ತಿತ್ವ"ದ ಸರಿಯಾದ ಅರ್ಥವನ್ನು ಕ್ರೋಢೀಕರಿಸಿದ್ದಾರೆ. ವ್ಯಕ್ತಿತ್ವದ ವಿವಿಧ ರೂಪಗಳನ್ನು ಎತ್ತಿತೋರಿದ್ದಾರೆ. ಪಾಶ್ಚಿಮಾತ್ಯ–ಪೌರ್ವಾತ್ಯ ವಿಚಾರಗಳೆರಡೂ ಇಲ್ಲಿವೆ. ಅವೆಲ್ಲವುಗಳ ಹಿನ್ನೆಲೆಯಲ್ಲಿ ಮೊಕಾಶಿಯವರು ತಮ್ಮ ಸ್ವಂತದ ವಿಚಾರಗಳನ್ನು ಸಮರ್ಥವಾಗಿ ಮಂಡಿಸಿದ್ದಾರೆ.

ಕವಿಯ ವ್ಯಕ್ತಿತ್ವ ನವ್ಯಕಾವ್ಯದಲ್ಲಿ-ಲೇಖನ ಇಲ್ಲಿ ಇರಬೇಕಾದದ್ದು ಅದಕ್ಕೆ ಬದಲು 'ಕಾವ್ಯರಚನಾಶಿಲ್ಪ' ಎಂಬ ಲೇಖನವಿದ್ದು–ವಿ. ಸೀ ಅವರ "ಶಿಲ್ಪಿ" ಕವನ ಭಾಗವನ್ನು ಉದ್ಧರಿಸಿ ಕಾವ್ಯರಚನಾ ಶಿಲ್ಪಕ್ಕೆ ಸಂಬಂಧಿಯಾಗಿ ಉಪಯುಕ್ತ ಮಾತುಗಳು ಇಲ್ಲಿವೆ. ಲೇಖಕರು ಹಳೆಗನ್ನಡ ಕಾವ್ಯಕ್ಕೂ ಕೈಹಾಕಿರುವುದು–ಈ ಸಂದರ್ಭದಲ್ಲಿ ಅಪ್ರಸ್ತುತ

ಪೆನಿಸುತ್ತವೆ. ನವೋದಯ–ನವ್ಯಕಾವ್ಯಗಳಲ್ಲಿಯ ಕಾವ್ಯ ರಚನಾ ಶಿಲ್ಪವನ್ನು ಗಮನಿಸಿದ್ದರೆ ಒಟ್ಟು ಹೊದಿಕೆ ಸಾಧ್ಯವಾಗುತಿತ್ತು.

ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೋತ್ತರಗಳು ಸ್ವಾರಸ್ಯಕರವಾಗಿದ್ದು ಕೆಲವು ಅಭಿಪ್ರಾಯ ಭೇದಗಳನ್ನು ತಿಳಿಯಕೊಳ್ಳಲು ಸಹಾಯಕವಾಗುತ್ತವೆ. ನವೋದಯ–ನವ್ಯ ಕಾವ್ಯ ವಿಷಯ ಮೇಲೆ ಬೆಳಕು ಚೆಲ್ಲುವ ಹಾಗೂ ಮುಂದಿನ ವಿಮರ್ಶೆಗೆ ಸಾಮಗ್ರಿಯನ್ನು ಒದಗಿಸಬಲ್ಲ ಈ ಲೇಖನಗಳು ತುಂಬ ಪ್ರಯೋಜನಕಾರಿಯಾಗಿವೆ. ಆದರೆ ಕರ್ನಾಟಕದ ಎಲ್ಲ ಭಾಗಗಳನ್ನು ಪ್ರತಿನಿಧಿಸುವ ಲೇಖನಗಳು ಸಂಕಲಿತವಾಗಿದ್ದರೆ ಈ ಗ್ರಂಥಕ್ಕೆ ಇನ್ನೂ ಹೆಚ್ಚಿನ ಪ್ರಾತಿನಿಧಿಕ ಸ್ವರೂಪ ಬರಬಹುದಾಗಿತ್ತು.

★ ಬುದ್ದಣ್ಣ ಹಿಂಗಮಿರೆ

ಇದು ಜೀವನ (ಪ್ರಬಂಧ ಸಂಕಲನ) ಲೇಖಕರು : ಶ್ರೀ ಸದಾಶಿವ ಒಡೆಯರ ಬೆಲೆ : ೩–೦೦ ಪ್ರಕಾಶಕರು: ಸಾಹಿತ್ಯ ಭಾಂಡಾರ, ಹುಬ್ಬಳ್ಳಿ.

ಸುಸಂಸ್ಕೃತ ಸಹೃದಯಿ, ಸತತಾಭ್ಯಾಸಿ, ಸೃಜನಶೀಲ ಸಾಹಿತಿ ಶ್ರೀ ಸದಾಶಿವ ಒಡೆಯರರು ಒಳ್ಳೆಯ ಬದುಕಿನ ವ್ಯಾಖ್ಯಾನ ಮಾಡಿದ್ದಾರೆ. ಈ ಪುಟ್ಟ ಹೊತ್ತಿಗೆಯಲ್ಲಿ ಸಂಕಲನಗೊಂಡಿರುವ ಹನ್ನೊಂದು ಪ್ರಬಂಧಗಳಲ್ಲಿ ಪ್ರಪಂಚದ ವಿಖ್ಯಾತ ವಿಚಾರವಾದಿಗಳನೇಕರ ಅಮೂಲ್ಯ ವಿಚಾರಸರಣಿಗಳನ್ನು ಸರಪಳಿಗೊಳಿಸಿದ್ದಾರೆ. ಹೆಚ್ಚಿನವು ಅನುವಾದಗಳಾದರೂ 'ಜೀವನ ಕಲೆ', 'ರೀತಿ–ನೀತಿ', 'ಮಾನವತೆ' ಕುರಿತಾದ ಪ್ರಬಂಧಗಳು ಅವರ ಸ್ವಂತಿಕೆಯನ್ನೂ, ಕಲಾಪೂರ್ಣತೆಯನ್ನೂ ಮೆರೆಯುತ್ತಿವೆ. ಅನುವಾದಗಳು ಕೂಡ ತೀರ ಸರಳ, ನಿರರ್ಗಳ. ಮೂಲಕ್ಕೆ ಹೆಚ್ಚು ಹತ್ತಿರ ಬಂದಿವೆ. ಭಾಷೆ–ಭಾವಗಳ ಹೊಂದಾಣಿಕೆ ಅಪೂರ್ವವಾಗಿ ಒಡಮೂಡಿದೆ. "ದೇವಮಾನವ ಅಲ್ಬರ್ಟ ಶ್ವಾಯಿಟ್ಝರ", "ಜಗಜ್ಜ್ಯೋತಿ ಬಸವೇಶ್ವರರು" ಮತ್ತು "ಶಸ್ತ್ರಚಿಕಿತ್ಸೆಯ ಮಹಾ ಗಾರುಡಿ (ಪದ್ಮಶ್ರೀ ಡಾ. ಆರ್. ಬಿ. ಪಾಟೀಲರು) ಮೊದಲಾದವು ಒಡೆಯರರು ವ್ಯಕ್ತಿಚಿತ್ರಗಳನ್ನು ಕೊಡುವುದರಲ್ಲಿ, ಜೀವನ ಚರಿತ್ರೆಯನ್ನು ರೂಪಿಸುವಲ್ಲಿ, ಒಳ್ಳೆಯದನ್ನು ಗುರುತಿಸಿ ಗೌರವಿಸುವದರಲ್ಲಿ ದಕ್ಷರು ಎಂಬ ಮಾತನ್ನು ಎತ್ತಿ ಹೇಳುತ್ತವೆ.

ಚಿಕ್ಕ ಮತ್ತು ಚೊಕ್ಕ ವಾಕ್ಯ ಸರಣಿಗಳನ್ನು ಹೆಣೆಯುವಲ್ಲಿ ಒಡೆಯರರು ಸಿದ್ಧಹಸ್ತರು. ಹೇಳುವದನ್ನು ಅವರು ನೇರವಾಗಿ ಹೇಳುತ್ತಾರೆ. ಹೃದಯದುಂಬಿ ಹೇಳುತ್ತಾರೆ. ಅಂತೆಯೇ ಅವರ ಮಾತಿನಲ್ಲಿ ಕಳಕಳಿಯಿದೆ, ಮೊನಚಿದೆ, ವಿನಯವಿದೆ, ಗಾಂಭೀರ್ಯವಿದೆ. ಈ ಪರಿಯ ತೂಕದ ಮಾತುಗಳಿಗೆ ವಚನಗಳ ಪರಿಭಾಷೆ ಹೆಚ್ಚಿನ ಪ್ರಭಾವ ಬೀರಿರಬೇಕು. ಸಹಜತೆಯೂ ಸರಳತೆಯೂ ಅವರ ಸ್ವಾನುಭವದ ಪಕ್ವ ಫಲವಾಗಿರಬೇಕು.

ಅರಿಕೆಯ ಮಾತುಗಳಲ್ಲಿ ಅನುಭವಿ ಶಿಕ್ಷಣ ತಜ್ಞರೊಬ್ಬರ, ಕಳಕಳಿಯ ಮಾನವ

ತಾವಾದಿಯೊಬ್ಬರ ಹೃದಯ ಬಾಯಿಗೆ ಬಂದಿದೆ. ಇಂದಿನ ಯುವಜನಾಂಗದ ಭಾವೀ ಜೀವನದ ರೂಪರೇಷೆಗಿರುವ ಅರೆಕೊರೆ ಕಂಡು! ಅವರ ಚಿಂತನ, ಮಂಥನಗಳ ಕಥೆಯಿದೆ ಅಲ್ಲಿ. ಓದುಗ ಓದಿಯೇ ಮುಂದೆ ಸಾಗಬೇಕು ಅರಿಕೆಯ ನುಡಿಗಳನ್ನು.

ಅರ್ಥಪೂರ್ಣವೂ ಸಾಂಕೇತಿಕವೂ ಆಗಿರುವ ಮುದ್ದಾದ ರಕ್ಷಾಕವಚ, ಅಂದವಾದ ಮುದ್ರಣ ಹೊಂದಿರುವ ಈ ಪ್ರಬಂಧ ಸಂಕಲನ ಕನ್ನಡ ಪ್ರಬಂಧ ಸಾಹಿತ್ಯಕ್ಕೊಂದು ಅಪರೂಪದ ಕಾಣಿಕೆ. ಇಟ್ಟಿರುವ ಬೆಲೆ ಕೈಗೆ ನಿಲುಕುವಂತಹುದು. ಒಡೆಯರಿಂದ ಇಂಥ ಒಳ್ಳೆಯ ಸಾಹಿತ್ಯವನ್ನು ಓದುಗರು ಇನ್ನಷ್ಟು ನಿರೀಕ್ಷಿಸಿದರೆ ತಪ್ಪಲ್ಲ.

★ ಹೇಮ

ಸಾಹಿತ್ಯ ಹಾಗೂ ಸಂಶೋಧನೆ: ಲೇಖಕರು: ವೆಂಕಟರಾಯಾಚಾರ್ಯ, ಸುರತ್ಕಲ್ಲು ಪ್ರಕಾಶಕರು: ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು (ದ. ಕ.) ಬೆಲೆ: ರೂ. ೩-೦೦.

ಕಡಲತೀರದ ಕನ್ನಡ ವಿದ್ವಾಂಸರಲ್ಲಿ ಹೆಸರಿಸತಕ್ಕ ವ್ಯಕ್ತಿಗಳಲ್ಲಿ ವಿದ್ವಾನ್ ಕೆ. ವೆಂಕಟರಾಯಾಚಾರ್ಯರೂ ಒಬ್ಬರು. ಕನ್ನಡ ಸಾಹಿತ್ಯ ಸಂಶೋಧನ ಕ್ಷೇತ್ರಕ್ಕೆ ಆಚಾರ್ಯರದು ಸದ್ದಿಲ್ಲದ ಸೇವೆ. ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಆಗಾಗ ಬೆಳಕು ಕಂಡ ವಿದ್ವತ್ಪೂರ್ಣವೂ, ವಿಚಾರಪೂರ್ಣವೂ ಆದ ಲೇಖನಗಳನ್ನು ಒಂದೆಡೆಯಲ್ಲಿ ಅಚ್ಚು ಹಾಕಿ ಓದುಗರ ಕೈಗಿತ್ತು ಸ್ತುತ್ಯ ಕಾರ್ಯವೆಸಗಿದ್ದಾರೆ. ಈ ವಿನಯಶಾಲೀ ಪ್ರಾಮಾಣಿಕ ವಿದ್ವಾಂಸರು ವೈವಿಧ್ಯಪೂರ್ಣ ವಿಷಯಗಳನ್ನು ಆಯ್ದುಕೊಂಡು ಪ್ರಸ್ತುತ ಸಂಕಲನದಲ್ಲಿ ತಮ್ಮ ವಿಮರ್ಶನಾತ್ಮಕ ಹಾಗೂ ಸಂಶೋಧನಾತ್ಮಕ ದೃಷ್ಟಿಕೋನವನ್ನು ಮೆರೆದಿದ್ದಾರೆ.

ಪ್ರಸಿದ್ಧಿಗೊಂಡಿರುವ ಹನ್ನೆರಡು ಪ್ರಬಂಧಗಳಲ್ಲಿ ಆರು ಲೇಖನಗಳು ಕವಿ ಕಾವ್ಯ ಕೃತಿಗಳ ವಿವೇಚನೆಗೆ ಮೀಸಲಾಗಿದ್ದರೆ ಉಳಿದವು ಇತರ ಅನೇಕ ವಿಷಯಗಳಿಗೆ ಮೀಸಲಾಗಿವೆ. ಹೀಗೆ ಸಾಹಿತ್ಯ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತಿಹಾಸಗಳಿಗೆ ಸಂಬಂಧಪಟ್ಟ ಈ ಚಿಕ್ಕ ಹಾಗೂ ಚೊಕ್ಕ ಲೇಖನಗಳು ಸಂಶೋಧಕ ಸಾಹಿತಿಗಳಿಗೂ ವಿಮರ್ಶಕರಿಗೂ ದಿಕ್ಸೂಚಿಯಂತಿವೆ. ಸಂದಿಗ್ಧ ಹಾಗೂ ಸಂಶಯಾತ್ಮಕ ವಿಷಯಗಳ ಕುರಿತಾಗಿ ಲೇಖಕರು ವ್ಯಕ್ತಪಡಿಸಿದ ವೈಯಕ್ತಿಕವಾದ ಅಭಿಪ್ರಾಯಗಳು ಬಹು ಜನ-ಮಾನ್ಯವಾಗಿ ಇಂದು ಉಳಿದಿಲ್ಲವಾದರೂ ಅನೇಕ ವಿಷಯಗಳ ಕುರಿತು ಇಂದು ತೀರ ಹೊಸ ದೃಷ್ಟಿಕೋನ ಮೂಡಿ ಬಂದಿದೆಯಾದರೂ ಪ್ರಕಟಿತ ಲೇಖನಗಳ ಕಾಲಮಾನ ಹಾಗೂ ಲೇಖಕ ಕಲಿ ಹಾಕಿದ ವಿಷಯವ್ಯಾಪ್ತಿಯ ಅಳವಿನಲ್ಲಿ ಅವು ಸಹ್ಯವೂ ಸಹೃದಯ ಗಮ್ಯವೂ ಆಗಿವೆಯೆಂದರೆ ತಪ್ಪಲ್ಲ. ಅವರ ಅನ್ವೇಷಣ ದೃಷ್ಟಿ, ಬಹುಶ್ರುತತ್ವಕ್ಕೆ ಕೈಗನ್ನಡಿಯಾಗಿದೆ ಈ ಚಿಕ್ಕ ಹೊತ್ತಿಗೆ.

ಸಾಹಿತ್ಯಯೋಗಿ ಶ್ರೀ ಕಡೆಂಗೋಡ್ಲು ಶಂಕರಭಟ್ಟರಿಗೆ ಸಮರ್ಪಿತವಾದ ಈ ಕೃತಿಯಲ್ಲಿ ಬಂಗರಾಜರ ಎರಡು ತಾಮ್ರ ಪಟಗಳ ಪಡಿಯಚ್ಚು, ಶ್ರೀ ವಾದಿರಾಜ ಗುರುಗಳ ಭಾವಚಿತ್ರ, ಲೇಖಕರು ಹಾಗೂ ಶ್ರೀ ಕಡೆಂಗೋಡ್ಲು ಶಂಕರಭಟ್ಟರ ಭಾವಚಿತ್ರಗಳು ಮುದ್ರಿತವಾಗಿವೆ.

ಲೇಖಕರ ವಿನಯಪೂರ್ಣ ಅರಿಕೆ ನಾಡಿನ ಸುಪ್ರಸಿದ್ಧ ವಿದ್ವಾಂಸರಾದ ದಿವಂಗತ ಡಿ. ಎಲ್. ಎನ್., ಶ್ರೀ ಅ. ವೆಂಕಟಸುಬ್ಬಯ್ಯ, ಡಾ. ಶಿವರಾಮ ಕಾರಂತ, ಪಂಡಿತ ಬಿ. ಶಿವಮೂರ್ತಿಶಾಸ್ತ್ರಿಗಳು, ಶ್ರೀ ಜಿ. ಎಸ್. ಶಾಯಿ ಮುಂತಾದವರ ಅಭಿಮಾನದ ಹರಕೆ ನುಡಿಗಳೂ ಡಾ. ಪಿ. ಬಿ. ದೇಸಾಯಿಯವರ ನಲ್ನುಡಿಯೂ ಗ್ರಂಥದ ಗೌರವವನ್ನು ಹೆಚ್ಚಿಸಿವೆ.

ದೇಸಾಯಿಯವರು ಹೇಳುವಂತೆ ದೀರ್ಘಪರಿಶ್ರಮ, ಸ್ವತಂತ್ರಪ್ರಜ್ಞೆ, ಸಂಶೋಧನ ಪ್ರವೃತ್ತಿ, ವಿಷಯ ಪ್ರವೀಣತೆಗಳನ್ನೊಳಗೊಂಡ ಇಂಥ ಜ್ಞಾನನಿಷ್ಠ, ಸಾಹಸಶೀಲ ಸಂಶೋಧಕ ವಿದ್ವಾನ್ ಕೆ. ವೆಂಕಟರಾಯಾಚಾರ್ಯರಂಥ ವಿದ್ವಾಂಸರ ಕೃತಿಗಳು ನಾಡಿನ ಸಾಹಿತ್ಯ, ಸಂಶೋಧನ ಮತ್ತು ಸಂಸ್ಕೃತಿ ಬಲಸಂವರ್ಧನೆಗೆ ಸ್ವಾಗತಾರ್ಹವಾಗಿವೆ.

★ ಹೇಮ

ಸಾದರ ಸ್ವೀಕಾರ

೧. **ಜ್ಞಾನ ಗಂಗೋತ್ರಿ : (ಸಂಪುಟ : ೫).**
ಪ್ರ. ಸಂ : ನಿರಂಜನ; ಪ್ರ: ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು. ಪುಟ ೨೦೨+xvi+೧೨ ಬಣ್ಣದ ಚಿತ್ರಗಳು. ಬೆಲೆ : ೫೦-೦೦. ೧೯೬೩.

೨. **ಜಾನಪದದಲ್ಲಿ ಅಂಕಲಗಿಯ ಅಡವೀಶ :**
ಸಂ: ನಿಂಗಣ್ಣ ಸಣ್ಣಕ್ಕಿ ಮತ್ತು ಶಿವಲಿಂಗಪ್ಪ ಭಾವಿಕಟ್ಟಿ; ಪ್ರ: ಶ್ರೀ ಗಿರಿ ಪ್ರಕಾಶನ, ಅಕ್ಕತಂಗೇರಹಾಳ, ಜಿ. ಬೆಳಗಾವಿ. ಪು. ೫೨; ಬೆಲೆ: ೭-೦೦. ೧೯೬೨.

೩. **ಶ್ರೀಮೈಲಾರದೇವ ಚರಿತಂ :**
ಲೇ: ಮೈಲಾರಗೌಡ ಮಾರ್ತಂಡಗೌಡ; ಪ್ರ: ಮೈಲಾರಗೌಡ ಮಾರ್ತಂಡಗೌಡ ಪಾಟೀಲ, ಕುರ್ತಕೋಟಿ; ಪುಟ ೧೬೦+xix; ಬೆಲೆ : ೩-೦೦ : ೧೯೬೩.

೪. **ಶ್ರೀ ಬಸವೇಶ್ವರ ಅಷ್ಟೋತ್ತರ ಶತನಾಮಾವಳಿ :**
ಲೇ: ಶ್ರೀ ಮಹಾಂತದೇವರು, ಇಲಕಲ್ಲ; ಪ್ರ: ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಪೀಠಾರೋಹಣ ದ್ವಾದಶ ವರ್ಷದ ಮಹೋತ್ಸವ ಸಮಿತಿ, ಹುಬ್ಬಳ್ಳಿ. ಪುಟ: ೧೪; ಬೆಲೆ: ೩೦ ಪೈಸೆ : ೧೯೬೨.

೫. **ಪ್ರಸಾದವಾಣಿ :**
ಲೇ: ಆರ್. ಧರ್ಮಲಿಂಗಪ್ಪ ಮಾಸ್ತರ್; ಪ್ರ: 'ಗಂಗೋತ್ರಿ' ಪ್ರಕಾಶನ, ರಾಮಸಾಗರ, ಬಳ್ಳಾರಿ, (ಜಿ) ಪು: ೩೦ ; ಬೆಲೆ: ಸಾದಾ: ೧-೦೦ ; ಕ್ಯಾಲಿಕೋ: ೨-೦೦.

೬. **ಸರ್ವಜ್ಞಮೂರ್ತಿಯ ವಚನಗಳು :**
ಸಂ: ಉಮಾಪತಿ ಶಾಸ್ತ್ರಿ : ಪ್ರ: ಶಾರದಾ ಭವನ ಪ್ರಕಾಶನ, ಬಾಗಲಕೋಟೆ; ಪುಟ: ೧೩೦+೭೪ ; ಬೆಲೆ: ೫-೦೦ : ೧೯೬೩.

೭. **ಹಾಡುಪಕ್ಷಿ** (ಕವನ ಸಂಕಲನ) :
ಕವಿ: ದಿಗಂಬರ ಜೋಶಿ; ಪ್ರ: 'ಕನ್ನಡ ತಾಯಿ' ಪ್ರಕಾಶನ, ಬೆಳಗಾವಿ ; ಪು: ೨೩ ; ಬೆಲೆ: ೧ ರೂ. ೧೯೬೩.

೮. **ಉತ್ಸಾಹ ಗಾಥಾ** (ಕವನ ಸಂಕಲನ) :
ಕವಿ : ಆನಂದಕಂದ ; ಪ್ರ : ಪುರಂಧರ ಪ್ರಕಟನಾಲಯ, ಧಾರವಾಡ; ಪು. ೧೦೪; ಬೆಲೆ: ೨-೦೦ : ೧೯೬೨.

೯. **ನಲ್‌ವಾಡುಗಳು** (ಕವನ ಸಂಕಲನ) :
ಕವಿ: ಆನಂದಕಂದ : ಪ್ರ: ಪುರಂಧರ ಪ್ರಕಟನಾಲಯ, ಧಾರವಾಡ : ಪು: ೬೨ ; ಬೆಲೆ : ೧-೪೦; ೧೯೬೨.

೧೦. ಕರಿತೆಲಿ ಮಾನವನ ಜೀವದ (ಕವನ ಸಂಕಲನ) :
ಕವಿ: ಚೆನ್ನಣ್ಣ ವಾಲೀಕಾರ: ಪ್ರ: ಆಗಂತುಕ ಪ್ರಕಾಶನ, ರಾಯಚೂರು; ಪು: ೯೭; ಬೆಲೆ: ೩-೦೦ : ೧೯೭೭.

೧೧. ನೊದಲು – ತೊದಲು (ಕವನ ಸಂಕಲನ) :
ಕವಿ: 'ಸಂಪಾದ'; ಪ್ರ: ಕಾವ್ಯಧಾರಾ ಪ್ರಕಾಶನ, ಧಾರವಾಡ; ಪುಟ: ೭೭ : ಬೆಲೆ: ೨-೦೦ : ೧೯೭೩.

೧೨. ಮುಕ್ತ (ಕ. ಸಂ.)
ಕವಿ: ಶ್ರೀರಾಮ ಹೆಗಡೆ; ಪ್ರ: ಸಾಹಿತ್ಯ ಮಂಟಪ, ಹುಬ್ಬಳ್ಳಿ; ಪು. ೬೪; ಬೆಲೆ: ೩-೦೦.

೧೩. ಮಾತೆ – ಸೂರ್ಯ – ಹಿಪ್ಪಿಗಳು (ಕ. ಸಂ.)
ಕವಿ: ಟಿ. ದೇವದಾಸ್; ಪ್ರ: ಯುವಕರ ಸಂಘ, ರಾಮನಗರ; ಪುಟ: ೧೯; ೧೯೭೩.

೧೪. ಜೀವನ ರಹಸ್ಯ (ನಾಟಕ) :
ಲೇ: ಆರ್. ಭರಮಲಿಂಗಪ್ಪ ಮಾಸ್ತರ್: ಪ್ರ: ಎ. ವೀರಭದ್ರಪ್ಪ, ರಾಮಸಾಗರ: ಪುಟ: ೧೩೬; ಬೆಲೆ: ೨-೦೦: ೧೯೬೬.

೧೫. ಜಾನಪದ ನರಗುಂದ.
ಸಂ: ಬಿ. ಎಸ್. ಹೂಗಾರ; ಪ್ರ: ಬಾಬಾಸಾಹೇಬ ಗ್ರಂಥಪ್ರಕಾಶನ, ನರಗುಂದ, ಜಿ. ಧಾರವಾಡ: ಪು: ೧೫೪ : ಬೆಲೆ: ೫-೦೦. ೧೯೭೨

೧೬. ಶರಣಸಾಹಿತ್ಯ ಸಮೀಕ್ಷೆ :
ಲೇ: ದೊಡ್ಡಸ್ವಾಮಿ, ಪ್ರ: ದೊಡ್ಡಸ್ವಾಮಿ, ಮಂಡಸಹಳ್ಳಿ, ಮದ್ದೂರ ತಾಲ್ಲೂಕು; ಮಂಡ್ಯ ಜಿಲ್ಲೆ; ಪುಟ: ೧೬೩; ಬೆಲೆ: ೭-೫೦ : ೧೯೭೨.

೧೭. ಅರವಿಂದ ಪರಿಮಳ :
ಸಂ: ಜಿ. ಎಸ್. ಕಾಪಸೆ: ಪ್ರ: ಕಮಲ ಮಂಡಲ ಪ್ರಕಾಶನ, ಕರ್ನಾಟಕ ಸಂಘ, ಕರ್ನಾಟಕ ಕಾಲೇಜು, ಧಾರವಾಡ; ಪುಟ: ೫೪; ಬೆಲೆ: ೧-೫೦ : ೧೯೭೩.

೧೮. ಸಾಕ್ಷರತಾ ಸಾಹಿತ್ಯ ಸೂತ್ರಗಳು ;
ಲೇ: ಟಿ. ಆರ್. ನಾಗಪ್ಪ : ಪ್ರ: ಪ್ರಸಾರಾಂಗ, ಮೈಸೂರು ವಿ. ವಿ, ಮೈಸೂರು; ಪುಟ: ೮೩; ಬೆಲೆ: ೨೫ ಪೈಸೆ. ೧೯೭೨.

೧೯. ವಿಮರ್ಶಾತ್ಮಕ ಲೇಖನಗಳು :
ಲೇ: ಡಾ. ಎಂ. ಬಿ. ಕೊಟ್ರಶೆಟ್ಟಿ; ಪ್ರ: ಸಿರಿಗನ್ನಡ ಪ್ರಕಾಶನ, ಧಾರವಾಡ; ಪುಟ: ೯೩; ಬೆಲೆ: ೫-೦೦ : ೧೯೭೨.

೨೦. ಪೃಥ್ವೀಸಿಂಹನ ಸಿಂಹಸಾಹಸ :
ಲೇ: ಕೆ. ಎಸ್. ಗೋಪಾಲ ಶ್ರೀವತ್ಸ, ಪ್ರ: ಗಿರೀಶ ಪ್ರಕಾಶನ, ಮಂಡ್ಯ ಜಿ
ಪುಟ: ೪೮; ಬೆಲೆ: ೧-೨೫.

ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ

ಅಪೂರ್ವ ಜಾನಪದ ಸಮ್ಮೇಲನ

ಕರ್ನಾಟಕ ವಿಶ್ವವಿದ್ಯಾಲಯದ ' ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ರಚಿತವಾಗಿದ್ದ ಸಾಲಂಕೃತ "ಮಧುರಚೆನ್ನಮಂಟಪ"ದ ಮಂಗಲ ವಾತಾವರಣದಲ್ಲಿ ಮೂರು ದಿನಗಳ ವರೆಗೆ ಕನ್ನಡ ಜಾನಪದಸಮ್ಮೇಲನ ಸಾಂಗವಾಗಿ ಜರುಗಿ, ಕನ್ನಡ ಜನಪದಸಾಹಿತ್ಯ ಕಲೆ ಮೊದಲಾದವುಗಳಿಗೆ ಅಗ್ರಪೂಜೆ ಸಂದಿತು.

ಅಖಿಲ ಕರ್ನಾಟಕ ವ್ಯಾಪ್ತಿಯ ಮಟ್ಟದಲ್ಲಿ ಕರೆದಿದ್ದ ಈ ಸಮ್ಮೇಲನದ ಅಧ್ಯಕ್ಷತೆಯನ್ನು ಜಂಗಮ ವಿಶ್ವಕೋಶ, ಕಡಲತೀರದ ಭಾರ್ಗವ, ಪದ್ಮಭೂಷಣ ಡಾ. ಶಿವರಾಮ ಕಾರಂತರು ವಹಿಸಿದ್ದರು. ಕೇಂದ್ರ ಪ್ರವಾಸ ಹಾಗೂ ವಿಮಾನೋಡ್ಡಾಣ ಶಾಖೆಯ ಸಚಿವೆ ಮಾನ್ಯ ಡಾ. ಸರೋಜಿನಿ ಮಹಿಷಿಯವರು ನಂದಾದೀಪ ಹೊತ್ತಿಸುತ್ತ, ತಾ. ೨೩ರ ಬೆಳಗು ಸಮ್ಮೇಲನವನ್ನು ಉದ್ಘಾಟಿಸಿದರು.

"ಮಧುರಚೆನ್ನಮಂಟಪ"ಕ್ಕೆ ಕಹಳೆಯ ಮಂಗಲರವದೊಡನೆ ಅಧ್ಯಕ್ಷರಾದ ಡಾ. ಶಿವರಾಮ ಕಾರಂತ, ಉದ್ಘಾಟಕರಾದ ಡಾ. ಸರೋಜಿನಿ ಮಹಿಷಿ, ಕನ್ನಡದ ದಿಗ್ಗಜಗಳೆನಿಸಿದ ಪದ್ಮಶ್ರೀ ಡಾ. ದ. ರಾ. ಬೇಂದ್ರೆ. ಕವಿಭೂಷಣ ಶ್ರೀ ಬೆಟಗೇರಿ ಕೃಷ್ಣಶರ್ಮ. ಶ್ರೀ ಸಿಂಪಿ ಲಿಂಗಣ್ಣ, ಸಮ್ಮೇಲನದ ಸ್ವಾಗತಾಧ್ಯಕ್ಷ ಡಾ. ಹಿರೇಮಠರು ಗಂಭೀರ ಗತಿಯಲ್ಲಿ ಸಾಗಿಬಂದು ವೇದಿಕೆಯನ್ನಲಂಕರಿಸಿದರು.

ಕನ್ನಡ ಜಾನಪದಕಣಜದಿಂದ ಆರಿಸಿ ತೆಗೆದ ಪದ್ಯಗಳ ಪ್ರಾರ್ಥನೆ ಅನುರಣಿಸಿತು. ಇಡೀ ವಾತಾವರಣವನ್ನೇ ಕನ್ನಡ ಜಾನಪದದ ಮಧುರ ಸಮ್ಮೋಹಿನಿ ತುಂಬಿಕೊಂಡು, ಮಧುರಚೆನ್ನರ ಆತ್ಮಕ್ಕೆ ಮಂಗಳ ಹಾಡಿತು.

ಮೊದಲಲ್ಲಿ ಡಾ. ಆರ್. ಸಿ. ಹಿರೇಮಠರು ಸಮ್ಮೇಲನಕ್ಕೆ ಸರ್ವರನ್ನೂ ಸ್ವಾಗತಿಸುತ್ತ, ವಿಶ್ವವಿದ್ಯಾಲಯ ಸಮಗ್ರ ಕರ್ನಾಟಕ ರಾಜ್ಯವ್ಯಾಪ್ತಿಯ ಈ ಸಮ್ಮೇಲನ ಕರೆಯಲು ಸಮ್ಮತಿಸಿ ಹೊಸದೊಂದು ಹೊಣೆಯನ್ನು ಕನ್ನಡ ಅಧ್ಯಯನಪೀಠದ ಮೇಲೆ ಹೊರಿಸಿದೆ; ಕನ್ನಡ ಅಧ್ಯಯನಪೀಠ ಆ ಹೊಣೆಯನ್ನು ಹೊತ್ತು ಅವಸರದಲ್ಲಿ ಕರೆದ ಈ ಮೊದಲ ಸಮ್ಮೇಲನ ಮುಂದಿನವುಗಳಿಗೆ ಪೂರ್ವ ಪೀಠಿಕೆ ಎಂದು ಹೇಳಿದರು. ಸಮ್ಮೇಲನಕ್ಕೆ ಆಗಮಿಸಿದ್ದ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕ ವರ್ಗ, ವಿಶ್ವವಿದ್ಯಾಲಯ ಕಕ್ಷೆಯಲ್ಲಿ ಬರುವ ವಿವಿಧ ಕಾಲೇಜುಗಳನ್ನು ಪ್ರತಿನಿಧೀಕರಿಸಿದ ಪ್ರಾಧ್ಯಾಪಕ

ವರ್ಗ, ರಾವಬಹಾದ್ದೂರ, ಕಟ್ಟೀಮನಿ ಮೊದಲಾದ ಸಾಹಿತಿಗಳ ಸಮೂಹ, ಮೈಸೂರು, ಬೆಂಗಳೂರು, ದ. ಕನ್ನಡ, ಉ. ಕನ್ನಡ, ಗುಲಬರ್ಗಾ, ಬೆಳಗಾವಿ ಮೊದಲಾದ ನಾಡಿನ ಮೂಲೆಮೂಲೆಯಿಂದ ಆಗಮಿಸಿದ ಅತಿಥಿಗಳು, ಆಹ್ವಾನಿತರು ಹಾಗೂ ಸಮಾರಂಭದಲ್ಲಿ ಸಮಾವೇಶಗೊಂಡಿದ್ದ ಮಹಾಜನರು ಪ್ರಚಂಡ ಕರತಾಡನಗಳೊಂದಿಗೆ ತಮ್ಮ ಸಮ್ಮತಿಯನ್ನು ಹೆಜ್ಜೆಹೆಜ್ಜೆಗೆ ತೋರಿಸುತ್ತ, ತಮಗಾದ ಹರ್ಷವನ್ನು ವ್ಯಕ್ತಗೊಳಿಸಿದರು.

ಕನ್ನಡ ಜಾನಪದ ಸಾಹಿತ್ಯದ ವೈವಿಧ್ಯವನ್ನೆತ್ತಿ ಹೇಳುತ್ತಾ ಡಾ. ಸರೋಜಿನಿ ಮಹಿಷಿಯವರು ಜಾನಪದ ಸಾಹಿತ್ಯ ಮತ್ತು ಕಲೆಗಳ ಸಂಕಲನ, ಅಧ್ಯಯನ ತ್ವರಿತವಾಗಿ ನಡೆಯಲಿ ಎಂದು ಕರೆಯಿತ್ತರೆ, ಪದ್ಮಭೂಷಣ ಡಾ. ಶಿವರಾಮ ಕಾರಂತರು ಜಾನಪದ ಕಲೆಗಳ ಸಾಹಿತ್ಯದ ಸಂಕಲನ, ಅಧ್ಯಯನಕಾರ್ಯಗಳಲ್ಲಿ ದಕ್ಷತೆ, ಜಾಗರೂಕತೆ, ವೈಜ್ಞಾನಿಕದೃಷ್ಟಿ ಬೆಚ್ಚಬೇಕು, ಅವಸರ ಸಲ್ಲದು ಎಂದರು.

ಸಮ್ಮೇಲನದ ಅಂಗವಾಗಿ ನಡೆದ ಮೂರು ಮಹತ್ವದ ವಿಚಾರಸಂಕಿರಣಗಳದೇ ಒಂದು ಮೈಲುಗಲ್ಲು; ಕನ್ನಡ ಜಾನಪದಕ್ಷೇತ್ರದಲ್ಲಿ ನಡೆದ, ನಡೆಯುತ್ತಿರುವ ಕಾರ್ಯ, ಕನ್ನಡ ಜಾನಪದದ ವಿಸ್ತಾರ, ವೈವಿಧ್ಯಗಳ ಕುರಿತಾದ ಅಭ್ಯಾಸಪೂರ್ಣ ಪ್ರಬಂಧಗಳನ್ನು ವಿವಿಧ ಭಾಗಗಳಿಂದ ಬಂದ ವಿದ್ವಾಂಸರು ಓದಿದರು. ಮೂರೂ ವಿಚಾರ ಸಂಕಿರಣಗಳ ಅಧ್ಯಕ್ಷತೆಗಳನ್ನು ಕ್ರಮವಾಗಿ ಡಾ. ದ. ರಾ. ಬೇಂದ್ರೆ, ಶ್ರೀ ಸಿಂಪಿ ಲಿಂಗಣ್ಣ ಮತ್ತು ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ವಹಿಸಿದ್ದರು. ಅವರ ವಿಚಾರಪೂರ್ಣ ಸಮಾರೋಪ ಭಾಷಣಗಳ ಜೊತೆಗೆ ಸಮ್ಮೇಲನಾಧ್ಯಕ್ಷ ಡಾ. ಶಿವರಾಮ ಕಾರಂತರ ಸಮಯೋಚಿತ ಕೆಳೆನುಡಿ, ಕೆರಳುನುಡಿ, ಮೊನೆಮಾತು. ಇನಿಮಾತು, ಎಚ್ಚರಿಕೆ, ಸಲಹೆ, ಸೂಚನೆ, ಚುಟುಕುಗಳು ಮೂಡಿ ಬರುತ್ತಿದ್ದುದೇ ಒಂದು ಸ್ವಾರಸ್ಯ.

ಮೂರು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ ಪರಿಣಿತರ ಪಾಂಡಿತ್ಯಪೂರ್ಣ ಪ್ರಬಂಧಗಳನ್ನು ಪೂರ್ಣವಾಗಿ ಸಾದರಪಡಿಸಲು ವೇಳೆ ಸಾಲದೆ ಬಂತು. ಈ ಅವಸರದ ಓಟದಲ್ಲೂ ಒಂದು ಸಮಾಧಾನವಿತ್ತು; ಈ ಪ್ರಬಂಧಗಳು ಆದಷ್ಟು ಶೀಘ್ರವಾಗಿ ಪುಸ್ತಕ ರೂಪದಲ್ಲಿ ಹೊರಬರುತ್ತವೆಯೆನ್ನುವದು.

ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರಲ್ಲಿ ಕನ್ನಡ ಅಧ್ಯಯನ ಪೀಠದ ನೇತಾರ ಡಾ. ಆರ್. ಸಿ. ಹಿರೇಮಠರವರು ಕನ್ನಡ ಜಾನಪದ ಸಾಹಿತ್ಯದ ಇತಿಹಾಸವನ್ನು ಕುರಿತು, ಉತ್ತರ ಕನ್ನಡ ಜಿಲ್ಲೆಯಿಂದ ಬಂದ ಡಾ. ಎಲ್. ಆರ್. ಹೆಗಡೆಯವರು ಜನಪದ ಸಾಹಿತ್ಯದ ಆಶಯ ಮತ್ತು ವರ್ಗವನ್ನು ಕುರಿತು ಅಧಿಕಾರಯುತವಾಗಿ ವಿವೇಚಿಸಿದರು. ಬೆಂಗಳೂರಿನಿಂದ ಬಂದಿದ್ದ ಪ್ರೊ. ಚಂದ್ರಶೇಖರ ಕಂಬಾರ 'ಕನ್ನಡ ಜನಪದ ಸಾಹಿತ್ಯ ಸಂಪಾ

ದನೆ'ಯ ಬಗೆಗೆ ತಮ್ಮ ಹೊಸದಾದ ಮಾತುಗಳನ್ನು ತೂರಿದರು. ಕನ್ನಡ ಜನಪದ ಸಾಹಿತ್ಯದ ಸಂಕಲನ ಕೃಷಿಯನ್ನು ಕುರಿತು ಈ ವರೆಗೆ ಸಾಧಿಸಿದ ಪ್ರಗತಿಯ ಸಮಗ್ರ ದರ್ಶನವಿತ್ತವರು ಪ್ರೊ. ಸುಶೀಲಾ ಪಟ್ಟಣಶೆಟ್ಟಿಯವರು. ವಿಜಾಪುರದಿಂದ ಬಂದಿದ್ದ ಈ ವಿದುಷಿಯ ದೃಷ್ಟಿಯಲ್ಲಿ ನಿರ್ದುಷ್ಟತೆಯೂ ಜಿಜ್ಞಾಸುವಿನ ಕಳಕಳಿಯೂ ತುಂಬಿತ್ತು. 'ಕನ್ನಡ ಜನಪದ ಸಾಹಿತ್ಯದ ವಿಮರ್ಶಾ ಕೃಷಿ'ಯ ವಿಹಂಗಮ ನೋಟ ಬೀರಿದವರು ತರುಣ ವಿಮರ್ಶಕರೂ ಜನಪದ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸುತ್ತಿರುವವರೂ ಆದ ಪ್ರಿ. ಜ್ಯೋತಿ ಹೊಸೂರ ಅವರು.

ಇನ್ನೊಂದು ವಿಚಾರ ಸಂಕಿರಣದಲ್ಲಿ "ಜನಪದ ಸಾಹಿತ್ಯದ ಲಕ್ಷಣಗಳನ್ನು" ಡಾ. ಕೆ. ಜಿ. ಶಾಸ್ತ್ರಿಯವರು ಶಾಸ್ತ್ರೀಯವಾಗಿ ಮಂಡಿಸಿದರು. "ಜನಪದ ಸಾಹಿತ್ಯದ ಕಾವ್ಯಭಾಷೆ"ಯನ್ನು ಗುರುತಿಸಿ ಗೌರವಿಸಿದವರು ಕವಿ ಶ್ರೀ ಚನ್ನವೀರ ಕಣವಿಯವರು. "ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಬಗೆಗೆ ಪ್ರಬಂಧ ಸಾದರಪಡಿಸಿದವರು ಡಾ. ಎಂ. ಜಿ. ಬಿರಾದಾರ ಅವರು. "ದಕ್ಷಿಣ ಕರ್ನಾಟಕದ ಜನಪದ ಸಾಹಿತ್ಯ"ದ ಬೆಳೆಯನ್ನು ಕೊಂಡಾಡಿದವರು ಡಾ. ಜೀ. ಶಂ. ಪರಮ ಶಿವಯ್ಯ ಅವರು. "ಕರಾವಳಿ ಪ್ರದೇಶದ ಜನಪದ ಸಾಹಿತ್ಯ"ವನ್ನು ಪ್ರೊ. ಎಸ್. ಆರ್. ನಾಯಕರು ಸಮಾಲೋಚಿಸಿದರು.

ಮಗುದೊಂದು 'ವಿಚಾರ ಸಂಕಿರಣ'ದಲ್ಲಿ "ಲಾವಣಿ ಹಾಡುಗಳ ಬಗೆಗೆ ಬಗೆದುಂಬುವಂತೆ ವಿವೇಚನೆ ಮಾಡಿದವರು ಪ್ರೊ. ಪಿ. ಕೆ. ಭಾಗೋಜಿಯವರು. "ಜಾನಪದ ರೂಪಕ"ಗಳ ಸೂರೆ ಮಾಡಿದವರು ಡಾ. ಬಿ. ಬಿ. ಹೆಂಡಿಯವರು. "ಕರ್ಬಲ ಪದಗಳ" ಕುರಿತು ಪ್ರೊ. ಎಂ. ಆಕಬರ ಅಲಿಯವರು ಮಂಡಿಸಿದರೆ "ಗೊಂದಲಿಗರ ಹಾಡಿ"ನ ಹುಟ್ಟನ್ನೂ ಮೆಟ್ಟನ್ನೂ ವಿವರಿಸಿದವರು. ಶ್ರೀ ಸಿಂಗಣ್ಣ ಸಣ್ಣಕ್ಕಿ ಅವರು.

ಮೂರೂ ವಿಚಾರ ಸಂಕಿರಣಗಳ ಸಮಾಪ್ತಿಯ ತರುವಾಯ ಆಹ್ವಾನಿತ ಭಾಷಣಕಾರರ, ಪ್ರತಿನಿಧಿಗಳ ಹಾಗೂ ಕನ್ನಡ ಸಾಹಿತ್ಯ ಸಂಸ್ಕೃತಿ ಹಿತೈಷಿಗಳ ಬಹಿರಂಗ ಸಭೆಯಲ್ಲಿ ಈ ಕೆಳಗಿನ ಒಂಬತ್ತು ಗೊತ್ತುವಳಿಗಳು ಸರ್ವಾನುಮತ ದಿಂದ ಸ್ವೀಕರಿಸಲ್ಪಟ್ಟವು.

ಗೊತ್ತುವಳಿಗಳು.

೧. ಜಾನಪದ ಸಾಹಿತ್ಯದ ಅಧ್ಯಯನ, ಸಂಶೋಧನ ಪ್ರಕಟನೆಗಳಿಗೆ ವಿಶೇಷ ಪ್ರೋತ್ಸಾಹವೀಯುವುದಲ್ಲದೆ ಅಖಿಲ ಕರ್ನಾಟಕ ಜಾನಪದ ಸಮ್ಮೇಲನ ವನ್ನು ಅತ್ಯಂತ ಅಸ್ಥೆ ನಿಷ್ಠೆಗಳಿಂದ ನೆರವೇರಿಸಿ ಯಶಸ್ವಿಗೊಳಿಸಿದುದಕ್ಕಾಗಿ

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಈ ಸಭೆಯು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಇನ್ನು ಮುಂದೆ ಇಂಥ ಸಮ್ಮೇಲನಗಳನ್ನು ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಇತರ ಭಾಗಗಳಲ್ಲಿಯೂ ಅಲ್ಲಿಯ ಜನತೆಯ ಸಹಕಾರದಿಂದ ಪ್ರತಿ ವರ್ಷ ನೆರವೇರಿಸುವ ಪರಂಪರೆಯನ್ನು ಸ್ಥಿರಗೊಳಿಸಬೇಕೆಂದು ಈ ಸಭೆಯು ಕರ್ನಾಟಕ ವಿಶ್ವವಿದ್ಯಾಲಯವನ್ನು ಬಿನ್ನವಿಸಲು ನಿರ್ಣಯಿಸಿರುತ್ತದೆ.

ಮಂಡನೆ : **ರಾವಬಹಾದ್ದೂರ**
ಅನುಮೋದನೆ : **ಗಿಡ್ನವರ**

೨. ಸಾಹಿತ್ಯ, ಜಾನಪದ ವಸ್ತು, ಕಲೆ, ಲಯ, ಧಾಟಿ ಮೊದಲಾದವುಗಳನ್ನು ಇಂದಿನ ಹಾಗೂ ಮುಂದಿನ ಜನಾಂಗಕ್ಕಾಗಿ ಕಾಯ್ದಿಡುವ ಯೋಜನೆಯೊಂದನ್ನು ಕರ್ನಾಟಕ ವಿಶ್ವವಿದ್ಯಾಲಯವು ರೂಪಿಸಿ ೧) ಜಾನಪದ ವಸ್ತು ಸಂಗ್ರಹಾಲಯ ೨) ಜಾನಪದ ಸಾಹಿತ್ಯ ಹಾಗೂ ಧ್ವನಿ ಮುದ್ರಿಕೆಗಳ ವಾಚನಾಲಯಗಳನ್ನು ಕನ್ನಡ ಅಧ್ಯಯನಪೀಠದ ಅಂಗವಾಗಿ ಸ್ಥಾಪಿಸುವ ಶಾಶ್ವತಯೋಜನೆ ಕೈಕೊಳ್ಳಬೇಕೆಂದು ವಿಶ್ವವಿದ್ಯಾಲಯವನ್ನು ಕೇಳಿಕೊಳ್ಳಲು ಈ ಸಭೆಯು ನಿರ್ಣಯಿಸಿರುತ್ತದೆ.

ಮಂಡನೆ : **ಶ್ರೀ ಬೆಟಗೇರಿ ಕೃಷ್ಣಶರ್ಮ**
ಅನುಮೋದನೆ : **ಶ್ರೀ ಪಿ. ಕೆ. ಬಾಗೋಜಿ**

೩. ಕರ್ನಾಟಕದ ವಿವಿಧ ಪ್ರದೇಶಗಳ ಆಡುನುಡಿಗಳ ಸಮೀಕ್ಷೆ, ಅವುಗಳ ಮಾದರಿಗಳ ಸಂಗ್ರಹ ಹಾಗೂ ಜಾನಪದ ಶಬ್ದಕೋಶ, ಜಾನಪದ ವಿಶ್ವಕೋಶಗಳ ಸಿದ್ಧತೆಗೆ ಕರ್ನಾಟಕ ವಿಶ್ವವಿದ್ಯಾಲಯವು ಸಾದರಪಡಿಸಿದ ಯೋಜನೆಯನ್ನು ಸಮರ್ಥಿಸಿ, ಅದನ್ನು ತೀವ್ರ ಕಾರ್ಯಗತಗೊಳಿಸಬೇಕೆಂದು ಈ ಸಭೆಯು ಮೈಸೂರು ರಾಜ್ಯಸರಕಾರವನ್ನು ಒತ್ತಾಯಪಡಿಸುತ್ತದೆ.

ಮಂಡನೆ : **ಶ್ರೀ ಸಿಂಪಿ ಲಿಂಗಣ್ಣ**
ಅನುಮೋದನೆ : **ಡಾ. ಬಿ. ಬಿ. ಹೆಂಡಿ**

೪. ಜಾನಪದ ವಸ್ತು, ರಾಗ, ತಾಳ ಲಯಗಳ ಧ್ವನಿಮುದ್ರಿಕೆಗಳ ಸಂಗ್ರಹ ಕಾರ್ಯವನ್ನು ವಿಶ್ವವಿದ್ಯಾಲಯಗಳು, ವಿವಿಧ ಕಾಲೇಜುಗಳು ಹಾಗೂ ಆಸಕ್ತಿಯುಳ್ಳ ವಿದ್ವಾಂಸರು—ಇವರಿಂದ ತ್ವರಿತಗತಿಯಲ್ಲಿ ನಡೆಸುವಂತೆ ರಾಜ್ಯ ಸರಕಾರವು ಧನಸಹಾಯವನ್ನಿತ್ತು ಪ್ರೋತ್ಸಾಹಿಸಬೇಕೆಂದು ಈ ಸಭೆಯು ನಿರ್ಣಯಿಸಿರುತ್ತದೆ.

ಮಂಡನೆ : **ಶ್ರೀ ಚಂದ್ರಶೇಖರ ಕಂಬಾರ**
ಅನುಮೋದನೆ : **ಶ್ರೀ ಜಿ. ಶಂ. ಪರಮಶಿವಯ್ಯ**

೫. ಜಾನಪದ ಸಾಹಿತ್ಯದ ಸಮಗ್ರ ಅಭ್ಯಾಸಕ್ಕಾಗಿ ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ, ಇತಿಹಾಸ, ಸಾಹಿತ್ಯ ಮುಂತಾದವುಗಳ ಹಿನ್ನೆಲೆ ಅವಶ್ಯವಿದ್ದುದರಿಂದ ವಿಶ್ವವಿದ್ಯಾಲಯಗಳು ಇವೆಲ್ಲ ಒಳಗೊಳ್ಳುವಂತೆ ಅಭ್ಯಾಸ ಕ್ರಮಗಳನ್ನು ಕನ್ನಡ ವಿಭಾಗಗಳಲ್ಲಿ ರೂಪಿಸಿಕೊಳ್ಳಬೇಕೆಂಬ ನಿರ್ಣಯವನ್ನು ಈ ಸಭೆಯು ಸ್ವೀಕರಿಸುತ್ತದೆ.

ಮಂಡನೆ: ಪ್ರೊ. ವಿ. ಜಿ. ಕುಲಕರ್ಣಿ

ಅನುಮೋದನೆ: ಡಾ. ಎಂ. ಎಸ್. ಸುಂಕಾಪುರ

೬. ಜಾನಪದ ಅಭ್ಯಾಸ ವಿದೇಶಗಳಲ್ಲಿ ದೊಡ್ಡ ಶಾಸ್ತ್ರವಾಗಿ ಬೆಳೆದು ಬಂದಿದೆ. ನಮ್ಮ ದೇಶದಲ್ಲಿ ಜಾನಪದ ಕ್ಷೇತ್ರದಲ್ಲಿ ನಿರತರಾದವರಿಗೆ ಈ ಶಾಸ್ತ್ರದ ತರಬೇತಿ ಅವಶ್ಯವಿರುವುದರಿಂದ ಅಂತಹ ಶಾಸ್ತ್ರಜ್ಞರನ್ನು ನಮ್ಮಲ್ಲಿಗೆ ಆಹ್ವಾನಿಸುವ, ನಮ್ಮವರನ್ನು ವಿದೇಶಗಳಿಗೆ ಕಳಿಸುವ ಯೋಜನೆಗಳನ್ನು ಕೇಂದ್ರ ಸರಕಾರ, ರಾಜ್ಯ ಸರಕಾರ, ವಿಶ್ವವಿದ್ಯಾಲಯಗಳು ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗಗಳು ರೂಪಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಮಂಡನೆ: ಡಾ. ಎಲ್. ಆರ್. ಹೆಗಡೆ

ಅನುಮೋದನೆ: ಶ್ರೀ ಬಿ. ಬಿ. ನಾಡಗೌಡ

೭. ಉತ್ತರ ಕರ್ನಾಟಕ ಬಯಲಾಟ, ಪಾರಿಜಾತ, ಗೊಂಬೆಯಾಟ ಮೊದಲಾದ ರೂಪಕ ಪ್ರಕಾರ ಹಾಗೂ ಜಾನಪದ ಸಂಗೀತ, ನೃತ್ಯ, ಕೋಲಾಟ ಮುಂತಾದ ಕಲೆಗಳ ಮೂಲಸಂಪ್ರದಾಯಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಕಾರ್ಯಗತಗೊಳಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಮಂಡನೆ: ಪ್ರೊ. ತ. ಶ್ರೀಕಂಠಯ್ಯ

ಅನುಮೋದನೆ: ಡಾ. ಎಂ. ಜಿ. ಬಿರಾದಾರ

೮. ಜಾನಪದ ಅಧ್ಯಯನವನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಹಂತಗಳಿಂದ ಮಾತ್ರ ಮುಂದುವರಿಸದೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಷೇತ್ರಗಳ ಅಭ್ಯಾಸಕ್ರಮದಲ್ಲಿ ಮತ್ತು ಇತರ ಚಟುವಟಿಕೆಗಳಲ್ಲಿ ಮಕ್ಕಳ ಮನೋಧರ್ಮಕ್ಕನುಸರಿಸಿ ಸರಳ ಮತ್ತು ಪ್ರಾಥಮಿಕವಾಗಿ ಅಳವಡಿಸಬೇಕೆಂದು ಈ ಸಭೆಯು ಮೈಸೂರು ಸರಕಾರವನ್ನು ಒತ್ತಾಯಪಡಿಸುತ್ತದೆ.

—ಸಮ್ಮೇಲನಾಧ್ಯಕ್ಷರು

೯. ಅಲಕ್ಷಿತ ಜಾನಪದ ಕಲಾವಿದರನ್ನು ಗೌರವಿಸುವ ಪರಂಪರೆಯನ್ನು ರಾಜ್ಯಸರಕಾರ ಮತ್ತು ಜಾನಪದ ಸಮ್ಮೇಲನಗಳು ಪ್ರಾರಂಭಿಸಬೇಕೆಂದು ಈ ಸಭೆಯು ನಿರ್ಣಯಿಸಿರುತ್ತದೆ.

ಮಂಡನೆ: **ಪ್ರೊ. ಬಿ. ವಿ. ಗುಂಜೆಟ್ಟಿ**
ಅನುಮೋದನೆ: **ಪ್ರಿ. ಜ್ಯೋತಿ ಹೊಸೂರ**

× × × × ×


ಕೊನೆಗೆ ಸಭಿಕರ ಪರವಾಗಿ ಶ್ರೀ ರಾಮಬಹಾದ್ದೂರ ಮತ್ತು ಶ್ರೀಮತಿ ಹರಿಹರ, ಪ್ರಾಧ್ಯಾಪಕ ಪ್ರತಿನಿಧಿಗಳ ಪರವಾಗಿ ಪ್ರೊ. ಪಿ. ಕೆ. ಭಾಗೋಜಿ, ವಿಚಾರ ಸಂಕಿರಣದ ವಿದ್ವಾಂಸರ ಪರವಾಗಿ ಪ್ರೊ. ಜಿ. ಶಂ. ಪ. ಸಮ್ಮೇಲನದ ಸಾರ್ಥಕತೆ, ವ್ಯವಸ್ಥೆಗಳನ್ನು ಕೊಂಡಾಡಿದರು. ವಿಶ್ವವಿದ್ಯಾಲಯಕ್ಕೆ ಅಧ್ಯಯನ ಪೀಠಕ್ಕೆ, ಆರ್. ಸಿ. ಹಿರೇಮಠರ ಕರ್ತವ್ಯ ದಕ್ಷತೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮೂರು ದಿನ ನಡೆದ ರಂಗದರ್ಶನದ ಉದ್ಘಾಟನೆಯನ್ನು ವಿಶ್ವವಿದ್ಯಾಲಯದ ಕುಲಪತಿ ಡಾ. ಅಡಕೆ ಅವರು ನೆರವೇರಿಸುತ್ತ, ಕನ್ನಡ ಅಧ್ಯಯನ ಪೀಠ ಹಮ್ಮಿಕೊಂಡಿರುವ ಕನ್ನಡ ಜಾನಪನ ಸಾಹಿತ್ಯ ಮತ್ತು ಕಲೆಗಳ ವಿವರವಾದ ಹಾಗೂ ವ್ಯವಸ್ಥಿತವಾದ ಸಂಕಲನ, ಪ್ರಕಟಣ, ಅಧ್ಯಯನ ಹಾಗೂ ಅಧ್ಯಾಪನಗಳಿಗೆ ವಿಶ್ವವಿದ್ಯಾಲಯು ಸೂಕ್ತ ಸಹಾಯ ಹಾಗೂ ಸಹಕಾರವನ್ನು ಸಲ್ಲಿಸಲು ಸದಾ ಸಿದ್ಧವಿದೆ ಎಂದರು.

ಜಾನಪದ ರಂಗದರ್ಶನದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಕೃಷ್ಣ ಪಾರಿಜಾತ ಮೇಳ, ಕನ್ನೂರ ಅವರು ಶ್ರೀ ಕೃಷ್ಣ ಪಾರಿಜಾತವನ್ನು, ಮನ್ನೂರ ಗ್ರಾಮದ ಶ್ರೀ ಫಕೀರಗೌಡರು ಮತ್ತು ಅವರ ಮೇಳ ಸುಗಂಧ ಪುಷ್ಪಹರಣವೆಂಬ ದೊಡ್ಡಾಟವನ್ನು ಪ್ರದರ್ಶಿಸಿದರೆ, ಇನ್ನೊಂದು ಸಂಜೆ ಹೊನ್ನಾವರದ ಹಾಸ್ಯಗಾರ ಮೇಳದವರಿಂದ ಯಕ್ಷಗಾನ, ಗೋಕಾಕದ ಗೊಂದಲಿಗರ ಮೇಳದವರಿಂದ ಗೊಂದಲಿಗರ ಹಾಡು ಮತ್ತು ಗೋಕಾಕ ತಾಲೂಕಿನ ಡೊಳ್ಳಿನ ಹಡಗಿನಹಾಳ ಮೇಳದವರಿಂದ ಡೊಳ್ಳು, ಮಗುದೊಂದು ಸಂಜೆ ಕೆಲಗೇರಿಯ ಶ್ರೀ ಗುಡ್ಡದ ಮಠದವರ ಮೇಳದಿಂದ ಅಲ್ಲಮಪ್ರಭು ಮಾಯಾ ಪ್ರಸಂಗ ಕುರಿತಾದ ಸಣ್ಣಾಟ, ಅಂತರವಳ್ಳಿ ಮೇಳದವರಿಂದ ಆಕರ್ಷಕ ಗೊಂಬೆಯಾಟ ಹಾಗೂ ಅಲ್ಲರವಾಡ ತಿಗಡೊಳ್ಳಿ ಮೇಳದವರಿಂದ ಸುಶ್ರಾವ್ಯ ಗೀಗೀ ಪದಗಳು ಕನ್ನಡ ಜಾನಪದ ರಂಗ ವೈವಿಧ್ಯದ ಸಂದರ್ಶನ ಮಾಡಿಸಿದವು.

ಒಟ್ಟಿನಲ್ಲಿ ಮೂರು ದಿನ ಜರುಗಿದ ಅಖಿಲ ಕರ್ನಾಟಕ ಜಾನಪದ ಸಮ್ಮೇಲನ. ಕರ್ನಾಟಕ ವಿಶ್ವವಿದ್ಯಾಲಯವು ಜಾನಪದ ಸಾಹಿತ್ಯ ಕಲೆಗಳ ಬಗೆಗೆ ತಳೆದ ಕಳಕಳಿಯ ಉದಾರ ಘೋಷಣೆಯನ್ನು ತಳೆದಿದೆ; ಈಗ ಜಾನಪದ ಸಾಹಿತ್ಯ ಕಲೆಗಳ ಸಂಕಲನ, ಸಂಪಾದನೆ, ಸಂಶೋಧನೆಗಳಿಗೆ ಹೊಸ ಕ್ಷಿತಿಜ ತೆರೆದಿದೆ ಎಂಬುದನ್ನು ಮನಗಾಣಿಸಿಕೊಟ್ಟಿತು.


★ ಸಿ. ಪಿ. ಹೇಮಗಿರಿಮಠ



ಮಾನ್ಯ ಸಚಿವೆ ಡಾ. ಸರೋಜಿನಿ ಮಹಿಷಿ ಅವರಿಂದ ಸಮ್ಮೇಳನದ ಉದ್ಘಾಟನೆ



ಡಾ. ಶಿವರಾಮ ಕಾರಂತರು ಅಧ್ಯಕ್ಷ ಸ್ಥಾನದಿಂದ



ಕುಲಪತಿ ಡಾ. ಎ. ಎಸ್. ಅಡಕೆ ಅವರಿಂದ ರಂಗದರ್ಶನ ಉದ್ಘಾಟನೆ



ಶ್ರೀಕೃಷ್ಣ ಪಾರಿಜಾತದ ಒಂದು ದೃಶ್ಯ (ಕನ್ನೂರ)



ಗೊಂದಲಿಗರ ಮೇಳ (ಗೋಕಾಕ)

ಸಂಪಾದಕೀಯ

ಅಯನ ಪತ್ರಿಕೆಯಾಗಿ ಹುಟ್ಟಿ, ತ್ರೈಮಾಸಿಕವಾಗಿ ಬೆಳೆಯುತ್ತಿರುವ ಕರ್ನಾಟಕ ಭಾರತಿ ಈ ಸಂಚಿಕೆಯೊಂದಿಗೆ ಸಾರ್ಥಕವಾದ ಐದು ವರುಷಗಳನ್ನು ಪೂರ್ಣಗೊಳಿಸುತ್ತಿದೆ.

ಐದು ವರುಷಗಳ ಸೇವೆಯ ಸಂಕೇತವಾಗಿ ಜಾನಪದಕ್ಕೆ ಸಂಬಂಧಿಸಿದ ಒಂದು ವಿಶೇಷ ಸಂಚಿಕೆ ಪ್ರಕಟಿಸುವ ಯೋಜನೆಯನ್ನು ರೂಪಿಸಿಕೊಳ್ಳಲಾಗಿತ್ತು. ಆದರೆ ಗಾತ್ರ ಅನಿರೀಕ್ಷಿತವಾಗಿ ವ್ಯಾಪಕಗೊಂಡ ಕಾರಣ ಅದನ್ನು ಸ್ವತಂತ್ರ ಗ್ರಂಥರೂಪದಲ್ಲಿ ಪ್ರಕಟಿಸಲು ನಿರ್ಧರಿಸಿದ್ದೇವೆ. ಈ ಸಂಗತಿಯನ್ನು ಸಹೃದಯರು ಗಮನಿಸಬೇಕಾಗಿ ಬಿನ್ನಹ.

ಕಣ್ಣು ಮುಚ್ಚಿ, ಕಣ್ಣು ತೆರೆಯುವಷ್ಟರಲ್ಲಿ ಭಾರತಿ ಐದು ವರ್ಷಗಳಷ್ಟು ದೂರ ನಡೆದುಬಂದಿದೆ. ಈ ಅವಧಿಯಲ್ಲಿ 'ಭಾರತಿ' ಸುಪ್ರಸಿದ್ಧ ಲೇಖಕರಿಗೆ ಅವಕಾಶ ನೀಡುವುದರ ಜೊತೆ, ಹಲವಾರು ಹೊಸ ಲೇಖಕರನ್ನು ಸೃಷ್ಟಿಸಿದೆ. ಹೊಸ ಪೈರು ಇನ್ನೂ ಹಸಿರಾಗಿ ಬೆಳೆದು ಬರುವಂತೆ ನೋಡಿಕೊಳ್ಳುವೆವೆಂಬ ಭರವಸೆಯನ್ನು ಈಗ ಮತ್ತೊಮ್ಮೆ ನೀಡುತ್ತೇವೆ.

ಅಖಿಲ ಕರ್ನಾಟಕದ ಪ್ರಥಮ ಜಾನಪದ ಸಮ್ಮೇಳನ.

'ನ ಭೂತೋ ನ ಭವಿಷ್ಯತಿ' ಎನ್ನುವ ಮಾತು, ಕನ್ನಡ ಅಧ್ಯಯನ ಪೀಠದ ಅಂಗವಾಗಿ ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿ ಜರುಗಿದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಲನಕ್ಕೆ ಪೂರ್ಣ ಒಪ್ಪುತ್ತದೆ. ವಿಶ್ವವಿದ್ಯಾಲಯದಂತಹ ಉನ್ನತವೇದಿಕೆಯ ಮೇಲೆ ಮೂರು ದಿನಗಳ ವರೆಗೆ ಜಾನಪದಕ್ಕೆ ಸಂದ ಈ ಅಗ್ರಪೂಜೆ, ಒಂದು ಐತಿಹಾಸಿಕ ಘಟನೆ. ಉಪನ್ಯಾಸ, ವಿಚಾರ ಸಂಕಿರಣ, ರಂಗದರ್ಶನ ಎಂದು ಮೂರು ಹಂತಗಳಲ್ಲಿ ವ್ಯಾಪಿಸಿದ್ದ ಈ ಸಮ್ಮೇಳನವನ್ನು ಕೇಂದ್ರ ಸಚಿವೆ ಡಾ. ಸರೋಜಿನಿ ಮಹಿಷಿ ಅವರು, ರಂಗದರ್ಶನವನ್ನು ಕುಲಪತಿ ಡಾ. ಎ. ಎಸ್. ಅಡಕೆ. ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ನಿಂತು ಮೂರೂ ವಿಚಾರಸಂಕಿರಣಗಳನ್ನು ನಡೆಸಿಕೊಟ್ಟವರು ಡಾ. ದ. ರಾ. ಬೇಂದ್ರೆ, ಶ್ರೀ ಬೆಟಗೇರಿ ಕೃಷ್ಣಶರ್ಮ ಮತ್ತು ಶ್ರೀ ಸಿಂಪಿ ಲಿಂಗಣ್ಣ ಈ ಸಮಸ್ತ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು ಡಾ. ಶಿವರಾಮ ಕಾರಂತ. ಇದೆಲ್ಲಕ್ಕೂ ನೆರಳು ನೀಡಿದುದು 'ಮಧುರಚೆನ್ನ ಮಂಟಪ'.

ಇಂಥ ಸಮ್ಮೇಲನ ಜರುಗುತ್ತಿರುವುದು ಇದೇ ಪ್ರಥಮಸಲ. ಪ್ರತಿವರುಷ ಇಂಥ ಸಮ್ಮೇಲನಗಳು ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಪ್ರತಿವರುಷ ಜರುಗಲಿ; ಜಾನಪದದ ಶಾಸ್ತ್ರೀಯ ಅಧ್ಯಯನ ನಡೆಯಲಿ ಎಂದು ಹಾರೈಸುವದರ ಜೊತೆ,

ಈ ಮಹಾಕಾರ್ಯವನ್ನು ಯಶಸ್ವಿಯಾಗಿ ನಡೆಸಿದ ಕನ್ನಡ ಅಧ್ಯಯನಪೀಠಕ್ಕೆ, ಅವಕಾಶ ಮಾಡಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ತನ್ನ ಕೃತಜ್ಞತೆಯನ್ನು ಸೂಚಿಸುತ್ತದೆ 'ಭಾರತಿ'.

ದಿ. ಸಿ. ಕೆ. ವೆಂಕಟರಾಮಯ್ಯ ಅವರಿಗೆ ಶ್ರದ್ಧಾಂಜಲಿ

ಮೈಸೂರು ಸರಕಾರದ ಭಾಷಾಂತರ ಇಲಾಖೆಯ ಮುಖ್ಯಸ್ಥರಾಗಿ ಕನ್ನಡಕ್ಕೆ ಅಪಾರ ಸೇವೆ ಸಲ್ಲಿಸಿದ ಅದ್ವಿತೀಯ ವಾಗ್ಮಿ, ಪ್ರತಿಭಾಸ್ವಿತ ಸಾಹಿತಿ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ೧೯೭೩ ರ ಏಪ್ರಿಲ್ ೩ ರಂದು ಮಧ್ಯರಾತ್ರಿಯ ತರುವಾಯ ದಿವಂಗತರಾದುದು ನಮ್ಮ ನಾಡಿಗೆ ಒಂದು ದೊಡ್ಡ ನಷ್ಟ. ಮಹಾಕವಿ ಕಾಳಿದಾಸ, ಭವಭೂತಿ, ಭಾಸ ಮಹಾಕವಿ ಮೊದಲಾದ ಉದ್ಗ್ರಂಥಗಳನ್ನು ರಚಿಸಿ, ಕಥೆ, ಜೀವನಚರಿತ್ರೆ, ನಾಟಕ ಮೊದಲಾದ ಪ್ರಕಾರಗಳಲ್ಲಿ ಕೃಷಿಗೆಯ್ದು ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಸಿದ್ದ ಶ್ರೇಷ್ಠ ಸಾಹಿತಿಗಳು ಶ್ರೀ ವೆಂಕಟರಾಮಯ್ಯನವರು. ರಾಜಸೇವಾಸಕ್ತ, ಪದ್ಮಶ್ರೀ ಪದವಿಗಳು ಅವರ ಹಿರಿಮೆಗೆ ಸಂದ ಗೌರವಗಳು. ಸಾಹಿತ್ಯಪರಿಷತ್ತಿನ ಕಾರ್ಯದರ್ಶಿತ್ವ ೩೦ ನೇಯ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆಗಳು ಅವರ ಕಾರ್ಯನಿಷ್ಠೆ ವಿದ್ವತ್ತುಗಳಿಗೆ ಸಂದ ಪುರಸ್ಕಾರಗಳು. ಇಂಥ ಉದ್ದಾಮ ಪಂಡಿತರ ಅಗಲಿಕೆ ಕನ್ನಡಿಗರಿಗೆ ಅಪಾರ ದುಃಖವನ್ನುಂಟು ಮಾಡಿದೆ. 'ಭಾರತಿ' ಈ ದುಃಖದಲ್ಲಿ ಪಾಲುಗೊಂಡು ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಲೇಖಕರ ಪರಿಚಯ

೧. ರವಿ (ಸಿ. ಯು. ಸೋಮಶೇಖರ)

ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜ, ಚಿಕ್ಕಮಗಳೂರು.

೨. ಶ್ರೀ ಎಸ್. ಡಿ. ಸವದತ್ತಿಮಠ :

ಸಹಾಯಕ ಸಂಶೋಧಕರು, ಸ್ನಾತಕೋತ್ತರ ಶಿಕ್ಷಣ ಕೇಂದ್ರ, ಕಲಬುರ್ಗಿ.

೩. ಶ್ರೀ ರವೀಂದ್ರ ಕರ್ಜಗಿ :

ಕನ್ನಡ ಅಧ್ಯಾಪಕರು, ನೂತನ ವಿದ್ಯಾಲಯ, ಜ್ಯೂನಿಯರ ಕಾಲೇಜು, ಕಲಬುರ್ಗಿ.

೪. ಶ್ರೀ ವಿದ್ವಾನ್ ವೆಂಕಟರಾಯಾಚಾರ್ಯ :

ಹೆಸರಾಂತ ವಿದ್ವಾಂಸರು, ಸುರತ್ಕಲ್, ಮಂಗಳೂರು.

೫. ಶ್ರೀ ಜಿ. ಕೃಷ್ಣರಾವ :

ಅಧ್ಯಾಪಕರು. ಬಿ. ಆರ್. ಬಿ. ವಾಣಿಜ್ಯ ಮಹಾವಿದ್ಯಾಲಯ, ರಾಯಚೂರು.

೬. ಶ್ರೀ ಆರ್. ರಾಜಪ್ಪ :

ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ರೇಣುಕಾಚಾರ್ಯ ವಿಜ್ಞಾನ ಕಾಲೇಜು, ಬೆಂಗಳೂರು-೯

೭. ಶ್ರೀ ಎಸ್. ರಾಜಶೇಖರ :

ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ಕಾಲೇಜು, ಧಾರವಾಡ.

೮. ಶ್ರೀ ವಿಷ್ಣು ಸಂತ :

ವಿದ್ವಾಂಸರು, ಧಾರವಾಡ.

೯. ಶ್ರೀ ಕೆ. ಎಸ್. ಮಧುಸೂದನ :

ಕನ್ನಡ ಅಧ್ಯಾಪಕರು, ಆಚಾರ್ಯ ಪಾಠಶಾಲಾ ಸಂಜೆ ಕಾಲೇಜು, ಎನ್.ಆರ್. ಕಾಲೋನಿ, ಬೆಂಗಳೂರು-೪.

೧೦. ಶ್ರೀ ಕೆ. ಜಿ. ವಸಂತಮಾಧವ :

ಅಧ್ಯಾಪಕರು, ವಿಜಯ ಕಾಲೇಜು, ಮೂಲ್ಕಿ (ದ.ಕ.)

೧೧. ಶ್ರೀ ಪಿ. ವಿ. ನಾರಾಯಣ :

ಕನ್ನಡ ಅಧ್ಯಾಪಕರು, ವಿಜಯ ಕಾಲೇಜು, ಬಸವನ ಗುಡಿ, ಬೆಂಗಳೂರು ೪.

೧೨. ಶ್ರೀ ಆರ್. ಜಿ. ಕುಲಕರ್ಣಿ :

ವಿದ್ವಾಂಸರು, ಶಿವಾಜಿ ಬೀದಿ, ಧಾರವಾಡ.

೧೩. ಶ್ರೀ ಎಸ್. ಎಸ್. ಹಿರೇಮಠ :

ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೧೪. ಶ್ರೀ ಎಸ್. ವಾಯ್. ಹಂಜಿ :

ಕನ್ನಡ ಅಧ್ಯಾಪಕರು, ಬಿ. ಕೆ. ಕಾಲೇಜು, ಚಿಕ್ಕೋಡಿ.

೧೫. ಶ್ರೀ ಯು. ಕೃಷ್ಣಶರ್ಮಾ :

ಶ್ರೀ ಸುಬ್ರಹ್ಮಣ್ಯ ಮಂದಿರಂ, ವಿಶ್ವೇಶ್ವರ ಪುರಂ, ಬೆಂಗಳೂರು-೪.

೧೬. ಶ್ರೀ ಕೃಷ್ಣ ಪರಮೇಶ್ವರಭಟ್ಟ :

ವಿದ್ವಾಂಸರು ಬೆಂಗಳೂರು,

೧೭. ಶ್ರೀ ಎಸ್. ಶಿವಣ್ಣ :

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿ.ವಿ., ಬೆಂಗಳೂರು.

೧೮. ಶ್ರೀ ಸೀತಾರಾಮ ಜಾಗೀರದಾರ್ :

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು.

೧೯. ಡಾ. ಎಂ. ಎಂ. ಕಲಬುರ್ಗಿ :

ರೀಡರ್, ಕನ್ನಡ ಅಧ್ಯಯನ ಪೀಠ, ಕ. ವಿ. ವಿ, ಧಾರವಾಡ.

೨೦. ಶ್ರೀ ಬಿ. ವ್ಹಿ. ಮಲ್ಲಾಪೂರ :

ಕನ್ನಡ ಅಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಕೇಂದ್ರ, ಕಲಬುರ್ಗಿ.

೨೧. ಡಾ|| ಬುದ್ದಣ್ಣ ಹಿಂಗಮಿರೆ :

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೨೨. ಶ್ರೀ ಸಿ. ಪಿ. ಹೇಮಗಿರಿಮಠ :

ಕನ್ನಡ ಅಧ್ಯಾಪಕರು, ನೆಹರೂ ಕಾಲೇಜು, ಹುಬ್ಬಳ್ಳಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ: ಪ್ರತಿಯೊಂದರ ಬೆಲೆ ೨೫ ಪೈಸೆ

---

೧೫೩. ಕೈಮಗ್ಗದ ಉದ್ದಿಮೆಯ ಅಭಿವೃದ್ಧಿ — ವಿ. ಬಿ. ಅಂಗಡಿ

೧೫೪. ಬಣ್ಣಗಳು ಹಾಗೂ ಬಣ್ಣ ಹಾಕುವ ಕಲೆ — ಜಿ. ಎ. ಕಲ್ಲೂರ

೧೫೫. ಭಾರತದ ಆದಿವಾಸಿಗಳು — ಸಿ. ಆರ್. ಮುದಭಾವಿ

೧೫೬. ಬಾನುಲಿ ಬರವಣಿಗೆ —ಎನ್. ಕೆ. ಕುಲಕರ್ಣಿ

೧೫೭. ಕನ್ನಡ-ಕೊಂಕಣಿ ಜನಪದ ಸಾಹಿತ್ಯ — ಎಲ್. ವ್ಹಿ. ಪೈ

೧೫೮. ಕರ್ನಾಟಕ ಸಂಸ್ಕೃತಿಯ ವಿಶ್ವರೂಪ —ಎಸ್. ಜಿ. ಮಾರಿಹಾಳ

೧೫೯. ಪಾಣಿನಿ — ಕೆ. ಕೃಷ್ಣಮೂರ್ತಿ

ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ :

೧೨. ಕರ್ನಾಟಕಾಂಧ್ರ ಸಾಹಿತ್ಯ ಬಾಂಧವ್ಯ ೨-೫೦

ವಿಶೇಷ ಉಪನ್ಯಾಸ ಗ್ರಂಥಮಾಲೆ :

೧೭. ತಿರುಮಲಾಚಾರ್ಯ ಮತ್ತು ಚಿಕ್ಕದೇವರಾಜ ಒಡೆಯರು { ಸಾದಾ ೪-೦೦ / ಕೆಲಿಕೋ ೬-೦೦

— ಎಲ್. ಬಸವರಾಜು

ಜನಪದ ಕಾವ್ಯಮಾಲೆ :

೫. ಕನ್ನಡ ಬಯಲಾಟಗಳು : ಶ್ರೀಕೃಷ್ಣ ಪಾರಿಜಾತ ೨-೦೦

— ಸಂ: ಎಂ. ಎಸ್. ಸುಂಕಾಪುರ

ಸಂಶೋಧನ ಗ್ರಂಥಮಾಲೆ

೧೬. ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ — ೧೫-೦೦

— ಎಂ. ಎಂ. ಕಲಬುರ್ಗಿ

ಇತರ ಪ್ರಕಟನೆಗಳು :

೬. ಸಕಲ ಪುರಾತನರ ವಚನಗಳು — ೧೮-೦೦

— ಸಂ. ಆರ್. ಸಿ. ಹಿರೇಮಠ

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :

೧೦೦ ಕ್ಕೆ ೧೫ ರಂತೆ

ಇತರ ಎಲ್ಲ ಪ್ರಕಟನೆಗಳು (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳು ಹಾಗೂ ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ

೧೦೦ ಕ್ಕೆ ೨೫ ರಂತೆ

೫,೦೦೦ ರೂ.ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ಕ್ಕೆ ೩೩ ⅓ ರಂತೆ

* * * * *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ೧೦೦ ರೂ. ಕಳಿಸಿ
ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"
ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು.
ಪತ್ರಿಕೆ ಪ್ರಕಟವಾದಂತೆಲ್ಲಾ ಅವರಿಗೆ ಪ್ರತಿ-
ಗಳನ್ನು ಕಳುಹಿಸುವ ವ್ಯವಸ್ಥೆ
ಮಾಡಲಾಗುವದು.

(ಹಣವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ